Kannada Tournals

ಕನ್ನಡ ಪತ್ರಿಕೆಗಳು

1911 to
1920

K. S. Narasimha Murthy
Land Holder & Patel,
TIRTHAHALLI (TIRTHAHALLI TALUK.)

ಶ್ರೀಕೃಷ್ಣಪರಬ್ರಹ್ಮಣೇನಮಃ.

ಪೀಠಿಕಾತಾತ್ಪರ್ಯಸಹಿತ

ಶ್ರೀ ಭಾಗವತಮಹಾಪುರಾಣ.

ಶ್ಲೋ॥ ನಿಗಮಕಲ್ಪತರೋರ್ಗಲಿತಂ ಫಲಂ
ಶುಕಮುಖಾದಮೃತದ್ರವಸಂಯುತಂ।
ಪಿಬತ ಭಾಗವತಂ ರಸಮಾಲಯಂ
ಮುಹುರಹೋ ರಸಿಕಾ ಭುವಿಭಾವುಕಾಃ॥

ಮಾದರಿಯ ಸಂಚಿಕೆ.

ಈ ಗ್ರಂಥವು
ಬೆಂಗಳೂರಿನ ಹಳ್ಳಿ
ರಾಮೇಶ್ವರಾಸ್ತ್ರಗಳಿಂದ
ಪ್ರಕಟಿತವಾಯಿತು.

ಬೆಂಗಳೂರು:
"ಐರಿಷ್" ಮುದ್ರಾಕ್ಷರಶಾಲೆಯಲ್ಲಿ ಮುದ್ರಿಸಲ್ಪಟ್ಟಿತು.
೧೯೦೧.

ರಿಜಿಸ್ಟರ್ಡ್ ಕಾಪಿ

ಶ್ರೀ.

ಪ್ರಕೃಷ್ಣಾಯನಮಃ.

ಮಹಾಜನ ಪ್ರಾರ್ಥನೆ.

ಮಹಾಶಯರೆ. ನಾವು ಬಯಸಬೇಕಾದ ಪುರುಷಾರ್ಥಗಳಲ್ಲಿ ಮೋಕ್ಷವೇ ನಿರತಿಶ
ಯವಾದುದು. ಇದನ್ನು ಸಂಪಾದಿಸಿ ಕೊಡುವುದಕ್ಕಾಗಿ ವೇದಶಾಸ್ತ್ರ, ಪುರಾಣೇತಿಹಾ
ಸಾದಿಗಳೆಂಬ ಅನೇಕ ಗ್ರಂಥಗಳಿರುವುವು. ಆದರೆ ಇವುಗಳೆಲ್ಲವೂ ಕರ್ಮ, ಜ್ಞಾನ, ದೇವತಾ
ವಿಷಯಗಳಾಗಿರುವುದರಿಂದ ಸುಲಭಸಾಧ್ಯಗಳಲ್ಲ. ಆದುದರಿಂದ ಅಲ್ಪಾಯುಗಳಾಗಿಯೂ
ಅಲ್ಪ ಬುದ್ಧಿಗಳಾಗಿಯೂ ಇರುವ ನಮಗೆ, (ಮೋಕ್ಷಕಾರಣಸಾಮಗ್ರ್ಯಂಭಕ್ತಿರೇವ
ಗರೀಯಸೀ) ಎಂಬಂತೆ ಭಕ್ತಿಯೇ-ಮುಖ್ಯವಾಗಿಯೂ, ಸುಲಭವಾಗಿಯೂ ಇರುವ ಮಾ
ರ್ಗವಾಗಿದೆ.

ಇಂತಹ ಭಕ್ತಿಯ ಸ್ವರೂಪವನ್ನೂ ಅದರ ಸಲಕರಣೆಗಳನ್ನೂ ಸಹ ಈ ಗ್ರಂಥವಲ್ಲಿ
ವಿಶದವಾಗಿ ನಿರೂಪಿಸಿರುವುದಲ್ಲದೆ ಸಕಲ ಧರ್ಮಗಳೂ ಪ್ರತಿಪಾದಿಸಲ್ಪಟ್ಟಿರುವುವು. ಭಕ್ತಿ
ಯನ್ನು ಪಡೆದು ಮುಕ್ತರಾಗುವವರಿಗೆ ಇದಕ್ಕಿಂತಲೂ ಸುಲಭವಾದ ಮಾ
ರ್ಗವಿಲ್ಲವೆಂದು ಧಾರಾಳವಾಗಿ ಹೇಳಬಹುದು. ಈ ಅರ್ಥವನ್ನು ಸರ್ವಜ್ಞರಾದ
ವ್ಯಾಸರು ಸಹ ಹೇಳಿರುತ್ತಾರೆ.

ಶ್ರೇಷ್ಠೋತ್ತಮವಾದ ಗ್ರಂಥಾವಲೋಕನದಿಂದುಂಟಾಗುವ ಆನಂದಕ್ಕೆ ಕನ್ನ
ಡಿಗರೆಲ್ಲರೂ ಪಾತ್ರರಾಗಬೇಕೆಂಬ ಅನೇಕ ವಿಧ ಪ್ರೇರಣೆಯಿಂದ ಈ ಮಹಾಗ್ರಂಥಕ್ಕೆ ಕ
ನ್ನಡದಲ್ಲಿ ಸರಳವಾಗಿಂದ ಟೀಕಾತಾತ್ಪರ್ಯಗಳನ್ನು ವಿಶೇಷಾಂಶಗಳನ್ನು ಸಹ ವಿವ
ರಿಸಿ ನಿಶ್ಚಯಿಸಿ ಅದರಲ್ಲಾದರಿಯೂ ಸಂಪುಟವನ್ನು ತಮಗರ್ಪಿಸಿರುತ್ತೇನೆ
ಈ ಗ್ರಂಥವು ಸರಳವಾಗಿರುವುದರಿಂದ ಗ್ರಾಹಕರಿಗೆ ಸುಲಭವಾಗಿ ಪಡೆಯಲು
ಬಹಳ ಈ ಜ್ಞಾನಾರ್ಥವಾಗಿ ಆಗಿಂದಾಗ್ಗೆ ಮುದ್ರಿಸುವ ಮೂಲ್ಯ ಹಂಚಲ್ಪಡುವುದು.
ಇದು ಛಂದಾಭ್ಯೇಪ್ಸಿತವಾಸದೊಳಗಾಗಿ ಪ್ರಕಟಿಸಲ್ಪಡುವುದು. ಆಸ್ತಿಕಶಿ
ರೋಮಣಿ ಸಂಭಾವಿತರಾಗಿಯೂ ಪ್ರಚಾರಕರಾಗಿಯೂ ಈ ಮಹಾಕಾರ್ಯ
ಗಳು ಂ ರೆಯುತ್ತೇನೆ.

ಬೆಲೆ ಂ—ಂ—ಂ ಪಾಯಿ ಮುಂಗಡವನ್ನು ಕಳುಹಿಸಬೇಕು.

ಂ ಟಪಾಲ್‌ಖರ್ಚು ಂ—ಂ—ಂ

ಎಂ. ರಾಮಶೇಷಶಾಸ್ತ್ರಿ,

ಭಾರತೀ ಭವನಂ,

ಚಾಮರಾಜಪೇಟೆ, ಬೆಂಗಳೂರು ಸಿಟಿ.

K. S. Narasimha Murth
Land Holder & Patel.
TIRTHAMUTTUR. (TIRTHAHALLI TALUK)

ಶ್ರೀಃ.

ಶ್ರೀ ಕೃಷ್ಣಪರಬ್ರಹ್ಮಣೇನಮಃ.

ಟೀಕಾತಾತ್ಪರ್ಯಸಹಿತ

ಶ್ರೀ ಭಾಗವತ ಮಹಾಪುರಾಣ.

ಶುಕ್ಲಾಂಬರಧರಂ ವಿಷ್ಣುಂ ಶಶಿವರ್ಣಂ ಚತುರ್ಭುಜಂ ।
ಪ್ರಸನ್ನವದನಂ ಧ್ಯಾಯೇ ತ್ಸರ್ವವಿಘ್ನೋಪಶಾಂತಯೇ ॥
ಇಂದೀವರದಳಶ್ಯಾಮ ಮಿಂದಿರಾನಂದಕಂದಳಂ ।
ಎಂದಾರುಜನಮುಂದಾರಂ ವಂದೇಽ ಹಮದುನಂದನಂ ॥

ಮೂ॥ ಜನ್ಮಾದ್ಯಸ್ಯ ಯತೋಽನ್ವಯಾದಿತರತ ಶ್ಚಾರ್ಥೇಷ್ವಭಿಜ್ಞಃ ಸ್ವರಾಟ್
ತೇನೇ ಬ್ರಹ್ಮಹೃದಾ ಯ ಆದಿಕವಯೇ ಮುಹ್ಯಂತಿ ಯತ್ಸೂರಯಃ
ತೇಜೋವಾರಿಮೃದಾಂ ಯಥಾವಿನಿಮಯೋ ಯತ್ರ ತ್ರಿಸರ್ಗೋಽಮೃಷಾ
ಧಾಮ್ನಾಸ್ವೇನ ಸದಾ ನಿರಸ್ತಕುಹಕಂ ಸತ್ಯಂ ಪರಂ ಧೀಮಹಿ ॥೧॥

ಅರ್ಥೇಷು - ಲಿಂಗಾದಿ ಪದಾರ್ಥಗಳಲ್ಲಿ, ಅನ್ವಯಾತ್- ಸದ್ರೂಪವಾಗಿ ನೆಲಸಿರುವದರಿಂದಲೂ, ಇತರತಶ್ಚ - (ಸುಳ್ಳಾದ ಲಿಂಗಾಕಾಶಪುಷ್ಪಾದಿಗಳಲ್ಲಿ) ಇಲ್ಲದಿರುವುದರಿಂದಲೂ, ಅಥವಾ ಅನ್ವಯಾತ್-(ಮೃತ್ತು ಸ್ವರ್ಣಾದಿಗಳಂತೆ) ಕಾರಣವಾಗಿರುವುದರಿಂದಲೂ, ಇತರತಶ್ಚ-(ಘಟಕುಂಡಲಾದಿಗಳಂತೆ) ಕಾರ್ಯವಾಗಿರುವುದರಿಂದಲೂ, ಅಥವಾ ಅನ್ವಯಾತ್- ಅನ್ವಯ ವ್ಯಾಪ್ತಿಯಿಂದಲೂ, ಇತರತಶ್ಚ-ವ್ಯತಿರೇಕವ್ಯಾಪ್ತಿಯಿಂದಲೂ, ಅನ್ಯ-ಇಂದ್ರಿಯಗೋಚರವಾದ ಈ ಪ್ರಪಂಚದ, ಜನ್ಮಾದಿ, ಜನ್ಮ-ಉತ್ಪತ್ತಿಯೇ, ಆದಿ-ಮೊದಲಾದವುಗಳು (ಅಂದರೆ ಹುಟ್ಟು, ಬಾಳು, ಸಾವುಗಳು) ಯತಃ-ಯಾವ ಪರಮೇಶ್ವರನಿಂದ, (ಉಂಟಾಗಿರುವುವೋ) ಯಃ-ಯಾವನು, ಅಭಿಜ್ಞಃ-ಸರ್ವಜ್ಞನೋ, ಸ್ವರಾಟ್-ತನ್ನಿಂದ ಹೊರತು ಬೇರೆ ಯಾವನೂ ಇಲ್ಲವೋ, ಯತ್-ಯಾವ ವೇದದಲ್ಲಿ. ಸೂರಯಃ-ಮಹಾಜ್ಞಾನಿಗಳೂ, ಮುಹ್ಯಂತಿ-ನೋಡಿಗೊಳ್ಳುವರೋ ಬ್ರಹ್ಮ-ಅಂತಹ ವೇದವನ್ನು, ಆದಿಕವಯೇ-ಆದಿಪುರುಷನಾದ ಚತುರ್ಮುಖ ಬ್ರಹ್ಮನಿಗೆ, ಹೃದಾ-ಮನಸ್ಸಿಂದಲೇ, ಯಃ-ಯಾವನು, ತ್ಸನ್ನೇ-ಪ್ರಕಾಶಗೊಳಿಸಿದನೊತ್ತ ಅಥವಾ ಯತ್-ಯಾವ ಬ್ರಹ್ಮವಸ್ತುವಿನಲ್ಲಿ, ಸೂರಯಃ-ಜ್ಞಾನಿಗಳೂ, ಮುಹ್ಯಂತಿ,ಮರುಳಾಗುವರೋ, ಯತ್ರ-ಯಾವ ಪರಮೇಶ್ವರನಲ್ಲಿ, ತ್ರಿಸರ್ಗಃ, ತ್ರಿ-ಅತ್ಯವಾಯಾಗುಣಗಳಾದ, ತಮೋರಜಸ್ಸತ್ವಗಳ, ಸರ್ಗಃ-ಭೂತ, ಇಂದ್ರಿಯ, ದೇವತಾರೂಪವಾದ ಸೃಷ್ಟಿಯು, ತೇಜೋವಾರಿಮೃದಾಂ-ತೇಜಸ್ಸು ಜಲ, ಭೂಮಿ ಇವುಗಳ, ವಿನಿಮಯೋಯಥಾ-ಬದಲು

ಣೇಯಂತೆ, ಅಮೃಷಾ-ಸತ್ಯವ-ದದ್ಧೀ, ಅಥವಾ ಯತ್ರತ್ರಿಸರ್ಗಃಮೃಷಾ-ಈ ಸೃಷ್ಟಿಯೆಂಬುದು ಯಾವ ಪರಮಾತ್ಮನಲ್ಲಿ ಸುಳ್ಳಾಗಿರುವುದೋ, ಸ್ವೇನ-ತನ್ನ, ಧಾಮ್ನಾ-ತೇಜಸ್ಸಿನಿಂದ, ಸದಾ-ಯಾವಾಗಲೂ, ನಿರಸ್ತ-ಹೋಗಲಾಡಿಸಲ್ಪಟ್ಟ, ಕುಹಕಂ-ಮಾಯಾಪ್ರಪಂಚವುಳ್ಳ, ಸತ್ಯಂ-ನಾಶರಹಿತನಾದ, ಪರಂ-ಪರಮೇಶ್ವರನನ್ನು, ಧೀಮಹಿ-ಧ್ಯಾನಿಸುತ್ತೇವೆ.

ಭಾಗವತಚಕೋರಚಂದ್ರಿಕೆ.

ಕಂ॥ ವೆಲ್ಲಾಲವಂಶಮೌಕ್ತಿಕ । ನುಲ್ಲಾಸಿತಸಕಲಸುಜನ ತಲ್ಲಜಹೃದಯಂ ।
ಸಲ್ಲಲಿತಕವಿತಾವಿಭ । ವೋಲ್ಲಸಿತಂ ರಾಮಶೇಷಕವಿ ಕವಿಮಾನ್ಯಂ ॥
ಮುನ್ನಿನ ಪರಮಾಚಾರ್ಯರ । ಮನ್ನಿಸುತವರೊರೆದ ಸಂಪ್ರದಾಯಕ್ರಮದಿಂ ।
ಸನ್ನುತಭಾಗವತಾರ್ಥವ । ಕನ್ನಡಸವಿನುಡಿಗಳಿಂದ ವಿವರಿಪೆನೀಗಳ್ ॥

ಶ್ರೀವಮನ್ನಾರಾಯಣ ಮೂರ್ತಿಯ ಅಂಶದಿಂದವತರಿಸಿದ ಭಗವಂತನಾದ ವೇದವ್ಯಾಸಮುನಿಯು ಅನೇಕ ಶಾಸ್ತ್ರಗಳನ್ನೂ, ಪುರಾಣಗಳನ್ನೂ, ಪ್ರಬಂಧಗಳನ್ನೂ ವಿರಚಿಸಿದನು. ಯಾವುದರಿಂದಲೂ ಆತನಿಗೆ ಮನಶ್ಶಾಂತಿಯುಂಟಾಗಲಿಲ್ಲ. ಸಂತೋಷವೂ ತೋರಲಿಲ್ಲ. ಹೀಗಿರಲು ಒಂದುದಿನ ಭಾಗವತೋತ್ತಮನಾದ ನಾರದಮಹಾಮುನಿಯು ಬಂದು, ವ್ಯಾಸಮಹರ್ಷಿಯ ಸ್ಥಿತಿಯನ್ನು ತಿಳಿದು, ಮನಶ್ಶಾಂತಿ ಸಂತೋಷಗಳಿಗೆ ಭಗವದ್ಭಾನವೇ ಮುಖ್ಯಸಾಧನವೆಂದುಪದೇಶಿಸಿ ತೆರಳಿದನು. ಬಳಿಕ ಕೃಷ್ಣದ್ವೈಪಾಯನಮುನಿಯು ನಾರದೋಪದೇಶವನ್ನನುಸರಿಸಿ, ಭಗವಂತನ ಗುಣವರ್ಣನವೇ ಪ್ರಧಾನವಾಗಿರುವ ಭಾಗವತವೆಂಬ ಭಕ್ತಿಶಾಸ್ತ್ರವನ್ನು ವಿರಚಿಸಲು ಸಂಕಲ್ಪಿಸಿದನು. ಅಷ್ಟಲ್ಲಿಯೇ "ಭಗವಂತನೊಬ್ಬನಿರುವನೆಂಬುದನ್ನು ನಿರ್ಧರಿಸಿ ತಿಳಿಸಿದ ಹೊರತು ಗ್ರಂಥಾರಂಭವು ಯುಕ್ತವಲ್ಲ. ಕಲಿದೋಷದಿಂದ ದೈವವೇ ಇಲ್ಲವೆಂದು ತಿಳಿಯುವವರಿಗೆ ಈ ಗ್ರಂಥದಲ್ಲಿ ಪ್ರವೃತ್ತಿಯುಂಟಾಗುವುದಿಲ್ಲ. ಆದುದರಿಂದ ಮೊದಲು ಜಗತ್ಕಾರಣನಾದ ಪರಮೇಶ್ವರನೊಬ್ಬನುಂಟೆಂಬುದನ್ನು, ವೇದಶಾಸ್ತ್ರ ಪ್ರಮಾಣಗಳಿಂದಲೂ, ಯುಕ್ತಿಯಿಂದಲೂ ದೃಢಪಡಿಸಬೇಕು" ಎಂದಾತನ ಮನಸ್ಸಿನಲ್ಲಿ ಹೊಳೆಯಿತು. ಅದರಂತೆಯೇ ಬಾದರಾಯಣ ಮುನೀಂದ್ರನು ಈ ಶ್ಲೋಕದ ಪೂರ್ವಾರ್ಧದಿಂದ ಜಗತ್ಕಾರಣವಾದ ವಸ್ತುವನ್ನು ಸ್ಥಿರಪಡಿಸಿ, ಮನುಷ್ಯಪ್ರಯತ್ನವು ನಿರ್ವಿಘ್ನವಾಗಿ ನೆರವೇರಬೇಕಾದರೆ ದೈವಾನುಗ್ರಹವೇ ಮುಖ್ಯ ಕಾರಣವಾದುದರಿಂದ, ಕಾರ್ಯಾರಂಭದಲ್ಲಿ ಮಂಗಳಾಚರಣೆಯನ್ನು ಮಾಡಲೇಬೇಕೆಂಬ ಸಂಪ್ರದಾಯವನ್ನು ಲೋಕಕ್ಕೆ ತಿಳಿಯಪಡಿಸುವುದಕ್ಕಾಗಿ ಉತ್ತರಾರ್ಧದಿಂದ ಪರಮಾತ್ಮನ ಧ್ಯಾನರೂಪವಾದ ಮಂಗಳವನ್ನು ಮಾಡುತ್ತಾನೆ.

"ಯಾವನು ಸರ್ವವ್ಯಾಪಕನೂ, ಸರ್ವಜ್ಞನೂ, ಸ್ವಪ್ರಕಾಶನೂ, ಮಾಯಾತೀತನೂ ಆಗಿರುವನೋ, ಯಾವನಿಂದ ಈ ಪ್ರಪಂಚವು ಹುಟ್ಟಿ, ಬೆಳೆದು ನಾಶವನ್ನು ಪಡೆಯುವು

ದೋ, ಅಂತಹ ಜಗತ್ಕಾರಣನಾದ ಪರಮೇಶ್ವರನನ್ನು ಧ್ಯಾನಿಸುತ್ತೇವೆ" ಎಂಬುದೇ ಈ ಶ್ಲೋಕದ ಮುಖ್ಯತಾತ್ಪರ್ಯವು.

ಜಗತ್ಕಾರಣ ವಸ್ತುವು ಉಂಟೆಂಬಂಶವು ಈ ಶ್ಲೋಕದಲ್ಲಿ ಹಲವು ಬಗೆಗಳಿಂದ ನಿರೂಪಿಸಲ್ಪಡುವುದು.

1 ಬಂದು ವಿಚಿತ್ರವಸ್ತುವನ್ನು ಕಂಡಕೂಡಲೇ ಅದನ್ನು ನಿರ್ಮಾಣಮಾಡಿದ ಶಿಲ್ಪಿಯೂ, ಅವನ ಸಾಮರ್ಥ್ಯಾದಿಗಳೂ ಸಹ ನೋಟಕರ ಮನಸ್ಸಿನಲ್ಲಿ ಹೊಳೆಯುವಂತೆ, ವಿಚಿತ್ರ ರಚನೆಯುಳ್ಳ ಈ ಜಗತ್ತನ್ನು ಪರ್ಯಾಲೋಚಿಸುವ ಪ್ರತಿಪುರುಷನ ಮನಸ್ಸಿನಲ್ಲಿಯೂ, "ಇದಕ್ಕೆ ಒಬ್ಬ ಕರ್ತೃವಿರಬೇಕು. ಇಲ್ಲದಿದ್ದರೆ, ಗಾಳಿಬೀಸುವುದು, ಜಿಂಕೆಯುರಿಯುವುದು, ನೀರು ಹರಿಯುವುದು ಇವೇ ಮೊದಲಾದ ಪ್ರಪಂಚವ್ಯಾಪಾರಗಳು ಇಷ್ಟು ಕ್ರಮವಾಗಿ ನಡೆಯುತ್ತಿರಲಿಲ್ಲ" ಎಂದು ತೋರುವುದು. ಆದುದರಿಂದ ಜಗತ್ಕಾರಣವಾದ ಬಂದು ವಸ್ತುವುಂಟು.

2 ಲೋಕದಲ್ಲಿ ಪ್ರತಿವಸ್ತುವೂ * ಸತ್ತು, ಅಸತ್ತು ಎಂಬ ಎರಡು ಭಾಗಗಳುಳ್ಳದ್ದು. ಅವುಗಳಲ್ಲಿ ಅಸತ್ತುಗಳಾದ ನಾಮರೂಪಗಳೇ ಜನ್ಮಾದಿಗಳಿಗೆ ಒಳಪಟ್ಟಿರುವುವಲ್ಲದೆ ಸತ್ತಲ್ಲ. ಹೊಲವಿದೆ, ಮನೆಯಿದೆ, ಎಂಬಲ್ಲಿ ಹೊಲಮನೆಗಳೆಂಬ ಹೆಸರುಗಳೂ, ಅವುಗಳ ಆಕಾರಗಳೂ ಕೆಟ್ಟುಹೋದರೂ ಅವುಗಳಲ್ಲಿರುವ ಸತ್ತು ಮಾತ್ರ ಕೆಡುವುದಿಲ್ಲ. ಮತ್ತು ಈ ಸತ್ತು ಇಲ್ಲದವಸ್ತುವೇ ಇಲ್ಲ. ಮೊಲದಕೊಂಬು, ಬಂಜೆಯಮಗ, ಇವನ್ನು ವಸ್ತುಗಳೆಂದು ಯಾರೂ ಹೇಳುವುದಿಲ್ಲ ಇವಕ್ಕೆ "ಇದೆ" ಎಂಬ ವ್ಯವಹಾರವೂ ಇಲ್ಲ. ಆದುದರಿಂದ ಆಕಾಶಾದಿ ಪದಾರ್ಥಗಳಲ್ಲಿ ಸದ್ರೂಪವಿಂದಿರುತ್ತಲೂ, ಅಪ್ರಸಿದ್ಧಗಳಾದಿಗಳಲ್ಲಿ ಇಲ್ಲದೆಯೂ ಇರುವ ಸತ್ಯವಸ್ತುವೇ ಜಗತ್ಕಾರಣವು.

3 ಚಿನ್ನದಿಂದ ಮಾಡಲ್ಪಟ್ಟ ವಡವೆಗಳಿಗೆ ಚಿನ್ನವೇ ಕಾರಣವೆನಿಸುವಂತೆ, ಪರಮಾತ್ಮನ ¶ ವಿವರ್ತವಾದ ಪ್ರಪಂಚಕ್ಕೆ ಪರಮಾತ್ಮನೇ ಕಾರಣವು. ಮತ್ತು ನಾಮರೂಪಗಳಿಂದ ವಿಕಾರವನ್ನು ಪಡೆದ ವಡವೆಗಳು ಚಿನ್ನದ ಕಾರ್ಯಗಳೆನಿಸಿಕೊಳ್ಳುವಂತೆ, ಈ ಪ್ರಪಂಚವು ಪರಮಾತ್ಮನ ಕಾರ್ಯವಾಗಿರುವುದು. ಅಂದರೆ ಬಂಗಾರವು ನಿಜರೂಪದಿಂದ ಕಾರಣವಾಗಿಯೂ, ನಾಮರೂಪಗಳ ವಿಕಾರದಿಂದ ಕಾರ್ಯವಾಗಿಯೂ ಕಂಡುಬರುವಂತೆ, ಪರಮಾತ್ಮನು ಸದ್ರೂಪದಿಂದ ಕಾರಣನಾಗಿಯೂ, ಪ್ರಪಂಚರೂಪದಿಂದ ಕಾರ್ಯವಾಗಿಯೂ ಇರುವನೆಂದು ಭಾವವು. ಯಾವುದಕ್ಕೆ ಅವಯವಗಳುಂಟೋ ಅದಕ್ಕೆ ಹುಟ್ಟುಸಾವುಗಳುಂಟು. ಯಾವುದಕ್ಕೆ ಹುಟ್ಟುಸಾವುಗಳುಂಟೋ ಅದಕ್ಕೆ ಅವಯವಗಳುಂಟು. ಹೀಗೆಂಬುದೇ ಅನ್ವಯವ್ಯಾಪ್ತಿಯು. ಯಾವುದಕ್ಕೆ ಅವಯವಗಳಿಲ್ಲವೊ ಅದಕ್ಕೆ ಹುಟ್ಟುಸಾವುಗಳಿಲ್ಲ, ಯಾವುದಕ್ಕೆ ಹುಟ್ಟುಸಾವುಗಳಿಲ್ಲವೊ ಅದಕ್ಕೆ ಅವಯವಗಳಿಲ್ಲ. ಇದೇ ವ್ಯತಿ

ನೆಲೆ—ನಾಶವಿಲ್ಲದ್ದು. ¶ ರೂಪಾಂತರ.

ರೇಕವ್ಯಾಪ್ತಿಯು. ಈ ಎರಡು ನ್ಯಾಯಗಳಿಂದಲೂ § ಸಾವಯವವೆನಿಸಿಕೊಂಡು, ಜನ್ಯಾದಿಗಳಿಗೊಳಗಾಗಿರುವ ಈ ಪ್ರಪಂಚವು, ಮತ್ತೊಂದು ನಿತ್ಯವಸ್ತುವಿನಿಂದಲೇ ಉಂಟಾಗಿರಬೇಕು. ಆದಕಾರಣ ಈ ಮೂರು ವಿಧಗಳಿಂದಲೂ ಈ ಜಗತ್ತಿಗೆ ಕಾರಣವಾದ ಒಂದು ವಸ್ತುವುಂಟೆಂದು ನಿಶ್ಚಯವಾಯಿತು. ಹೀಗೆ ಯುಕ್ತಿಗಳಿಂದ ನಾಸ್ತಿಕಾದಿಗಳನ್ನೊಪ್ಪಿಸಿ, ಪ್ರಮಾಣವಾಕ್ಯಗಳಿಂದ ಆಸ್ತಿಕರನ್ನು ಸಮ್ಮತಿಗೊಳಿಸುತ್ತಾನೆ. ಯಾವುದರಿಂದೀ ಭೂತಗಳುಂಟಾಗುವುವೋ, ಯಾವುದರಿಂದ ಬದುಕುವುವೋ, ಯಾವುದರಲ್ಲಿ ಲಯವನ್ನು ಪಡೆಯುವುವೋ, ಅದೇ ಬ್ರಹ್ಮವಸ್ತುವೆಂದು ತಿಳಿ. ಎಂಬ † ವೇದವಾಕ್ಯದಿಂದಲೂ, ಸೃಷ್ಟ್ಯಾದಿಯಲ್ಲಿ ಸಕಲ ಭೂತಗಳೂ ಯಾವುದರಿಂದುಂಟಾಗುವುವೋ, ಮರಳಿ ಮಹಾಪ್ರಳಯದಲ್ಲಿ ಎಲ್ಲಿ ಲಯವನ್ನು ಪಡೆಯುವುವೋ ಅದೇ ಬ್ರಹ್ಮವು ಎಂಬ * ಗೀತಾವಾಕ್ಯದಿಂದಲೂ ಜಗತ್ಕಾರಣವಾದ ವಸ್ತುವುಂಟೆಂಬುದೇ ಸಿದ್ಧಾಂತವಾಯಿತು.

ಇನ್ನು ಆ ಜಗತ್ಕಾರಣ ವಸ್ತುವೆಂಥಾದ್ದೆಂಬ ವಿಚಾರವು ಮಾಡಲ್ಪಡುವುದು. ಈ ವಿಷಯದಲ್ಲಿ ಬರುವ ಆಕ್ಷೇಪ ಸಮಾಧಾನಗಳು ಯಾವುವೆಂದರೆ (1) ಪ್ರಪಂಚವೆಂಬುದು ತ್ರಿಗುಣಾತ್ಮಕವಾದುದರಿಂದ ಪ್ರಧಾನವೇ ಜಗತ್ತಿಗೆ ಕಾರಣವು, ಎಂದರೆ "ಅಭಿಜ್ಞಾ ‡" ಎಂಬ ಸೂತ್ರಖಂಡದಿಂದ ಜಗತ್ಕಾರಣವಸ್ತುವು ಸರ್ವಜ್ಞವೆಂದುಹೇಳಲ್ಪಡುವುದು. ಸರ್ವಜ್ಞತ್ವವೆಂದರೆ ಎಲ್ಲವನ್ನೂ ತಿಳಿಯುವುದೆಂದು ಅರ್ಥವು. ಆ ತಿಳಿವಳಿಕೆಯು ಚೇತನ ಧರ್ಮವೇ ಹೊರತು ಜಡಧರ್ಮವಲ್ಲ. ಮತ್ತು ಆಕಾರಣ ವಸ್ತುವು ಈ ಲೋಕಗಳನ್ನು ಲೋಕಪಾಲರನ್ನು ಸೃಜಿಸಬೇಕೆಂದು ಆಲೋಚಿಸಿತು ಎಂಬ §ಶ್ರುತಿ ವಾಕ್ಯದಿಂದಲೂ, ಜಗತ್ಕಾರಣವೆಂದುಸ್ಪಷ್ಟವಾಗುವುದು. ಅಲ್ಲದೆ "ಈಕ್ಷತೇರ್ನಾಶಬ್ದಂ" ಎಂಬ ಬ್ರಹ್ಮಸೂತ್ರ ಜಡವಾದ ಪ್ರಧಾನಕ್ಕೆ ಈಕ್ಷಿತೃತ್ವ (ತಿಳಿವಳಿಕೆಯು) ವಿಲ್ಲವಾದುದರಿಂದ ಅದು ಜಗತ್ಕಾರಣವಲ್ಲವೆಂದು ನಿರಾಕರಿಸಲ್ಪಟ್ಟಿದೆ. ಆದುದರಿಂದ ಪ್ರಧಾನವು ಜಗತ್ಕಾರಣವಲ್ಲ. (2) ಆದರೆ ಜ್ಞಾನಾದಿಗುಣಗಳುಳ್ಳ ಜೀವನೇ ಜಗತ್ಕಾರಣವಾಗಲಿ. ಎಂದರೆ, ಮೂಲದಲ್ಲಿ "ಸ್ವರಾಟ್" ಎಂದು ಪ್ರಯೋಗಿಸಿರುವುದರಿಂದ ಆ ಕಾರಣ ವಸ್ತುವು ಸ್ವತಸ್ಸಿದ್ಧ ಜ್ಞಾನವುಳ್ಳದ್ದೆಂದು ಅರ್ಥವಾಗುವುದು. ಜೀವನ ಜ್ಞಾನವೆಂಬುದು ಪರಾಧೀನವಾದುದರಿಂದ ಅವನು ಜಗತ್ಕಾರಣವಲ್ಲ. (3) ಹಾಗಾದರೆ—ಹಿರಣ್ಯಗರ್ಭನಾದ ಚತುರ್ಮುಖನೇ ಎಲ್ಲಕ್ಕೂ ಆದಿಯೆಂದು ¶ ವೇದದಲ್ಲಿಹೇಳಲ್ಪಟ್ಟಿರುವುದರಿಂದ ಹಿರಣ್ಯಗರ್ಭನೇ ಜಗತ್ಕಾರಣವಾಗಿರಲಿ

---

§ ಭಾಗಿಸುವುದಕ್ಕೆ ಅರ್ಹವಾದುದು. † ಶ್ರು॥ ಯತೋವಾ ಇಮಾನಿ ಭೂತಾನಿ ಜಾಯಂತೆ, ಯೇನ ಜಾತಾನಿ ಜೀವಂತಿ, ಯತ್ಪ್ರಯಂತ್ಯಭಿಸಂವಿಶಂತಿ ತದ್ವಿಜಿಜ್ಞಾಸಸ್ವ, ತದ್ಬ್ರಹ್ಮೇತಿ ॥ * ಶ್ಲೋ ।ಯತಃ ಪ್ರವೃತ್ತಿರ್ಭೂತಾನಾಂ ಯೇನ ಸರ್ವಮಿದಂ ತತಂ । ಸ್ವಕರ್ಮಣಾ ತಮಭ್ಯರ್ಚ್ಯ ಸಿದ್ಧಿಂ ವಿಂದತಿ ಮಾನವಃ ॥

‡ ಶ್ರು "ಸ ಈಕ್ಷತೇಮಾನ್ನು ಲೋಕಾನ್ನು ಲೋಕಪಾಲಾನ್ನು ಸೃಜಾಇತಿ"

¶ "ಹಿರಣ್ಯಗರ್ಭ ಸ್ಸಮವರ್ತತಾಗ್ರೇ"

ಎಂ ಬರ್—ಎಂತಹ ಮಹಾಪಂಡಿತರನ್ನಾದರೂ ಮರುಳುಮಾಡುವ ವೇದಗಳನ್ನು, ಪರಮಾತ್ಮನೇ ಆದಿಯಲ್ಲಿ ಚತುರ್ಮುಖಬ್ರಹ್ಮನಿಗೆ ಮನಸ್ಸಿನಲ್ಲಿಯೇ ಹೊಳೆಯುವಂತೆ ಅನುಗ್ರಹಿಸಿ ದನೆಂಬು ಶ್ರುತ್ಯರ್ಥವಾಗುವುದರಿಂದ, ಆ ಬ್ರಹ್ಮನೂ ಜಗತ್ಕಾರಣವಲ್ಲ. ಇಂತು ಜಗತ್ಕಾರಣವಾದದಲ್ಲಿ ಬರುವ ಆಕ್ಷೇಪಗಳನ್ನು ನಿರಾಕರಿಸಿ, ಈಗ ತತ್ವಸ್ವರೂಪವು ವಿಚಾರಿಸಲ್ಪಡುವುದು.

ಅಲ್ಲಿಯವರೆಗೆ ದೃಶ್ಯದಿಂದ ಅದೃಶ್ಯವನ್ನು ಕಂಡು ಹಿಡಿಯುವ ಸುಲಭಮಾರ್ಗವನ್ನು ನುಸರಿಸಿ, ಜಗತ್ಕಾರಣವಾದ ಪರತತ್ವವನ್ನು ಸಾಧಿಸುವುದಕ್ಕಾಗಿ ಜಗತ್ತುಂಟೆಂದು ಒಪ್ಪಬೇಕಾಯಿತು. ಈಗ ಜಗತ್ತೂ ಸತ್ಯವಲ್ಲ. ಪರತತ್ವವೊಂದೇ ಸತ್ಯವೆಂದು ನಿರೂಪಿಸಲ್ಪಡುವುದು. ಹೇಗೆಂದರೆ—ಲೋಕದಲ್ಲಿ ತೇಜೋಮಯವಾದ ಮರೀಚಿಕೆ (ಬಿಸಲ್ಗೊರೆ) ಯನ್ನು ನೀರೆಂದೂ, ಜಲಮಯವಾದ ಮಂಜುಗಡ್ಡೆಯನ್ನು ಕಲ್ಲೆಂದೂ, ಕೆಂಪುಮಣಿ ಮೊದಲಾದ ಕಲ್ಲುಗಳನ್ನು. ತೇಜಸ್ಸೆಂದೂ, (ಕೆಂಡ)ತಿಳಿಯುವುದುಂಟಷ್ಟೆ. ಮರೀಚಿಕೆಯನ್ನು ನೀರೆಂದು ತಿಳಿಯುವಾಗ, ಮರೀಚಿಕೆಯೇ ನೀರಾಗಿ ಕಾಣುವುದೇ ಹೊರತು, ನೀರು ಬೇರೇ ಇಲ್ಲ. ಇದರಂತೆ ಪರಮಾತ್ಮವಸ್ತುವೇ ಜಗತ್ತಾಗಿ ಕಾಣುವುದಲ್ಲದೆ ಜಗತ್ತು ಬೇರೇ ಇಲ್ಲ. ಮತ್ತು ಮರೀಚಿಕೆಯಲ್ಲಿ ಇಲ್ಲದ ನೀರು ಆರೋಪಿಸಲ್ಪಡುವಂತೆ, ಪರಮಾತ್ಮನಲ್ಲಿ ಈ ಪ್ರಪಂಚವು ಆರೋಪಿಸಲ್ಪಟ್ಟಿದೆ. ಆದಕಾರಣ ಮಿಥ್ಯಾಪ್ರಪಂಚಕ್ಕೆ ಅಧಿಷ್ಠಾನವಾಗಿ, ಅಸತ್ಪದಾರ್ಥಗಳಿಗೆ ಸತ್ಯವನ್ನು ಕೊಡುತ್ತಾ, ಮಾಯಾತೀತನೆನಿಸಿರುವ ಪರಮಾತ್ಮವಸ್ತುವೊಂದೇ ಸತ್ಯವೆಂದು ಸಿದ್ಧಾಂತವು.

ಈ ಶ್ಲೋಕದಲ್ಲಿ ಗಾಯತ್ರೀ ಬೀಜಾಕ್ಷರಗಳಾವ,"ತತ್"ಎಂಬುದು ಸತ್ಯಂ ಎಂದೂ, "ದೇವಸ್ಯ, ಸವಿತುಃ" ಎಂಬುದಕ್ಕೆ ಪ್ರತಿಯಾಗಿ, "ಜನ್ಮಾದ್ಯಸ್ಯಯತಃ" ಎಂದೂ "ವರೇಣ್ಯಂ" ಎಂಬುದಕ್ಕೆ ಪ್ರತಿಯಾಗಿ,"ಪರಂ-ಅಭಿಜ್ಞಾಃ"ಎಂದೂ, "ಭರ್ಗಃ" ಎಂಬುದಕ್ಕೆ ಪ್ರತಿಯಾಗಿ, "ಸ್ವರಾಟ್" ಎಂದೂ, "ಧಿಯಃ" ಎಂಬುದಕ್ಕೆ ಬದುಲಾಗಿ, "ಹೃದಾ" ಎಂದೂ, ನಃ-ಎಂಬುದಕ್ಕೆ ಬದುಲು, "ಆದಿಕವಯೇ" ಎಂದೂ "ಧೀಮಹಿ" ಎಂಬುದಕ್ಕೆ ಬದುಲಾಗಿ "ಧೀಮಹಿ" ಎಂದೂ ಅದೇ ಅರ್ಥವುಳ್ಳ ಪ್ರತಿಪದಗಳು ಪ್ರಯೋಗಿಸಲ್ಪಟ್ಟು, ಗಾಯತ್ರಿಯ ಅರ್ಥವನ್ನು ವಿವರಿಸುವುದರಿಂದ ಈ ಪುರಾಣವು ಗಾಯತ್ರೀ ಪರಬ್ರಹ್ಮ ವಿದ್ಯೆಯನ್ನು ಭೋಧಿಸುವುದೆಂದು ಹೇಳಿದಂತಾಯಿತು. ಯಾಕೆಂದರೆ.

ಋತ್ಪ್ರಕೃತ್ಯ ಗಾಯತ್ರ್ಯಾ ವರ್ಣ್ಯತೇ ಧರ್ಮವಿಸ್ತರಃ।
ವೃತ್ರಾಸುರವಧೋಪೇತಂ ತದ್ಭಾಗವತ ಮಿಷ್ಯತೆ ॥ (ಮತ್ಸ್ಯಪುರಾಣ)

ಯಾವ ಪುರಾಣದಲ್ಲಿ ಗಾಯತ್ರಿಯನ್ನು ಅಧಿಕರಿಸಿ ಧರ್ಮಗಳು ವರ್ಣಿಸಲ್ಪಡುವುವೋ ವೃತ್ರಾಸುರ ಸಂಹಾರಕಥೆಯು ಎಲ್ಲಿ ವಿವರಿಸಲ್ಪಟ್ಟಿರುವುದೋ ಅದೇ ಭಾಗವತವೆಂದು ತಿಳಿಯತಕ್ಕದ್ದು.

"ಯೋಬ್ರಹ್ಮಾಣಂ ವಿದಧಾತಿ ಪೂರ್ವಂ ಯೋ ವೈ ವೇದಾಗ್ಶ್ಚ ಪ್ರಹಿಣೋತಿ ತಸ್ಮೈ"

ರೇಕವ್ಯಾಪ್ತಿಯು. ಈ ಎರಡು ನ್ಯಾಯಗಳಿಂದಲೂ § ಸಾವಯವವೆನಿಸಿಕೊಂಡು, ಜನ್ಯಾದಿಗಳಿಗೊಳಗಾಗಿರುವ ಈ ಪ್ರಪಂಚವು, ಮತ್ತೊಂದು ನಿತ್ಯವಸ್ತುವಿನಿಂದಲೇ ಉಂಟಾಗಿರಬೇಕು. ಆದಕಾರಣ ಈ ಮೂರು ವಿಧಗಳಿಂದಲೂ ಈ ಜಗತ್ತಿಗೆ ಕಾರಣವಾದ ಒಂದು ವಸ್ತುವುಂಟೆಂದು ನಿಶ್ಚಯವಾಯಿತು. ಹೀಗೆ ಯುಕ್ತಿಗಳಿಂದ ನಾಸ್ತಿಕಾದಿಗಳನ್ನೊಪ್ಪಿಸಿ, ಪ್ರಮಾಣವಾಕ್ಯಗಳಿಂದ ಆಸ್ತಿಕರನ್ನು ಸಮ್ಮತಿಗೊಳಿಸುತ್ತಾನೆ. ಯಾವುದರಿಂದೀ ಭೂತಗಳುಂಟಾಗುವುವೋ, ಯಾವುದರಿಂದ ಬದುಕುವುವೋ, ಯಾವುದರಲ್ಲಿ ಲಯವನ್ನು ಪಡೆಯುವುವೋ, ಅದೇ ಬ್ರಹ್ಮವಸ್ತುವೆಂದು ತಿಳಿ. ಎಂಬ † ವೇದವಾಕ್ಯದಿಂದಲೂ, ಸೃಷ್ಟ್ಯಾದಿಯಲ್ಲಿ ಸಕಲ ಭೂತಗಳೂ ಯಾವುದರಿಂದುಂಟಾಗುವುವೋ, ಮರಳಿ ಮಹಾಪ್ರಳಯದಲ್ಲಿ ಎಲ್ಲಿ ಲಯವನ್ನು ಪಡೆಯುವುವೋ ಅದೇ ಬ್ರಹ್ಮವು ಎಂಬ * ಗೀತಾವಾಕ್ಯದಿಂದಲೂ ಜಗತ್ಕಾರಣವಾದ ವಸ್ತುವುಂಟೆಂಬುದೇ ಸಿದ್ಧಾಂತವಾಯಿತು.

ಇನ್ನು ಆ ಜಗತ್ಕಾರಣ ವಸ್ತುವೆಂಥಾದ್ದೆಂಬ ವಿಚಾರವು ಮಾಡಲ್ಪಡುವುದು. ಈ ವಿಷಯದಲ್ಲಿ ಬರುವ ಆಕ್ಷೇಪ ಸಮಾಧಾನಗಳು ಯಾವುವೆಂದರೆ (1) ಪ್ರಪಂಚವೆಂಬುದು ತ್ರಿಗುಣಾತ್ಮಕವಾದುದರಿಂದ ಪ್ರಧಾನವೇ ಜಗತ್ತಿಗೆ ಕಾರಣವು, ಎಂದರೆ "ಅಭಿಜ್ಞಃ" ಎಂಬ ವಿಶೇಷಣದಿಂದ ಜಗತ್ಕಾರಣವಸ್ತುವು ಸರ್ವಜ್ಞವೆಂದುಹೇಳಲ್ಪಡುವುದು. ಸರ್ವಜ್ಞತ್ವವೆಂದರೆ ಎಲ್ಲವನ್ನೂ ತಿಳಿಯುವುದೆಂದು ಅರ್ಥವು. ಆ ತಿಳಿವಳಿಕೆಯು ಚೇತನ ಧರ್ಮವೇ ಹೊರತು ಜಡಧರ್ಮವಲ್ಲ. ಮತ್ತು ಆಕಾರಣ ವಸ್ತುವು ಈ ಲೋಕಗಳನ್ನು ಲೋಕಪಾಲಕರನ್ನು ಸೃಜಿಸಬೇಕೆಂದು ಆಲೋಚಿಸಿತು ಎಂಬ §ಶ್ರುತಿ ವಾಕ್ಯದಿಂದಲೂ, ಜಗತ್ಕಾರಣವು ಚೇತನವೆಂದು ಸ್ಪಷ್ಟವಾಗುವುದು. ಇಲ್ಲದೆ "ಈಕ್ಷತೇರ್ನಾಶಬ್ದಂ" ಎಂಬ ಬ್ರಹ್ಮಸೂತ್ರ ಜಡವಾದ ಪ್ರಧಾನಕ್ಕೆ ಈಕ್ಷಿತೃತ್ವ (ತಿಳಿವಳಿಕೆಯು) ವಿಲ್ಲವಾದುದರಿಂದ ಅದು ಜಗತ್ಕಾರಣವಲ್ಲವೆಂದು ನಿರಾಕರಿಸಲ್ಪಟ್ಟಿದೆ. ಆದುದರಿಂದ ಪ್ರಧಾನವು ಜಗತ್ಕಾರಣವಲ್ಲ. (2) ಆದರೆ ಜ್ಞಾನಾದಿಗುಣಗಳುಳ್ಳ ಜೀವನೇ ಜಗತ್ಕಾರಣವಾಗಲಿ. ಎಂದರೆ, ಮೂಲದಲ್ಲಿ ಸ್ವರಾಟ್ "ಎಂದು ಪ್ರಯೋಗಿಸಿರುವುದರಿಂದ ಆ ಕಾರಣ ವಸ್ತುವು ಸ್ವತಸ್ಸಿದ್ಧ ಜ್ಞಾನವುಳ್ಳದ್ದೆಂದು ಅರ್ಥವಾಗುವುದು. ಜೀವನ ಜ್ಞಾನವೆಂಬುದು ಪರಾಧೀನವಾದುದರಿಂದ ಅವನು ಜಗತ್ಕಾರಣವಲ್ಲ. (3)ಹಾಗಾದರೆ—ಹಿರಣ್ಯಗರ್ಭನಾದ ಚತುರ್ಮುಖನೇ ಎಲ್ಲಕ್ಕೂ ಆದಿಯೆಂದು ¶ ವೇದದಲ್ಲಿಹೇಳಲ್ಪಟ್ಟಿರುವುದರಿಂದ ಹಿರಣ್ಯಗರ್ಭನೇ ಜಗತ್ಕಾರಣವಾಗಿರಲಿ

---

§ ಭಾಗಿಸುವುದಕ್ಕೆ ಅರ್ಹವಾದುದು. † ಶ್ರು॥ ಯತೋವಾ ಇಮಾನಿ ಭೂತಾನಿ ಜಾಯಂತೆ, ಯೇನ ಜಾತಾನಿ ಜೀವಂತಿ, ಯತ್ಪ್ರಯಂತ್ಯಭಿಸಂವಿಶಂತಿ ತದ್ವಿಜಿಜ್ಞಾಸಸ್ವ, ತದ್ಬ್ರಹ್ಮೇತಿ ॥ * ಶ್ಲೋ॥ ಮಮಯೋನಿರ್ಮಹದ್ಬ್ರಹ್ಮ ತಸ್ಮಿನ್ಗರ್ಭಂ ದಧಾಮ್ಯಹಂ। ಸಂಭವಃ ಸರ್ವಭೂತಾನಾಂ ತತೋ ಭವತಿ ಭಾರತ ॥ ಸರ್ವಯೋನಿಷು ಕೌಂತೇಯ ಮೂರ್ತಯಃ ಸಂಭವಂತಿ ಯಾಃ। ತಾಸಾಂ ಬ್ರಹ್ಮ ಮಹದ್ಯೋನಿರಹಂ ಬೀಜಪ್ರದಃ ಪಿತಾ ॥

§ ಶ್ರು "ಸ ಈಕ್ಷತೇಮೇನ್ನು ಲೋಕಾನ್ನು ಲೋಕಪಾಲಾನ್ನು ಸೃಜಾಇತಿ"

¶ "ಹಿರಣ್ಯಗರ್ಭಃ ಸಮವರ್ತತಾಗ್ರೇ"

ಎಂ ಬರೆ—ಎಂತಹ ಮಹಾಪಂಡಿತರನ್ನಾದರೂ ಮರುಳುಮಾಡುವ ವೇದಗಳನ್ನು, ಪರಮಾತ್ಮನೇ ಆದಿಯಲ್ಲಿ ಜಗತ್ಸೃಷ್ಟಿಖಬ್ರಹ್ಮನಿಗೆ ಮನಸ್ಸಿನಲ್ಲಿಯೇ ಹೊಳೆಯುವಂತೆ ಅನುಗ್ರಹಿಸಿದನೆಂದು § ಶ್ರುತ್ಯರ್ಥವಾಗುವುದರಿಂದ, ಆ ಬ್ರಹ್ಮನೂ ಜಗತ್ಕಾರಣವಲ್ಲ. ಇಂತು ಜಗತ್ಕಾರಣವಾದದಲ್ಲಿ ಬರುವ ಆಕ್ಷೇಪಗಳನ್ನು ನಿರಾಕರಿಸಿ, ಈಗ ತತ್ವಸ್ವರೂಪವು ವಿಚಾರಿಸಲ್ಪಡುವುದು.

ಇಲ್ಲಿಯವರೆಗೆ ದೃಶ್ಯದಿಂದ ಅದೃಶ್ಯವನ್ನು ಕಂಡು ಹಿಡಿಯುವ ಸುಲಭಮಾರ್ಗವನ್ನನುಸರಿಸಿ, ಜಗತ್ಕಾರಣವಾದ ಪರತತ್ವವನ್ನು ಸಾಧಿಸುವುದಕ್ಕಾಗಿ ಜಗತ್ತುಂಟೆಂದು ಒಪ್ಪಬೇಕಾಯಿತು. ಈಗ ಜಗತ್ತೂ ಸತ್ಯವಲ್ಲ. ಪರತತ್ವವೊಂದೇ ಸತ್ಯವೆಂದು ನಿರೂಪಿಸಲ್ಪಡುವುದು. ಹೇಗೆಂದರೆ—ಲೋಕದಲ್ಲಿ ತೇಜೋಮಯವಾದ ಮರೀಚಿಕೆ (ಬಿಸಲ್ದೊರೆ) ಯನ್ನು ನೀರೆಂದೂ, ಜಲಮಯವಾದ ಮಂಜುಗಡ್ಡೆಯನ್ನು ಕಲ್ಲೆಂದೂ, ಕೆಂಪುಮಣಿ ಮೊದಲಾದ ಕಲ್ಲುಗಳನ್ನು, ತೇಜಸ್ಸೆಂದೂ, (ಕೆಂಡ)ತಿಳಿಯುವುದುಂಟಷ್ಟೆ. ಮರೀಚಿಕೆಯನ್ನು ನೀರೆಂದು ತಿಳಿಯುವಾಗ, ಮರೀಚಿಕೆಯೇ ನೀರಾಗಿ ಕಾಣುವುದೇ ಹೊರತು, ನೀರು ಬೇರೇ ಇಲ್ಲ. ಇದರಂತೆ ಪರಮಾತ್ಮವಸ್ತುವೇ ಜಗತ್ತಾಗಿ ಕಾಣುವುದಲ್ಲದೆ ಜಗತ್ತು ಬೇರೇ ಇಲ್ಲ. ಮತ್ತು ಮರೀಚಿಕೆಯಲ್ಲಿ ಇಲ್ಲದ ನೀರು ಆರೋಪಿಸಲ್ಪಡುವಂತೆ, ಪರಮಾತ್ಮನಲ್ಲಿ ಈ ಪ್ರಪಂಚವು ಆರೋಪಿಸಲ್ಪಟ್ಟಿದೆ. ಆದಕಾರಣ ಮಿಥ್ಯಾಪ್ರಪಂಚಕ್ಕೆ ಅಧಿಷ್ಠಾನವಾಗಿ, ಅಸತ್ಪದಾರ್ಥಗಳಿಗೆ ಸತ್ಯವನ್ನು ಕೊಡುತ್ತಾ, ಮಾಯಾತೀತನೆನಿಸಿರುವ ಪರಮಾತ್ಮವಸ್ತುವೊಂದೇ ಸತ್ಯವೆಂದು ಸಿದ್ಧಾಂತವು.

ಈ ಶ್ಲೋಕದಲ್ಲಿ ಗಾಯತ್ರೀ ಬೀಜಾಕ್ಷರಗಳಾದ,"ತತ್"ಎಂಬುದಕ್ಕೆ ಪ್ರತಿಯಾಗಿ ಸತ್ಯಂ ಎಂದೂ, "ದೇವಸ್ಯ, ಸವಿತುಃ" ಎಂಬುದಕ್ಕೆ ಪ್ರತಿಯಾಗಿ, "ಜನ್ಮಾದ್ಯಸ್ಯಯತಃ" ಎಂದೂ "ವರೇಣ್ಯಂ" ಎಂಬುದಕ್ಕೆ ಪ್ರತಿಯಾಗಿ,"ಪರಂ-ಅಭಿಜ್ಞಾಃ"ಎಂದೂ, "ಭರ್ಗಃ" ಎಂಬುದಕ್ಕೆ ಪ್ರತಿಯಾಗಿ, "ಸ್ವರಾಟ್" ಎಂದೂ, "ಧಿಯಃ" ಎಂಬುದಕ್ಕೆ ಬದುಲಾಗಿ, "ಹೃದಾ" ಎಂದೂ, ನಃ-ಎಂಬುದಕ್ಕೆ ಬದುಲು, "ಅದಿಕವಯೇ" ಎಂದೂ "ಧೀಮಹಿ" ಎಂಬುದಕ್ಕೆ ಬದುಲಾಗಿ "ಧೀಮಹಿ" ಎಂದೂ ಅದೇ ಅರ್ಥವುಳ್ಳ ಪ್ರತಿಪದಗಳು ಪ್ರಯೋಗಿಸಲ್ಪಟ್ಟು, ಗಾಯತ್ರಿಯು ಅರ್ಥವನ್ನು ವಿವರಿಸುವುದರಿಂದ ಈ ಪುರಾಣವು ಗಾಯತ್ರೀ ಪರಬ್ರಹ್ಮ ವಿದ್ಯೆಯನ್ನು ಭೋಧಿಸುವುದೆಂದು ಹೇಳಿದಂತಾಯಿತು. ಯಾಕೆಂದರೆ.

ಪುರಾಣಾನಿಕೃತ್ಯ ಗಾಯತ್ರೀಂ ವರ್ಣ್ಯತೇ ಧರ್ಮವಿಸ್ತರಃ ।
ವೃತ್ರಾಸುರವಧೋಪೇತಂ ತದ್ಭಾಗವತ ಮಿಷ್ಯತೆ ॥ (ಮತ್ಸ್ಯಪುರಾಣ)

ಯಾವ ಪುರಾಣದಲ್ಲಿ ಗಾಯತ್ರಿಯನ್ನು ಅಧಿಕರಿಸಿ ಧರ್ಮಗಳು ವರ್ಣಿಸಲ್ಪಡುವುವೋ ವೃತ್ರಾಸುರ ಸಂಹಾರಕಥೆಯು ಎಲ್ಲಿ ವಿವರಿಸಲ್ಪಟ್ಟಿರುವುದೋ ಅದೇ ಭಾಗವತವೆಂದ ತಿಳಿಯುತಕ್ಕದ್ದು.

§ "ಯೋಬ್ರಹ್ಮಾಣಂ ವಿದಧಾತಿ ಪೂರ್ವಂ ಯೋ ವೈ ವೇದಾಗ್ಶ್ಚ ಪ್ರಹಿಣೋತಿ ತಸ್ಮೈ ।"

ಗ್ರಂಥೊಷ್ಟಾದಶಸಾಹಸ್ರೋ ದ್ವಾದಶಸ್ಕಂಧಸಮ್ಮಿತಃ ।
ಹಯಗ್ರೀವಬ್ರಹ್ಮವಿದ್ಯಾ ಯತ್ರವೃತ್ರವಧ ಸ್ತಥಾ ।
ಗಾಯತ್ರ್ಯಾಶ್ಚ ಸಮಾರಂಭ ಸ್ತದ್ವೈ ಭಾಗವತಂ ವಿದುಃ ॥ (ಪುರಾಣಾಂತರ)

ಹದಿನೆಂಟು ಸಾವಿರ ಗ್ರಂಥ ಸಂಖ್ಯೆಯಿಂದಲೂ, ಹನ್ನೆರಡು ಸ್ಕಂಧಗಳಿಂದಲೂ ಯುಕ್ತವಾಗಿ, ಹಯಗ್ರೀವ ಬ್ರಹ್ಮವಿದ್ಯೆಯನ್ನೂ, ಗಾಯತ್ರೀ ವಿವರಣೆಯನ್ನೂ, ವೃತ್ರವಧವನ್ನೂ ಪ್ರಕಾಶಗೊಳಿಸುವ ಗ್ರಂಥವೇ ಭಾಗವತವೆನಿಸಲ್ಪಡುವುದು. ಮತ್ತು

ಅಂಬರೀಷಶುಕಪ್ರೋಕ್ತಂ ನಿತ್ಯಂ ಭಾಗವತಂ ಕೃಣು ।
ಪಠಸ್ವ ಸ್ವಮುಖೇನಾಪಿ ಯದೀಚ್ಛಸಿ ಭವಕ್ಷಯಂ ॥ (ಪದ್ಮಪುರಾಣ)

ಅಯ್ಯಾ ಅಂಬರೀಷನೇ? ನೀನು ಪಾಪವಿಮುಕ್ತನಾಗಬೇಕಾದರೆ, ನಿತ್ಯವೂ ಬಿಡದಂತೆ ಶುಕಮುನಿಯಿಂದ ವಿರಚಿತವಾದ ಭಾಗವತವನ್ನು ಕೇಳು. ಅಥವಾ ನೀನಾದರೂ ಓದಿಕೋ.

ಇತ್ಯಾದಿ ಪ್ರಮಾಣಗಳಿಂದ ಗಾಯತ್ರಿಯೆಂಬ ಪರಬ್ರಹ್ಮ ವಿದ್ಯೆಯನ್ನು ಪ್ರತಿಪಾದಿಸುವ ಭಾಗವತವೆಂಬ ಮಹಾಪುರಾಣವು ಇದೇ ಹೊರತು ವಸ್ತ್ವಂತರವಲ್ಲ.

ಮೂ॥ ಧರ್ಮಃ ಪ್ರೋಜ್ಝಿತಕೈತವೋತ್ರ ಪರಮೋ ನಿರ್ಮತ್ಸರಾಣಾಂ ಸತಾಂ ।
ವೇದ್ಯಂ ವಾಸ್ತವ ಮತ್ರ ವಸ್ತು ಶಿವದಂ ತಾಪತ್ರಯೋನ್ಮೂಲನಂ ॥
ಶ್ರೀಮದ್ಭಾಗವತೇ ಮಹಾಮುನಿಕೃತೇ ಕಿಂವಾ ಪರೈರೀಶ್ವರಃ ।
ಸದ್ಯೋ ಹೃದ್ಯವರುದ್ಧ್ಯತೇತ್ರ ಕೃತಿಭಿ ಶ್ಶುಶ್ರೂಷುಭಿ ಸ್ತತ್ಕ್ಷಣಾತ್ ॥೩॥

ಅತ್ರ—ಈ ನನ್ನ ಬುದ್ಧಿಸ್ಥವಾದ, ಮಹಾಮುನಿಕೃತೇ, ಮಹಾಮುನಿ- ಶ್ರೀಮನ್ನಾರಾಯಣಮೂರ್ತಿಯಿಂದ, ಕೃತೇ-ಸಂಗ್ರಹವಾಗಿ ಮಾಡಲ್ಪಟ್ಟದ್ದ, ಶ್ರೀಮದ್ಭಾಗವತೇ. ಶ್ರೀಮತ್-ಮುಮುಕ್ಷುಗಳಿಗೆ ಅತಿರಮಣೀಯವಾದ, ಭಾಗವತೇ-ಭಾಗವತದಲ್ಲಿ,@ ನಿರ್ಮತ್ಸರಾಣಾಂ-ಮತ್ಸರವಿಲ್ಲದಿರುವ, ಸತಾಂ-ಭೂತದಯೆಯುಳ್ಳ ಸತ್ಪುರುಷರ, ಪ್ರೋಜ್ಝಿತಕೈತವಃ, ಪ್ರೋಜ್ಝಿತ-ಸಂಪೂರ್ಣವಾಗಿ ಬಿಡಲ್ಪಟ್ಟ, ಕೈತವಃ-ಫಲಾಭಿಸಂಧಿಯೆಂಬ ಕಪಟವುಳ್ಳದ್ದಾ ಮದರಿಂದಲೇ, ಪರಮಃ-ಸರ್ವೋತ್ತಮವಾದ, ಧರ್ಮಃ-ಭಗವದಾರಾಧನರೂಪವಾದ ಧರ್ಮವು,(ವಿವರಿಸಲ್ಪಡುವುದು)ಅತ್ರ-ಈ ಭಾಗವತದಲ್ಲಿ, ತಾಪತ್ರಯೋನ್ಮೂಲನಂ, ತಾಪ-¶ಆಧ್ಯಾತ್ಮಿಕ †ಆಧಿಭೌತಿಕ §ಆಧಿದೈವಿಕ ಎಂಬತಾಪಗಳ,ತ್ರಯ-ಮೂರನ್ನು,ಉನ್ಮೂಲನಂ-ನಾಶಗೊಳಿಸುವ,ಶಿವದಂ-ಪರಮ ಸುಖವನ್ನು ಕೊಡುವ, ವಾಸ್ತವಂ-ಪರಮಾರ್ಥವಾದ,ವಸ್ತು-ತತ್ವವು,ವೇದ್ಯಂ-ತಿಳಿಯತಕ್ಕುದಾಗಿರುವುದು. ಅಥವಾ ''ವಸ್ತುನಃ ಇದಂವಾಸ್ತವಂ'' ಎಂಬ ವ್ಯುತ್ಪತ್ತಿಯಿಂದ, ವಸ್ತುವಿನ ಅಂಶವಾದ ಜೀವನೂ, ವಸ್ತುವಿನ ಶಕ್ತಿಯಾದ ಮಾಯೆಯೂ, ವಸ್ತುವಿನ ಕಾರ್ಯವಾದ ಜಗತ್ತೂ ಇವೆಲ್ಲವೂ ವಸ್ತುಗಳೇ ಎನಿಸಿಕೊಂಡಿದ್ದರೂ ಆ ಎತ್ತಣ ವಸ್ತುವು ಇವುಗಳಿಗಿಂತಲೂ ಬೇರೆ, ಎಂದು ತಿಳಿಯತಕ್ಕುದ್ದು. ಅಪರೈಃ-ಇತರ ಶಾಸ್ತ್ರಗಳಿಂದ, ಅಥವಾ ಆಶಾಸ್ತ್ರಗಳಲ್ಲಿ ಹೇಳಲ್ಪಟ್ಟ ಮಾರ್ಗಗಳಿಂದ, ಈಶ್ವರಃ-ಪರಮೇಶ್ವರನು, ಸದ್ಯಃ-ತತ್ಕ್ಷಣದಲ್ಲಿಯೇ, ಹೃದಿ-ಮನಸ್ಸಿನಲ್ಲಿ, ಅವರುದ್ಧ್ಯತೇ ಕಿಂವಾ-ಸ್ಥಿರಗೊಳಿಸಲ್ಪಡು

@ ಪರರಶ್ರೇಯಸ್ಸನ್ನು ಸೈರಿಸದಿರುವುದು ಮತ್ಸರವು ¶ ಶರೀರ ಮನಸ್ಸುಗಳಿಗುಂಟಾಗುವ ನೋವು
† ಬೆಂಕಿ ನೀರು ಮೊದಲಾದವುಗಳಿಂದುಂಟಾಗುವ ಬಾಧೆ § ಅಕಸ್ಮಾತ್ತಾಗಿ ಸಂಭವಿಸುವತೊಂದರೆ

ವನೇ ? ಇಲ್ಲ. ಅತ್ರ-ಈ ಭಾಗವತದಲ್ಲಿ, ಕೃತಿಭಿಃ-ಪುಣ್ಯಾವಲಿಗಳಾದುದರಿಂದಲೇ, ಶುಕ್ರೂಷುಭಿಃ-ಕೇಳಬೇಕೆಂದುಬಯಸುವವರಿಂದ, ತತ್ಕ್ಷಣಾತ್-ಆ ಕ್ಷಣದಲ್ಲಿಯೇ, ಅವರುದ್ಯತೆ-ಸ್ಥಿರಗೊಳಿಸಲ್ಪಡುತ್ತಾನೆ

ಈಗ ಶ್ರೋತೃಗಳಿಗೆ ರುಚಿಯನ್ನುಂಟುಮಾಡುವುದಕ್ಕಾಗಿ, ಸರ್ವಶಾಸ್ತ್ರಗಳಿಗಿಂತಲೂ ಈ ಭಾಗವತ ಶಾಸ್ತ್ರವೇ ಶ್ರೇಷ್ಠವೆಂದು ನಿರೂಪಿಸಲ್ಪಡುವುದು. ಎಂತೆಂದರೆ-ಲೋಕದಲ್ಲಿ ಶಾಸ್ತ್ರಗಳು ಕರ್ಮ, ಜ್ಞಾನ, ದೇವತೆಗಳೆಂಬ ಮೂರು ವಿಷಯಗಳನ್ನು ಬೋಧಿಸತಕ್ಕವುಗಳಾಗಿರುವವು ಅವುಗಳಲ್ಲಿ ಕರ್ಮಕಾಂಡವನ್ನು ಬೋಧಿಸುವ ಶಾಸ್ತ್ರಗಳು, ಶ್ರೌತ ಸ್ಮಾರ್ತಾದಿ ಕರ್ಮಗಳನ್ನೂ, ಅವುಗಳಿಂದುಂಟಾಗುವ ಫಲಗಳನ್ನೂ ತಿಳಿಯಪಡಿಸುವುವು. ಜ್ಞಾನಕಾಂಡವನ್ನು ಪ್ರತಿಪಾದಿಸುವ ವೈಶೇಷಿಕಾದಿ ಶಾಸ್ತ್ರಗಳು, ದ್ರವ್ಯಾದಿ ಪದಾರ್ಥಸ್ವರೂಪವನ್ನೂ, ಅವುಗಳ ತಿಳಿವಳಿಕೆಯಿಂದುಂಟಾಗುವ ಫಲವನ್ನೂ ವಿವರಿಸುವುವು. ದೇವತಾಕಾಂಡವನ್ನು ನಿರೂಪಿಸುವ ಶಾಸ್ತ್ರಗಳು ಆಯಾ ದೇವತೆಗಳನ್ನೂ, ಅವರುಪಾಸನೆಯಿಂದ ಪಡೆಯಬಹುದಾದ ಫಲಗಳನ್ನೂ ಪ್ರತಿಪಾದಿಸುವುವು. ಈ ಭಾಗವತ ಶಾಸ್ತ್ರವು ಮೋಕ್ಷಪದವಿಯಲ್ಲಿಯೂ ಆಸೆಯನ್ನುಂಟುಮಾಡದ ಸರ್ವೋತ್ತಮವಾದ ಭಕ್ತಿಯೆಂಬ ಧರ್ಮವನ್ನು ವರ್ಣಿಸುವುದೇ ಹೊರತು ಕರ್ಮಕಾಂಡದಂತೆ ಸ್ವರ್ಗಾದಿ ಫಲಗಳನ್ನು ಬೋಧಿಸುವುದಿಲ್ಲ. ದ್ವೇಷಾಸೂಯೆಗಳನ್ನು ತೊರೆದು, ಭೂತದಯೆಯುಳ್ಳ ಮಹಾತ್ಮರಲ್ಲದೆ ಈ ಧರ್ಮಕ್ಕೆ ಇತರರು ಅಧಿಕಾರಿಗಳೂ ಅಲ್ಲ. ಮತ್ತು ಇಲ್ಲಿ ಪ್ರತಿಪಾದಿಸಲ್ಪಡುವ ಆತ್ಮತತ್ವವೆಂಬುದು ಅಧ್ಯಾತ್ಮಿಕಾದಿ ತಾಪತ್ರಯವನ್ನು ಹೋಗಲಾಡಿಸುವುದಾಗಿಯೂ, ಜೀವವಾಯಾಪ್ರಪಂಚಗಳಿಗಿಂತ ವಿವಿಕ್ತವಾಗಿಯೂ, ನಿರತಿಶಯಾನಂದವನ್ನು ಕೊಡತಕ್ಕದಾಗಿಯೂ, ಪರಮಾರ್ಥ ಸತ್ಯವಾಗಿಯೂ ಇರುವುದೇ ಹೊರತು, ದ್ರವ್ಯಗುಣಾದಿಗಳಂತೆ ಅನಿತ್ಯವೂ ಅಲ್ಲ. ಇತರ ಶಾಸ್ತ್ರಗಳನ್ನು ಕೇಳುವವರು ಬಹುಕಾಲದನಂತರ ಅತಿಪ್ರಯಾಸದಿಂದ ಭಗವದ್ಭಕ್ತಿಯನ್ನು ಪಡೆದಾರು. ಈ ಶಾಸ್ತ್ರವು ಹಾಗಲ್ಲ. ಶ್ರವಣಮಾಡಿದ ಕೂಡಲೇ ಭಕ್ತಿಯನ್ನುಂಟುಮಾಡುವುದು. ಜನ್ಮಾಂತರದಲ್ಲಿ ಸುಕೃತವಿಶೇಷವನ್ನು ಮಾಡಿದ್ದ ಹೊರತು ಈ ಶಾಸ್ತ್ರವನ್ನು ಕೇಳಬೇಕೆಂಬ ಕೋರಿಕೆಯುಂಟಾಗುವುದಿಲ್ಲ. ಆದುದರಿಂದ ಈಗ ನಿವರಿಸಿದ ಕಾಂಡತ್ರಯದ ಅರ್ಥವನ್ನೂ ಯಥಾಸ್ಥಿತಿಯಿಂದ ಪ್ರತಿಪಾದಿಸುವ ಈ ಭಾಗವತ ಶಾಸ್ತ್ರವೇ ಸರ್ವಶಾಸ್ತ್ರಗಳಿಗಿಂತಲೂ ಶ್ರೇಷ್ಠವಾದುದಾದಕಾರಣ ನಿತ್ಯವೂ ಇದನ್ನೇ ಶ್ರವಣಮಾಡಿ ಧನ್ಯರಾಗಬೇಕೆಂದು ಭಾವವು.

ಮೂ॥ ನಿಗಮಕಲ್ಪತರೋರ್ಗಳಿತಂ ಫಲಂ ಶುಕಮುಖಾದಮೃತ ದ್ರವಸಂಯುತಂ।
ಪಿಬತ ಭಾಗವತಂ ರಸಮಾಲಯಂ ಮುಹುರಹೋ ರಸಿಕಾ ಭುವಿ ಭಾವುಕಾಃ॥೪॥

ರಸಿಕಾಃ-ಅಯ್ಯಾ ರಸಿಕರಿರಾ ! ಭಾವುಕಾಃ-ರಸವಿಶೇಷವನ್ನು ಭಾವಿಸುವುದರಲ್ಲಿ ಚತುರರಿರಾ ! ಶುಕಮುಖಾತ್,ಶುಕ-ಗಿಳಿಯ ಅಥವಾ ಶುಕಮುನಿಯ, ಮುಖಾತ್-ಮುಖದದೆಸೆಯಿಂದ, ಭುವಿ-ಭೂಮಿಯಲ್ಲಿ, ಗಳಿತಂ-ಉರುಳಿದುದರಿಂದಲೇ, ಅಮೃತ ದ್ರವಸಂಯುತಂ, ಅಮೃತ-ಅಮೃತದಂತಿರುವ, ದ್ರವ-ರಸದಿಂದ, ಸಂಯುತಂ-ಕೂಡಿರುವ ಅಥವಾ ಅಮೃತ-ಪರಮಸುಖದಲ್ಲಿ ದ್ರವ-ಪರತತ್ವದಿಂದ,ಸಂಯು

ತಂ-ಕೂಡಿರುವ, ರಸಂ-ರಸಭರಿತವಾದ. ನಿಗಮಕಲ್ಪತರೋಃ, ನಿಗಮ-ವೇದಗಳೆಂಬ, ಕಲ್ಪತರೋಃ-ಕಲ್ಪವೃಕ್ಷದ, ಭಾಗವತಂ-ಭಾಗವತವೆಂಬ ಹೆಸರುಳ್ಳ, ಇದಂ-ಈ, ಫಲಂ-ಫಲವನ್ನು, ಆಲಯಂ-ಕೈವಲ್ಯದಲ್ಲಿಯೂ ಬಿಡದೆ, ಮುಹುಃ-ಬಾರಿಬಾರಿಗೂ, ಪಿಬತ-ಪಾನಮಾಡಿರಿ. ಅಂದರೆ ಸೇವಿಸಿರಿ, ಅಹೋ-ಆಶ್ಚರ್ಯವು.

ಈ ಭಾಗವತವೆಂಬುದು ಸಕಲ ಶಾಸ್ತ್ರಗಳಿಗಿಂತಲೂ ಶ್ರೇಷ್ಠವೆಂಬುದು ಮಾತ್ರವೇ ಅಲ್ಲ. ಎಲ್ಲ ಶಾಸ್ತ್ರಗಳಿಗೂ ಫಲರೂಪವಾದುದು. ಮತ್ತು ಈ ಫಲವು, ಸಾಧಾರಣವಾಗಿ ಲಭಿಸತಕ್ಕುದೂ ಅಲ್ಲ. ಹೇಗೆಂದರೆ—ಈ ಫಲವು, ಸಚ್ಚಿದಾನಂದಸ್ವರೂಪನಾದ ಪರಮಾತ್ಮನೆಂಬ ಬೀಜದಿಂದ ಜನಿಸಿ, ಚತುರ್ಮುಖಬ್ರಹ್ಮನ ನಿರ್ಮಲವಾದ ಬುದ್ಧಿಯೆಂಬ ಪಾತಿಯಲ್ಲಿ ಮೊಳೆತು, ಮಹರ್ಷಿಗಳ ಮಂತ್ರದರ್ಶನವೆಂಬ ಜಲಸೇಚನದಿಂದ ಬೆಳೆಯುತ್ತಾ, ಋಕ್ಕು, ಯಜುಸ್ಸು, ಸಾಮ, ಅಥರ್ವಣಗಳೆಂಬ ಕವಲೊಡೆದು, ವಿದ್ಯಾಸ್ಥಾನಗಳೆಂಬ ಚಿಗುರುಗಳಿಂದಲೂ, ವೇದಾಂತಗಳೆಂಬ ಪುಷ್ಪಗಳಿಂದಲೂ ರಮಣೀಯವೆನಿಸಿದ, ಸರ್ವ ಪುರುಷಾರ್ಥ ಸಾಧನವಾದ ವೇದವೆಂಬ ಕಲ್ಪವೃಕ್ಷದಿಂದ ಜನಿಸಿತು. ಶ್ರೀಮನ್ನಾರಾಯಣಮೂರ್ತಿಯು ಇದನ್ನು ಕೊಯ್ದು ಮೊದಲು ವೈಕುಂಠಕ್ಕೆ ತೆಗೆದುಕೊಂಡು ಹೋದನು. ಬಳಿಕ ನಾರದಮುನಿಯು ಆ ಫಲವನ್ನು ತಂದು ನನಗಿತ್ತನು. ನಾನದನ್ನು ಶುಕಮುಖದಲ್ಲಿಟ್ಟೆನು. ಗಿಳಿಯು ಕುಟುಕಿದ ಹಣ್ಣಿನಲ್ಲಿ ರುಚಿಯು ಹೆಚ್ಚುವುದೆಂಬುದು ಲೋಕಪ್ರಸಿದ್ಧವಾಗಿಯೇ ಇರುವುದಷ್ಟೆ. ಹಾಗೆಯೇ ಈ ಭಾಗವತ ಫಲವೂ ಶುಕಮುನಿಯ ಮುಖಸಂಪರ್ಕದಿಂದ ನಿರತಿಶಯವಾದ ಆನಂದರಸವನ್ನು ಕೊಡತಕ್ಕುದಾಗಿರುವುದು. ಇಂತಹ ಅಲಭ್ಯವಾದ ಫಲವು ಶುಕಮುನಿಯಿಂದ ಶಿಷ್ಯಪ್ರಶಿಷ್ಯರ ಮೂಲಕ ಭೂಲೋಕಕ್ಕಿಳಿದಿರುವುದು. ಈ ಫಲವು ಒಡೆದಿರುವುದಲ್ಲ. ರಸವು ಸುರಿದು ಹೋಗಿಲ್ಲ. ಇತರಫಲಗಳಂತೆ ಈ ಹಣ್ಣಿನಲ್ಲಿ ಸಿಪ್ಪೆ, ಬೀಜ, ಜೊಟ್ಟು ಮೊದಲಾದ ಬಿಸುಡತಕ್ಕ ಭಾಗಗಳಿಲ್ಲ. ಈ ಫಲವನ್ನು ಎಷ್ಟು ಸೇವಿಸಿದರೂ ಬೇಸರವಾಗುವುದಿಲ್ಲ. ಹಣ್ಣೆಲ್ಲಾ ರಸವೇ ಆಗಿರುವುದು. ಅಯ್ಯಾ ರಸವಿಶೇಷಗಳ ರುಚಿಯನ್ನು ಬಲ್ಲ ರಸಿಕರಿರಾ! ಇಂತಹ ಅಪೂರ್ವ ಫಲವು ದೊರೆತಿರುವುದು. ಇದರ ರುಚಿಯನ್ನು ಅರಿತವರು ಮೋಕ್ಷಸಾಮ್ರಾಜ್ಯದಲ್ಲಿಯೂ ಬಿಡಲಾರರು. ಆದುದರಿಂದ ನೀವು ಇದನ್ನು ಬಿಡದೆ ಬಾರಿಬಾರಿಗೂ ಸೇವಿಸಿ ಧನ್ಯರಾಗಿರಿ ಎಂಬುದು ತಾತ್ಪರ್ಯವು.

ಇಂತು ನಿರಂತರಾಯವಾಗಿ ಗ್ರಂಥಸಮಾಪ್ತಿಯಾಗಲೆಂದು, ಮೇಲಣ ಮೂರು ಶ್ಲೋಕಗಳಿಂದ ವಿಶಿಷ್ಟದೇವತಾನು ಸ್ಮರಣರೂಪವಾದ ಮಂಗಳವನ್ನಾಚರಿಸಿ, ಈ ಗ್ರಂಥದಲ್ಲಿ ಶ್ರೋತೃಗಳಿಗೆ ಪ್ರವೃತ್ತಿಯುಂಟಾಗುವುದಕ್ಕಾಗಿ, ಇಲ್ಲಿ ನಿರೂಪಿಸಲ್ಪಡುವ ವಿಷಯವು ಭಕ್ತಿಯೆಂತಲೂ, ಶಮದಮಾದಿಗಳಿಂದ ನಿರ್ಮಲ ಚಿತ್ತರಾದ ಮುಮುಕ್ಷುಗಳೇ ಇದಕ್ಕೆ ಅಧಿಕಾರಿಗಳೆಂತಲೂ, ಶ್ರವಣಾದಿಗಳೇ ಸಂಬಂಧವೆಂತಲೂ, ಆತ್ಮಸಾಕ್ಷಾತ್ಕಾರವೇ ಪ್ರಯೋಜನವೆಂತಲೂ ಅಧಿಕಾರ ಚತುಷ್ಟಯವನ್ನು ಪ್ರತಿಪಾದಿಸಿ, ಸದ್ಗತಿಯನ್ನು ಹಾರೈಸಿ ಅಪೇಕ್ಷಿಸುವವರಿಗೆ ಈ ಗ್ರಂಥವೇ ಸುಲಭವಾರ್ಗವೆಂದು ತೋರಿಸಿ, ಗ್ರಂಥವು ಪ್ರಾರಂಭಿಸಲ್ಪಡುವುದೆಂತೆಂದರೆ:—

ಓಂ ನೆಮಃ ಪರಮಾತ್ಮನೇ.

ಮೂ॥ * ನೈಮಿಶೇ ನಿಮಿಷಕ್ಷೇತ್ರೇ ಮುನಯ ಶೌನಕಾದಯಃ । † ಸತ್ರಂ ಸ್ವ
ರ್ಗಾಯ ಲೋಕಾಯ ಸಹಸ್ರಸವ ಮಾಸತ ॥೪॥ ತ ಏಕದಾತು ಮುನ
ಯಃ ಪ್ರಾತರ್ಹುತ ಹುತಾಶನಾಃ।ಸತ್ಕೃತಂ ಸೂತ ಮಾಸೀನಂ ಪಪ್ರಚ್ಛುರಿದ
ಮಾದರಾತ್ ॥೫॥ ಋಷಯಃ ॥ ತ್ವಯಾ ಖಲು ಪುರಾಣಾನಿ ಸೇತಿಹಾಸಾನಿ

ಅರ್ಥ—ಅನಿಮಿಷ-ನಿತ್ಯಜ್ಞಾನಿಯಾದ ಮಹಾವಿಷ್ಣುವಿಗೆ, ಕ್ಷೇತ್ರ-ವಾಸಸ್ಥಾನವಾದ,ನೈಮಿಶೇ-ನೈಮಿಷ ಅಥವಾ ನೈಮಿಷವೆಂಬ ಹೆಸರುಳ್ಳ ಅರಣ್ಯದಲ್ಲಿ, ಶೌನಕಾದಯಃ, ಶೌನಕ-ಶೌನಕಋಷಿಯೇ, ಆದಯಃ-ಮೊದಲಾಗಿರುಳ್ಳ, ಮುನಯಃ-ಮಹರ್ಷಿಗಳು, ಸ್ವರ್ಗಾಯಲೋಕಾಯ, ಸ್ವರ್ಗಾಯ-ಶ್ರೀವಿಷ್ಣುವೆಂಬ, (ದೇವತೆಗಳಿಂದ ಹೊಗಳಲ್ಪಡುವವನು) ಲೋಕಾಯ--ಲೋಕವನ್ನು ಪಡೆಯುವುದಕ್ಕಾಗಿ, ಸಹಸ್ರ ಸಮಂ-ಸಾವಿರಸಂವತ್ಸರಗಳು ನಡೆಯತಕ್ಕ, ಸತ್ರಂ-ಸತ್ರವೆಂಬುಯಾಗವನ್ನು ಕುರಿತು, ಆಸತ-ಕುಳಿತು ಕೊಂಡರು. ಅಥವಾ ಮಾಡುತ್ತಿದ್ದರು ॥೪॥ ಏಕದಾ-ಒಂದುದಿನ, ತೇ-ಆಶೌನಕನೇ ಮೊದಲಾದ, ಮುನ ಯಃ-ಋಷಿಗಳು, ಪ್ರಾತಃ-ಪ್ರಾತಃಕಾಲದಲ್ಲಿ,ಹುತಹುತಾಗ್ನಯಃ, ಹುತ-ಹಾಲು,ತುಪ್ಪ ಮೊದಲಾದ ಹೋಮದ್ರವ್ಯಗಳಿಂದ, ಹುತ-ಹೋಮಮಾಡಲ್ಪಟ್ಟ, ಅಗ್ನಯಃ-ಶ್ರೌತಸ್ಮಾರ್ತಾಗ್ನಿಗಳುಳ್ಳವರಾಗಿ,ಸತ್ಕೃತಂ-ಮರ್ಯಾದೆಗೊಳಿಸಲ್ಪಟ್ಟ, ಆಸೀನಂ-ಸುಖವಾಗಿಕುಳಿತುಕೊಂಡಿರುವ, ಸೂತಂ-ಸೂತಪೌರಾಣಿಕನನ್ನು ಕುರಿತು, ಇದಂ-ಮುಂದಣ ಸಂಗತಿಯನ್ನು ಆದರಾತ್-ವಿಶ್ವಾಸದಿಂದ, ಪಪ್ರಚ್ಛುಃ-ಪ್ರಶ್ನೆಮಾಡಿದರು ॥೫॥

ಸೂಚನೆ॥ ಕಂ॥ ಶೌನಕಮುಖಮುನಿಪತಿಗಳ್ । ಕಾನನಕೈತಂದಸೂತನಂ ಭೂಜಿಸುತಂ
ಸಾನುನಯದೆ ಬೆಸಗೊಂಡರ । ದಿನತರ್ಪಣವಾರು ಪ್ರಶ್ನೆಗಳನೀತೆರದಿಂ ॥
ಅವುದು ಶಾಸ್ತ್ರದಸಾರಮ । ದಾವುದು ಹರಿಕೃತ್ಯಮೆಂತು ಸೃಷ್ಟಿವಿಧಾನಂ
ಅವುವವತಾರಕಥಗಳ । ದಾವುದುಹರಿವೃತ್ತಿದರ್ಮಮಾವುದು ಮುನಿಪಾ ॥೩॥

ತಾತ್ಪರ್ಯ—ವಿಷ್ಣುಕ್ಷೇತ್ರವಾದ ನೈಮಿಶಾರಣ್ಯದಲ್ಲಿ ಶೌನಕಾದಿ ಮಹರ್ಷಿಗಳು ಸಾವಿರವರ್ಷ ನಡೆಯತಕ್ಕ ಒಂದು ಸತ್ರಯಾಗವನ್ನು ಮಾಡುತ್ತಿದ್ದರು ॥೪॥ ಆ ಮುನಿಗಳು ಒಂದು ದಿನ ಬೆಳಿಗ್ಗೆ ಸಂಧ್ಯಾವಂದನೆ ಅಗ್ನಿಹೋತ್ರ ಮೊದಲಾದನಿತ್ಯಕರ್ಮಗಳನ್ನು ನೆರವೇರಿಸಿಕೊಂಡವರಾಗಿ, ಮರ್ಯಾದೆಯನ್ನು ಹೊಂದಿ ಕುಳಿತಿರುವ ಸೂತಪೌರಾಣಿಕನನ್ನು ಇಂತುಬೆಸಗೊಂಡರು ॥೫॥ ಎಲೈ ಪಾಪರಹಿತನಾದಸೂತನೆ, ಲೋಕದಲ್ಲಿ ಇತಿಹಾ

ಟಿಪ್ಪಣಿ—(*) ಮನಸ್ಸಿಂಬಚಕ್ರದ ನೇಮಿಯನ್ನು ನಾಶಗೊಳಿಸುವುದು (ಮನಸ್ಸನ್ನುಸ್ಥಿರಗೊಳಿಸುವುದು) ಪೂರ್ವದಲ್ಲಿ ಋಷಿಗಳುತಪೋಯೋಗ್ಯವಾದ ಪ್ರದೇಶವಾವುದೆಂದು ಕೇಳಲು, ಬ್ರಹ್ಮನು ಮನಸ್ಸೆಂಬ ಚಕ್ರದನೇಮಿಯು ಎಲ್ಲಿನಾಶವಾಗುವುದೋ ಅದುತ್ತಮವೆಂದುಹೇಳಿ, ಒಂದು ಮನಶ್ಚಕ್ರವನ್ನು ಮಾಡಿ ಬಿಟ್ಟನು. ಋಷಿಗಳು ಪರೀಕ್ಷಿಸಲು ಅದನ್ನು ಹಿಂಬಾಲಿಸಿದರು. ಅದರ ನೇಮಿಯು (ಪಟ್ಟಿಯು) ಈವನದಲ್ಲಿ ನಾಶವಾಯಿತು (ವಾಯುಪುರಾಣ) ಈ ವನಕ್ಕೆ ನೈಮಿಷವೆಂದು ಹೆಸರು ಬರುವದಕ್ಕೂ ಕಾರಣವುಂಟು ಭಗವಂತನು ಗೌರಮುಖಿನೆಂಬ ಋಷಿಯನ್ನುಕುರಿತು ಹೇಳುತ್ತಾನೆ "ಅಯ್ಯಾ ಗೌರಮುಖಿನೇ ಈ ವನದಲ್ಲಿ ನಿಮಿಷಮಾತ್ರದೊಳಗಾಗಿ ಅಸಂಖ್ಯಾಕವಾದ ದೈತ್ಯಬಲವನ್ನು ಸಂಹರಿಸಿದೆನಾದ್ದರಿಂದ ಇದಕ್ಕೆ ನೈಮಿಷವೆಂದುಹೆಸರಾಯಿತು" (ವರಾಹಪುರಾಣ) †ರುತ್ವಿಜರೇ ಯಜಮಾನರಾಗಿರುವಯಾಗ

ಚಾ ನಘ । ಆಖ್ಯಾತಾನ್ಯಪ್ಯಧೀತಾನಿ ಧರ್ಮಶಾಸ್ತ್ರಾಣಿ ಯಾನ್ಯುತ ॥೬॥
ಯಾನಿ ವೇದವಿದಾಂ ಶ್ರೇಷ್ಠೋ ಭಗವಾ೯ ಬಾದರಾಯಣಃ। ಅನ್ಯೇಚ ಮುನಯೆ ಸ್ಸೂತ ಪರಾಪರವಿದೋ ವಿದುಃ ॥೭॥ ವೇತ್ಥ ತ್ವಂ ಸೌಮ್ಯ ತತ್ಸರ್ವಂ ತತ್ವತ ಸ್ತದನುಗ್ರಹಾತ್।ಬ್ರೂಯು ಸ್ನಿಗ್ಧಸ್ಯ ಶಿಷ್ಯಸ್ಯ ಗುರವೋ ಗುಹ್ಯ ಮಪ್ಯುತ॥೮॥ ತತ್ರ ತತ್ರಾಂಜಸಾಯುಷ್ಮ೯ ಭವತಾ ಯದ್ವಿನಿಶ್ಚಿತಂ। ಪುಂ ಸಾ ಮೇಕಾಂತತ ಶ್ರೇಯ ಸ್ತನ್ನ ಶಂಸಿತು ಮರ್ಹಸಿ ॥೯॥ಪ್ರಾಯೇಣಾ

ಹೇಅನಘೆ-ಎಲೈಪಾಪರಹಿತನಾದಸೂತನೆ, ತ್ವಯಾ-ನಿನ್ನಿಂದ, ಸೇತಿಹಾಸಾನಿ-ಭಾರತಾದಿ ಇತಿಹಾಸಗ ಗಳಿಂದಕೂಡಿದ, ಪುರಾಣಾನಿ-ಪುರಾಣಗಳು, ಚ-ಮತ್ತು, ಯಾನಿಶಾಸ್ತ್ರಾಣಿ-ಯಾವಯಾವಶಾಸ್ತ್ರಗ ಳುಂಟೋ ಅವುಗಳೂ, ಅಧೀತಾನಿ, ಅಧ್ಯಯನಮಾಡಲ್ಪಟ್ಟಿರುವವು, ಆಖ್ಯಾತಾನ್ಯಪಿಖಿಲು-ವ್ಯಾಖ್ಯಾನವೂ ಮಾಡಲ್ಪಟ್ಟಿರುವುದಷ್ಟೆ, ॥೬॥ ಹೇಸೂತ-ಎಲೈಸೂತನೆ, ವೇದವಿದಾಂ-ವೇದಾರ್ಥವನ್ನು ತಿಳಿದ ವರಲ್ಲಿ, ಶ್ರೇಷ್ಠಃ-ಅಗ್ರೇಸರನಾದ, ಭಗವಾ೯ ಷಡ್ಗುಣೈಶ್ವರ್ಯಸಂಪನ್ನನಾದ, ಬಾದರಾಯಣಃ-ವೇದ ವ್ಯಾಸಮುನಿಯು, ಯಾನಿ-ಯಾವುಗಳನ್ನು, ವೇದ-ಬಲ್ಲನೋ, ಪರಾಪರವಿದಃ, ಪರ-ನಿರ್ಗುಣಬ್ರಹ್ಮಸ್ವರೂಪವನ್ನು, ಅಪರ-ಸಗುಣಬ್ರಹ್ಮಸ್ವರೂಪವನ್ನೂ, ವಿದಃ-ತಿಳಿದಿರುವ, ಅನ್ಯೇ-ಇತರರಾದ, ಮುನಯಶ್ಚ-ಮುನಿಗಳೂ, ಯಾನಿ-ಯಾವಸಂಗತಿಗಳನ್ನು ವಿದುಃ-ಬಲ್ಲರೋ ॥೭॥ ಗುರವಃ-ಗುರುಗಳಾದವರು, ಸ್ನಿಗ್ಧಸ್ಯ-ಪ್ರೇಮಾಸ್ಪದನಾದ, ಶಿಷ್ಯಸ್ಯ--ಶಿಷ್ಯನಿಗೆ, ಗುಹ್ಯಮಪಿ--ರಹಸ್ಯವಾದುದನ್ನೂ, ಬ್ರೂಯುಃ-ಹೇಳುವರು. ಆದುದರಿಂದ, ಹೇಸಾಮ್ಯ-ಎಲೈಸಾಧುವಾದ ಸೂತನೆ, ತತ್ಸರ್ವಂ-ಅದೆಲ್ಲವನ್ನೂ, ತವನ್ನುಗ್ರಹಾತ್, ತತ್-ಅವರ, ಅನುಗ್ರಹಾತ್-ಅನುಗ್ರಹದ ದೆಸೆಯಿಂದ, ತ್ವಂ-ನೀನು ವೇತ್ಥ-ತಿಳಿದಿರುವೆ ॥೮॥ ಹೇ ಆಯುಷ್ಮ೯-ಎಲೈ ಆಯುಷ್ಮಂತನೆ, ತತ್ರತತ್ರ-ಆ ಆ ವೇದಶಾಸ್ತ್ರಾದಿಗಳಲ್ಲಿ ಅಂಜಸಾ-ಯಥಾರ್ಥವಾಗಿ, ಪುಂಸಾಂ-ಪುರುಷರಿಗೆ, ಏಕಾಂತತಃ-ನಿರ್ದೋಷವಾದ, ಶ್ರೇಯಃ-ಶ್ರೇಯಸ್ಸೆಂದು, ಭವತಾ-ನಿನ್ನಿಂದ, ಯತ್-ಯಾವುದು, ವಿನಿಶ್ಚಿತಂ-ನಿಶ್ಚಯಿಸಲ್ಪಟ್ಟಿರುವುದೊ, ತತ್--ಅದನ್ನು ನಃ-ನಮಗೆ, ಶಂಸಿತುಂ-ಹೇಳುವುದಕ್ಕೆ ಅರ್ಹಸಿ-ಅರ್ಹನಾಗುತ್ತಿ ॥೯॥

ಹೇಸಾಧೊ-ಎಲೈ ಸಜ್ಜನಶಿರೋಮಣಿಯಾದ ಸೂತನೇ, ಅಸ್ಮಿ೯-ಈ, ಕಲೌಯುಗೇ-ಕಲಿಯುಗದಲ್ಲಿ, ಜನಾಃ-ಜನಗಳು, ಪ್ರಾಯೇಣ-ಬಹಳವಾಗಿ, ಅಲ್ಪಾಯುಷಃ - ಸ್ವಲ್ಪವಾದ ಆಯುಸ್ಸುಳ್ಳವರಾಗಿಯೂ, ಮಂದಾಃ-ಸೋಮಾರಿಗಳಾಗಿಯೂ, ಸುಮಂದಮತಯಃ-ಮಂದಬುದ್ಧಿಯುಳ್ಳವರಾಗಿಯೂ,

ಸಗಳು,ಪುರಾಣಗಳು, ಧರ್ಮಶಾಸ್ತ್ರಗಳು, ಯಾವವಿರುವವೋ ಅವೆಲ್ಲವನ್ನೂ ನೀನು ಓದಿರುವುದಲ್ಲದೇ ಅವುಗಳಿಗೆ ವ್ಯಾಖ್ಯಾನಗಳನ್ನೂ ಮಾಡಿರುವೆ ॥೬॥ ವೇದಾರ್ಥಜ್ಞರಲ್ಲಿ ಶ್ರೇಷ್ಠನಾದ ವೇದವ್ಯಾಸಮುನಿಯು ಯಾವುಗಳನ್ನು ಬಲ್ಲನೋ,ಮತ್ತು ಸಗುಣ ನಿರ್ಗುಣಗಳೆಂಬ ಎರಡು ತತ್ವಗಳನ್ನೂ ತಿಳಿದಇತರ ಮಹರ್ಷಿಗಳು ಯಾವ ಸಂಗತಿಗಳನ್ನು ಬಲ್ಲರೋ ॥೭॥ ಗುರುಗಳು ಪ್ರಿಯರಾದಶಿಷ್ಯರಿಗೆ ಗುಟ್ಟುಗಳನ್ನೂ ಹೇಳುವುದರಿಂದ, ನೀನು ಅವೆಲ್ಲವನ್ನೂ ಬಲ್ಲೆ ॥೮॥ ಆದುದರಿಂದ ಎಲೈ ಆಯುಷ್ಮಂತನೇ, ನೀನು ಓದಿಕೇಳಿ ತಿಳಿದಿರುವುದರಲ್ಲಿ ಪುರುಷರಿಗೆ ನಿಜವಾಗಿ ಯಾವುದು ನಿರ್ದೋಷವಾದ ಶ್ರೇಯಸ್ಸೆಂದು ನಿಶ್ಚಯಿಸಿರುವೆಯೋ ಅದನ್ನು ನನಗೆ ತಿಳುಹಿಸು ॥೯॥ ಎಲೈ ಸಾಧುವೆ ಈಕಲಿಯುಗದಲ್ಲಿ ಜನರು ಬಹಳವಾಗಿ

ಲ್ಪಾಯುಷಸ್ಸ್ವಾಧೋ ಕಲಾವಸ್ಮಿನ್ಯುಗೇ ಜನಾಃ । ಮಂದಾ ಸ್ಸುಮಂದ ಮತಯೋ ಮಂದಭಾಗ್ಯಾ ಹ್ಯುಪದ್ರುತಾಃ ॥೧೦॥ ಭೂರೀಣಿ ಭೂರಿಕರ್ಮಾಣಿ ಶ್ರೋತವ್ಯಾನಿ ವಿಭಾಗಶಃ । ಅತ ಸ್ಸಾಧೋತ್ರಯತ್ಸಾರಂ ಸಮುದ್ಧೃತ್ಯ ಮನೀಷಯಾ ॥೧೧॥ ಬ್ರೂಹಿ ಭದ್ರಾಯ ಭೂತಾನಾಂ ಯೇನಾತ್ಮಾ ಸಂಪ್ರಸೀದತಿ । ಸೂತ ಜಾನಾಸಿ ತತ್ಸರ್ವಂ ಭಗವಾ ನ್ಸಾತ್ವತಾಂ ಪತಿಃ ॥೧೨॥ ದೇವಕ್ಯಾಂ ವಸುದೇವಸ್ಯ ಜಾತೊ ಯತ್ರಚಿಕೀರ್ಷಯಾ । ತನ್ನ ಶ್ಯಶ್ರೂಷಮಾಣಾನಾ ಮರ್ಹಸ್ಯಂಗಾನುವರ್ಣಿತುಂ ॥೧೩॥ ಯಸ್ಯಾ

ಮಂದಭಾಗ್ಯಾಃ - ದರಿದ್ರರಾಗಿಯೂ, ಉಪದ್ರುತಾಃ - ರೋಗಾದಿಗಳಿಂದಲೂ ಜೀವನಕ್ಕಿಲ್ಲದುದರಿಂದಲೂ ಪೀಡಿತರಾಗಿಯೂ ಇರುವರು. ॥ ೧೦ ॥ ವಿಭಾಗಶಃ- * ಪ್ರಕೃತಿ ‡ ವಿಕೃತಿಭೇದಗಳಿಂದ, ಭೂರಿಕರ್ಮಾಣಿ, ಭೂರಿ-ಬಹಳವಾಗಿ ಆಚರಿಸಬೇಕಾದ, ಕರ್ಮಾಣಿ-ಕ್ರಿಯೆಗಳುಳ್ಳ, ಭೂರೀಣಿ-ಕರ್ಮಗಳು ಬಹಳವಾಗಿರುವವು. ಶ್ರೋತವ್ಯಾನಿ-ಕೇಳಲ್ಪಡತಕ್ಕವುಗಳು, ಭೂರೀಣಿ-ಬಹಳವಾಗಿರುವುವು, ಅತಃ-ಆದುದರಿಂದ, ಸಾಧೋ-ಎಲೈಸತ್ಪುರುಷನೆ, ಅತ್ರ-ಈ ಶಬ್ದ ಸಮುದ್ರದಲ್ಲಿ, ಯತ್-ಯಾವುದು, ಸಾರಂ-ಮುಖ್ಯವಾದುದೋ, ಮನೀಷಯಾ-ನಿನ್ನ ಬುದ್ಧಿಯಿಂದ, ಸಮುದ್ಧೃತ್ಯ-ಅದನ್ನು ತೆಗೆದು, ಯೇನ-ಯಾವುದರಿಂದ, ಆತ್ಮಾ-ಮನಸ್ಸಾಂಬುದು, ಸಂಪ್ರಸೀದತಿ-ಸಂಪೂರ್ಣವಾಗಿ ಪ್ರಸನ್ನವಾಗುವುದೋ, ಭೂತಾನಾಂ-ಪ್ರಾಣಿಗಳ, ಭದ್ರಾಯ-ಕ್ಷೇಮಕ್ಕಾಗಿ, ಬ್ರೂಹಿ-ಹೇಳು. ಹೇಸೂತ-ಎಲೈಸೂತನೇ, ಭಗವಾ-ನಿರತಿಶಯಗಳಾದ ಐಶ್ವರ್ಯಾದಿ ಗುಣಗಳಿಂದ ಕೂಡಿದ, ಸಾತ್ವತಾಂ-ಭಕ್ತರಿಗೆ, ಪತಿಃ-ಪಾಲಕನಾದ ಭಗವಂತನು, ಯತ ಯಾವಕಾರ್ಯವನ್ನು, ಚಿಕೀರ್ಷಯಾ-ಮಾಡುವ ಸಂಕಲ್ಪದಿಂದ, ವಸುದೇವಸ್ಯ-ವಸುದೇವನ, ದೇವಕ್ಯಾಂ ಪತ್ನಿಯಾದ ದೇವಕಿಯಲ್ಲಿ, ಜಾತಃ-ಹುಟ್ಟಿದನೋ, ತತ್‌ಸರ್ವಂ-ಅದೆಲ್ಲವನ್ನೂ, ತ್ವಂ-ನೀನು, ಜಾನಾಸಿ-ತಿಳಿದಿರುವೆ. ಆದುದರಿಂದ ಹೆಅಂಗ-ಎಲೈ ಪ್ರಿಯನಾದಸೂತನೆ, ತತ್-ಆ ಸಂಗತಿಯನ್ನು, ಶುಶ್ರೂಷಮಾಣಾನಾಂ-ಕೇಳಲಪೇಕ್ಷೆಯುಳ್ಳ, ನಃ-ನಮಗೆ, ಅನುವರ್ಣಿತುಂ - ತಿಳುಹಿಸುವುದಕ್ಕೆ, ಅರ್ಹಸಿ-ಯೋಗ್ಯನಾಗುತ್ತಿ ॥ ೧೩ ॥ ಯಸ್ಯ-ಯಾವ ಪರಮೇಶ್ವರನ, ಅವತಾರಃ-ಅವತಾರವು, ಭೂತಾನಾಂ-ಪ್ರಾಣಿಗ

ಅಲ್ಪಾಯುಗಳಾಗಿಯೂ, ಅಲಸರಾಗಿಯೂ, ಅಲ್ಪ ಬುದ್ಧಿಗಳಾಗಿಯೂ, ದರಿದ್ರರಾಗಿ ರೋಗಾದಿಗಳಿಂದಲೂ, ಜೀವನಕ್ಕಿಲ್ಲದುದರಿಂದಲೂ ಪೀಡಿತರಾಗಿಯೂ ಇರುವರು ॥೧೦ ಮಾಡಬೇಕಾದ ಕರ್ಮಗಳು ಬಹಳವಾಗಿರುವವು. ಕೇಳತಕ್ಕ ವಿಷಯಗಳು ಎಷ್ಟೋ ಇರುವವು. ಆದುದರಿಂದ ಎಲೈ ಸಾಧುವೇ ಇವುಗಳಲ್ಲಿ ಸಾರವಾದುದನ್ನು ನಿನ್ನ ಬುದ್ಧಿಯಿಂದ ನಿಶ್ಚಯಿಸಿ, ಯಾವುದರಿಂದ ಬುದ್ಧಿಯು ಪ್ರಸನ್ನವಾಗುವುದೋ, ಎಲ್ಲರಿಗೂ ಶ್ರೇಯಸ್ಸುಂಟುಮಾಡುವುದೋ ಅದನ್ನು ಹೇಳು ॥೧೧॥ ಭಕ್ತರಕ್ಷಕನಾದ ಭಗವಂತನು ಯಾವಕಾರ್ಯವನ್ನುಮಾಡುವುದಕ್ಕಾಗಿ ವಸುದೇವನ ಪತ್ನಿಯಾದ ದೇವಕಿಯಲ್ಲಿ ಅವತರಿಸಿದನೋ, ಯಾವನ ಅವತಾರವೆಂಬುದು ಪ್ರಾಣಿಗಳಿಗೆ ಕ್ಷೇಮವನ್ನೂ ಸಮೃದ್ಧಿಯನ್ನೂ ಉಂಟುಮಾಡುವುದೋ, ಅದನ್ನು ನೀನು ಬಲ್ಲೆಯಾದುದರಿಂದ ಕೇಳಬೇಕೆಂದು

ಅಮಾವಾಸ್ಯೆ, ಪೂರ್ಣಿಮೆ ಮೊದಲಾದವುಗಳಲ್ಲಿ ಮಾಡುವ ಇಷ್ಟಿ ಮೊದಲಾದವುಗಳು. ಅಗ್ನಿಷ್ಟೋಮವೆಮೊದಲಾದ ಯಜ್ಞಗಳು. § ಪಾ-ಸಭ್ಯ

ವತಾರೋ ಭೂತಾನಾಂ ಕ್ಷೇಮಾಯ ವಿಜಯಾಯಚ । ಅಪನ್ನ ಸ್ಸಂಸೃತಿಂ
ಘೋರಾಂ ಯನ್ನಾಮ ವಿವಶೋ ಗೃಣ॑ ॥೧೪॥ ತತ ಸ್ಸದ್ಯೋ ವಿಮುಚ್ಯೇ
ತ ಯದ್ಬಿಭೇತಿ ಸ್ವಯಂ ಭಯಂ । ಯತ್ಪಾದಸಂಶ್ರಯಾ ಸ್ಸೂತ ಮುನಯಃ
ಪ್ರಶಮಾಯನಾಃ ॥೧೫॥ ಸದ್ಯಃಪುನಂತ್ಯುಪಸ್ಪೃಷ್ಟಾ ಸ್ಸ್ವರ್ಧುನ್ಯಾಪೋನು
ಸೇವಯಾ । ಕೋವಾ ಭಗವತ ಸ್ತಸ್ಯ ಪುಣ್ಯಶ್ಲೋಕೇಡ್ಯಕರ್ಮಣಃ ॥೧೬॥
ಶುದ್ಧಿಕಾಮೋ ನಶೃಣುಯಾ ದ್ಯಶಃ ಕಲಿಮಲಾಪಹಂ । ತಸ್ಯ ಕರ್ಮಾಣ್ಯು

ಕ್ಷೇಮಾಯ-ಕ್ಷೇಮಕ್ಕಾಗಿಯೂ, ವಿಜಯಾಯಚ-ಅಭಿವೃದ್ಧಿಗಾಗಿಯೂ ಆಗಿರುವುದೋ, ಘೋರಾಂ ಭಯಂಕರವಾದ, ಸಂಸೃತಿಂ-ಸಂಸಾರವನ್ನು, ಅಪನ್ನಃ-ಹೊಂದಿದವನು, ವಿವಶಃ-ತಿಳಿವಳಿಕೆಯಿಲ್ಲದೆ (ಅಕಸ್ಮಾತ್ತಾಗಿ) ಯನ್ನಾಮ-ಯಾವ ಭಗವಂತನ ಹೆಸರನ್ನು, ಗೃಣ॑-ಹೊಗಳಿದವನಾಗಿ, ॥ ೧೪ ॥ ತತಃ-ಅನಂತರದಲ್ಲಿ, ಸದ್ಯಃ-ತತ್‌ಕ್ಷಣದಲ್ಲಿಯೇ, ವಿಮುಚ್ಯೇತ-ಬಿಡಲ್ಪಡುವನೋ, ಯತ್-ಯಾವಕಾರಣದಿಂದ, ಭಯಂ-ಭಯವೆಂಬುದು, (ಮೃತ್ಯು) ಸ್ವಯಂ-ತಾನೇ, ಬಿಭೇತಿ-ಭಯಪಡುವುದೋ, ಯತ್ಪಾದಸಂಶ್ರಯಾಃ, ಯತ್-ಯಾವ ಪರಮಾತ್ಮನ, ಪಾದ-ಪಾದವೇ, ಸಂಶ್ರಯಾಃ-ಆಶ್ರಯವಾಗಿ ಉಳ್ಳವರಾಗಿರುವುದರಿಂದಲೇ, ಪ್ರಶಮಾಯನಾಃ, ಪ್ರಶಮ-ಶಾಂತಿಯೇ, ಆಯನಾಃ-ಮಾರ್ಗ ಅಥವ ಆಶ್ರಯವಾಗಿಉಳ್ಳ, ಮುನಯಃ-ಋಷಿಗಳು, ॥ ೧೫ ॥ ಉಪಸ್ಪೃಷ್ಟಾಃ - ಸನ್ನಿಧಿಮಾತ್ರದಿಂದ ಸೇವಿಸಲ್ಪಟ್ಟವರಾಗಿ, ಸದ್ಯಃ - ಆಗಲೇ, ಪುನಂತಿ - ಪರಿಶುದ್ಧಗೊಳಿಸುವರೋ, ಸ್ವರ್ಧುನ್ಯಾಪಃ = ಸ್ವರ್ಧುನೀ-ಗಂಗೆಯ, ಆಪಸ್ತು-ಉದಕಗಳಾದರೋ, ಅನುಸೇವಯಾ - ಸ್ನಾನಾದಿಗಳಿಂದ ಸೇವಿಸಲ್ಪಟ್ಟು, ಪುನಂತಿ - ಪಾವನಗೊಳಿಸುವುದೋ ಪುಣ್ಯಶ್ಲೋಕೇಡ್ಯಕರ್ಮಣಃ = ಪುಣ್ಯಶ್ಲೋಕ-ಸತ್ಪುರುಷರಿಂದ, ಈಡ್ಯ-ಹೊಗಳಲ್ಪಡುವ, ಕರ್ಮಣಃ ಕಾರ್ಯಗಳುಳ್ಳ, ತಸ್ಯ-ಆ, ಭಗವತಃ-ಭಗವಂತನ, ॥ ೧೬ ॥ ಕಲಿಮಲಾಪಹಂ= ಕಲಿ-ಸಂಸಾರದ, ಮಲ-ದುಃಖಗಳನ್ನು, ಅಪಹಂ - ನಾಶಗೊಳಿಸುವ, ಯಶಃ - ಸಚ್ಚರಿತ್ರೆಯನ್ನು, ಶುದ್ಧಿಕಾಮಃ= ಶುದ್ಧಿ-ಪರಿಶುದ್ಧತ್ವವನ್ನು, ಕಾಮಃ-ಬಯಸುವ, ಕೋವಾ-ಯಾವನುತಾನೇ, ನಶೃಣುಯಾತ್-ಕೇಳದೇ ಇದ್ದಾ

ತವಕಿಸುತ್ತಿರುವ ನಮಗೆ ಅದನ್ನು ವಿಶದವಾಗಿ ತಿಳುಹುವನಾಗು ॥೧೩॥ ಎಂದು ಶೌನಕಾದಿಗಳು ಮರಳಿ ಭಗವನ್ಮಹಿಮೆಯನ್ನು ವರ್ಣಿಸುತ್ತಾ, ಅದನ್ನು ಕೇಳುವುದರಲ್ಲಿ ತಮಗಿರುವ ಕುತೂಹಲವನ್ನು ತಿಳಿಯಪಡಿಸುವುದೆಂತೆಂದರೆ:- ಭಯಂಕರವಾದ ಸಂಸಾರ ಸಮುದ್ರದಲ್ಲಿ ಮುಳುಗಿರುವವನು ಹಠಾತ್ತಾಗಿ ಯಾವನ ನಾಮೋಚ್ಚಾರಣೆಯನ್ನು ಮಾಡಿದಕೂಡಲೆ ಕಡೆಹಾಯುವನೋ, ಮೃತ್ಯುವು ಕೂಡಾ ಯಾವನಿಗೆ ಭಯಪಡುವುದೋ, ಯಾವನ ಪಾದಗಳನ್ನು ನಂಬಿರುವ ಪರಮ ಶಾಂತರಾದ ಮಹರ್ಷಿಗಳು ದರ್ಶನಮಾತ್ರದಿಂದ ಆಗಲೇ ಪಾವನ ಗೊಳಿಸುವರೋ, ಭಗವಂತನ ಪಾದಾರವಿಂದದಿಂದುದ್ಭವಿಸಿದ ಲೋಕಪಾವನಿ ಯಾದಗಂಗೆಯೂ ಯಾರಭಕ್ತರಂತೆ ತತ್‌ಕ್ಷಣವೇ ಪಾಪನಗೊಳಿಸಲಾರದೊ, ಅಂದರೆ ಗಂಗೆಗಿಂತಲೂ ಭಗವದ್ಭಕ್ತರು ಶ್ರೇಷ್ಠರೆಂದುಭಾವವು) ಸತ್ಪುರುಷರಿಂದ ಹೊಗಳಲ್ಪಟ್ಟ ಮಹಾಕಾರ್ಯಗಳುಳ್ಳ ಆಭಗವಂತನ ಸಂಸಾರದುಃಖಗಳನ್ನು ನಾಶಗೊಳಿಸುವ ಸಚ್ಚರಿತ್ರೆಯನ್ನು, ಪಾಪಗಳನ್ನು ಕಳೆದುಕೊಳ್ಳಲಪೇಕ್ಷಿಸುವ ಯಾವನುತಾನೇ ಕೇಳಲಾರನು? ಎನ್ನುತ್ತಾ ಋಷಿಗಳು ಮತ್ತೊಂದು ಪ್ರಶ್ನೆಯನ್ನು ಮಾಡುತ್ತಾರೆ. ನಾರದಾದಿಗಳಿಂ

ದಾರಾಣಿ ಪರಿಗೀತಾನಿ ಸೂರಿಭಿಃ ॥೦೭॥ ಬ್ರೂಹಿ ನಶ್ಚ್ರದ್ಧಧಾನಾನಾಂಲೀಲ
ಯಾ ದಧತಃ ಕಲಾಃ । ಅಥಾಖ್ಯಾಹಿ ಹರೇ ರ್ಧೀಮನ್ನವತಾರಕಥಾ ಶುಭಾಃ॥೦೮॥ಲೀಲಾ ವಿದಧತ ಸ್ವೈರಮೀಶ್ವರಸ್ಯಾತ್ಮಮಾಯಯಾ ।ವಯಂ ತು* ನವಿತೃಪ್ಯಾಮ ಉತ್ತಮಶ್ಲೋಕವಿಕ್ರಮೈಃ ॥೦೯॥ ಯಚ್ಛ್ರೋತ್ರಾಂಜಲಿಭಿಃ ಪೀತಾಂ ರಸಜ್ಞಾನಾಂ ಸ್ವಾದು ಸ್ವಾದು ಪದೇಪದೇ । ಕೃತವಾಂಶ್ಚಕಿಲ ವೀರ್ಯಾಣಿ ರಾಮೇಣಸಹ ಕೇಶವಃ ॥೧೦॥ ಅತಿಮರ್ತ್ಯಾನಿ ಭಗವಾ ಗೂಢಃ ಕಪಟ

ನು ? ॥ ೦೭ ॥ ಲೀಲಯಾ-ವಿಲಾಸದಿಂದ, ಕಲಾಃ-ಬ್ರಹ್ಮರುದ್ರಾದಿ ರೂಪಗಳನ್ನು, ದಧತಃ-ಧರಿಸಿರುವ, ತಸ್ಯ-ಆ ಭಗವಂತನ, ಸೂರಿಭಿಃ-ನಾರದಾದಿ ಮಹಾಜ್ಞಾನಿಗಳಿಂದ, ಪರಿಗೀತಾನಿ-ಹೊಗಳಲ್ಪಟ್ಟ, ಉದಾರಾಣಿ-ಉತ್ಕೃಷ್ಟಗಳಾದ, ಕರ್ಮಾಣಿ - ಪ್ರಪಂಚಸೃಷ್ಟಿ ಮೊದಲಾದ ಕರ್ಮಗಳನ್ನು, ಶ್ರದ್ಧಧಾನಾನಾಂ-ಕೇಳಬೇಕೆಂಬ ಶ್ರದ್ಧೆಯುಳ್ಳ, ನಃ-ನಮಗೆ, ಬ್ರೂಹಿ-ಹೇಳು ॥ ೦೮ ॥ ಹೇಧೀರ್ಮ-ಎಲೈ ಪಂಡಿತನಾದ ಸೂತನೆ, ಅಥ-ಆಬಳಿಕ, ಆತ್ಮಮಾಯಯಾ, ಆತ್ಮ-ತನ್ನ, ಮಾಯಯಾ-ಮಾಯೆಯಿಂದ, ಸ್ವೈರಂ-ಸ್ವೇಚ್ಛೆಯಾಗಿ, ಲೀಲಾಃ-ಲೀಲೆಗಳನ್ನು, ವಿದಧತಃ-ಮಾಡಿದ, ಹರೇಃ-ಹರಿಪರಮಾತ್ಮನ, ಶುಭಾಃ-ಲೋಕಕ್ಕೆ ಮಂಗಳಕರಗಳಾದ, ಅವತಾರಕಥಾಃ = ಅವತಾರ-ಮತ್ಸ್ಯಕೂರ್ಮಾದ್ಯವತಾರಗಳಿಂದಂಟಾದ, ಕಥಾಃ-ಕಥೆಗಳನ್ನು, ಆಖ್ಯಾಹಿ-ಹೇಳು. ವಯಂತು-ನಾವಾದರೆ, ಉತ್ತಮಶ್ಲೋಕವಿಕ್ರಮೈಃ = ಉತ್ತಮ-ತಮಸ್ಸನ್ನು [ಅಜ್ಞಾನ] ಹೋಗಲಾಡಿಸುವ, ಶ್ಲೋಕ - ಸಚ್ಚರಿತ್ರೆಯುಳ್ಳ ಭಗವಂತನ, ವಿಕ್ರಮೈಃ - ಚರಿತ್ರೆಗಳಿಂದ, ನವಿತೃಪ್ಯಾಮಃ-ತೃಪ್ತಿಯನ್ನು ಹೊಂದುವದಿಲ್ಲ. ॥ ೦೯ ॥ ಯತ್ - ಯಾವ ಭಗವತ್ಕಥೆಯನ್ನು, ಶ್ರೋತ್ರಾಂ-ಕೇಳುವವರಿಗೆ, ಪದೇಪದೇ-ಪ್ರತಿಪದದಲ್ಲಿಯೂ, ಸ್ವಾದುಸ್ವಾದು-ಅತಿರುಚಿಯುಂಟೋ, ಗೂಢಃ-ಸ್ವರೂಪವನ್ನು ಪ್ರಕಾಶಗೊಳಿಸದ, ಕಪಟಮಾನುಷಃ-ಮನುಷ್ಯರೂಪವನ್ನು ಪಡೆದಿರುವ, ಭಗವಾ-[illegible]ಗಳಂತೆ ಮಡಗೂಡಿದ, ಕೇಶವಃ - ಶ್ರೀ ಕೃಷ್ಣನು, ರಾಮೇಣಸಹ - ಬಲರಾಮನೊಡನೆ, ಅತಿಮರ್ತ್ಯಾನಿವೀರ್ಯಾಣಿ

ದ ಸ್ತುತಿಸಲ್ಪಟ್ಟರುವ ಆ ಭಗವಂತನ ಉತ್ತಮಗಳಾದ ಕಾರ್ಯಗಳನ್ನು ಕೇಳಬೇಕೆಂದು ಕುತೂಹಲವುಳ್ಳ ನಮಗೆ ತಿಳುಹಿಸು ಮತ್ತು ಮಾಯೆಯಿಂದ ಸ್ವೇಚ್ಛಾನುಸಾರವಾಗಿ ಲೀಲೆಗಳನ್ನು ನಡೆಯಿಸಿದ ಭಗವಂತನ ಪರಮ ಮಂಗಳಗಳಾದ ಅವತಾರಕಥೆಗಳನ್ನು ಹೇಳು ॥೦೮॥ ಮನುಷ್ಯಾವತಾರವನ್ನು ಪಡೆದು ಸ್ವರೂಪವನ್ನು ಮರೆಮಾಚಿಕೊಂಡಿರುವ ಶ್ರೀಕೃಷ್ಣ ಭಗವಂತನು ಅಣ್ಣನಾದ ಬಲರಾಮನಿಂದೊಡಗೂಡಿ ಮಾಡಿದ ಗೋವರ್ಧನೋದ್ಧಾರವೇ ಮೊದಲಾದ ಅಮಾನುಷ ಕರ್ಮಗಳನ್ನು ಕೇಳುವವರಿಗೆ ಮಾತುಮಾತಿಗೂ ರುಚಿಯೆಂಬುದುಹೆಚ್ಚುವುದು. ಆದುದರಿಂದ ಭಗವಂತನ ಚರಿತ್ರೆಯನ್ನು ಕೇಳುವುದರಲ್ಲಿ ನಮಗೆಂದಿಗೂ ತೃಪ್ತಿಯಿಲ್ಲ॥೦೯॥ಆದರೆ ನಾವುಗಳು ಯಾಜನಾಧ್ಯಾಪ

ಟಿಪ್ಪಣಿ:—*ಲೋಕದಲ್ಲಿ ತೃಪ್ತಿಯೆಂಬುದು ಮೂರು ವಿಧ. (೧) ಹೊಟ್ಟೆಯುತುಂಬುವಮೆ (೨) ರುಚಿಯನ್ನು ತಿಳಿಯದಿರುವುದು. (೩) ರುಚಿಯಿಲ್ಲದೇ ಹೋಗುವುದು. ಈ ಮೂರುವಿಧಗಳೂ ಭಗವತ್ಕಥೆಯಲ್ಲಿ, ಸಂಬಂಧಿಸುವುದಿಲ್ಲ. (೧) ಕೇಳುವ ರುಷಿಗಳ ಕಿವಿಗಳು ಲೌಕಾಕವಾದುದರಿಂದ ತುಂಬಲಾಗುವುದಿಲ್ಲ (೨) ರಸಜ್ಞರಾದುದರಿಂದ ರುಚಿಯು ತಿಳಿಯದಿರುವುದಿಲ್ಲ. (೩) ಕಬ್ಬಿನಂತೆ ಬರುತ್ತಾ ಬರುತ್ತಾ ನಿಸ್ಸಾರವಲ್ಲವಾರುದರಿಂದ ರುಚಿಕೆಡುವುದಿಲ್ಲ. ಆದುದರಿಂದ ತೃಪ್ತಿಯುಂಟಾಗುವದಿಲ್ಲ.

ಮಾನುಷಃ।ಕಲಿಮುಗತ ಮಜ್ಞಾಯ ಕ್ಷೇತ್ರೇಸ್ಮಿ ನ್ವೈಷ್ಣವೇ ವಯಂ॥೨೧॥
ಆಸೀನಾ ದೀರ್ಘಸತ್ರೇಣ ಕಥಾಯಾಂ ಸಕ್ಷಣಾ ಹರೇಃ । ತ್ವಂ ನಸ್ಸಂದರ್ಶಿ
ತೋ ಧಾತ್ರಾ ದುಸ್ತರಂ ನಿಸ್ತಿತೀರ್ಷತಾಂ ॥೨೨॥ ಕಲಿಂ ಸತ್ವಹರಂಪುಂ
ಸಾಂ ಕರ್ಣಧಾರ ಇವಾರ್ಣವಂ । ಬ್ರೂಹಿ ಯೋಗೀಶ್ವರೇ ಕೃಷ್ಣೇ ಬ್ರ
ಹ್ಮಣ್ಯೇ ಧರ್ಮವರ್ಮಣಿ ॥೨೩॥ ಸ್ವಾಂಕಾಷ್ಠಾಮಧುನೋಪೇತೇ ಧರ್ಮಃ
ಕಂಕರಣಂಗತಃ ॥ ಇತಿಪ್ರಥಮೋಧ್ಯಾಯಃ

ಕ್ತಿಯನ್ನು ಅತಿಕ್ರಮಿಸಿದ, ವೀರ್ಯಾಣಿ - ಗೋವರ್ಧನೋದ್ಧರಣವೇ ಮೊದಲಾದ ಅದ್ಭುತಕರ್ಮ
ಗಳನ್ನು, ಕೃತವಾ-ಕಿಲ -ಮಾಡಿದನಷ್ಟೆ.॥೨೦॥ಕಲಿಂ-ಕಲಿಯುಗವನ್ನು ಅಥವಾಕಲಿಪುರುಷನನ್ನು, ಅಗ
ತಂ-ಬಂದವನನ್ನಾಗಿ, ಅಜ್ಞಾಯ-ತಿಳಿದು, ವಯಂ-ನಾವು, ಅಸ್ಮಿ - ಈ, ವೈಷ್ಣವೇ-ವಿಷ್ಣುಸ್ಥಾನವಾದ,
ಕ್ಷೇತ್ರೇ-ದೇವಭೂಮಿಯಲ್ಲಿ, ಹರೇಃ-ವಿಷ್ಣುವಿನ, ಕಥಾಯಾಂ-ಚರಿತ್ರೆಯನ್ನು ಕೇಳುವುದರಲ್ಲಿ, ಸಕ್ಷಣಾಃ-ಸಾ
ವಧಾನರಾಗಿ,ದೀರ್ಘಸತ್ರೇಣ, ದೀರ್ಘ-ಬಹುಕಾಲ ನಡೆಯತಕ್ಕ, ಸತ್ರೇಣ-ಯಾಗವನ್ನು ಮಾಡುವನೆವದಿಂದ,
ಆಸೀನಾಃ-ಕುಳಿತಿರುವೆವು ॥ ೨೧ ॥ ಪುಂಸಾಂ-ಪುರುಷರ, ಸತ್ವಹರಂ, ಸತ್ವ-ಸಾತ್ವಿಕಗುಣಗಳನ್ನು,ಹರಂ-
ಅಪಹರಿಸುವ, ದುಸ್ತರಂ-ದಾಟಲಶಕ್ಯವಾದ ಕಲಿಂ-ಕಲಿಯನ್ನು, ನಿಸ್ತಿತೀರ್ಷತಾಂ-ಸಂಪೂರ್ಣವಾಗಿ ದಾಟಲ
ಪೇಕ್ಷಿಸುತ್ತಿರುವ, ನಃ-ನಮಗೆ, ತ್ವಂ-ನೀನು, ಅರ್ಣವಂ-ಸಮುದ್ರವನ್ನು, ದಾಟಬೇಕೆಂದಿರುವವರಿಗೆ ಕರ್ಣ
ಧಾರಇವ-ನಾವಿಕನಂತೆ, ಧಾತ್ರಾ-ದೈವದಿಂದ, ಸಂದರ್ಶಿತಃ-ತೋರಿಸಲ್ಪಟ್ಟವನಾದೆ. ॥೨೨॥ ಯೋಗೀಶ್ವರೇ,
ಯೋಗಿ-ಯೋಗಿಗಳಿಗೆ, ಈಶ್ವರೇ-ಒಡೆಯನಾದ, ಬ್ರಹ್ಮಣ್ಯೇ-ಪರಬ್ರಹ್ಮಸ್ವರೂಪನಾದ, ಧರ್ಮವರ್ಮಣಿ, ಧ
ರ್ಮ-ಧರ್ಮಕ್ಕೆ ವರ್ಮಣಿ-ಕವಚದಂತಿರುವ[ರಕ್ಷಕನಾದ]ಕೃಷ್ಣೇ-ಕೃಷ್ಣಮೂರ್ತಿಯು, ಸ್ವಾಂ-ತನ್ನ,
ಕಾಷ್ಠಾಂ-ನಿಜಸ್ವರೂಪವನ್ನು, ಉಪೇತೇ-ಹೊಂದಲು, ಅಧುನಾ-ಈಗ, ಧರ್ಮಃ-ಧರ್ಮವು, ಕಂ-ಯಾ
ರನ್ನು, ಶರಣಂ-ಮರೆಯನ್ನು, ಗತಃ-ಹೊಕ್ಕಿತು.॥ ಪ್ರಥಮಾಧ್ಯಾಯಂ ಸಂಪೂರ್ಣಂ ॥ ೨೩ ॥

ನಾದಿಗಳಲ್ಲಿ ನಿರತರಾಗಿರುವುದರಿಂದ ಅವಕಾಶವೆತ್ತಣದೆಂಬೆಯೇನೋ ! ಅಯ್ಯಾ ಸೂತ
ನೇ ಕಲಿಪ್ರವೇಶವಾಯಿತೆಂಬುದನ್ನು ತಿಳಿದು ವಿಷ್ಣುಸಾಯುಜ್ಯವನ್ನು ಪಡೆಯಬೇಕೆಂ
ದು ಈ ವೈಷ್ಣವಕ್ಷೇತ್ರದಲ್ಲಿ ಭಗವಂತನ ಸತ್ಕಥಾಶ್ರವಣದಲ್ಲಿ ಬದ್ಧಾದರರಾಗಿ, ಸತ್ರ
ಯಾಗವೆಂಬ ವ್ಯಾಜದಿಂದ ಕಾಲವನ್ನು ಕಳೆಯುತ್ತಾ ಕುಳಿತಿದ್ದೆವು. ಅಷ್ಟರಲ್ಲಿಯೆ
ಸಕಲಪ್ರಾಣಿಗಳ ಸತ್ವಶಕ್ತಿಯನ್ನೂ ನಾಶಗೊಳಿಸುತ್ತಿರುವ ಈ ಕಲಿಯನ್ನು ಸಂಪೂ
ರ್ಣವಾಗಿ ದಾಟಬೇಕೆಂದಿರುವ ನಮ್ಮ ಬಳಿಗೆದೈವವೇ ನಿನ್ನನ್ನು ಕರತಂದಿತಾದುದರಿಂದ
ನಿನ್ನಾಗಮನವು ಸಮುದ್ರದಲ್ಲಿ ಬಿದ್ದವರಿಗೆ ನಾವಿಕನು ದೊರತಂತಾಯಿತು ॥೨೨॥
ಅಲ್ಲದೆ ಪರಬ್ರಹ್ಮಸ್ವರೂಪನಾಗಿಯೂ, ಯೋಗೀಶ್ವರನಾಗಿಯೂ, ಧರ್ಮಪಾಲಕನಾಗಿ
ಯೂ ಇದ್ದ ಶ್ರೀಕೃಷ್ಣಮೂರ್ತಿಯು ತನ್ನ ನಿಜಸ್ವರೂಪವನ್ನು ಪಡೆಯಲು ಈಗ
ಧರ್ಮವು ಯಾರನ್ನು ಮರೆಹೊಕ್ಕಿತು ? ಕೃಷ್ಣನು ಈ ಲೋಕವನ್ನು ಬಿಟ್ಟು ಹೊರಡಲು
ಧರ್ಮರಕ್ಷಕರು ಯಾರು? ಎಂದು ಬೆಸಗೊಂಡರೆಬಲ್ಲಿಗೆ ಭಾಗವತಚಂದ್ರಿಕೆಯೋಳ್
ಮೊದಲನೆಯ ಅಧ್ಯಾಯಂ ಮುಗಿದುದು ॥೨೩

ಓಂ ನಮಃ ಪರಮಾತ್ಮನೇ

ಇತಿ ಸಂಪೃಷ್ಟಸಂಪ್ರಶ್ನೋ ವಿಪ್ರಾಣಾಂ ರೌಮಹರ್ಷಣಿಃ। ಪ್ರತಿಪೂಜ್ಯ ವಚಸ್ತೇಷಾಂ ಪ್ರವಕ್ತುಮುಪಚಕ್ರಮೇ ॥೧॥ ಸೂತಃ॥ ಯಂ ಪ್ರವ್ರಜಂತಮನುಪೇತಮಪೇತಕೃತ್ಯಂ ದ್ವೈಪಾಯನೋ ವಿರಹಕಾತರ ಆಜುಹಾವ । ಪುತ್ರೇತಿ * ತನ್ಮಯತಯಾ ತರವೋಭಿನೇದು ಸ್ತಂ ಸರ್ವಭೂತಹೃ

ಅರ್ಥ--ಇತಿ-ಈರೀತಿಯಾಗಿ, ಸಂಪೃಷ್ಟಸಂಪ್ರಶ್ನಃ, ಸಂಪೃಷ್ಟ-ಚೆನ್ನಾಗಿ ಕೇಳಲ್ಪಟ್ಟ, ಸಂಪ್ರಶ್ನಃ-ಉತ್ತಮಪ್ರಶ್ನೆಗಳುಳ್ಳ, ರೌಮಹರ್ಷಣಿಃ-ರೋಮಹರ್ಷಣನ ಮಗನಾದ ಉಗ್ರಶ್ರವನೆಂಬ ಸೂತನು, ತೇಷಾಂ-ಆ, ವಿಪ್ರಾಣಾಂ-ಶೌನಕನೇಮೊದಲಾದ, ಬ್ರಾಹ್ಮಣರ, ವಚಃ-ಮಾತನ್ನು, ಪ್ರತಿಪೂಜ್ಯ-ಮನ್ನಿಸಿ, ಪ್ರವಕ್ತುಂ-ಹೇಳುವುದಕ್ಕೆ, ಉಪಚಕ್ರಮೇ-ಪ್ರಾರಂಭಿಸಿದನು ॥೧॥ ಸೂತಃ-ಸೂತನು ಹೇಳುವುದೆಂತೆಂದರೆ--ದ್ವೈಪಾಯನಃ-ದ್ವೀಪದಲ್ಲಿ ಜನ್ಮಸ್ಥಾನವಾಗುಳ್ಳ ವ್ಯಾಸಮುನಿಯು, ವಿರಹಕಾತರಃ, ವಿರಹ-ಪುತ್ರವಿಯೋಗದಿಂದ, ಕಾತರಃ-ಭಯಗೊಂಡವನಾಗಿ, ಪ್ರವ್ರಜಂತಂ-(ಸರ್ವವನ್ನು ತ್ಯಜಿಸಿ) ಹೊರಟು ಹೋದ, ಅಪೇತಕೃತ್ಯಂ ಅಪೇತ-ತಪ್ಪಿಹೋದ, ಕೃತ್ಯಂ-ಕಾರ್ಯಗಳುಳ್ಳವನಾದುದರಿಂದಲೇ (ಅಂದರೆ ಯಾವಾಗಲೂ ಬ್ರಹ್ಮನಿಷ್ಠನಾಗಿರುವುದರಿಂದ ಕರ್ಮವಾರ್ಗದಲ್ಲಿ ಪ್ರವರ್ತಿಸದಿರುವವನು) ಅನುಪೇತಂ-ಉಪನಯನಕ್ಕೆ ಅನರ್ಹನಾಗಿರುವ (ಅತಿಬಾಲನು) ಅಥವಾ ಯಾರೂ ಬೆಲೂ ಹಿಂಬಾಲಿಸಲ್ಪಡದಿರುವ [ಬಂಟಿಯಾಗಿರುವ] ಯಂ-ಯಾವ ಶುಕಮುನಿಯನ್ನು, ಪುತ್ರಾ-ಮಗನೇ, ಇತಿ-ಎಂದು, ಆಜುಹಾವ-ಕೂಗಿಕೊಂಡನೋ, ಯದಾ-ಯಾವಾಗ ತರವಃ-ಅಲ್ಲಿರುವ ವೃಕ್ಷಗಳು, ತನ್ಮಯತಯಾ-ಆ ಶುಕಮುನಿಯ ರೂಪವುಳ್ಳವುಗಳಾದುದರಿಂದ, ಅಭಿನೇದುಃ - ಪ್ರತ್ಯುತ್ತರವನ್ನಿತ್ತವೋ, ಸರ್ವಭೂತಹೃದಯಂ, ಸರ್ವ-ಎಲ್ಲಾ, ಭೂತ-ಪ್ರಾಣಿಗಳ ಹೃತ್-ಇರುವ ನ್ನನ್ನೂ, ಅಯಂ-ಯೋಗಶಕ್ತಿಯಿಂದ ಪ್ರವೇಶಿಸಿರುವ, ತಂ-ಆ, ಮುನಿಂ - ಶುಕಮುನಿಯನ್ನು

ಸೂಚನೆ॥ ಸೂತಂ ಹರಿಗುಣಕಥನ । ವ್ಯಾತಂ ವಿದಿತಾಗಮಾರ್ಥಜಾತಂ ಸ್ತುತಂ ॥
ನೀತಿಪ್ರಶ್ನೆಗಳೋಳ್ ಸವಿ । ವಾತಿಂ ನಾಲ್ಕಕ್ಕೆ ನುಡಿವನುತ್ತರ ವೀಗಳ್ ॥೧॥

ತಾತ್ಪರ್ಯ--ಪೂರ್ವಾಧ್ಯಾಯದಲ್ಲಿ ವಿವರಿಸಿದಂತೆ ಶೌನಕಾದಿಗಳು ಕೇಳಿದ ಪ್ರಶ್ನೆಗಳಿಗಾನಂದಗೊಂಡು ಸೂತಪೌರಾಣಿಕನು ಅವುಗಳಿಗೆ ಪ್ರತ್ಯುತ್ತರವನ್ನು ಹೇಳಲಾರಂಭಿಸುವುದಕ್ಕೆ ಮೊದಲು ಗುರುದೇವತಾನಮಸ್ಕಾರವನ್ನು ವ್ಯಾಹರಿಸುತ್ತಾನೆ. ॥೧॥ ವ್ಯಾಸವು ಋಷಿಯ ಪ್ರಭಾವದಿಂದ ಶುಕಗರ್ಭದಲ್ಲಿ ಜನಿಸಿದವನೇ ಶುಕಮುನಿಯು. ಅತನು ಬ್ರಹ್ಮನಿಷ್ಠನಾಗಿಯೇ ಹುಟ್ಟಿದುದರಿಂದ ಉಪನಯನಕ್ಕೂ ಅರ್ಹವಲ್ಲದ ಕೇವಲ ಬಾಲ್ಯದಲ್ಲಿಯೇ ಸರ್ವಸಂಗಪರಿತ್ಯಾಗಮಾಡಿ, ಕರ್ಮಮಾರ್ಗಕ್ಕೆ ಸಿಕ್ಕದೆ ಒಂಟ್ಟಿಯಾಗಿಹೊರಟುಹೋದನು: ಆಗ ವ್ಯಾಸಮುನಿಯು ಸರ್ವಜ್ಞನಾಗಿದ್ದರೂ, ಮಗನ ಅಗಲಿಕೆಯನ್ನು ಸಹಿಸಲಾರದೇ ಹಿಂಬಾಲಿಸಿ ಹೋಗುತ್ತಾ ಬೆಟ್ಟಗುಟ್ಟಗಳೆಲ್ಲ ಪ್ರತಿಧ್ವನಿಕೊಡುವಂತೆ "ಮಗುಶುಕನೇ" ಎಂದು ಗಟ್ಟಿಯಾಗಿ ಕೂಕೊಂಡನು. ಬಳಿಕ ಶುಕಮುನಿಯು ಸರ್ವಾತ್ಮಕನಾದ್ದರಿಂದ

* ಟಿಪ್ಪಣಿ ಯಿಲ್ಲದೆ ಈ ಗುರುತುಮಾತ್ರ ಇದ್ದಲ್ಲಿ ವ್ಯಾಕರಣದೋಷವಿದ್ದರೂ ಋಷಿಪ್ರಯೋಗವಾದುದರಿಂದ ದೋಷವಲ್ಲವೆಂದು ತಿಳಿಯಬೇಕು.

ದಿಯಂ ಮುನಿ ಮಾನತೋಸ್ಮಿ ॥೨॥ ಯತ್ಸ್ವಾನುಭಾವಮಖಿಲಶ್ರುತಿಸಾ
ರವೇಕ ಮಧ್ಯಾತ್ಮ ದೀಪ ಮತಿತೀರಿಷತಾಂ ತವೋಂಧಂ । ಸಂಸಾರಿಣಾಂ
ಕರುಣಯಾಹ ಪುರಾಣಗುಹ್ಯಂತಂ ವ್ಯಾಸಸೂನು ಮುಪಯಾಮಿ ಗುರುಂ
ಮುನೀನಾಂ॥೩॥ನಾರಾಯಣಂ ನಮಸ್ಕೃತ್ಯ ನರಂಚೈವ ನರೋತ್ತಮಂ।ದೇ
ವೀಂ ಸರಸ್ವತೀಂ ವ್ಯಾಸಂ ತತೋ ಜಯ ಮುದೀರಯೇ ॥೪॥ ಮುನಯು
ಸ್ಸಾಧು ಪೃಷ್ಟೋಹಂ ಭವದ್ಭಿರ್ಲೋಕಮಂಗಳಂ । ಯತ್ಕೃತಃ ಕೃಷ್ಣ

ನಮಸ್ಕರಿಸುವವನು, ಅಸ್ಮಿ-ಆಗುತ್ತೇನೆ. ॥೨॥ ಅಂಧಂ-ದಟ್ಟವಾದ, ತಮಃ - ಸಂಸಾರವೆಂಬ ಕತ್ತಲೆ
ಯನ್ನು, ಅತಿತೀರಿಷತಾಂ - ದಾಟಲಪೇಕ್ಷಿಸುತ್ತಿರುವ, ಸಂಸಾರಿಣಾಂ-ಸಂಸಾರಿಗಳಿಗೆ, ಯಃ-ಯಾವಮಹಾ
ತ್ಮನು, ಸ್ವಾನುಭಾವಂ, ಸ್ವ - ಅಸಾಧಾರಣವಾದ, ಅನುಭಾವಂ - ಮಹಿಮೆಯುಳ್ಳ, ಅಖಿಲಶ್ರುತಿಸಾರಂ,
ಅಖಿಲ-ಸಮಸ್ತಗಳಂದ,ಶ್ರುತಿ-ವೇದಗಳಿಗೂ, ಸಾರಂ-ಸಾರಭೂತವಾದ, ಏಕಂ-ಅಸದೃಶವಾದ, ಅಧ್ಯಾತ್ಮ
ದೀಪಂ, ಅಧ್ಯಾತ್ಮ-(ಕಾರ್ಯ ಕಾರಣಸಂಘಾತರೂಪವಾದ; ಶರೀರಾದಿಗಳನ್ನು ಅಧಿಕಇಸಿರುವ) ಆತ್ಮತತ್ವ
ಕ್ಕೆ, ದೀಪಂ-ಪ್ರಕಾಶಕವಾಗಿರುವ, ಪುರಾಣಗುಹ್ಯಂ, ಪುರಾಣ-ಪುರಾಣಗಳಲ್ಲಿ, ಗುಹ್ಯಂ - ರಹಸ್ಯವಾ
ದೀಭಾಗವತವನ್ನು, ಕರುಣಯಾ-ದಯೆಯಿಂದ ಆಹ-ಹೇಳುತ್ತಾನೋ, ಮುನೀನಾಂ-ಮನನಶೀಲರಾದ
ಋಷಿಗಳಿಗೆ, ಗುರುಂ-ಗುರುವಾದ, ತಂ-ಆ, ವ್ಯಾಸಸೂನುಂ-ವ್ಯಾಸಪುತ್ರನಾದ ಶುಕಮುನಿಯನ್ನು, ಉಪ
ಯಾಮಿ-ಮರೆ ಹೊಗುವೆನು (ವಂದಿಸುವೆನು) ॥೩॥ ನಾರಾಯಣಂ-ನಾರಾಯಣ ಮೂರ್ತಿಯನ್ನೂ, ನ
ರೋತ್ತಮಂ-ನರರಲ್ಲಿಶ್ರೇಷ್ಠನಾದ, ನರಂಚೈವ - ನರಾವತಾರನಾದ ಅರ್ಜುನನನ್ನೂ, ಸರಸ್ವತೀಂದೇವೀಂ
ಚೈವ - ಸರಸ್ವತೀದೇವಿಯನ್ನೂ ಕೂಡಾ, ನಮಸ್ಕೃತ್ಯ - ನಮಸ್ಕರಿಸಿ, ತತಃ-ಆಬಳಿಕ, ಜಯಂ-[ಸಂ
ಸಾರವನ್ನು ಜಯಿಸುವ] ಭಾಗವತಗ್ರಂಥವನ್ನು, ಉದೀರಯೇ - ಹೇಳುತ್ತೇನೆ. ॥೪॥ ಹೇಮುನಯಃ-
ಅಯ್ಯಾಋಷಿಗಳಿರಾ, ಯತ್-ಯಾವ ನಿಮ್ಮ ಪ್ರಶ್ನೆಯು, ಲೋಕಮಂಗಳಂ-ಜಗತ್ತಿಗೆ ಮಂಗಳವನ್ನುಂಟು
ಮಾಡತಕ್ಕದ್ದೋ,ಯೇನ-ಯಾವನಿಮ್ಮ ಪ್ರಶ್ನೆಯಿಂದ, ಆತ್ಮಾ-ಬುದ್ಧಿಯು, ಸುಪ್ರಸೀದತಿ-ಸಂಪೂರ್ಣವಾಗಿ
ಪ್ರಸನ್ನವಾಗುವುದೋ,ಕೃಷ್ಣ ಸಂಪ್ರಶ್ನಃ,ಕೃಷ್ಣ-ಅಂತಹ ಕೃಷ್ಣವಿಷಯಕವಾದ,ಸಂಪ್ರಶ್ನಃ-ಪ್ರಶ್ನೆಯು,

ಅಯ್ಯಾ ಮುನಿಯೇ ಇದೇನು ಅಜ್ಞಾನ ? ಶುಕನಾರು ? ನೀನಾರು ? ಎಂದು ವೃಷ್ಣ
ರೂಪದಿಂದುತ್ತರವನ್ನು ಕೊಟ್ಟನು. ಆದುದರಿಂದ ಅಂತಹ ಆತ್ಮಾರಾಮನಾದ ಶುಕಮುನಿ
ಯನ್ನು ನಮಸ್ಕರಿಸುವೆನು. ಮತ್ತು ಯಾವಮಹಾತ್ಮನು ಈ ಜನನ ಮರಣರೂಪವಾದ ಸಂ
ಸಾರವೆಂಬ ಕಗ್ಗತ್ತಲೆಯನ್ನು ದಾಟಬೇಕೆಂದಿರುವ ಸಂಸಾರಿಗಳಲ್ಲಿ ಕನಿಕರಿಸಿ, ಅಸಾಧಾರ
ಣಮಹಿಮೆಯುಳ್ಳದ್ದಾಗಿಯೂ, ಸಕಲ ವೇದಸಾರವಾಗಿಯೂ, ಅಸದೃಶವಾಗಿಯೂ, ಆತ್ಮ
ತತ್ವಪ್ರಕಾಶಕವಾಗಿಯೂ, ಇರುವ ಸಕಲ ಪುರಾಣಗಳಲ್ಲಿಯೂ ರಹಸ್ಯವಾದ ಭಾಗವತಪು
ರಾಣವನ್ನು ಹೇಳಿದನೋ, ಅಂತಹ ವ್ಯಾಸಪುತ್ರನಾದ ಶುಕಮುನಿಯನ್ನು ವಂದಿಸುತ್ತೇನೆ.
ಎಂದು ಗುರುವನ್ನು ನಮಸ್ಕರಿಸಿ, ಬಳಿಕ ನರನಾರಾಯಣರನ್ನೂ, ಸರಸ್ವತಿಯನ್ನೂ
ವಂದಿಸಿ, ಸೂತಪುರಾಣೀಕನು ಗ್ರಂಥವನ್ನಾರಂಭಿಸುತ್ತಾನೆ. ಅಯ್ಯಾ ಮುನಿಗಳಿರಾ--
ಲೋಕಕ್ಕೆ ಮಂಗಳಕರವಾಗಿಯೂ, ಬುದ್ಧಿಯನ್ನು ನಿರ್ಮಲಗೊಳಿಸುವುದಾಗಿಯೂ ಇ
ರುವ ಕೃಷ್ಣನ ವಿಷಯವಾದ ಒಳ್ಳೆಯ ಪ್ರಶ್ನೆಯನ್ನು ಕೇಳಿದಿರಿ ನೀವು ಮೊದಲು ಕೇಳಿದ್ದ

ಉತ್ತಮವಾದ ಹೊಸಪುಸ್ತಕಗಳು

ರಘುವಂಶ, ಶ್ಲೋಕ, ಪದ, ಶಬ್ದ, ಅನ್ವಯ, ಅರ್ಥ, ತಾತ್ಪರ್ಯ, ಟಿಕಾಂಕ್ಷ, ಧಾತುರೂಪ, ಧಾತ್ವರ್ಥ, ವಿಶೇಷವಿಷಯಸಹಾಳ್ಳ ೧ನೇ ಸರ್ಗದಪ್ರತಿಯೂಂದಕ್ಕೆ ೦-೧-೦

ಮೇಲ್ಕಂಡಂತೆಯೋಇರುವ೨ನೇಸರ್ಗ ೦-೧-೦

೧-೨ನೇ ಸರ್ಗಸೇರಿದ ಪ್ರತಿ ೧—೧೪—೦

ಋಗ್ವೇದ ಸಿತ್ಯಕರ್ಮ, ಪ್ರಾತರ್ಮಧ್ಯಾಹ್ನ, ಸಾಯಂ ಸಂಧ್ಯಾ, ದೇವತಾರ್ಚನ, ಪುರುಷಸೂಕ್ತ, ಶ್ರೀಸೂಕ್ತ, ನಾರಾಯಣೋಪನಿಷತ್, ಮಂತ್ರಪುಷ್ಪ, ಬ್ರಹ್ಮಯಜ್ಞ, ಅಪರಾಧಸ್ತೋತ್ರ, ಮಂಜರತ್ನ ಸ್ತೋತ್ರ, ಶಿವಕವಚ, ಇಂದ್ರಾಕ್ಷಿ, ನಹಾಉಳ್ಳದ್ದು ೦-೮-೦

" ಶ್ಲೋಕಾಗದದ ಪ್ರತಿ ೦—೬—೦

ಸೂರ್ಯ ನಮಸ್ಕಾರ, ತೈಜಕಲ್ಪರೀತ್ಯಾನ, ಮಂತ್ರಕ, ಮಹಾಸೌರ, ಆದಿತ್ಯ ಹೃದಯಾದಿಗಳಿಂದ ಕೂಡಿದೆ ೦—೨—೦

ಸ್ವರಸಹಿತ ನಮಕ ಚಮಕ (ತೆ. ಅ) ೦-೨-೦

ವೈಜಯಂತಿ, ಅನೇಕ ಸೂಕ್ತಗಳು ಉಪನಿಷತ್ತು ಉಳ್ಳದ್ದು ೦—೨—೦

ಶ್ರೀಮಚ್ಛಂಕರಾಚಾರ್ಯ ಕೃತ ವಿವೇಕಚೂಡಾಮಣಿ ಟೀಕಾತಾತ್ಪರ್ಯ ಸಹಿತವಾದ ಪೂರ್ವಭಾಗ ಪ್ರತಿ ೧ಕ್ಕೆ ೦—೧—೦

ಚಮತ್ಕಾರ ಚಿಂತಾಮಣಿ (ನೀತಿ ಶೃಂಗಾರ ವೇದಾಂತ ಇವುಗಳಿಂದ ಸಿಬಿಡವಾದ ಉತ್ತಮಕಥೆ ೦—೧೧—೦

ಮುಕುಂದಮಾಲಾ ಸ್ತೋತ್ರ ಟೀಕಾತಾತ್ಪರ್ಯ ಸಹಿತ ೦—೪—೦

ವೈದ್ಯಸಾರ ಸಂಗ್ರಹ, ಸಕಲಮೂಲಿಕಾ ಔಷಧಿಗಳನ್ನೂ ಹೇಳಿದೆ, ವೈದ್ಯದಲ್ಲಿ ಅತ್ಯುತ್ತಮ ಪುಸ್ತಕ (ಟೀಕಾಸಮೇತ) ೫—೦—೦

ಶುಕಸಪ್ತತಿ ಆಸ್ಥಾನ ಪಂಡಿತರಾಗಿಯೂ ಮಂತ್ರಿಗಳಾಗಿಯೂ ಇದ್ದ ಚಿಕ್ಕ ಉಪಾಧ್ಯಾಯರು ರಚಿಸಿದ ಪ್ರತಿ ೨—೦—೦

ಗ್ಲೋಜು ಕಾಗದದ ಪ್ರತಿ ೪—೦—೦

ಶ್ರೀಮಚ್ಛಂಕರಾಚಾರ್ಯ ಕೃತ ಶಿವಾನಂದಲಹರಿ ಟೀಕಾ ತಾತ್ಪರ್ಯ ಸಹಿತ ೦-೬-೦

ಟೀಕಾ ತಾತ್ಪರ್ಯ ಸಹಿತವಾದ ಶ್ರೀರಾಘವೇಂದ್ರ ಸ್ತೋತ್ರ ೦—೨—೦

ಟೀಕಾತಾತ್ಪರ್ಯ ಶಬ್ದ, ಸಮಾಸ ಸಹಿತವಾದ ನೋಫಸಂದೇಶ ೨—೦—೦

ಬಾಲರಾಮಾಯಣಟೀಕಾತಾತ್ಪರ್ಯ ಹೊಸ ಪ್ರಿಂಟು (ಗ್ಲೇ. ಕಾ)

ಮೂಲ (ನಾಮರೂಪಸಹ) ಚಿಕ್ಕ ಅಕ್ಷರದ ವಿಷ್ಣು ಸಹಸ್ರನಾಮ ೦—೨—೦

ದಿಟೋ ಟೀಕಾಸಹಿತ ೫—೦—೦

ಧರ್ಮಸಿಂಧು (ಧರ್ಮಶಾಸ್ತ್ರಗಳ ಸಾರವೆಲ್ಲಾ ತುಂಬಿದೆ ತೆಳು ಅಕ್ಷರ ೫—೦—೦

ಟೀಕಾ ತಾತ್ಪರ್ಯ ಸಹಿತವಾದ ಭರ್ತೃಹರಿ ಶತಕತ್ರಯುಗಳು ೧—೦—೦

ರಾಮಕೃಷ್ಣ ಸೂರಿ ಟೀಕಾ ಸಹಿತ ಭಗವದ್ಗೀತೆ ೧—೦೨—೦

ಇನ್ನು ಯಾವ ಪುಸ್ತಕಗಳು ಬೇಕಾದಾಗ್ಯೂ ಬರೆದರೆ ಕಳುಹಿಸುತ್ತೇವೆ ಕ್ಯಾಟಲಾಗ್ ಬೇಕಾದಲ್ಲಿ ಮುಫತ್ತಾಗಿಯೂ ಕಳುಹಿಸಲ್ಪಡುವುದು.

ಬಿ. ಶ್ರೀನಿವಾಸರಾಯರು ಶಾಸ್ತ್ರಿ

" ವಿನೋದಿನಿ " ಬುಕ್‌ಷಾಪು,

ಶಂಕರಪುರ, ಬೆಂಗಳೂರು ಸಿಟಿ.

ಚಂದಾದಾರರು ಗಮನಿಸತಕ್ಕ ವಿಷಯಗಳು.

(೧) ಈ ಶ್ರೀಭಾಗವತ ಪುರಾಣವು ಬಹಳವಿಸ್ತಾರವಾದ ಗ್ರಂಥವಾದುದರಿಂದ ಒಟ್ಟಾಗಿ ಪುಸ್ತಕವನ್ನು ಪಡೆಯಲು ಗ್ರಾಹಕರಿಗೆ ಬಹಳ ತೊಂದರೆಯಾಗುವುದೆಂದೆಣಿಸಿ, ಆಗಿಂದಾಗ್ಗೆ ಕೊಂಚ ಕೊಂಚ ದ್ರವ್ಯಕ್ಕೆ ಪಡೆಯುತ್ತಿದ್ದರೇ (ಗಜ್ಜ್ಯತ್ಪಿಪೀಲಿಕಾಪಂಜ್ಞಿಸ್ಸ ಮುದ್ರಮುಪಿಗಚ್ಛತಿ) ಎಂಬಂತೆ ಎಲ್ಲರಿಗೂ ಸುಲಭವಾಗಿ ದೊರೆಯುವುದೆಂದು ಯೋಚಿಸಿ ಥಮೇ ಸಂಪುಟಗಳಾಗಿ ಹಂಚಲುಯತ್ನಿಸಿರುತ್ತೆ.

ಈ ವಿಸ್ತಾರವಾದ ಗ್ರಂಥವನ್ನು ೫೦ ಸಂಪುಟಗಳಲ್ಲಿ ಪೂರೈಸುವಂತೆ ನಿಶ್ಚಯಮಾಡಿರುತ್ತೆ. ಇದನ್ನೇ ಸಾಧ್ಯವಾದ ಮಟ್ಟಿಗೂ ನೆರವೇರಿಸುತ್ತೇವೆ.

(೧) ಚಂದಾದಾರರು ಮುಂಗಡವನ್ನು ಕಳುಹಿಸಿದ ಹೊರತು ಅವರಹೆಸರು ನಮ್ಮ ಚಂದಾ ರಿಜಿಷ್ಟರಿನಲ್ಲಿ ದಾಖಲ್ಮಾಡುವುದಿಲ್ಲ.

(೨) ಮುಂಗಡವು ಕಾತಯು ಸಂಚಿಕೆಗಳ ಮೊಬಲಗಿನಲ್ಲಿ ವಜಾಮಾಡಲ್ಪಡುವುದು.

(೩) ಮಧ್ಯಕಾಲದಲ್ಲಿಚಂದಾಬಿಟ್ಟವರಿಗೆ ಮುಂಗಡವು ವಾಪಸ್ಸುದೊರೆಯಲಾರದು

(೪) ಚಂದಾದಾರರು ಪತ್ರ ವ್ಯವಹಾರವನ್ನು ನಡೆಯಿಸುವಾಗೆಲ್ಲಾ ಸಂಚಿಕೆಯ ಮೇಲೆ ಹಾಕಿರುವ ತಮ್ಮ ರಿಜಿಸ್ಟರ್ ನಂಬರನ್ನು ನಮೂದಿಸಿದಲ್ಲದೆ ಅವರ ಪತ್ರಗಳು ಗಮನಿಸಲ್ಪಡುವುದಿಲ್ಲ.

(೫) ಅನಾವಶ್ಯಕವಾದ ಪತ್ರವ್ಯವಹಾರಕ್ಕೆ ಸ್ಟ್ಯಾಂಪು ಕಳುಹಿಸಿದ ಹೊರತು ಉತ್ತರ ಕೊಡಲಾಗದು.

(೬) ಮೊದಲು ತಿಳುಹಿಸಲ್ಪಟ್ಟ ಸಂಖ್ಯೆಯ ವಿ. ಪಿ. ಯಾನ್ನುವಾಪಸ್ಸು ಮಾಡಿದಲ್ಲಿ ಆ ಪ್ರತಿಗಳಲ್ಲಿ ಬಿಕ್ರಿ ಮುಂಗಡದಲ್ಲಿ ಕಡಿತ ಮಾಡಲ್ಪಡುವುದು ಪುನಃ ಅನೊಂಬಲಗನ್ನು ಕಳುಹಿಸಿ ಮಾಡಿಯೇ ಮುಂದಕ್ಕೆ ಅವರಿಗೆ ಸಂಚಿಕೆಯು ಕಳುಹಿಸಲ್ಪಡುವುದು.

(೭) ಚಂದಾದಾರರಲ್ಲದವರಿಗೆ ಬಿಡಿಯಾಗಿ ಸಂಚಿಕೆಗಳು ಬಿಕ್ರಿ ಮಾಡಲ್ಪಡುವುದಿಲ್ಲ.

(೮) ಪತ್ರವನ್ನು ಬರೆಯುವವರು ತಮ್ಮ ಗ್ರಾಮ, ಪೋಸ್ಟು, ಜಿಲ್ಲಾ, ವಗೈರೆ ವಿಳಾಸವನ್ನು ತಿಳುಹಿಸಿದ ಹೊರತು ಉತ್ತರ ದೊರೆಯಲಾರದು.

(೯) ಚಂದಾದಾರರು ಯಾವ ತಿಂಗಳಲ್ಲಿ ವಿ. ಪಿ. ತೆಗೆದುಕೊಳ್ಳಲು ಅವಕಾಶವಿರುವುದಿಲ್ಲವೋ ಆಸಂಗತಿಯನ್ನು ಮೊದಲೇ ನಮಗೆ ತಿಳಿಸಿದರೆ ಮುಂದಣ ತಿಂಗಳಲ್ಲಿ ೨ ಸಂಚಿಕೆಗಳೂ ಒಟ್ಟಾಗಿ ವಿ. ಪಿ. ಮಾಡಲಾಗುವುದು.

(೧೦) ಹತ್ತು ಸಂಚಿಕೆಗಳನ್ನು ಒಟ್ಟಾಗಿ ಬಂದೇ ವಿಲಾಸಕ್ಕೆ ತರಿಸಿಕೊಂಡವರಿಗೆ ಒಂದು ಸಂಚಿಕೆಯು ಉಚಿತವಾಗಿ ದೊರೆಯುವುದು ಇವರು ಆ ೧೦ ಸಂಪುಟಗಳ ಬೆಲೆಯನ್ನು ಮೊದಲೇ ಕಳುಹಿಸಿದಲ್ಲಿ ಮುಂಗಡ ಕೊಡಬೇಕಾದುದಿಲ್ಲ.

ಎಂ. ರಾಮಶೇಷ ಶಾಸ್ತ್ರಿ,

ಭಾರತೀಭವನಂ,

ಚಾಮರಾಜ ಪೇಟೆ, ಬೆಂಗಳೂರು ಸಿಟಿ

ತಾರೀಖು ೯

Registered No. M—718.

(Daily Edition.)

ಸರ್ವಜನ ಹಿತೋಪಕಾರಿಣಿ

ವಾರ್ಷಿಕ ಚಂದಾ:—(ಸ್ಥಳಿದವರಿಗೆ) ಆರುರೂಪಾಯಿ

ಪ್ರತಿ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವುದು.

ವಾರ್ಷಿಕ ಚಂದಾ—(ಪರಸ್ಥಳದವರಿಗೆ) ಹನ್ನೆರಡು ರೂಪಾಯಿ.

ಸಂಪುಟ ೧] ಮೈಸೂರು :—೧೯೧೩ ನೆಯ ಇಸವಿ ಸೆಪ್ಟೆಂಬರ್ ತಾರೀಖು ೩ ನೆಯ ಮಂಗಳವಾರ. [ಸಂಚಿಕೆ ೧೧೦,

ಸರ್ವಜನ ಹಿತೋಪಕಾರಿಣಿ ಚಂದಾ ವಿವರ.

[ಪರಸ್ಥಳದವರಿಗೆ ಅಂಚೆಯ ವೆಚ್ಚ ಬೇರೆ]

	ದಿನಪತ್ರಿಕೆ.	ವಾರ್ತಪತ್ರಿಕೆ.	ಮಾಸಪತ್ರಿಕೆ
ಒಂದಕ್ಕೆ	೬-೦-೦	೧-೦-೦	೦-೧೬-೦
ಕಡೆ	೩-೦-೦	೦-೮-೦	೦-೬-೦
ಗಳಿಗೆ	೧-೮-೦	೦-೪-೦	೦-೪-೦
ಮೂರು ತಿಂಗಳಿಗೆ	೦-೮-೦	...	೦-೩-೦

ನಮ್ಮ ವಿಜಂಟರಿರುವ ಸ್ಥಳದಲ್ಲಿಯೂ ಮೇಲ್ಕಂಡಂತೆಯೇ.

RATES OF ADVERTISEMENTS.

DAILY EDITION (Per month.)

	Per Col.	Half Col.	Qr. Col.	1 inch
6 insertions	50-0-0	30-0-0	17-0-0	10-0-0
13 insertions	90 0-0	17-0-0	10 0 0	6 0-0
7 insertions	17-0-0	10-0 0	6 0 0	4-0-0
1 insertion	3-0 0	2-0-0	1-8-0	1-0-0

WEEKLY EDITION.

	Per Col.	Half Col.	Qr. Col.	1 inch.
Yearly	100-0-0	60-0-0	35 0-0	20 0-0
Half yearly	60 0 0	35 0-0	20 0-0	12 0 0
Quarterly	35 0-0	20 0-0	12 0-0	7 0 0
For insertion	3-3-0	3 0-0	2 0-0	1-0-0

MONTHLY EDITION.

Pa. page.	Half page.	Qr. page.	1 inch
...	20 0-0	... 0 0	8 0 0

ಕಡಪಾ ಕಲ್ಲುಗಳು.

ಮೈಸೂರು ರೈಲ್ವೆ ಗೂಡ್ಸ್‌ಷೆಡ್ ಬಳಿಯಲ್ಲಿ ಕಡಪಾ ಕಲ್ಲುಗಳ ಕೋರೆಯು ಏರ್ಪಟ್ಟಿರುವುದು. ಇದರಲ್ಲಿ ತರಹಾವರಿ ಕಡಪಾ ಕಲ್ಲುಗಳನ್ನು ಸುಲಭ ಬೆಲೆಗೆ ಮಾರಲ್ಪಡುವುವು. ಹೆಚ್ಚು ಮಾಹಿತಿಯನ್ನು ಜಿವೊ ಮುತ್ತಪ್ಪಯ್ಯಂದಲೂ, ಮೈಸೂರು ಸೆಂಟ್ರಲ್ ಪೊಲೀಸ್ ಸ್ಟೇಷನ್ ಹಿಂಭಾಗದಲ್ಲಿರುವ ಮೆಸ್ಸರ್ಸ್ ಶ್ರೀನಿವಾಸರಾವ್ ಅಂಡ್ ಸನ್ಸ್ ಇವರಲ್ಲಿಯೂ ಅಥವ ಕಂಟ್ರಾಕ್ಟರ್ ಬಿ ನರಸಿಂಹ್ಮೆ ಮೂರ್ತಿರಾಯರಲ್ಲೂ ತಿಳಿಯಬಹುದು

ಕ್ರೈಂಚ್ ರಿವರ್ ಅಲಾದಂ ಟ್ಯೋನಿಪೀನ್.



ನಂ. ೧೫

ಈ ಟ್ಯೋನಿಪೀನು ಬಹಳ ಗಟ್ಟಿಯಾದದ್ದು ಬಹಳ ಕಾಲ ಬರುವಂಥಾದ್ದು ವಿದ್ಯಾರ್ಥಿಗಳಿಗೆ ಬಹಳ ಉಪಯೋಗಕರವಾದದ್ದು.

ಬೆಲೆಯು ೧ಕ್ಕೆ ೩-೦-೦

ಮೈಸೂರ್ ಊದಬತ್ತಿಗಳು.

ವಿವಿಧವಾದ ಊದಬತ್ತಿಗಳು ನೇರು ೧ಕ್ಕೆ ೧೦-೦-೦, ೫-೦-೦ ೩-೦-೦, ೨-೪-೦, ೧-೩-೦, ಕಸ್ತೂರಿ ಬಿಲ್ಲೆ ತೋಲಾ ೧ಕ್ಕೆ ೧-೦-೦, ಹಸಿ ಗಂಧ ತೋಲಾ ೧ಕ್ಕೆ ೧೫ ಆಣೆ ದಕ್ಕಾಂಗ ಪೊಟ್ಟಣ ೧ಕ್ಕೆ ೪ ಆಣೆ, ದೂಪದಗಟ್ಟಿ ೧ಕ್ಕೆ ೨ ಆಣೆ. ಜಾಲಗ್ರಹಣೂಪ ಟ್ಟಿ ೧ಕ್ಕೆ ೯ ಆಣೆ, ರಾಯಲ್‌ಸುಗಂಧಿ ಸೀಸೆ ೯ ಆಣೆ.

ಟಿ. ಎಲ್. ಉಪಾಧ್ಯಾಯ್ಯ,

"ಸುಗಂಧಕಾರಿ," ಮೈಸೂರು.

ದರ್ಬಾರಿನಲ್ಲಿ ಮಿಪ್ಪಿನಲ್ಪಟ್ಟದ್ದು.

ಡಾ॥ ಬುಟ್ಲೀವಾಲಾರವರು ಛಳಜ್ವರದ ಔಷಧವನ್ನು ಮಾಡಿರುತಾರೆ. ಇದಕ್ಕೆ ಬುಟ್ಲೀವಾಲರ ಪೆಗ್ಯುಮಿಕ್ಸ್‌ಚರ್ ಎಂದು ಹೆಸರು ಎಲ್ಲಾ ಜ್ವರಗಳನ್ನೂ, ಛಳಿಜ್ವರವನ್ನೂ ನೆಗಡಿ ಕೆಮ್ಮು ಸೊಂಟ ಬಿಗ್ಗಲ್ಲೂಡಾ ಎಂಬ ಜ್ವರವನ್ನೂ ಪ ಮಾಡುವದರಲ್ಲಿ ಗೆದ್ದು ಸಿದ್ಧಿಪಡೆಂದು ಸ್ವತಂತ್ರದಲ್ಲೂ ೧ ಲ್ಲಿನಲ್ಲಿ ಬಹುಕಾ ಲದಿಂದ ಇದನ್ನು ಅನೇಕರು ಉಪಯೋ ಸುತ್ತಿದವರಿ ಇವರಿಗೆಲ್ಲಾ ಪಾಸಿಯಾಗಿದೆ. ಕ್ರಮ ಔಷಧ ೧ ರೂಪಾಯಿ

ಸ್ಥಂವಾಲರ ಟಾನಿಕ್ ಪಿಲ್ಸ್‌ಮಂಎ ಕ್ಟೆರ್ ನ್ನು ಕೊಡತೆ ವಿಧಿತ ಮಾಡಿ ... ...

Suppliments will be charged in ALL EDITIONS the rate of As. 4 per 100.

A discount of 12 per cent will be allowed in all Editions for standing advertisement of 1 year

All communications to be addressed to—

THE MANAGER,

"SARVAJANA HITOPAKARINI," MYSORE

THE LAWYERS'

STATIONARY DEPOT,

1365, SAYAJI RAO ROAD, MYSORE

POST AND PACKING CHARGES EXTRA

				Rs	As	P.
Vakalat Eng and Kan per 100			...	0	6	0
Memo Forms Kan per 100 ...			...	0	6	0
Advice Cards Kan per 100 ..			...	0	5	0
Jari Forms 3 pie paper 100 ..			...	2	0	0
Notice Book of 100 pages (bound)			...	0	12	0
Case Covers printed per 100			...	0	8	0
Do " blank per 100 ..			...	0	6	0
Hearing Memo book of 100 pages			...	0	3	0
Blank Post Cards 100	0	2	6 to 0	4	0	
Note papers per packet,	0	5	0 to 1	0	0	
Goa-pape per ream	1	6	0 to 1	12	0	
Foiscap (10 12 14 lbs.)	2	0	0 to 3	4	0	
Envelops per packet	0	5	0 to 1	0	0	
Blotting paper per sheet	0	0	6 to 0	2	0	
Blotting Pad of 1 quire bound			...	0	8	1

Black, Red, Etc. Ink powder per packet pie 3

All sorts of Account, Cash, Ledger and Note books and other Necessaries of STATIONARY will be supplied at moderate rates ON ORDER.

---

೭೦ ವರ್ಷಗಳಿಂದೆಲೂ ಪ್ರಚಾರದಲ್ಲಿರುವ

ಪಣಿಪುಗವ್ಯಾಯುವರ್

"ಸುಗಂಧ ನಕ್ಯ ಪುಡಿ"

ಕ್ರಯಪಟ್ಟಿಗೂ ಮತ್ತು ನಮೂನೆಗೂ ಬರೆದುಕೊಳ್ಳಿರಿ.

ವಿಳಾಸ—ಪ್ರೋಪ್ರೈಟರ್ಸ್ 140. ಮದರಾಸು.

ರಾಸ್ಕೋಪ್ ಸಿನ್ಸರ್ ಲಿವರ್ ವಾಚ್.

ನಂ. ೧



ಈ ವಾಚು ಬಹಳ ಬಂದೋಬಸ್ತಾದದ್ದು, ಮಜಬೂತಾದದ್ದು, ಬಾಳಿಕೆಯಾದದ್ದು, ರಾಸ್ಕೋಪ್ ಪೇಟೆಂಟ್ ವಾಚುಗಳಿಗೆ ಸರಿಯಾಗಿ ನಡೆಯುತ್ತದೆ. ಬಲೆ ಬಹಳ ಕಡಿಮೆ ಮಾಡಿರುತ್ತೆ.

ಗ್ಯಾರಂಟಿ ಒಂದು ವರ್ಷ.

ಕ್ರಯ ರೂ ೨-೪-೦

ಪೋಸ್ಟೇಜ್ ಬೇರೆ.

ಕೆ. ಸುಬ್ಬಯ್ಯಶೆಟ್ಟಿ,

ವಾಚ್ ಮೇಕರ್ಸ್, ದೊಡ್ಡಪೇಟೆ, ಬೆಂಗಳೂರು.

ಸಂಪೂರ್ಣ ಗೌರ್ನಮೆಂಟ್ ಸೆಕ್ಯೂರಿಟಿಯುಳ್ಳ

ಜನರಲ್ ಅಷ್ಯೂರೆನ್ಸ್ ಸೊಸೈಟಿ ಲಿಮಿಟೆಡ್

ಹೆಡ್ ಆಫೀಸ್— ಬ್ರಾಂಚ್ ಆಫೀಸ್—

ಅಜ್ಮೀರ್. ಬೆಂಗಳೂರು ಸಿಟಿ.

ಮೂಲಧನ 5,00,000.

ಧರ್ಮಕ್ಕೆ ಮೂಲವಾಗಿಯೂ, ಕಷ್ಟಕ್ಕೆ ಕಲ್ಪವಾಗಿಯೂ, ಆಪತ್ಕಾಲಬಂಧುವಾಗಿಯೂ ಇರತಕ್ಕ ವಿಮೇ ಪತ್ರವು ಪ್ರತಿ ಒಬ್ಬರಲ್ಲಿಯೂ ಇರಲೇಬೇಕೆಂದು ಲಕ್ಷ್ಯಂತ ಅವಶ್ಯಕವು. ಇಂಥ ಸೌಕರ್ಯವನ್ನೆಲ್ಲ ಉಂಟುಮಾಡತಕ್ಕ, ಸಮಯಕ್ಕೆ ಸಾಲವನ್ನು ಕೊಡತಕ್ಕ, ಎಲ್ಲಾ ವೀಕಗಳಲ್ಲಿಯೂ ಪ್ರಚಾರಕ್ಕೆ ಬಂದಿರುವ, ಪ್ರೀಮಿಯಂ ದಂಗಳು ಸುಲಭವಾಗಿರತಕ್ಕ ಈ ಕಂಪನಿಯ ರೂಲ್ಸ್‌ಪುಸ್ತಕಗಳನ್ನೂ ಮತ್ತು ಸರ್ಟಿಫಿಕೇಟುಗಳನ್ನೂ ಈ ಕೆಳಗಿನ ವಿಳಾಸಕ್ಕೆ ಎಷ್ಟು ತರಿಸಿಕೊಳ್ಳಬಹುದು.

ಎಸ್. ಕಬ್ಬಾಳ್, ಎಫ್ ಎಸ್. ಎಸ್, ಸೆಕ್ರೆಟರಿ,

ಮುಖ್ಯಾಲಯ: ನಂ ೨೦೦ ಎಂಟ್ರೆನ್ಸ್ ಮೈಸೂರು ಸಿಟಿ.

---

೧೫೦ ಪೈಟಗಳ ಪುಸ್ತಕವು

(ಉಚಿತವು)

ಆರೋಗ್ಯವನ್ನೂ, ಶಾಶ್ವತಸುಖವನ್ನೂ, ಹೊಂದುವುದು ಸ್ವಾಭಾವಿಕವಾದ ಕೆಲವು ವಿಧಿಗಳನ್ನು ಅನುಸರಿಸುವುದರಿಂದಲೇ ಉಂಟಾಗುವುದು. ಈ ಉತ್ತಮವಾದ ಪುಸ್ತಕವು ಆರೋಗ್ಯಮಾರ್ಗವನ್ನುಂಟುಮಾಡಿಸಿ ಕರೀರ ಸೌಂದರ್ಯವನ್ನೂ, ದೃಢಗಾತ್ರವನ್ನೂ, ಆಯುರ್ವೃದ್ಧಿಯನ್ನೂ ಕೊಡುವುದು. ಈ ಪುಸ್ತಕವು ಜನೋಪಕಾರವಾಗಿ ಕಳುಹಿಸಲ್ಪಡುತ್ತೆ. ಇದಕ್ಕೆ ಅಂಚೆಪಾಸಲು ಕೂಡಾ ತಾವು ಕೊಡಬೇಕಾಗಿಲ್ಲ. ಬೇಕಾದವರು ಶೀಘ್ರವಾಗಿಯೆ ನಮಗೆ ಬರೆದುಕೊಳ್ಳಿರಿ.

ವೈದ್ಯಕಾಸ್ತ್ರೀ ಮಣಿಕಂಕರ ಗೋವಿಂದಜಿ,

ಆತಂಕನಿಗ್ರಹ ಔಷಧಾಲಯ, ಎಂ, ಬ್ರಾಡ್ವೇ, ಮದರಾಸು.

ನಮ್ಮ ಏಜಂಟರು:—

ಮೆಸ್ಸರ್ಸ್. ರಘಯಲ್, ಎಂಡ್ ಕೊ., ಮಂಗಳೂರು

ಜುಬೆಲಿ ಕಾಫಿ ಔಟ್ ಡಿಪೋ, ಬೆಂಗಳೂರು.

ವಿದ್ಯಾಭಿವೃದ್ಧಿ

'ಸದ್ಬೋಧಕ ಗ್ರಂಥಮಾಲೆ', ಸಂಖ್ಯೆ ೫೫.

॥ ಶ್ರೀಃ ॥

ವಿದ್ಯಾಭಿವೃದ್ಧಿ
ವಿದ್ಯಾವೃದ್ಧಿ
ಅಥವಾ
ಮಕ್ಕಳ ವಿದ್ಯಾಭ್ಯಾಸದಲ್ಲಿ
ಹೆತ್ತವರ ಮತ್ತು ಉಪಾಧ್ಯಾಯರ
ಕರ್ತವ್ಯಗಳು.

ಗ್ರಂಥಕರ್ತರ:
ಎಸ್. ಸುಬ್ಬರಾವ್.

ಪ್ರಕಾಶಕ:
ಎಸ್. ರಂಗಪ್ಪಯ್ಯ.,
'ಸದ್ಬೋಧಕ ಗ್ರಂಥಮಾಲಾ' ಕಾರ್ಯಾಲಯ,
ಸುರತಕಲ್, ದ. ಕನ್ನಡ.

ಬಂಟ್ವಾಳ
ವಿಕ್ಟೋರಿಯಾ ಮುದ್ರಾಶಾಲೆಯಲ್ಲಿ
ಬಿ. ಕೃಷ್ಣ ಪ್ರಭುಗಳಿಂದ ಮುದ್ರಿತವಾದುದು.
1919

ಕ್ರಯ: ೨॥ ಆಣೆ.] RIGHTS RESERVED [Price: 2½ As.

ಕೃತಜ್ಞತಾ ಪೂರ್ವಕ ಸ್ವೀಕಾರ ಮತ್ತು ಸ್ವಾಭಿಪ್ರಾಯ ನಿವೇದನಂ.

೧. ಕರ್ನಾಟಶಿಕ್ಷಕ,— ವಿಜಾಪುರ ಜಿಲ್ಲೆಯ ಬಾಗಲ ಕೋಟದ 'ಕನ್ನಡ ಶಾಲಾಧ್ಯಾಪಕರಾದ ಮ|| ಜೆ ಏ ಬಳವಂತರಾವ್ ಎಂಬ ದೇಶಾಭಿಮಾನಿಗಳು ತಮ್ಮಿಂದ ಪ್ರಕಾಶಿತವಾಗುವ ಈ ಪುಸ್ತಕ ಮಾಲೆಯೊಳಗಿನ ಅಮೂಲ್ಯ ಪುಷ್ಪಗಳನ್ನೆಲ್ಲಾ ನಮಗೆ ಕಳುಹಿರುವರು. ಇದರಲ್ಲಿ 'ಶಿಕ್ಷಕರ ಸಮ್ಮೇಲನ'ಗಳಲ್ಲಿ ಕಲಿಸಲ್ಪಟ್ಟ ಅನುಭವಶಾಲಿಗಳಾದ ಬೋಧಕರ ಮಾದರಿಪಾಠಗಳೂ, ಉಪಯುಕ್ತವಾದ ಪ್ರಬಂಧೋಪನ್ಯಾಸಗಳೂ, ಮನೋಹರವಾದ ನೀತಿಕಥೆಗಳೂ, ದೇಶೋದ್ಧಾರಕರ ಪುಣ್ಯಪ್ರದಚರಿತ್ರೆಗಳೂ ಕ್ರಮವಾಗಿ ಪ್ರಕಟವಾಗುತ್ತಲಿವೆ ನಮ್ಮಿ ಕನ್ನಡ ಪ್ರಾಂತ್ಯದಲ್ಲಿ 'ಕನ್ನಡ ಶಾಲೋಪಾಧ್ಯಾಯರ ಸಂಘ'ಗಳಲ್ಲಾಗುವ ಉತ್ತಮ ವಿಷ ನು ಪ್ರಕಟಗೊಳಿಸಿ, ಆ ಸಂಘಗಳ ಏಳ್ಗೆಗೆ ಅವಶ್ಯಕವಿರುವ ಯೋಗ್ಯ ಮಾರ್ಗಗಳನ್ನು ಕಂಡುಕೊಂಡು ಸೂಚಿಸಿ, ತನ್ಮೂಲಕ ವಿದ್ಯಾಭಿವೃದ್ಧಿಯನ್ನುಂಟು ಮಾಡುವ ಪತ್ರಿಕೆ ಎಂದರೆ ಇದೊಂದೇ ಎಂದು ತೋರುವುದು. ಇದು ಪ್ರಥಮ ವರುಷದಲ್ಲಿ ತ್ರೈಮಾಸಿಕ ಪುಸ್ತಕವಾಗಿ ಹೊರಡುತಲಿದ್ದು, ಈಗಲೀಗ ದ್ವೈಮಾಸಿಕವಾಗಿ ಪ್ರಕಟೀಕೃತವಾಗುತ್ತಲಿರುವುದು. ಇದೇ ಗಣೇಶನ ಹಬ್ಬದಿಂದ ಇದನ್ನೆ 'ಕರ್ನಾಟಕ ಶಿಕ್ಷಣ' ಎಂಬ ಹೆಸರಿಂದ ಮಾಸಪತ್ರಿಕೆಯಾಗಿ ಪ್ರಕಟಿಸಲಿಕ್ಕಿರುವ ಪ್ರಕಾಶಕರ ಪರಮೋದ್ದೇಶವು ಶ್ಲಾಘನೀಯವೇ ಸರಿ. ವಾರ್ಷಿಕ ಚಂದಾ ಅಂಚೆವೆಚ್ಚ ದೊಡನೆ ರೂ. 2—0—0 ಮಾತ್ರ. ಇದನ್ನು ಪ್ರತಿಯೊಬ್ಬ ಉಪಾಧ್ಯಾಯನೂ, ಭಾಷಾಭಿಮಾನಿಗಳೂ ತರಿಸಿಕೊಂಡು ಪ್ರಯೋಜನ ಹೊಂದುವುದರ ಮೂಲಕ ಮಾನ್ಯ ಪ್ರಕಾಶಕರ ಸದುದ್ದೇಶವನ್ನು ಸಿದ್ಧಿಗೊಳಿಸಬೇಕೆಂದು ನಾವು ಆಸ್ಥಾಪೂರ್ವಕವಾಗಿ ಹೇಳುವೆವು. ಈ ಪತ್ರಿಕೆಯ ಸಂಚಿಕೆಗಳನ್ನು ಸರತಿ ಪ್ರಕಾರ ನಮಗೆ ಕಳುಹುತ್ತಲಿರುವ ನಮ್ಮ ಆ ಸನ್ಮಾನ್ಯ ಭ್ರಾತೃವರ್ಯರಿಗೆ ನಾವು ತುಂಬಾ ಕೃತಜ್ಞರಾಗಿರುವೆವು.

ವಿಳಾಸ:—

ಶ್ರೀ. ಜೇ. ಏ. ಬಳವಂತರಾವ್, ಪ್ರಕಾಶಕ,
"ಕರ್ನಾಟಕ ಶಿಕ್ಷಣ," ಬಾಗಲಕೋಟ,
(ಜಿ. ವಿಜಾಪುರ.)

ವಾಚಕ ಮಹಾಶಯರಲ್ಲಿ:—

ಸವಿನಯ ವಿನಂತಿ!

ಮಹಾಶಯರೇ,

ಶ್ರೀ ಭಗವದನುಗ್ರಹದಿಂದಲೂ, ತಮ್ಮುಗಳ ಪ್ರೋತ್ಸಾಹ ಬಲದಿಂದಲೂ ನಮ್ಮ "ಸದ್ಬೋಧಕ ಗ್ರಂಥಮಾಲಾ"ಲತೆಯಲ್ಲಿ ಇಂದಿಗೆ ಪಂಚಮ ಪುಷ್ಪವು ಅರಳಿ ಪಾಠಕ ಮಹಾಶಯರನ್ನು ಆನಂದಗೊಳಿಸಿದುದಕ್ಕಾಗಿ ನಮಗೆ ತುಂಬಾ ಸಂತೋಷವಾಗಿದೆ. ಈ ಸಂತೋಷದಭರದಲ್ಲಿ ಇದೇ ಬರುವ [illegible] ಸುಮುಹೂರ್ತದಿಂದ

"ಸದ್ಬೋಧಕ ಗ್ರಂಥಮಾಲೆ"

ಯನ್ನು ತ್ರೈಮಾಸಿಕ ಪುಸ್ತಕವಾಗಿ ಹೊರಹೊರಡಿಸಬೇಕೆಂದು ಸಂಕಲ್ಪಿಸಿರುವೆವು. ಪ್ರತಿ ಮೂರು ತಿಂಗಳಿಗೊಮ್ಮೆ ಕ್ರೌನ್ ಸ್ಯಾಜ್ ಡೆಮ್ಮಿ ಅಷ್ಟ ಪತ್ರದ 24 ಪುಟಗಳಿಗೆ ಮಿಕ್ಕಿರುವ ಪುಸ್ತಕದಲ್ಲಿ ಕನ್ನಡ ಕಥಾ, ಕಾದಂಬರೀ, ನಾಟಕ, ಕಾವ್ಯ, ಪ್ರಬಂಧವೇ ಮೊದಲಾದ ಗ್ರಂಥಗಳಲ್ಲಿ ಯಾವುದಾದರೊಂದು ಪೂರ್ಣ ಗ್ರಂಥವೂ, ಉಲ್ಲೇಖನ, ವಿನೋದಲಹರಿ, ಸ್ಥಳೀಯ ವಾರ್ತೆ, ಸ್ವೀಕಾರ ಮತ್ತು ವಿಮರ್ಶೆ ಇತ್ಯಾದಿ ಲೇಖನಗಳು ಪ್ರಕಟವಾಗುವುವು. ಸಮಸ್ತ ಕನ್ನಡಿಗರಿಗೂ ಸಂಗ್ರಹಿಸಿ ಕೊಳ್ಳಲು ತಕ್ಕುದಾಗಿರಬೇಕೆಂದೇ ವಾರ್ಷಿಕ ಚಂದಾ: ಅಂಚೆ ವೆಚ್ಚದೊಡನೆ ಒಂದೇ ರೂಪಾಯಿ ಇಟ್ಟಿರುವೆವು. ಐನೂರು

(500)ಮಂದಿಗಿಂತ ಮಿಕ್ಕಿದ ಗ್ರಾಹಕರ ಪ್ರೋತ್ಸಾಹವು ದೊರೆತೊಡನೆಯೇ ಇದನ್ನೇ ಸುಂದರ ಮಾಸಪತ್ರಿಕೆಯನ್ನಾಗಿ ಹೊರಡಿಸಬೇಕೆಂಬ ಯೋಚನೆ ಇದೆ. ನಮ್ಮಾಯೋಚನೆಯು ಜಾಗ್ರತೆ ಫಲಕಾರಿಯಾಗುವಂತೆಯೂ ಮತ್ತು ಇದೇ ~~ಕುಕಾ ಜವವಲಿಯಲ್ಲಿ ಗರಹಮುಖಲ್ಲಿ~~ ಹೊರಡಲಿಕ್ಕಿರುವೀ ತ್ರೈಮಾಸಿಕ ಪುಸ್ತಕಕ್ಕೆ ಈಗಲೇ ತಮ್ಮ ಹೆಸರನ್ನು ತಿಳಿಸಿ, ವರ್ಗಣಿದಾರರಾಗಿ ಸೇರುವುದರ ಮೂಲಕವೂ ಭಾಷಾಪೋಷಕರಾದ ಕನ್ನಡಿಗರೆಲ್ಲರೂ ಪ್ರೋತ್ಸಾಹಿಸಬೇಕಾಗಿ ಸಂಪ್ರಾರ್ಥನೆ.

ಎಸ್. ರಂಗಸ್ವಯ್ಯ.,
ಸಂಪಾದಕ ಮತ್ತು ಪ್ರಕಾಶಕ, "ಸದ್ಬೋಧಕ ಗ್ರಂಥಮಾಲೆ"
ಸುರತಕಲ್, ದ. ಕನ್ನಡ.

ವಿನಯ

ಕಂದ ॥ ವಿನಯವೆ ಮನುಜಗೆ ಭೂಷಣ ।
ವಿನಯವೆ ಸರ್ವಜನ ವಶೀಕರಣವು, ಮತ್ತಾ ॥
ವಿನಯವೆ ಗೌರವದಾಯಕ ।
ವಿನಯವೆ ವಿಬುಧ ಸುಜನ ಸನ್ಮಾನಿತ ವಲ್ತೆ ॥ ೧ ॥
ಸದ್ವಿದ್ಯೆಯ ಗಳಿಸಿದವಂ ।
ಸದ್ವಿನಯಾಭರಣಯುಕ್ತನಾಗಿಯೆ ಸುಮಹಾ ॥
ಉದ್ಧಾಮರು ಮೆಚ್ಚುಗೆ ತಾ ।
ನುದ್ಧಾಮತೆಯಿಂದ ನೆರೆದು ಸುಖಿಸುವನನಿಶಂ ॥ ೨ ॥
ವಿನಯವನುಳಿದಾ ವಿದ್ಯೆಯ ।
ನನಘರೆ ವಿದ್ಯೆಯದೆಂದು ಪೇಳರು ಸುಜನರ್ ॥
ವಿನಯವ ಕೊಡುವುದು ವಿದ್ಯೆಯ ।
ಗುಣವದು ಕಾರಣವಿಂ ಗಳಿಸಾ ನಮ್ರತೆಯಂ ॥ ೩ ॥

"ಸದ್ಬೋಧಕ ಗ್ರಂಥಮಾಲೆ", ಸಂಖ್ಯೆ ೫೫.

॥ ಶ್ರೀಃ ॥

ವಿದ್ಯಾಭಿವೃದ್ಧಿ.

ಅಥವಾ

ಮಕ್ಕಳ ವಿದ್ಯಾಭ್ಯಾಸದಲ್ಲಿ ತಂ
ಹೆತ್ತವರ ಮತ್ತು ಉಪಾಧ್ಯಾಯರ ಕರ್ತವ್ಯಗಳು.

ಎಸ್. ಸುಬ್ಬರಾವ್

ಪ್ರಕಾಶಕ:—

ಎಸ್. ರಂಗಪ್ಪಯ್ಯ.,

"ಸದ್ಬೋಧಕ ಗ್ರಂಥಮಾಲಾ" ಕಾರ್ಯಾಲಯ,

ಸುರತಕಲ್, ದ. ಕನ್ನಡ.

(ಇದರ ಸರ್ವ ಸ್ವಾತಂತ್ರ್ಯವೂ ಪ್ರಕಾಶಕನದಾಗಿರುವುದು.)

1919.

ಬಂಟ್ವಾಳ

ವಿಕ್ಟೋರಿಯಾ ಮುದ್ರಾಶಾಲೆಯಲ್ಲಿ ಬಿ. ಕೃಷ್ಣ ಪ್ರಭುಗಳಿಂದ

ಮುದ್ರಿತವಾದುದು.

ಪ್ರಥಮ ಮುದ್ರಣ, ಸಾವಿರ ಪ್ರತಿಗಳು

ಬೆಲೆ: ೫ಣೆ

ವಿಜ್ಞಾಪನೆ.

ಪ್ರಿಯ ವಾಚಕರೇ!

ಇದೊಂದು ಸಾಮಾಜಿಕ ಸ್ವತಂತ್ರ ಲೇಖನ. ಇದು ತಾ. 12-10-1918ನೇ ಶನಿವಾರ ದಿನ ಸುರತಕಲ್ ''ಹಿಂದೂ ವಿದ್ಯಾದಾಯಿನೀ'' ಶಾಲೆಯಲ್ಲಿ ಮಾ। ರಾ। ರಾ। ಶ್ರೀಯುತ ವಕೀಲ ಇಡ್ಯ ಕೃಷ್ಣಯ್ಯನವರ ಅಧ್ಯಕ್ಷತೆಯಲ್ಲಿ ನೆರೆದ ಇಲ್ಲಿಯ 'ಉಪಾಧ್ಯಾಯರ ಸಂಘ'ದ ತೃತೀಯ ಸಭೆಯಲ್ಲಿ ಮಾಡಿದ ಉಪನ್ಯಾಸವಾಗಿದೆ. ಆ ಸಭೆಯಲ್ಲಿ ಮಾನ್ಯರಾದ ಅಧ್ಯಕ್ಷರು ತಮ್ಮ ಬೋಧಪ್ರದವಾದ ಭಾಷಣದಲ್ಲಿ ಇದನ್ನು ಕುರಿತು, ''ಮುಖ್ಯವಾಗಿ ಇಂದಿನ ಈ ಉಪನ್ಯಾಸವು ಶಾಸ್ತ್ರೀಯವೂ ಮನೋರಂಜಕವೂ ಆಗಿರುವದಲ್ಲದೆ, ಸರ್ವರೂ ಅಗತ್ಯ ಲಕ್ಷದಲ್ಲಿಟ್ಟುಕೊಳ್ಳಬೇಕಾದ ಶ್ರೇಷ್ಠ ಸಂಗತಿಗಳಿಂದ ಯುಕ್ತವಾಗಿದೆ. ಇದನ್ನು ಬಹುಬೇಗನೆ ಅಚ್ಚು ಹಾಕಿಸಿ ಸಮಸ್ತ ಹೆತ್ತವರೂ, ಉಪಾಧ್ಯಾಯರೂ ಇದರ ಪ್ರಯೋಜನವನ್ನು ಹೊಂದುವಂತೆ ಮಾಡುವುದು ಅಗತ್ಯ'' ಎಂಬುದಾಗಿ ಅಪ್ಪಣೆ ಕೊಡಿಸಿದರು. ಒಡನೆಯೇ ಸಭಿಕರೆಲ್ಲರ ಉತ್ಸಾಹ ಭರಿತವಾದ ಕರತಾಡನೆ ಶಬ್ದವು ''ಇದು ಬಹು ಉಪಯುಕ್ತವಾದ ಸೂಚನೆ; ಹಾಗೆಯೇ ವರ್ತಿಸುವುದು ಲೇಸು,'' ಎಂಬ ಅಭಿಪ್ರಾಯವನ್ನು ಸೂಚಿಸಿತು. ಇದರಿಂದ ಈ ಉಪನ್ಯಾಸವು ಸರ್ವಾದರಣೀಯವಾಗಬಹುದೆಂದು ನಮಗೆ ನಂಬುಗೆ ಹುಟ್ಟಿ, ಇದನ್ನು ನಮ್ಮ ''ಸದ್ಬೋಧಕ ಗ್ರಂಥಮಾಲೆ''ಯಲ್ಲಿ ಅನುವು ದೊರೆತಾಗ ಪ್ರಕಾಶಪಡಿಸಬೇಕೆಂದು ಆಗಲೇ ಮನಸ್ಸಿನಲ್ಲಿ ಯೋಚಿಸಿದೆವು.

ತರುವಾಯ ತಾ. 14ನೇ ದಿನ ಅದೇ ಶಾಲೆಯಲ್ಲಿ ಜರುಗಿದ 'ಮಹಾನವಮಿ'ಯ ಮಹಾಸಭೆಯಲ್ಲಿ ಆ ಶಾಲೆಯ ಮೇನೇಜರರಾದ ಏತನ್ಮಹನೀಯರೇ ಆದರದಿಂದ ತಿರಿಗೊಮ್ಮೆ ಅದನ್ನು ಓದಿಸಿ, ಆಗಲೂ 'ಈ ಉಪನ್ಯಾಸವನ್ನು ಬೇಗನೆ ಸ್ವತಂತ್ರವಾದೊಂದು ಬೇರೆ ಪುಸ್ತಕವಾಗಿಯೇ ಪ್ರಕಟಿಸಬೇಕೆಂದೂ, ಇದರ ಪ್ರತಿಗಳು ಖರ್ಚಾಗಲು ಕೈಲಾದಷ್ಟು ಸಹಾಯವನ್ನು ಮಾಡಲು ಸಿದ್ಧನಿರುತ್ತೇನೆಂದೂ' ದಯಾಭಾವದಿಂದ ಅನುಜ್ಞೆ ಕೊಡಿಸಿದರು. ಮಾತ್ರವಲ್ಲದೆ, ಅಂದಿನ ಸಭೆಗೆ ಚಿತ್ತೈಸಿದ ಮೂಲ್ಕಿ ಸಬ್‌ರಿಜಿಸ್ಟ್ರಿ ಆಫೀಸಿನ ಹೆಡ್‌ಕ್ಲಾರ್ಕರಾದ ಶ್ರೀಯುತ ಇಡ್ಯ ಶೇಷಪ್ಪಯ್ಯನವರು, ಇದು ಮುದ್ರಣವಾದ ಕೂಡಲೇ ನಾನು ೫೦ ಪ್ರತಿಗಳನ್ನು ಕೊಂಡುಕೊಳ್ಳುವೆನೆಂದು ಮತ್ತಷ್ಟು ಪ್ರೋತ್ಸಾಹಿಸಿದರು. ಈ ಮಹನೀಯರಿಬ್ಬರ ಅವರ್ಣನೀಯವಾದ ಆದರ ಪ್ರೋತ್ಸಾಹಗಳಿಂದ ಇದು ಈಗ ತಾನೇ ನಮ್ಮ ಗ್ರಂಥಮಾಲೆಯ ೫ನೇ ಕುಸುಮವಾಗಿ ಪ್ರಕಟೀಕೃತವಾದುದು.

ನಮ್ಮ ಗ್ರಂಥಮಾಲೆಯ ೫ನೇ ಗ್ರಂಥವಾಗಿ "ವಿದ್ಯಾರ್ಥಿ ಕೈಗನ್ನಡಿ" ಎಂಬೊಂದು ಉತ್ತಮ ಪ್ರಬಂಧವನ್ನು ವಿದ್ಯಾರ್ಥಿಗಳಿಗೋಸುಗ ರಚಿಸಿ, ಪ್ರಕಟಿಸುವೆವೆಂದು ಹಿಂದಿನ ಗ್ರಂಥದಲ್ಲಿ ಸೂಚಿಸೋಣಾಗಿದೆಯಷ್ಟೆ? ಪರಂತು, ಅದಕ್ಕೆ ಈ ವರೆಗೂ ನಮ್ಮ ವಿದ್ಯಾರ್ಥಿವರ್ಗದ ಸಾಕಾದಷ್ಟು ಪ್ರೋತ್ಸಾಹವು ದೊರೆಯದೆ, ಅದರ ಪ್ರಕಟನಾಕಾರ್ಯವನ್ನು ಮುಂದರಿಸಬೇಕಾಗಿ ಬಂದುದಕ್ಕೆ ತುಂಬಾ ವಿಷಾದಿಸುವೆವು. ಆದರೂ ಆ ಸ್ಥಳವನ್ನು ಈ ಚಿಕ್ಕ ಪುಸ್ತಕಕ್ಕೆ ವದಗಿಸಿಕೊಟ್ಟ ಮೇಲೆ ಕಾಣಿಸಿದ ಪೂಜ್ಯರಾದ ಮಹನೀಯರ ಸತ್ಕಾರ್ಯೋತ್ತೇಜಕ ಸೌಜನ್ಯಭಾವಗಳಿಗೆ ಕೃತಜ್ಞತಾ ಪೂರ್ವಕದ ವಂದನೆಗಳು.

"ವಿದ್ಯಾರ್ಥಿ ಕೈಗನ್ನಡಿ"ಯನ್ನು ಬರುವ ಅಕ್ಟೋಬರೆದಲ್ಲಿ ಹೊರಹೊರಡಿಸಬೇಕೆಂಬ ಯೋಚನೆ ಇದೆ. ನಮ್ಮೀ ಯೋಚನೆಯನ್ನು

ವಿಜ್ಞಾಪನೆ.

ಪ್ರಿಯ ವಾಚಕರೇ!

ಇದೊಂದು ಸಾಮಾಜಿಕ ಸ್ವತಂತ್ರ ಲೇಖನ. ಇದು ತಾ. 12-10-1918ನೇ ಶನಿವಾರ ದಿನ ಸುರತಕಲ್ ''ಹಿಂದೂ ವಿದ್ಯಾದಾಯಿನೀ'' ಶಾಲೆಯಲ್ಲಿ ಮಾ। ರಾ। ರಾ। ಶ್ರೀಯುತ ವಕೀಲ ಇಡ್ಯ ಕೃಷ್ಣಯ್ಯನವರ ಅಧ್ಯಕ್ಷತೆಯಲ್ಲಿ ನೆರೆದ ಇಲ್ಲಿಯ 'ಉಪಾಧ್ಯಾಯರ ಸಂಘ'ದ ತೃತೀಯ ಸಭೆಯಲ್ಲಿ ಮಾಡಿದ ಉಪನ್ಯಾಸವಾಗಿದೆ. ಆ ಸಭೆಯಲ್ಲಿ ಮಾನ್ಯರಾದ ಅಧ್ಯಕ್ಷರು ತಮ್ಮ ಬೋಧಪ್ರದವಾದ ಭಾಷಣದಲ್ಲಿ ಇದನ್ನು ಕುರಿತು, ''ಮುಖ್ಯವಾಗಿ ಇಂದಿನ ಈ ಉಪನ್ಯಾಸವು ಶಾಸ್ತ್ರೀಯವೂ, ಮನೋರಂಜಕವೂ ಆಗಿರುವದಲ್ಲದೆ, ಸರ್ವರೂ ಅಗತ್ಯ ಲಕ್ಷದಲ್ಲಿಟ್ಟುಕೊಳ್ಳಬೇಕಾದ ಶ್ರೇಷ್ಠ ಸಂಗತಿಗಳಿಂದ ಯುಕ್ತವಾಗಿದೆ. ಇದನ್ನು ಬಹುಬೇಗನೆ ಅಚ್ಚು ಹಾಕಿಸಿ ಸಮಸ್ತ ಹೆತ್ತವರೂ, ಉಪಾಧ್ಯಾಯರೂ ಇದರ ಪ್ರಯೋಜನವನ್ನು ಹೊಂದುವಂತೆ ಮಾಡುವುದು ಅಗತ್ಯ'' ಎಂಬುದಾಗಿ ಅಪ್ಪಣೆ ಕೊಡಿಸಿದರು. ಒಡನೆಯೇ ಸಭಿಕರೆಲ್ಲರ ಉತ್ಸಾಹ ಭರಿತವಾದ ಕರತಾಡನ ಶಬ್ದವು ''ಇದು ಬಹು ಉಪಯುಕ್ತವಾದ ಸೂಚನೆ; ಹಾಗೆಯೇ ವರ್ತಿಸುವುದು ಲೇಸು,'' ಎಂಬ ಅಭಿಪ್ರಾಯವನ್ನು ಸೂಚಿಸಿತು. ಇದರಿಂದ ಈ ಉಪನ್ಯಾಸವು ಸರ್ವಾದರಣೀಯವಾಗಬಹುದೆಂದು ನಮಗೆ ನಂಬುಗೆ ಹುಟ್ಟಿ, ಇದನ್ನು ನಮ್ಮ ''ಸದ್ಬೋಧಕ ಗ್ರಂಥಮಾಲೆ''ಯಲ್ಲಿ ಅನುವು ದೊರೆತಾಗ ಪ್ರಕಾಶಪಡಿಸಬೇಕೆಂದು ಆಗಲೇ ಮನಸ್ಸಿನಲ್ಲಿ ಯೋಚಿಸಿದೆವು.

ತರುವಾಯ ತಾ. 14ನೇ ದಿನ ಅದೇ ಶಾಲೆಯಲ್ಲಿ ಜರುಗಿದ 'ಮಹಾನವಮಿ'ಯ ಮಹಾಸಭೆಯಲ್ಲಿ ಆ ಶಾಲೆಯ ಮೇನೇಜರರಾದ ಏತನ್ಮಹನೀಯರೇ ಆದರದಿಂದ ತಿರಿಗೊಮ್ಮೆ ಅದನ್ನು ಓದಿಸಿ, ಆಗಲೂ 'ಈ ಉಪನ್ಯಾಸವನ್ನು ಬೇಗನೆ ಸ್ವತಂತ್ರವಾದೊಂದು ಬೇರೆ ಪುಸ್ತಕವಾಗಿಯೇ ಪ್ರಕಟಿಸಬೇಕೆಂದೂ, ಇದರ ಪ್ರತಿಗಳು ಖರ್ಚಾಗಲು ಕೈಲಾದಷ್ಟು ಸಹಾಯವನ್ನು ಮಾಡಲು ಸಿದ್ಧನಿರುತ್ತೇನೆಂದೂ' ದಯಾಭಾವದಿಂದ ಅನುಜ್ಞೆ ಕೊಡಿಸಿದರು. ಮಾತ್ರವಲ್ಲದೆ, ಅಂದಿನ ಸಭೆಗೆ ಚಿತ್ತೈಸಿದ ಮೂಲ್ಕಿ ಸಬ್‌ರಿಜಿಸ್ಟ್ರಿ ಆಫೀಸಿನ ಹೆಡ್‌ಕ್ಲಾರ್ಕರಾದ ಶ್ರೀಯುತ ಇಡ್ಯ ಶೇಷಪ್ಪಯ್ಯನವರು, ಇದು ಮುದ್ರಣವಾದ ಕೂಡಲೇ ನಾನು ೫೦ ಪ್ರತಿಗಳನ್ನು ಕೊಂಡುಕೊಳ್ಳುವೆನೆಂದು ಮತ್ತಷ್ಟು ಪ್ರೋತ್ಸಾಹಿಸಿದರು. ಈ ಮಹನೀಯರಿಬ್ಬರ ಅವರ್ಣನೀಯವಾದ ಆದರ ಪ್ರೋತ್ಸಾಹಗಳಿಂದ ಇದು ಈಗ ತಾನೇ ನಮ್ಮ ಗ್ರಂಥಮಾಲೆಯ ೫ನೇ ಕುಸುಮವಾಗಿ ಪ್ರಕಟೀಕೃತವಾದುದು.

ನಮ್ಮ ಗ್ರಂಥಮಾಲೆಯ ೫ನೇ ಗ್ರಂಥವಾಗಿ "ವಿದ್ಯಾರ್ಥಿ ಕೈಗನ್ನಡಿ" ಎಂಬೊಂದು ಉತ್ತಮ ಪ್ರಬಂಧನನ್ನು ವಿದ್ಯಾರ್ಥಿಗಳಿಗೋಸುಗ ರಚಿಸಿ, ಪ್ರಕಟಿಸುವೆವೆಂದು ಹಿಂದಿನ ಗ್ರಂಥದಲ್ಲಿ ಸೂಚಿಸೋಣಾಗಿದೆಯಷ್ಟೆ? ಪರಂತು, ಅದಕ್ಕೆ ಈ ವರೆಗೂ ನಮ್ಮ ವಿದ್ಯಾರ್ಥಿವರ್ಗದ ಸಾಕಾದಷ್ಟು ಪ್ರೋತ್ಸಾಹವು ದೊರೆಯದೆ, ಅದರ ಪ್ರಕಟನಾಕಾರ್ಯವನ್ನು ಮುಂದರಿಸಬೇಕಾಗಿ ಬಂದುದಕ್ಕೆ ತುಂಬಾ ವಿಷಾದಿಸುವೆವು. ಆದರೂ ಆ ಸ್ಥಳವನ್ನು ಈ ಚಿಕ್ಕ ಪುಸ್ತಕಕ್ಕೆ ವದಗಿಸಿಕೊಟ್ಟ ಮೇಲೆ ತೋರಿಸಿದ ಪೂಜ್ಯರಾದ ಮಹನೀಯರ ಸತ್ಕಾರ್ಯೋತ್ತೇಜಕ ಸೌಜನ್ಯಭಾವಗಳಿಗೆ ಕೃತಜ್ಞತಾ ಪೂರ್ವಕದ ವಂದನೆಗಳು.

"ವಿದ್ಯಾರ್ಥಿ ಕೈಗನ್ನಡಿ"ಯನ್ನು ಬರುವ ಅಕ್ಟೋಬರದಲ್ಲಿ ಹೊರಹೊರಡಿಸಬೇಕೆಂಬ ಯೋಚನೆ ಇದೆ. ನಮ್ಮ ಯೋಚನೆಯನ್ನು

ಕಾರ್ಯಕಾರಿಯನ್ನಾಗಿ ಮಾಡುವ ಭಾರವು ವಾಚಕರ ಪಾಲಿಗೇ ಸೇರಿರುವುದೆಂಬುದು ನಾವು ಪ್ರತ್ಯೇಕ ಹೇಳಬೇಕೆಂದಿಲ್ಲ. ಈ ಗ್ರಂಥವು ನಮ್ಮ ಗ್ರಂಥಮಾಲೆಯಲ್ಲಿ ಇದುವರೆಗಾದ ಪುಸ್ತಕಗಳಿಗಿಂತ ದೊಡ್ಡದು. ವಿದ್ಯಾರ್ಥಿಗಳ ವಿದ್ಯಾಭಿವೃದ್ಧಿಗೆ ಸಾಧಕವಾದ ಈ ಪುಸ್ತಕವನ್ನು ಪ್ರತಿಯೊಬ್ಬ ಹೆತ್ತವರು ಸಂಗ್ರಹಿಸಿ, ತಮ್ಮ ಮಕ್ಕಳಿಗೂ, ಬೋಧಕರು ತಮ್ಮ ಶಿಷ್ಯರಿಗೂ ವದಗಿಸಿಕೊಡುವುದು ಅತೀವ ಅಗತ್ಯವೆಂದು ನಾವು ನಿಸ್ಸಂಶಯವಾಗಿ ಹೇಳುವೆವು. ಈ ಗ್ರಂಥ ಪ್ರಕಟಣೆಗೆ ಕಳಿಕೆಯಿಂದ ಮೇಲೆ ಎಷ್ಟನ್ನಾದರೂ ಸಹಾಯವಾಗಿ ಕೊಡುವ ಸುಹೃದರ ಹೆಸರನ್ನು ಈ ಗ್ರಂಥದಲ್ಲೇ ಪ್ರಕಟಿಸುವುದರ ಮೂಲಕ ಆ ನಮ್ಮ ಸನ್ಮಾನ್ಯ ಭ್ರಾತೃಗಳ ಉಪಕಾರ ಸ್ಮರಣೆಯನ್ನು ಮಾಡುವೆವು. ಮಾತ್ರವಲ್ಲದೆ, ಅವರಿಗೆ ಆ ಗ್ರಂಥದ ಒಂದು ಪ್ರತಿಯನ್ನೂ ಉಚಿತವಾಗಿ ಕೊಡುವೆವು.

ಅದುಕಾರಣ ಭಾಷಾಭಿಮಾನಿಗಳಾದ ಸಮಸ್ತ ಆಸ್ತಿಕ ಮಹನೀಯರು ಯಥಾಯೋಗ್ಯ ಸಹಾಯದಿಂದ ನಮ್ಮನ್ನು ಗ್ರಂಥಲೇಖನ, ಪ್ರಕಟನಾಕಾರ್ಯದಲ್ಲಿ ಮತ್ತಷ್ಟು ಉತ್ತೇಜನಗೊಳಿಸುವಿರಾಗಿ ಸಂಪೂರ್ಣ ನಂಬಿರುವ,

"ಸದ್ಬೋಧಕ ಗ್ರಂಥಮಾಲಾ,"
ಸುರತಕಲ್. ದ. ಕನ್ನಡ.
ತಾ. 24-6-1919.

ಕನ್ನಡಿಗರ ಸೇವಕ.
ಎಸ್ ರಂಗಪ್ಪಯ್ಯ.
ಪ್ರಕಾಶಕ

ವಿದ್ಯಾಭಿವೃದ್ಧಿ

ಅಥವಾ

ಮಕ್ಕಳ ವಿದ್ಯಾಭ್ಯಾಸದಲ್ಲಿ

ಹೆತ್ತವರ ಮತ್ತು ಉಪಾಧ್ಯಾಯರ ಕರ್ತವ್ಯಗಳು.

(ತಾ. 12-10-1918ನೇ ದಿನ "ಹಿಂದೂ ವಿದ್ಯಾದಾಯಿನಿ ಶಾಲೆ"ಯಲ್ಲಿ, ಮು| ರಾ| ವಕೀಲ ಇಡ್ಯ ಕೃಷ್ಣಯ್ಯನವರ ಅಧ್ಯಕ್ಷತೆಯಲ್ಲಿ ಜರಗಿದ ಸುರತಕಲ್ ಉಪಾಧ್ಯಾಯರ ಸಂಘದ ಸಭೆಯಲ್ಲಿ ಓದಲ್ಪಟ್ಟುದು)

ಪೂಜ್ಯರಾದ ಸಭಾಧ್ಯಕ್ಷರೇ! ಮತ್ತು ಸಭಿಕರೇ!

ಹಿಂದಣ ಸಭೆಯಲ್ಲಿ ನಿರ್ಣಯವಾದ ಪ್ರಕಾರ ಈಗ ನಾನು ಮಾಡಬೇಕಾದ ಕಾರ್ಯಭಾಗವೆಂದರೆ,—'ಮಕ್ಕಳ ವಿದ್ಯಾಭ್ಯಾಸದಲ್ಲಿ ಹೆತ್ತವರೆ ಮತ್ತು ಉಪಾಧ್ಯಾಯರೆ ಕರ್ತವ್ಯಗಳು' ಎಂಬ ವಿಷಯವಾಗಿ ಉಪನ್ಯಾಸ ಮಾಡುವುದು. ಇದು ನನ್ನಿಂದ ಎಷ್ಟರಮಟ್ಟಿಗೆ ಸಾಧ್ಯವೋ ಹೇಳಲಾರೆನು. ಆದರೆ, ಸಜ್ಜನರಾದ ತಮ್ಮಗಳ ಅನುಜ್ಞೆಗಳು ವ್ಯರ್ಥವಾಗಲಾರವು. ಆದುದರಿಂದ ಸುಹೃದಯರಾದ ತಮ್ಮಗಳ ಆಜ್ಞಾಪ್ರೋತ್ಸಾಹಗಳ ಬಲದಿಂದಲೂ, ಭಗವತಿಯಾದ ಶ್ರೀಶಾರದೆಯ ಅನುಗ್ರಹದಿಂದಲೂ ನಾನೇನೋ ನನ್ನ ಪಾಲಿಗೆ ಬಿದ್ದಿರುವ ಈ ಕಾರ್ಯವನ್ನು ನೆರವೇರಿಸಲು ಮುಂದೆ ಬಂದು ನಿಂತಿರುವೆನು. ನನ್ನೀ ಉಪನ್ಯಾಸದಲ್ಲಿ ಪ್ರಮಾದ ವಶದಿಂದೊದಗಿದ ದೋಷಗಳೇನಾದರೂ ಕಂಡು ಬಂದರೂ, ಅವನ್ನು ಕ್ಷಮಿಸುವುದು ತಮ್ಮೆಲ್ಲರ ಸ್ವಭಾವ ಸಹಜ ಗುಣವೇ ಆಗಿದೆ.

ಇಷ್ಟು ಹೇಳಿದ ತರುವಾಯ ಈ ಉಪನ್ಯಾಸವನ್ನು ಆರಂಭಿಸ ಬಹುದಿತ್ತು. ಆದರೆ, ಈ ಸಂದರ್ಭದಲ್ಲಿ ಇನ್ನೊಂದು ಮಾತನ್ನು ಹೇಳಿಬಿಡುವುದು ಸ್ವಲ್ಪ ಅಗತ್ಯವೆಂದು ತೋರುವುದು. ಏನೆಂದರೆ,— ಕೆಲವು ಉಪಾಧ್ಯಾಯರಲ್ಲಿ ಮತ್ತು ಹೆತ್ತವರಲ್ಲಿ ಕಂಡು ಬರುವ ಕರ್ತವ್ಯಲೋಪಗಳನ್ನೂ, ಅದರಿಂದಾಗುವ ಅನರ್ಥಗಳನ್ನೂ ಈ ಉಪನ್ಯಾಸದಲ್ಲಿ ವಿವರಿಸುತ್ತದೆ. ಈ ದೋಷೋದ್ಘಾಟನೆಯು ಯಾರೊಬ್ಬರೇ ಉಪಾಧ್ಯಾಯರನ್ನಾಗಲಿ, ಹೆತ್ತವರನ್ನಾಗಲಿ ಕುರಿತು ಬರೆದುದಲ್ಲ. ಉಪಾಧ್ಯಾಯರೆ ಮತ್ತು ಹೆತ್ತವರೆ ಸಮಾಜವನ್ನೇ ಗುರಿಯಾಗಿಟ್ಟುಕೊಂಡು ಬರೆವುದು ಧರ್ಮವಲ್ಲದೆ, ಒಬ್ಬಿಬ್ಬರ ಗುಣದೋಷಗಳನ್ನು ವಿಮರ್ಶಿಸುವುದು ಉಪನ್ಯಾಸಕನ ಉದ್ದೇಶವಲ್ಲವೆಂಬ ಸಂಗತಿಯು ತಮಗೊಂದು ಹೊಸತಲ್ಲವಷ್ಟೆ? ಆದುದರಿಂದ ಇವರಲ್ಲಿ ತೋರುವ ದೋಷಗಳನ್ನು ಯಾರೊಬ್ಬರೂ ತಮ್ಮಲ್ಲಿ ಅನ್ವಯಿಸಿಕೊಳ್ಳುವ ಗೊಡವೆಗೆ ಹೋಗಲಾಗದೆಂದೂ, ಒಂದುವೇಳೆ ಇದರಲ್ಲಿ ಹೇಳುವಂತಹ ನ್ಯೂನತೆಗಳು ತಮ್ಮಲ್ಲಿರುವುದಾದರೆ ಅವನ್ನು ಕಳೆಯಲು ಸರ್ವದಾ ಯತ್ನವನ್ನು ವಹಿಸುತ್ತಿರಬೇಕೆಂದೂ ನಮ್ಮ ಸನ್ಮಾನ್ಯ ಭ್ರಾತೃವರ್ಯರಲ್ಲಿ ವಿಜ್ಞಾಪಿಸಿ ಈ ಉಪನ್ಯಾಸವನ್ನು ಪ್ರಾರಂಭಿಸುತ್ತೇನೆ.

ಲೋಕದಲ್ಲಿ ಯಾವುದೊಂದು ದೇಶದ ಮೇಲ್ಮೆಗೂ, ಸಂಪತ್ಸಮೃದ್ಧಿಗೂ ಆ ದೇಶದ ಜನಾಂಗದ ವಿದ್ಯಾಭಿವೃದ್ಧಿಯೇ ಕಾರಣವೆಂಬುದು ನಿರ್ವಿವಾದ ಸಂಗತಿಯಷ್ಟೆ? ಯಾವ ದೇಶವು ವಿದ್ಯಾ ವೈಭವಗಳಿಂದ ಮೆರೆಯುವ ಜನರಿಂದ ರಂಜಿತವಾಗಿರುವುದೋ, ಆ ದೇಶವೇ ಸುಖಸಂತೋಷಗಳಿಗೆ ಮಾತೃಸ್ಥಾನವಾಗಿರುವುದು. ಈ ಮರ್ಮವನ್ನು ತಿಳಿದೇ ಪ್ರಜಾಹಿತ ಕಾರ್ಯದಕ್ಷರಾದ ನಮ್ಮ ಸಾರ್ವ

ಭಾನುರು ಪ್ರತಿಯೊಂದು ಹಳ್ಳಿಪಳ್ಳಿಗಳಲ್ಲಿಯೂ ಪಾಠಶಾಲೆಗಳನ್ನೇ ರ್ಪಡಿಸಿ, ವಿದ್ಯಾಭ್ಯಾಸವನ್ನು ಸರ್ವತ್ರ ಹಬ್ಬಿಸಿರುವರು. ಮಾತ್ರ ವಲ್ಲದೆ, ಪ್ರಜಾಜನರೆಲ್ಲರೂ ಇಹಪರ ಸಾಧನವಾದ ವಿದ್ಯೆಯನ್ನು ಹೊಂದಿ, ತನ್ಮೂಲಕ ದೇಶೋನ್ನತಿಯಾಗಬೇಕೆಂದು ಮನಃಪೂರ್ವಕ ಬಯಸಿ, ಪ್ರತಿವರ್ಷವೂ ಈ ಕುರಿತು ಅನೇಕಾನೇಕ ದ್ರವ್ಯ ವ್ಯಯ ಮಾಡುತ್ತಿರುವುದೂ, ಈಗಲೀಗ ಎಲ್ಲಾ ಕಡೆಗಳಲ್ಲೂ ಮೊದಲಿಗಿಂತ ಹೆಚ್ಚಾಗಿ ಎಷ್ಟೋ ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿರುವುದೂ ನನುಗೇನೂ ತಿಳಿಯದ ಸಂಗತಿಯಲ್ಲ.

ಸಾಮಾನ್ಯವಾಗಿ ಈಗ ಬಹುಮಂದಿ ವಿದ್ಯೆಯ ಮಹತ್ವ ಪ್ರಯೋಜನಗಳನ್ನು ಅಲ್ಪಸ್ವಲ್ಪವಾಗಿ ಅರಿತಿರುವರೆಂದು ಹೇಳ ಬಹುದು. ಬಡವನಿಂದ ಬಲ್ಲಿದನ ವರೆಗೂ, ಏನೂ ಅರಿಯದ ನಿರಕ್ಷರ ಕುಕ್ಷಿಯಿಂದ ವಿದ್ವಾಂಸನ ಪರಿಯಂತರವೂ ಎಲ್ಲರೂ ಹೆಚ್ಚಾಗಿ ತಮ್ಮ ಮಕ್ಕಳು ವಿದ್ಯೆಯುಳ್ಳವರಾಗಬೇಕೆಂದು ಬಗೆದು, ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸಿ, ವಿದ್ಯಾಭ್ಯಾಸ ಕಾರ್ಯದಲ್ಲಿ ಹಿಂದಿ ನಿಂದ ಅಧಿಕವಾಗಿ ಮುಂದ್ವರಿಯುತ್ತಿರುವುದೂ ಸಂತೋಷಕರವಾದ ಸಂಗತಿಯಾಗಿದೆ. ಆದರೆ, ಮಕ್ಕಳ ಹೆತ್ತವರಲ್ಲಿ ತಮ್ಮ ಮಕ್ಕಳ ವಿದ್ಯಾಭಿವೃದ್ಧಿಗೆ ಅಗತ್ಯವಿರುವ ಕರ್ತವ್ಯಗಳನ್ನು ಮಾಡುವವರು ವಿರಳ ರೆಂಬುದು ಹರುಷದೊಂದಿಗೆ ದುಃಖವೆಂಬಂತೆ ಶೋಚನೀಯಾಂಶವು. ಇದ ರಿಂದ ಮಕ್ಕಳ ವಿದ್ಯಾಭಿವೃದ್ಧಿಗೆ ಕುಂದುಂಟಾಗಲು ಎಡೆಯಾಗುವುದು.

ಮಾನ್ಯಗ್ರಹಸ್ಥರೇ! ಈ ಮೇಲಿನ ಮಾತನ್ನು ಕೇಳಿ ತಾವು ಏನೆನ್ನುವಿರಿ? ಅತ್ಯಂತ ಕಷ್ಟತಾಪಗಳಿಗೊಳಗಾಗಿ ಮಕ್ಕಳನ್ನು ಸಾಕಿ ಸಲಹಿದ ತಾಯಿತಂದೆಗಳು ತಮ್ಮ ಮಕ್ಕಳ ಅಹಿತವನ್ನು ಕನಸು ಮನಸಿನಲ್ಲಾದರೂ ಬಯಸಲಾಪರೆ? ಮಕ್ಕಳ ಹಿತವೇ ತಮ್ಮ ಹಿತ

ವೆಂದೂ, ಅವರ ಕಷ್ಟವೇ ತನ್ನ ಕಷ್ಟವೆಂದೂ ಮನಸಾ ಭಾವಿಸು
ತ್ತಿರುವ ಯಾವ ತಂದೆಯು ತಾನೆ ಮಕ್ಕಳ ಅಭಿವೃದ್ಧಿಗೆ ಕುಂದನ್ನು
ತರುವ ಕಾರ್ಯದಲ್ಲಿ ಪ್ರವರ್ತಿಸುವನು? ಎಂದು ನೀವು ನನ್ನನ್ನು
ಆಕ್ಷೇಪಿಸುವಿರೆಲ್ಲವೆ? ಆದರೆ, ಮಹಾಶಯ! ಕ್ಷಮೆ ಇರಲಿ, ಮುನಿ
ಸಾಗದಿರಿ, ತಾಳ್ಮೆ ವಹಿಸಿರಿ, ದಯಮಾಡಿ ಆಲಿಸಿರಿ! ಲೋಕದಲ್ಲಿ
ಪ್ರತಿಯೊಂದು ಪ್ರಾಣಿಯೂ ತಾನು ಸುಖವನ್ನು ಹೊಂದಬೇಕೆಂದು
ಇಚ್ಛಿಸುವುದೇ ವಿನಾ ದುಃಖಪಡಬೇಕೆಂದಲ್ಲವಷ್ಟೆ? ಪ್ರತಿಯೊಂದು
ಜೀವಿಯೂ ಸುಖಸಂಪಾದನೆಗಾಗಿಯೇ ಅಹೋರಾತ್ರಿಯೂ ಎಡೆ
ಬಿಡದೆ ಪ್ರಯತ್ನಿಸುತ್ತಿರುವುದು ಹೊರತು ಅನ್ಯತ್ರವಲ್ಲ. ಆದರೇನು?
ಎಲ್ಲವುಗಳಿಗೂ ಸುಖಪ್ರಾಪ್ತಿಯಾಗಿದೆಯೆ? ಈಗಲೂ ಇನ್ನೂ ಹಲ
ವರ ಸುಖಸಂಪಾದನೆಯ ಪ್ರಯತ್ನಗಳು ನಡದೇ ಇವೆಯಷ್ಟೆ.
ಹಾಗಾದರೆ, ಕೆಲವರಿಗೆ ಸುಖಸಿಕ್ಕಿಲ್ಲವೆಂದೇ ಊಹಿಸಬೇಕಲ್ಲವೆ?
ಏಕೆಂದರೆ,-ಬೊಂಬೆಯೊಂದು ಕೊಡಬೇಕೆಂದು ಅಳುತ್ತಿರುವ ಮಗುವು
ಆ ಬೊಂಬೆಯು ಕೈಗೆ ದೊರೆತೊಡನೆಯೇ ತನ್ನ ಅಳುವನ್ನು ನಿಲ್ಲಿಸು
ವಂತೆ, ಸುಖವನ್ನು ಹುಡುಕುವ ಮನುಷ್ಯನೂ ಆ ಸುಖವು ಲಭಿಸಿದು
ದಾವರೆ, ತನ್ನ ಆ ಹುಡುಕುವ ಯತ್ನವನ್ನು ನಿಲ್ಲಿಸಬೇಕಷ್ಟೆ?
ಹಾಗಾದರೆ, ಸುಖೇಚ್ಛೆಯುಳ್ಳವರೆಲ್ಲರಿಗೂ ಸುಖವಾಪ್ತಿಯಾಗದಿರಲು
ಕಾರಣವೇನು? ಅವರು ಸುಖವು ಬೇಕು, ಸುಖವು ಬೇಕು ಎಂದು
ಹಂಬಲಿಸುವರೇ ಹೊರತು ಸುಖವು ದೊರೆಯಲು ಯಾವ ಯಾವ
ರೀತಿಯಿಂದ ಹೇಗೆ ಹೇಗೆ ಸಾಧಿಸಬೇಕೆಂಬುದನ್ನು ಯೋಚಿಸದೆ,
ಸುಖವನ್ನು ಸಾಧಿಸುವ ಯತ್ನವನ್ನು ಬಿಟ್ಟು ಸುಖವನ್ನು ಬಾಧಿಸುವ
ಕಾರ್ಯದಲ್ಲಿ ಪ್ರವರ್ತಿಸಿದರೆ, 'ಗುರಿಯೊಂದು ಹೊಡೆತವೊಂದು'
ಎಂಬಂತೆ ಅವರ ಶ್ರಮವೆಲ್ಲ ನಿರರ್ಥಕವಾಗುವುದು.

ಹಾಗಾದರೆ ಯಾವನೊಬ್ಬನೂ ತನಗೆ ತಾನೇ ತಿಳಿದು ತನ್ನ ಸುಖದಲ್ಲಿ ಮಣ್ಣು ಕೂಡಿಸಿಕೊಳ್ಳಲಾರನೆಂಬುದು ನಿಜವಷ್ಟೆ? ಸುಖವನ್ನು ಹೊಂದಬೇಕೆಂದು ಅವರ ಮುಖ್ಯ ಆಶೆಯಾಗಿರುತ್ತಾ ಅದಕ್ಕೆ ಅಗತ್ಯವಿರುವ ಸಾಧನಗಳನ್ನು ತಿಳಿಯದುದರಿಂದಲ್ಲವೆ ಸುಖದ ಬದಲು ದುಃಖವನ್ನು ಅನುಭವಿಸಬೇಕಾಗುವುದು? ಹಾಗೆಯೇ ಪ್ರತಿಯೊಬ್ಬ ತಂದೆಯೂ ತನ್ನ ಮಕ್ಕಳು ಒಳ್ಳೆಯವರೂ, ವಿದ್ಯಾವಂತರೂ, ಸಜ್ಜನರೂ ಆಗಬೇಕೆಂದು ಇಚ್ಛಿಸುವರೇನೋ ನಿಜ. ಪರಂತು, ಅವರು ಒಳ್ಳೇ ನಡತೆಯವರಾಗಿ ವಿದ್ಯಾವಂತರಾಗಲು ನಾವು ಮಾಡತಕ್ಕ ಕರ್ತವ್ಯಗಳಾವುವು? ಆ ಕುರಿತು ನಾವು ಅನುಸರಿಸಬೇಕಾದ ರೀತಿ ಏನು? ಎಂಬುದನ್ನು ಕೆಲವರು ತಿಳಿಯದೆಯೇ ತಮ್ಮ ಮಕ್ಕಳ ಏಳಿಗೆಗೆ ತಾವೇ ಕುಂದು ತರುತ್ತಿರುವರೆಂಬ ಅಭಿಪ್ರಾಯದಿಂದ ಹೇಳಿದೆನೇ ವಿನಹ ಬೇರೆಯಲ್ಲ ಎಂಬುದನ್ನು ತಿಳಿದಿರಬೇಕಾಗಿ ಆಶಿಸುವೆನು. ಏಕೆಂದರೆ,- ಮಕ್ಕಳ ಏಳ್ಗೆಗೆ ಹಾನಿ ಬರುವ ಸಂಗತಿಯನ್ನು ತಿಳಿದೂ ಯಾವನೊಬ್ಬ ಕಠಿಣ ಹೃದಯನಾದ ತಂದೆಯೂ ಮಾಡಲಾರನು. **ತಂದೆ ಮಕ್ಕಳಲ್ಲಿ ಭಗವಂತನು ನಿರ್ಮಿಸಿದ ಅವ್ಯಾಜ ಪ್ರೇಮದ ಮಹಿಮೆಯೇ ಅಂತಹದು.**

ಅದಿರಲಿ! ಹೆತ್ತವರಲ್ಲಿ ಇನ್ನು ಕೆಲವರು ಈ ಮಾತನ್ನು ಕೇಳಿದೊಡನೆಯೇ ನಾವು ಮಕ್ಕಳನ್ನು ಶಾಲೆಗೆ ಕಳುಹಿಸುವೆವು. ವಿದ್ಯಾಭಿವೃದ್ಧಿಯನ್ನುಂಟು ಮಾಡುವ ಕೆಲಸವು ಉಪಾಧ್ಯಾಯರದು. ಅದರ ವಿಷಯವಾಗಿ ನಾವು ತಿಳಿದುಕೊಳ್ಳತಕ್ಕದ್ದೇನಿದೆ? ಎಂದು ತಿರಸ್ಕರಿಸಲೂ ಬಹುದಲ್ಲವೆ? ನಿಜ! ಜನಸಾಮಾನ್ಯರು ಮಕ್ಕಳಿಗೆ ವಿದ್ಯೆ ಕಲಿಸುವ ಕಾರ್ಯದಲ್ಲಿ ಉಪಾಧ್ಯಾಯರೊಬ್ಬರೇ ಎಂದು ಯೋಚಿಸಬಹುದು. ಸರಿಯಾಗಿ ನೋಡಿದರೆ, ಹೆತ್ತವರೂ ಉಪಾಧ್ಯಾಯರೂ

ಇವರಿಬ್ಬರೂ ಕೆಲಸಂಗತಿಗಳಲ್ಲಿ ಒಂದಾದಲ್ಲದೆ ಮಕ್ಕಳ ವಿದ್ಯಾಭ್ಯಾಸ ಕಾರ್ಯವು ಸರಿಯಾಗಿ ಸಾಗದು. ಮಗುವಿಗೆ ಜಗತ್ತೇ ಶಿಕ್ಷಣಾಕರ್ತೃವೆ. ಸುತ್ತುಮುತ್ತಲೂ ಆವರಿಸಿರುವ ಸೃಷ್ಟಿಯ ಸಮಸ್ತ ವಸ್ತು ವಿಶೇಷಗಳೇ ಜ್ಞಾನವನ್ನು ಕಲಿಸುವುವು. ಅದರಲ್ಲಿ ಮುಖ್ಯತಾ ಹೆತ್ತವರೂ ಉಪಾಧ್ಯಾಯರೂ ಪ್ರಧಾನ ಶಿಕ್ಷಕರೆಂದು ಹೇಳಬಹುದು.

ಮಹನೀಯರೇ, ಹೆತ್ತವರೂ ಉಪಾಧ್ಯಾಯರೂ ಎರಡು ಕುದುರೆಗಳೆಂದು ಭಾವಿಸಿರಿ! ವಿದ್ಯಾರ್ಥಿಗಳೆಂಬ ಭಂಡಿಯು ಇಕ್ಕಡೆಗಳಲ್ಲೂ ಇವರನ್ನು ಕಟ್ಟಿರುವುದೆಂದು ಯೋಚಿಸೋಣ. ಭಂಡಿಯನ್ನು ಸರಿಯಾದ ಮಾರ್ಗದಲ್ಲಿ ಎಳೆದುಕೊಂಡು ಹೋಗಿ ನಿರ್ದಿಷ್ಟ ಸ್ಥಳಕ್ಕೆ ಸಾಗಿಸಲು ಇತ್ತಟ್ಟಿನ ಕುದುರೆಗಳೂ ಹೇಗೆ ನೆರವಾಗಬೇಕೋ, ಹಾಗೆಯೇ ವಿದ್ಯಾರ್ಥಿ ಎಂಬ ಭಂಡಿಯನ್ನು 'ವಿದ್ವತ್ತೆ'ಂಬ ನಿಯಮಿತ ಸ್ಥಾನಕ್ಕೆ ಎಳೆದುಕೊಂಡು ಹೋಗಿ 'ವಿದ್ಯೆ' ಎಂಬ ಅಮೂಲ್ಯ ವಸ್ತುಗಳನ್ನು ಸಾಗಿಸಿಕೊಂಡು ಬರಲು, 'ಉಪಾಧ್ಯಾಯರೂ, ಹೆತ್ತವರೂ' ಎಂಬೆರಡು ಕುದುರೆಗಳೂ ಅವಶ್ಯಕವಾಗಿದೆ. ಭಂಡಿಯನ್ನೆಳೆವ ಕುದುರೆಗಳ ಪೈಕಿ ಯಾವದೊಂದು ಕುದುರೆಯು ತನ್ನ ಕೆಲಸವನ್ನು ಮಾಡುವುದರಲ್ಲಿ ಆಲಸ್ಯ ತಾಳಿತೆಂದರೆ, ಆ ಗಾಡಿಯನ್ನು ಎಳೆದುಕೊಂಡು ಹೋಗಲು ಎಷ್ಟು ತೊಡಕಾಗುವುದೋ, ವಿದ್ಯಾರ್ಥಿಗಳೆಂಬ ಈ ಭಂಡಿಯ ಅಶ್ವಗಳಾದ ಉಪಾಧ್ಯಾಯರಾಗಲಿ, ಹೆತ್ತವರಾಗಲಿ ಒಬ್ಬರು ತನ್ನ ಕೆಲಸದಲ್ಲಿ ಆಲಸ್ಯ ತಾಳಿದರೆಂದರೆ ಅಷ್ಟೇ ತೊಂದರೆಯುಂಟಾಗಿ ಈ ಭಂಡಿಯು ಕೂಡಾ ಮುಂದರಿಯಲು ಸಾಧ್ಯವಿಲ್ಲದೆ ತಡೆಕಟ್ಟಿದಂತಾಗುವುದು. ಹೀಗಾದರೆ ಆ ಭಂಡಿಯಲ್ಲಿ ವಿದ್ಯೆ ಎಂಬ ಸರಕುಗಳನ್ನು ತುಂಬಿಸುವುದು ಹೇಗೆ? ಆದುದರಿಂದ ಉಪಾಧ್ಯಾಯರೂ ಹೆತ್ತವರೂ ವಿದ್ಯಾರ್ಥಿಗಳ ವಿದ್ಯಾ

ಭಿವೃದ್ಧಿಗೆ ಒಮ್ಮನಸ್ಸಿನಿಂದ ಒಂದೇ ಮಾರ್ಗದಲ್ಲಿ ಒಂದೇ ರೀತಿಯಿಂದ ಹೋಗಬೇಕಾಗಿದೆ ಎಂಬುದು ಪುನಃ ಹೇಳಬೇಕೆಂಬುದಿಲ್ಲ.

ಮಕ್ಕಳು ಉಪಾಧ್ಯಾಯರ ವಶದಲ್ಲಿರುವುದು ಬಹು ಸ್ವಲ್ಪ ಕಾಲ. ಅಂದರೆ, ದಿನಕ್ಕೆ ಸುಮಾರು 5ಘಂಟೆ. ಬೇರೆ 19ಘಂಟೆಗಳ ಕಾಲ ಮನೆ ಎಂಬ ಪಾಠಶಾಲೆಯಲ್ಲಿ ಹೆತ್ತವರೆಂಬ ಉಪಾಧ್ಯಾಯರೊಡನೆಯೇ ಇರುವರು. ಇದರಲ್ಲಿ ನಿದ್ರಾ ಮೊದಲಾದ ವಿರಾಮ ಕಾಲಕ್ಕೆ 12ಘಂಟೆ ಕಾಲ ಕಳಿದರೂ 7ಘಂಟೆಯ ಕಾಲ ಮಿಕ್ಕುಳಿದಿರುವುದು. ಶಾಲೆಯಲ್ಲಿರುವುದಕ್ಕಿಂತ 2ಘಂಟೆ ಹೆಚ್ಚಾಗಿದೆ. ನೋಡಿರಿ! ಅದುಕಾರಣವೇ ಮಕ್ಕಳು ಮನೆಯಲ್ಲಿ ಕಲಿವಷ್ಟು ಶಾಲೆಯಲ್ಲಿ ಕಲಿಯಲಾರರು. ಹೀಗಿರುವುದರಿಂದಲೇ ಮಗುವಿಗೆ ಮನೆಯೇ ಪ್ರಥಮ ಪಾಠಶಾಲೆಯು. ಈ ಕಾಲದಲ್ಲಿ ಹೆತ್ತವರು ಸ್ವಲ್ಪ ವೇಳೆಯಾದರೂ ಮಕ್ಕಳ ವಿದ್ಯೆಯ ಕಡೆಗೆ ಗಮನಕೊಡಬೇಕು. ಉಪಾಧ್ಯಾಯರು ಶಾಲೆಯಲ್ಲಿ ಅಲ್ಪವೇಳೆಯಲ್ಲಿ ಕಲಿಸಿದ ಸಂಗತಿಗಳು, ಮನೆಯಲ್ಲಿ ಅಧಿಕವೇಳೆ ಅದರ ಯೋಚನೆ ಇಲ್ಲದೆ ಸ್ವೇಚ್ಛೆಯಾದ ವರ್ತನೆಗಳಿಂದ ಮಾಯವಾಗಿ ಹೋಗಬಹುದು. ಅದನ್ನು ಹೆತ್ತವರು ಮನೆಯಲ್ಲಿ ಮಕ್ಕಳು ಓದಿ ಗಟ್ಟಿಗೊಳಿಸುವಂತೆ ಆಗಾಗ ಸರ್ವದಾ ಎಚ್ಚರಿಕೆಯನ್ನು ತೆಗೆದುಕೊಂಡಿರುವುದು ಅಗತ್ಯವು. ಏಕೆಂದರೆ,— ಎಲ್ಲರಿಗೂ ಒಂದುಬಾರಿ ಹೇಳಿದುದನ್ನು ನೆನಪಿನೆಲ್ಲಿಡುವ ಜ್ಞಾಪಕಶಕ್ತಿಯು ಅಷ್ಟು ಪ್ರಬಲವಾಗಿರುವುದಿಲ್ಲ. ಮನಸ್ಸೆಂಬುದು ಮರ್ಕಟನಂತೆ ನಿಂತಲ್ಲಿ ನಿಲ್ಲದೆ ಓಡಾಡುತ್ತಿರುವದೆಂದು ಹಿರಿಯರು ಹೇಳಿರುವುದು ಅಕ್ಷರಶಃ ಸತ್ಯವಾಗಿದೆ. ಮಕ್ಕಳ ವಿಷಯದಲ್ಲಂತೂ "ಏಕ ಮಾನೇದಶನುರ್ಕಟಾ:" ಎಂಬ ಹಾಸ್ಯೋಕ್ತಿಯೊಂದು ವಾಡಿಕೆಯಿಂದಿರುವುದು ತಪ್ಪಲ್ಲ. ಚಪಲ ಬುದ್ಧಿಯ ಕಪಿಯು ಸಿಕ್ಕಕಡೆಗೆ ಮುಳ್ಳು ಕಲ್ಲುಗಳಿಗೆ ಹಾರಿ ನೋವನ್ನನುಭವಿಸುವಂತೆ ಮಕ್ಕಳ

ಇವರಿಬ್ಬರೂ ಕೆಲಸಂಗತಿಗಳಲ್ಲಿ ಒಂದಾದಲ್ಲದೆ ಮಕ್ಕಳ ವಿದ್ಯಾಭ್ಯಾಸ ಕಾರ್ಯವು ಸರಿಯಾಗಿ ಸಾಗದು. ಮಗುವಿಗೆ ಜಗತ್ತೇ ಶಿಕ್ಷಣಾಕರ್ತೃವು. ಸುತ್ತುಮುತ್ತಲೂ ಆವರಿಸಿರುವ ಸೃಷ್ಟಿಯ ಸಮಸ್ತ ವಸ್ತು ವಿಶೇಷಗಳೇ ಪಾಠವನ್ನು ಕಲಿಸುವುವು. ಅದರಲ್ಲಿ ಮುಖ್ಯತಾ ಹೆತ್ತವರೂ ಉಪಾಧ್ಯಾಯರೂ ಪ್ರಧಾನ ಶಿಕ್ಷಕರೆಂದು ಹೇಳಬಹುದು.

ಮಹನೀಯರೇ, ಹೆತ್ತವರೂ ಉಪಾಧ್ಯಾಯರೂ ಎರಡು ಕುದುರೆಗಳೆಂದು ಭಾವಿಸಿರಿ! ವಿದ್ಯಾರ್ಥಿಗಳೆಂಬ ಭಂಡಿಯು ಇಕ್ಕಡೆಗಳಲ್ಲೂ ಇವರನ್ನು ಕಟ್ಟಿರುವುದೆಂದು ಯೋಚಿಸೋಣ. ಭಂಡಿಯನ್ನು ಸರಿಯಾದ ವೂರ್ಗದಲ್ಲಿ ಎಳೆದುಕೊಂಡು ಹೋಗಿ ನಿರ್ದಿಷ್ಟ ಸ್ಥಳಕ್ಕೆ ಸಾಗಿಸಲು ಇತ್ತಟ್ಟಿನ ಕುದುರೆಗಳೂ ಹೇಗೆ ನೆರವಾಗಬೇಕೋ, ಹಾಗೆಯೇ ವಿದ್ಯಾರ್ಥಿ ಎಂಬ ಭಂಡಿಯನ್ನು 'ವಿದ್ವತ್ತೆ'ಂಬ ನಿಯಮಿತ ಸ್ಥಾನಕ್ಕೆ ಎಳೆದುಕೊಂಡು ಹೋಗಿ 'ವಿದ್ಯೆ' ಎಂಬ ಅಮೂಲ್ಯ ವಸ್ತುಗಳನ್ನು ಸಾಗಿಸಿಕೊಂಡು ಬರಲು, 'ಉಪಾಧ್ಯಾಯರೂ, ಹೆತ್ತವರೂ' ಎಂಬೆರಡು ಕುದುರೆಗಳೂ ಅವಶ್ಯಕವಾಗಿದೆ. ಭಂಡಿಯನ್ನೆಳೆವ ಕುದುರೆಗಳ ಪೈಕಿ ಯಾವದೊಂದು ಕುದುರೆಯು ತನ್ನ ಕೆಲಸವನ್ನು ಮಾಡುವುದರಲ್ಲಿ ಆಲಸ್ಯ ತಾಳಿತೆಂದರೆ, ಆ ಗಾಡಿಯನ್ನು ಎಳೆದುಕೊಂಡು ಹೋಗಲು ಎಷ್ಟು ತೊಡಕಾಗುವುದೋ, ವಿದ್ಯಾರ್ಥಿಗಳೆಂಬ ಈ ಭಂಡಿಯ ಅಶ್ವಗಳಾದ ಉಪಾಧ್ಯಾಯರಾಗಲಿ, ಹೆತ್ತವರಾಗಲಿ ಒಬ್ಬರು ತನ್ನ ಕೆಲಸದಲ್ಲಿ ಆಲಸ್ಯ ತಾಳಿದರೆಂದರೆ ಅಷ್ಟೇ ತೊಂದರೆಯುಂಟಾಗಿ ಈ ಭಂಡಿಯು ಕೂಡಾ ಮುಂದರಿಯಲು ಸಾಧ್ಯವಿಲ್ಲದೆ ತಡೆಕಟ್ಟಿದಂತಾಗುವುದು. ಹೀಗಾದರೆ ಆ ಭಂಡಿಯಲ್ಲಿ ವಿದ್ಯೆ ಎಂಬ ಸರಕುಗಳನ್ನು ತುಂಬಿಸುವುದು ಹೇಗೆ? ಆದುದರಿಂದ ಉಪಾಧ್ಯಾಯರೂ ಹೆತ್ತವರೂ ವಿದ್ಯಾರ್ಥಿಗಳ ವಿದ್ಯಾ

ಭಿವೃದ್ಧಿಗೆ ಒಮ್ಮನಸ್ಸಿನಿಂದ ಒಂದೇ ಮಾರ್ಗದಲ್ಲಿ ಒಂದೇ ರೀತಿಯಿಂದ ಹೋಗಬೇಕಾಗಿದೆ ಎಂಬುದು ಪುನಃ ಹೇಳಬೇಕೆಂಬುದಿಲ್ಲ.

ಮಕ್ಕಳು ಉಪಾಧ್ಯಾಯರ ವಶದಲ್ಲಿರುವುದು ಬಹು ಸ್ವಲ್ಪ ಕಾಲ. ಅಂದರೆ, ದಿನಕ್ಕೆ ಸುಮಾರು 5ಘಂಟೆ. ಬೇರೆ 19ಘಂಟೆಗಳ ಕಾಲ ಮನೆ ಎಂಬ ಪಾಠಶಾಲೆಯಲ್ಲಿ ಹೆತ್ತವರೆಂಬ ಉಪಾಧ್ಯಾಯರೊಡನೆಯೇ ಇರುವರು. ಇದರಲ್ಲಿ ನಿದ್ರಾ ಮೊದಲಾದ ವಿರಾಮ ಕಾಲಕ್ಕೆ 12ಘಂಟೆ ಕಾಲ ಕಳೆದರೂ 7ಘಂಟೆಯ ಕಾಲ ಮಿಕ್ಕುಳಿದಿರುವುದು. ಶಾಲೆಯಲ್ಲಿರುವುದಕ್ಕಿಂತ 2ಘಂಟೆ ಹೆಚ್ಚಾಗಿದೆ. ನೋಡಿರಿ! ಅದುಕಾರಣವೇ ಮಕ್ಕಳು ಮನೆಯಲ್ಲಿ ಕಲಿವಷ್ಟು ಶಾಲೆಯಲ್ಲಿ ಕಲಿಯಲಾರರು. ಹೀಗಿರುವುದರಿಂದಲೇ ಮಗುವಿಗೆ ಮನೆಯೇ ಪ್ರಥಮ ಪಾಠಶಾಲೆಯು. ಈ ಕಾಲದಲ್ಲಿ ಹೆತ್ತವರು ಸ್ವಲ್ಪ ವೇಳೆಯಾದರೂ ಮಕ್ಕಳ ವಿದ್ಯೆಯ ಕಡೆಗೆ ಗಮನಕೊಡಬೇಕು. ಉಪಾಧ್ಯಾಯರು ಶಾಲೆಯಲ್ಲಿ ಅಲ್ಪವೇಳೆಯಲ್ಲಿ ಕಲಿಸಿದ ಸಂಗತಿಗಳು, ಮನೆಯಲ್ಲಿ ಅಧಿಕವೇಳೆ ಅದರ ಯೋಚನೆ ಇಲ್ಲದೆ ಸ್ವೇಚ್ಛೆಯಾದ ವರ್ತನೆಗಳಿಂದ ಮಾಯವಾಗಿ ಹೋಗಬಹುದು. ಅದನ್ನು ಹೆತ್ತವರು ಮನೆಯಲ್ಲಿ ಮಕ್ಕಳು ಓದಿ ಗಟ್ಟಿಗೊಳಿಸುವಂತೆ ಆಗಾಗ ಸರ್ವದಾ ಎಚ್ಚರಿಕೆಯನ್ನು ತೆಗೆದುಕೊಂಡಿರುವುದು ಅಗತ್ಯವು. ಏಕೆಂದರೆ,— ಎಲ್ಲರಿಗೂ ಒಂದುಬಾರಿ ಹೇಳಿದುದನ್ನು ನೆನಪಿನೆಲ್ಲಡುವ ಜ್ಞಾಪಕಶಕ್ತಿಯು ಅಷ್ಟು ಪ್ರಬಲವಾಗಿರುವುದಿಲ್ಲ. ಮನಸ್ಸೆಂಬುದು ಮರ್ಕಟನಂತೆ ನಿಂತಲ್ಲಿ ನಿಲ್ಲದೆ ಓಡಾಡುತ್ತಿರುವದೆಂದು ಹಿರಿಯರು ಹೇಳಿರುವುದು ಅಕ್ಷರಶಃ ಸತ್ಯವಾಗಿದೆ. ಮಕ್ಕಳ ವಿಷಯದಲ್ಲಂತೂ "ಏಕಮಾಣೇದಶಮರ್ಕಟಾ:" ಎಂಬ ಹಾಸ್ಯೋಕ್ತಿಯೊಂದು ವಾಡಿಕೆಯಿಂದಿರುವುದು ತಪ್ಪಲ್ಲ. ಚಪಲ ಬುದ್ಧಿಯ ಕಪಿಯು ಸಿಕ್ಕಕಡೆಗೆ ಮುಳ್ಳು ಕಲ್ಲುಗಳಿಗೆ ಹಾರಿ ನೋವನ್ನನುಭವಿಸುವಂತೆ ಮಕ್ಕಳ

ಗತಿಯೂ ಆಗುವುದು. ಮನೆಯಲ್ಲಿ ಹೆತ್ತವರಾರೂ ಹೇಳಿ ಕೇಳುವ ರಿಲ್ಲನೆಂತಾದರೆ ಅವರ ಮಂಗಚೇಷ್ಟೆಗೇನಾದರೂ ಕಡಿಮೆ ಇದೆಯೆ? ಇಲ್ಲಿ ಇನ್ನೊಂದು ಮಾತು ಹೇಳತಕ್ಕದ್ದಿದೆ. ಮಕ್ಕಳಲ್ಲಿರುವ ಸ್ವಾಭಾವಿಕ ಗುಣಗಳೆಲ್ಲವೂ ಹೆತ್ತವರಿಗೆ ಕಾಣಿಸಿಕ್ಕುವುವೇ ವಿನಾ ಉಪಾಧ್ಯಾಯರಿಗೆ ಕಾಣಿಸಿಗದು. ಉಪಾಧ್ಯಾಯರೆದುರು ಮಕ್ಕಳು ಆ ಸ್ವಾಭಾವಿಕ ಚೇಷ್ಟೆಗಳನ್ನು ಸರಿಯಾಗಿ ಹೊರಗೆಡಹರು. ಉಪಾಧ್ಯಾಯನು ವರ್ಗದಲ್ಲಿ ಸಾಧು ಎಂದು ಹೇಳುವ ಹುಡುಗನೂ ಮನೆಯಲ್ಲಿ ಮಹಾ ತಂಟೆಕೋರನಾಗಿರುವುದು ಹೆಚ್ಚಾಗಿ ತಿಳಿದುಬರುತ್ತದೆ. ಆದುದರಿಂದ ಈ ಸಮಯದಲ್ಲಿ ಉಚಿತ ರೀತಿಯಿಂದ ತಿದ್ದುವಿಕೆಯು ಮುಖ್ಯವಾಗಿ ಹೆತ್ತವರ ಪಾಲಿಗೇ ಸೇರಿರುವುದು.

ಮೇಲೆ ಹೇಳಿದಂತೆ ಮಕ್ಕಳನ್ನು ಆ ಕಾಲದಲ್ಲಿ ಆ ಕೆಟ್ಟಚಾಳಿಗಳಿಂದ ತಿರುಗಿಸದೆ, ಹಿತಬೋಧನೆಯನ್ನು ಮಾಡದೆ, ಅವರು ಮಾಡಿದುದನ್ನೆಲ್ಲಾ ಕಂಡೂ ಅವರನ್ನು ಸ್ವೇಚ್ಛಾಪರರಾಗಿ ಬಿಟ್ಟು ಕೊನೆಗೆ ದುಃಖ ಪಡುವುದು ನಮ್ಮವರಲ್ಲಿ ಹೆಚ್ಚಾಗಿದೆ.

ಅನೇಕರು ತಮ್ಮ ಮಕ್ಕಳ ಮೇಲಿನ ಮಮತಾಧಿಕ್ಯದಿಂದ ಅವರು ಮಾಡುವ ತಪ್ಪಿತ ಕೆಲಸವನ್ನೆಲ್ಲಾ ಮರೆಮಾಚಿ ಅತಿ ಮುದ್ದು ಮಾಡುವುದರಿಂದ ಮಕ್ಕಳು ಕೆಡುವುದಕ್ಕೆ ದಾರಿಯಾಗಿದೆ. 'ಹೆತ್ತವರಿಗೆ ಹೆಗ್ಗಣ ಮುದ್ದೆಂಬುದೇನೋ ನಿಜ. ಆದರೆ, ತಮ್ಮ ಮಕ್ಕಳ ದುರ್ಗುಣದ ಮೇಲೂ ಪ್ರೀತಿ ಇಡುವವರಿಗೆ ಏನೆನ್ನಬೇಕೋ ತಿಳಿಯದು. "ಪಶ್ಯತಿ ಪಶ್ಯತಿ ಪರದೋಷಾನ್ ಆತ್ಮದೋಷಂ ನ ಪಶ್ಯತಿ" ಎಂಬಂತೆ ಪರರ ಅಥವಾ ಪರರ ಮಕ್ಕಳ ದೋಷವನ್ನು ಹೇಳುವುದರಲ್ಲಿ ಬಲು ಗಟ್ಟಿಗರಾದ ನಮಗೆ ನಮ್ಮ ಇಲ್ಲವೆ ನಮ್ಮ ಮಕ್ಕಳ ದೋಷವು ಕಣ್ಣಿಗೆ ಕಾಣದಿರುವುದು ಆಶ್ಚರ್ಯಕರವಾಗಿದೆ. ಅದು

ಕಾರಣ ತಮ್ಮ ಮಕ್ಕಳ ನಡತೆಯಲ್ಲಿ ಕಂಡುಬರುವ ದೋಷಗಳನ್ನು ಅಡಗಿಸಲು ಯತ್ನಿಸದೆ, ಅಲಕ್ಷಿಸದೆ ಆಗಲೇ ತಿದ್ದಿ ಉತ್ತಮರನ್ನಾಗಿ ಮಾಡುವುದು ಶ್ರೇಯಸ್ಕರವು. ಹಾಗೆ ಮಾಡದೆ ಇದ್ದೆವಾದರೆ ಕತ್ತಿಯಿಂದಾಗುವ ಕೆಲಸವನ್ನು ಕೊಡಲಿಯಿಂದ ಮಾಡಿಕೊಳ್ಳಬೇಕಾದ ಮಹತ್ಪಯಾಸಕರವಾದ ಸಂದರ್ಭವು ವದಗಬಹುದೆಂಬುದನ್ನು ನೆನಪಿನಲ್ಲಿಡುವುದು ಆವಶ್ಯಕವಾದದ್ದು. ಇದಕ್ಕೆ ನಿದರ್ಶನವಾಗಿ ಪರಮ ಪವಿತ್ರವಾದ ರಾಮಾಯಣದಲ್ಲಿ ಹೇಳಿರುವ ಒಂದಾನೊಂದು ಇತಿಹಾಸವು ನೆನಪಿಗೆ ಬರುವುದು. ಇದನ್ನು ತಾವೆಲ್ಲರೂ ತಿಳಿದಿರುವಿರಾದರೂ ಈ ಸಂದರ್ಭದಲ್ಲಿ ಪುನರ್ಜ್ಞಾಪಕಾರ್ಥವಾಗಿ ಹೇಳುವೆನು.

ಸೂರ್ಯವಂಶದಲ್ಲಿ ಉತ್ಪನ್ನನಾದ ಸಗರ ಚಕ್ರವರ್ತಿಯು ಅಯೋಧ್ಯಾನಗರವನ್ನು ಆಳಿಕೊಂಡಿದ್ದನು. ಆ ರಾಜನು ಬಹುಕಾಲವಾದರೂ ಪುತ್ರಸಂತಾನವಿಲ್ಲದುದರಿಂದ ಬಹುವಾಗಿ ವ್ಯಸನಪಡುತ್ತಾ ಇದ್ದು ಕೊನೆಗೆ ಒಬ್ಬಾನೊಬ್ಬ ಋಷಿವರ್ಯನ ವರಪ್ರಸಾದದಿಂದ ಒಬ್ಬ ಸುಕುಮಾರನನ್ನು ಪಡೆದನು. ಪುತ್ರಮುಖಾವಲೋಕನದಿಂದ ಸಂತುಷ್ಟ ಹೃದಯನಾದ ರಾಜನು ಮಗನಿಗೆ "ಅಸಮಂಜಸ"ನೆಂದು ನಾಮಕರಣವನ್ನು ಮಾಡಿದನು. ಮಕ್ಕಳು ಮಕ್ಕಳೆಂದು ಹಂಬಲಿಸುತ್ತಿದ್ದ ರಾಜನು ತನ್ನ ಈ ಮುದ್ದುಮಗನು ಏನು ಮಾಡಿದರೂ ಅದರಿಂದ ಸಂತೋಷಿಸುತ್ತಾ ಇದ್ದನು. ಬಾಲ್ಯದಿಂದಲೇ ಅತಿ ಪ್ರೀತಿಯಿಂದ ಸಾಕಲ್ಪಟ್ಟ ಕುವರನು ಅತಿಕ್ಷಿತನಾದ ಕಾರಣ ಮನಬಂದಂತೆ ವರ್ತಿಸಿ, ದುರ್ಗುಣ ದುರ್ವಿದ್ಯೆಗಳಲ್ಲಿ ಧುರಂಧರನಾದನು. ಬಳಿಕ ಈ ತುಂಟಹುಡುಗನು ಸಿಕ್ಕಿಸಿಕ್ಕಿದ ಆ ಊರಿನ ಬಾಲಕರೆಲ್ಲರನ್ನೂ ಹಿಡಿದುಕೊಂಡು ಹೋಗಿ ಸರಯೂ ನದಿಗೆ ಹಾಕಿ ಆ ಮಕ್ಕಳು ನೀರಿನಲ್ಲಿ ಕೈಕಾಲುಬಿಟ್ಟು ಮುಳುಗೇಳುವುದನ್ನೂ, ಭಯದಿಂದ

ಕೊಗುತ್ತಿರುವುದನ್ನು ಕಂಡು ಜೋಕೆ ಮಾಕೆ ನಗುತ್ತಾ ಕುಚೆಷ್ಟಾಪ್ರಪಂಚ ಮಾಡುವುದು. ಹೀಗಾದರೂ ಇವನಿಗೆ ಹೇಳಿ ಕೇಳುವವರೇ ಇಲ್ಲವಾದುದರಿಂದ ಇದು ಒಂದು ಜಲೋಪದಾದ ಆಟವೆಂಬ ಭ್ರಮೆಯು ಆ ದುಷ್ಟ ಪುತ್ರನಿಗೆ ತೋರಿ ಸದಾ ಈ ಆಟದಲ್ಲೇ ಕಾಲ ಕಳೆಯುತ್ತಿದ್ದನು. ಈ ಆಟವು ಇತರರಿಗೆ ಪ್ರಾಣಸಂಕಟವೆಂಬುದು ಆ ದುಷ್ಟ ಬಾಲಕನಿಗೇನು ಗೊತ್ತು? ಅಥವಾ, ಅದನ್ನು ಅವನಿಗೆ ಹೇಳುವವರಾರು? ಅವನ ಕ್ರೂರಕೃತ್ಯವನ್ನು ಸಹಿಸಲಾರದ ಊರಜನರು, ಧೂರೆಯ ಅಪೂರ್ವದ ಮಗನು ಮಕ್ಕಳನ್ನು ಹಿಂಸಿಸುವ ಮಹಾ ಮಾರಿಯಾಗಿದ್ದಾನೆ. ಬಹುಮಾಗಿ ನೋಡಿದರೆ ಐಶ್ವರ್ಯವಂತರ ಮಕ್ಕಳೇ ಇತರರಿಗೆ ಹೀಗೆ ಉಪದ್ರ ಕೊಡುವವರಾಗಿರುವರು. ಅಯ್ಯೋ! ಏನು ಮಾಡಲಿ! ಬೇಲಿಯೇ ಎದ್ದು ಬಂದು ಹೊಲವನ್ನು ಮೇದುದಾದರೆ ಇನ್ನೇನುಗತಿ? ಧೂರೆಯು ಈ ಮುದ್ದು ಮಗನ ದುರ್ವರ್ತನವನ್ನು ಅವನೊಡನೆ ಹೇಗೆ ವಿಜ್ಞಾಪಿಸಿಕೊಳ್ಳಲಿ? ಎಂದು ಮನದಲ್ಲಿ ಸಂತಾಪಗೊಳ್ಳುತ್ತಿದ್ದರು. ಪರಂತು, ರಾಜಪುತ್ರನ ಹಾವಳಿಯು ದಿನೇದಿನೇ ಹೆಚ್ಚಾಗುತ್ತಿರಲಾಗಿ, ಕೊನೆಗೆ ಒಬ್ಬ ಧೈರ್ಯಸ್ಥನು ಮಹಾರಾಜನಿಗೆ ವಿವರವೆಲ್ಲವನ್ನೂ ಅರಿಕೆಮಾಡಿದನು. ಇದನ್ನು ಕೇಳಿದ ಪ್ರಜಾರಂಜಕನಾದ ಧೂರೆಯು ಬಹಳ ಖೇದಗೊಂಡು, ಕೂಡಲೇ ಮಗನನ್ನು ಕರೆಯಿಸಿ, "ಎಲಾ, ಪಾಪಿಯೇ! ನೀನು ಹುಟ್ಟಿ ನಮ್ಮ ಶ್ರೇಷ್ಠ ವಂಶಕ್ಕೆ ಕಳಂಕವನ್ನು ತಂದೆ. ದುರಾಚಾರಿಯೇ! ಪ್ರಜಾಕ್ಷೋಭಕ್ಕೆ ಕಾರಣನಾದ ನೀನು ಇದ್ದೂ ಫಲವಿಲ್ಲ;" ಎಂದು ಆತನನ್ನು ಕಾಡಿಗೆ ಕಳುಹಿಬಿಟ್ಟನು.

ಮಹಸೀಯರೇ! ಚಿಕ್ಕಂದಿನಲ್ಲಿ ಮೊಳಕೆ ಪಡೆದ ದುರ್ಗುಣವನ್ನು ಕಿತ್ತು ತೆಗೆಯದ್ದರ ಫಲವಾಗಿ, ರಾಜಾಧಿರಾಜನಾದ ಸಗರರಾಯನಿಗೆ, ಮಕ್ಕಳಿಲ್ಲವೆಂದು ಹಲವು ಹರಕೆಗಳಿಂದ ಪಡೆದ ಮುದ್ದು

ಮಗನನ್ನು, ಆ ಏಕಮಾತ್ರ ಪುತ್ರನನ್ನು, ಆ ತನ್ನ ಮನದಾನಂದ ಪ್ರದಾತನನ್ನು ಘೋರಾರಣ್ಯಕ್ಕೆ ಕಳುಹಬೇಕಾಗಿ ಬಂದುದು. ಇದೆಂತಹ ಅವಸ್ಥೆ? ಆದಕಾರಣ "ಗಿಡವಾಗಿ ಬೊಗ್ಗದ್ದು ಮರವಾಗಿ ಬಗ್ಗೀತೇ" ಎಂಬ ಸಾಮತಿಯಂತೆ ಚಿಕ್ಕಂದಿನಲ್ಲೇ ಮಕ್ಕಳನ್ನು ತಕ್ಕರೀತಿಯಿಂದ ಶಿಕ್ಷಿಸದೆ ಇದ್ದರೆ, ಮೇಲಿನಂತೆ ಮಹದನರ್ಥಕ್ಕೆ ಕಾರಣವಾಗುವುದಲ್ಲವೆ? ಈ ವಿಷಯದಲ್ಲಿ ಉಪಾಧ್ಯಾಯರು ಶಾಲೆಯಲ್ಲಿ ತಿದ್ದುವರೆಂಬ ಒಂದೇ ಭಾವನೆಯಿಂದ ಹೆತ್ತವರು ಸುಮ್ಮನೆ ಕುಳಿತಿರುವುದು ಲೇಸಲ್ಲವೆಂದು ಇನ್ನೊಮ್ಮೆ ಹೇಳಿಬಿಡುವೆನು.

ಪ್ರಾಜ್ಞರೇ! ಮಕ್ಕಳ ವಿದ್ಯಾಭ್ಯಾಸದಲ್ಲಿ ಹೆತ್ತವರು ಮನೆಯಲ್ಲಿ ತಿದ್ದುತ್ತಿರುವುದೂ, ಅವರು ದುರ್ಮಾರ್ಗದಲ್ಲಿ ಬೀಳದಂತೆ ಎಚ್ಚರಿಕೆಯಿಂದಿರುವುದೂ ಮೇಲಾದುದೆಂದು ಈ ವರೆಗಿನ ವಿವರಣೆಯಿಂದ ತಿಳಿದುದಲ್ಲವೆ? ಇನ್ನು ಹೆತ್ತವರಿಂದಲೇ ಮಕ್ಕಳು ಕೆಲವು ದುರ್ನಡತೆಗಳನ್ನು ಕಲಿಯುವರು. ಅದು ಹೇಗೆಂಬುದನ್ನು ಮುಂದೆ ವಿವರಿಸುವೆನು.

ಮಕ್ಕಳಲ್ಲಿ ಯಾವುದು ಒಳ್ಳೆಯದು, ಯಾವುದು ಕೆಟ್ಟುದು ಎಂದು ತಿಳಿದುಕೊಳ್ಳುವ ವಿವೇಚನಾ ಶಕ್ತಿಯು ಅಷ್ಟಿರುವುದಿಲ್ಲ. ಅವರು ತಮ್ಮಿಂದ ದೊಡ್ಡವರು ಮಾಡಿದುದನ್ನು ಮಾಡಲು ಸರ್ವ ವಿಧದಿಂದಲೂ ಯತ್ನಿಸುವರು. ಮಕ್ಕಳ ಹೃದಯವೆಂಬುದು ನಿರ್ಮಲ ಜಲದಂತೆನ್ನಬಹುದು. ನಿರ್ಮಲ ಜಲದಲ್ಲಿ ಅದರ ಮೇಲಿಟ್ಟ ವಸ್ತುವು ತದ್ವತ್ ಪ್ರತಿಬಿಂಬಿಸುವಂತೆಯೂ, ಹಸಿಯ ಗೋಡೆಗೆ ತಾಗಿದ ಹರಳು ಹತ್ತಿ ನಿಲ್ಲುವಂತೆಯೂ, ಮಕ್ಕಳ ಕೋಮಲ ನಿರ್ಮಲ ಮನಸ್ಸಿನಲ್ಲಿ ಕಂಡುದೆಲ್ಲಾ ಪ್ರತಿಬಿಂಬಿಸುವುವು. ಕೇಳಿದುದೆಲ್ಲಾ ನೆಲೆಯಾಗಿ ನಿಲ್ಲುವುವು. ಹೀಗಿರುವುದು ಸ್ವಾಭಾವಿಕವಾದುದರಿಂದ ನಾವು ಅವರ ಮುಂದೆ ಮಾಡಿದಂತೆ ನಮ್ಮ ಅನುಕರಣವನ್ನು ಅವರೂ

ಮಾಡತೊಡಗುವರು. 'ಒಳ್ಳೆಯದಾಗಲಿ, ಕೆಟ್ಟುದಾಗಲಿ ಬಾಲ್ಯದಲ್ಲಿ ಕಲಿತ ಯಾವುದೊಂದು ಸಂಗತಿಯೂ ನೆಲೆಯಾಗಿ ನಿಲ್ಲುವುದು' ಎಂಬುದು ಸರ್ವ ವಿದಿತ ಸಂಗತಿಯಷ್ಟೆ? ನಾವು ಅವರೆದುರಿಗೆ ಸಿಗರೇಟ್, ಬೀಡಿಗಳನ್ನು ಸೇದತೊಡಗಿದೆವೆಂದರೆ,— ಅವರು ನಾವು ಬಿಸಾಡಿದ ಕಡೆಗಳನ್ನಾದರೂ ಹೆಕ್ಕಿ, ತಾವು ಬಾಯಿಗಿಟ್ಟುಕೊಳ್ಳದೆ ಬಿಡರು. ನಾವು ಸದಾಕಾಲವೂ ಇಸ್ಪೀಟು ಆಡುತ್ತಾ ಇರುವುದಾದರೆ,- ಮಕ್ಕಳೂ ಇಸ್ಪೀಟೆಂಬುದು ಶ್ರೇಷ್ಠವಾದುದೊಂದು ಆಟವೆಂದು ತಿಳಿಯುವರು. "ಇದೇನು ವಿಪರೀತ? ಮಕ್ಕಳ ವಿದ್ಯಾಭ್ಯಾಸದ ಸಲುವಾಗಿ ನಾವು ಬಾಲ್ಯದಿಂದ ಜೀವನಾಧಾರವೆಂದು ಅಭ್ಯಾಸಿಸಿಕೊಂಡು ಬಂದ ಇವುಗಳನ್ನೆಲ್ಲಾ ಬಿಡಬೇಕೆ? ಇದಾರಿಗೆ ಸಾಧ್ಯ?" ಎಂದು ಯಾರಾದರೂ ಆಕ್ಷೇಪಿಸಲು ಸಾಕು. ಅಂತಹರಿಗೊಂದು ವಿನಂತಿ ಏನೆಂದರೆ:—ಬಾಲ್ಯಾಪಿ ಅಭ್ಯಾಸಿಸಿದುದಾದರೂ, ಇಲ್ಲವೆ ಪಾರಂಪರ್ಯವಾಗಿ ಬಂದುದೆಂದು ಹೇಳಿದರೂ ಇವನ್ನು ಬಿಟ್ಟುಬಿಡುವುದು ಎಷ್ಟೋ ಪಾಲಿಗೆ ಮೇಲೆಂಬುದನ್ನು ಖಂಡಿತವಾಗಿ ಹೇಳಬಲ್ಲೆನೇ ಹೊರತು, ಇವುಗಳ ಗುಣಾವಗುಣಗಳನ್ನು ಯೋಗ್ಯರೀತಿಯಿಂದ ವಿಮರ್ಶಿಸಲು ಇದು ತಕ್ಕ ಸಮಯವಲ್ಲ ಎಂಬುದನ್ನು ವಿನಯದಿಂದ ವಿಜ್ಞಾಪಿಸುವೆನು. ಹಾಗೂ ತಮಗೆ ಅವುಗಳನ್ನು ಬಿಟ್ಟುಬಿಡಲು ಅಸಾಧ್ಯವೆಂದಾದರೆ ನಿಮ್ಮ ಚಿಕ್ಕಮಕ್ಕಳೆದುರಿಗಾದರೂ ಬಿಟ್ಟು ಬಿಡಬೇಕಾಗಿ ಅತಿಸುವೆನು. "ವಿದ್ಯಾದದಾತಿ ವಿನಯಂ" ಎಂಬಂತೆ ವಿದ್ಯಾರ್ಥಿಯು ವಿನಯ ಗುಣದಿಂದ ಶೋಭಿಸಬೇಕಾದುದು ಅವಶ್ಯ. ವಿನಯಾದಿ ಸಮಸ್ತ ಸದ್ಗುಣಗಳನ್ನು ವಿದ್ಯೆಯು ಕೊಡತಕ್ಕುದು. ವಿನಯಾನ್ವಿತನನ್ನೇ ಪ್ರಾಜ್ಞರು ಸದ್ವಿದ್ಯಾರ್ಥಿ ಎನ್ನುವರು. ಮಕ್ಕಳಲ್ಲಿರುವ ವಿನಯ ಗುಣವೂ ಕೂಡ ಕಮ್ಮಿಯಾಗಲು ಹೆತ್ತವರು ಕಾರಣರಾಗುವರು. ಹೇಗೆಂದರೆ:—ಕೆಲವರು ಮನೆಯಲ್ಲಿ ಆಡುವ

ಮಾತುಗಳು ಅಹಂಭಾವದಿಂದ ಕೂಡಿರುವುವು. ಬೇರೊಬ್ಬರನ್ನು ಅಲ ಕ್ಷಿಸಿ ಮಾತಾಡುವುದೂ, ಆತ್ಮಸ್ತುತಿ ವಾಕ್ಯಗಳೂ, ಕೆಲಸವಿಲ್ಲ ದಿರುವ ವೇಳೆ ಆಡುತ್ತಿರುವುದು ನಮ್ಮವರಲ್ಲಿ ಹೆಚ್ಚಾಗಿರುವ ದುಷ್ಟ ಪದ್ಧತಿ. ಅದನ್ನು ಕೇಳಿದ ಮಕ್ಕಳು ಹಾಗೆಯೇ ವರ್ತಿಸತೊಡಗುವರು.

ಹಾಗೆಯೇ ನಾವು ಗುರುಹಿರಿಯರಲ್ಲಿ ಭಕ್ತಿ ವಿಶ್ವಾಸವನ್ನು ತೋರಿಸಿ, ವಿಧೇಯರಾಗಿದ್ದುಕೊಂಡರೆ ಮಕ್ಕಳೂ ಕೂಡ ನಮ್ಮ ಮೇಲೆ ಭಕ್ತಿಯನ್ನಿಟ್ಟು ವಿನಯದಿಂದ ನಡಕೊಳ್ಳುವರು. ನಾವು ಯಾವಾಗಲೂ ಒಳ್ಳೆಯ ಮಾತುಗಳನ್ನಾಡುವರಾದರೆ ಅವರೂ ಒಳ್ಳೇ ಮಾತುಗಳನ್ನಾಡುತ್ತಿರುವರು. ನಾವು ಯಾವಾಗಲೂ ಕೆಟ್ಟ ವಾಕ್ಯ ಗಳನ್ನೆ ಆಡುತ್ತಿರುವೆವಾದರೆ ನಮ್ಮ ಮಕ್ಕಳು ಎಂದಿಗೂ ನಮಗಿಂತ ಒಳ್ಳೆಯವರಾಗಲಾರರು. ಹೆಲವರು ತಮ್ಮ ಮಕ್ಕಳ ಮುಂದೆ ಆಡ ಬಾರದ ಮಾತನ್ನು ಆಡುವರು. ಮಾಡಬಾರದ ಕೃತ್ಯವನ್ನು ಮಾಡು ವರು. ಆ ಮಕ್ಕಳು ಹಿರಿಯರು ಮಾಡುತ್ತಿರುವೀ ಕೃತ್ಯಗಳು ಒಳ್ಳೆ ಯವೆಂದು ಭಾವಿಸಿ ಹಾಗೆಯೇ ಮಾಡಲು ಯತ್ನಿಸುವರು. ಕೊನೆಗೆ "ಯಥಾ ರಾಜಾ ತಥಾ ಪ್ರಜಾಃ" ಎಂಬ ಮಾತಿಗೆ ಸರಿಯಾಗುವುದು.

ಮಗನು ಸಂಧ್ಯಾವಂದನೆ ಮಾಡದಿರುವುದನ್ನು ಕಂಡ ತಂದೆಯು ಇದೆಲ್ಲಾ ಈಗಿನ ಹಾಳಾದ ಇಂಗ್ಲಿಷ್ ವಿದ್ಯೆಯ ಪರಿಣಾಮವೆಂದು ಗೊಣಗುಟ್ಟುತ್ತಿರುವನು. ಆದರೆ, ಕೆಲವು ದಿನಗಳ ಹಿಂದೆ ಮಗನನ್ನು 9ಘಂಟೆಗೆ ಸ್ನಾನಮಾಡಿಸಿ "ಶಾಲೆಗೆ ಹೊತ್ತಾಯಿತು. ಸಂಧ್ಯಾವಂದನೆ ನಾಳೆ ಮಾಡೋಣ. ಈಗ ಉಂಡುಕೊಂಡು ಹೋಗು" ಎಂದು ವೋಹದಿಂದ ತಾನೇ ಹೇಳಿ ಕಳುಹಿಸಿದ ಸಂಗತಿಯು ಆಗ ಮಾತ್ರ ಜ್ಞಾಪಕಕ್ಕೆ ಬರುವುದಿಲ್ಲ.

ಇನ್ನು ಕೆಲವರು ಉಪಾಧ್ಯಾಯರನ್ನು ಮಕ್ಕಳೆದುರಿಗೇ ದೂಷಿ ಸುವರು. ಉಪಾಧ್ಯಾಯರ ನಡತೆಯಲ್ಲಿ ದೂಷಣಾಯೋಗ್ಯವಾದುವು

ಗಳಿದ್ದರೂ, ಅದನ್ನು ಉಪಾಧ್ಯಾಯರಿಗೆ ತಾವೇ ಹೇಳಿ, ಇತರರ ಮೂಲಕವಾದರೂ ಹೇಳಿಸಿ ಬಿಡಿಸುವುದು ಬಿಟ್ಟು, ಮಕ್ಕಳಿದುರೇ ಹೀಗೆ ನಿಂದಿಸುತ್ತಿರುವುದು ಬಹು ಕೆಟ್ಟುದು. ಇದರಿಂದ ಮಕ್ಕಳಿಗೆ ಉಪಾಧ್ಯಾಯನಲ್ಲಿರುವ ಭಕ್ತಿ ವಿಶ್ವಾಸಗಳು ಮಾಯವಾಗುವುವು. ಮಾತ್ರವಲ್ಲದೆ ಉಪಾಧ್ಯಾಯನ ಮುಂದೆ ಅಸಭ್ಯತನದಿಂದ ನಡ ಕೊಳ್ಳಲು ಮೊದಲು ಮಾಡುವರು. ಇವೆಲ್ಲ ಕಾರಣದಿಂದ ಅಹಂಭಾವವೂ ಉದ್ದಟತನವೂ ಮಕ್ಕಳ ಮನಸ್ಸಿನಲ್ಲಿ ಮನೆಮಾಡು ವುವು. ಕೊನೆಗೆ ಹುಡುಗನು ದುರ್ಮಾರ್ಗಿಯಾದರೆ ಸಮಸ್ತ ದೋಷ ಗಳನ್ನೂ ಉಪಾಧ್ಯಾಯನ ಮೇಲೇ ಹೊರಿಸುವರು. ಇದೆಂತಹ ರೀತಿ? ಶಿಕ್ಷಣದ ವಿಷಯದಲ್ಲಿ ತಮಗೆ ಯಾವ ತೊಡಕೂ ಇಲ್ಲ ವೆಂದೂ, ಅದಕ್ಕೆಲ್ಲಾ ಉಪಾಧ್ಯಾಯನೊಬ್ಬನೇ ಹೆಗಲೊಡ್ಡಿರುವ ನೆಂದೂ ತಿಳಿದಿರುವುದರಿಂದಲೇ ಹೀಗೆ ಹೇಳಲು ಕಾರಣ. ಹುಡುಗರು ಹೆಚ್ಚಿನ ಕಾಲವನ್ನು ಮನೆಯಲ್ಲಿ ಕಳಿವರೆಂದು ಹಿಂದೆಯೇ ಹೇಳಿರು ವೆನು. ಅದುಕಾರಣ ಅವರ ಗುಣದೋಷಗಳು ಮನೆಯನ್ನೇ ಹೆಚ್ಚಾಗಿ ಹೊಂದಿಕೊಂಡಿವೆ. ಆದುದರಿಂದಲೇ ತಾಯಿತಂದೆಗಳು ವಿದ್ಯಾವಂಶ ರಾದರೆ, ಅದರಲ್ಲೂ ತಾಯಿಯು ವಿದ್ಯಾವತಿಯಾದರೆ ಮಕ್ಕಳು ವಿದ್ವಾಂಸರಾಗುವರು ಎಂದು ಪಂಡಿತರು ಹೇಳಿರುವರು. ಅದೇಕೆ? ಮಕ್ಕಳು ತಾಯಿಯ ಬಳಿಯಲ್ಲಿ ಹೆಚ್ಚಾಗಿ ಇರುವುವೆಂದಲ್ಲವೆ? ಹಾಗೆಯೇ ಉಪಾಧ್ಯಾಯನಿಗಿಂತಲೂ ಹೆಚ್ಚುವೇಳೆ ಮಕ್ಕಳು ಮಾತಾ ಪಿತರ ಬಳಿ ಇರುವುವಾದುದರಿಂದಲೇ ಮಕ್ಕಳಿಗೆ ಗೃಹಶಿಕ್ಷಣವೂ ಉತ್ತಮ ಫಲಕಾರಿ ಎಂಬುದರಲ್ಲಿ ಸಂಶಯವೇನು? ಅದಂತಿರಲಿ,- ಇನ್ನು ಕೆಲವರು ಕರುಣಾಮಯರಾದ ತಾಯಿತಂದೆಗಳಿರುವರು. ಅವರು ತಮ್ಮ ಮಕ್ಕಳು ಶಾಲೆಗೆ ಹೋಗುವುದಿಲ್ಲವೆಂದು ಚಂಡಿ ಹಿಡಿದು ಅತ್ತರೆ ಅವರನ್ನು ಮನೆಯಲ್ಲಿ ಕೂಂಡ್ರಿಸಿಕೊಂಡು, ಮರು

ದಿನ "ಇವನಿಗೆ ನಿನ್ನೆ ಕೊಂಚ ದೇಹಾಲಸ್ಯವಿದ್ದುದರಿಂದ ಸಾಲೆಗೆ ಬರಲಾಗಲಿಲ್ಲ. ಅದಕ್ಕಾಗಿ ಶಿಕ್ಷಿಸಬೇಡಿರಿ!" ಎಂದು ಮಗುವಿನ ಮೇಲಿನ ಪ್ರೀತಿಯಿಂದ ಸುಳ್ಳುಚೀಟಿಯನ್ನು ಬರೆದು, ಮಗೂ! ನಿನಗೆ ನಿನ್ನೆ ಸ್ವಸ್ಥವಿರಲಿಲ್ಲವೆಂದು ಬರೆದೆ; ಇನ್ನಾದರೂ ಹೋಗು, ಎಂದು ಕಳುಹಿಸುವರು. ಇದೆಂತಹ ಮೋಹ? ಇದರಿಂದ ಮಕ್ಕಳು ಶಾಲೆಗೆ ಕ್ರಮವಾಗಿ ಬಾರದೆ ವಿದ್ಯೆಯನ್ನು ಕಡಿಸಿಕೊಳ್ಳುವರಲ್ಲದೆ, ನುಹಾ ಅನರ್ಥಕ್ಕೆ ಕಾರಣವಾದ ಅಸತ್ಯವನ್ನಾಡಲು ಕಲಿಯುವರು. ತಂದೆ ತಾಯಿಗಳೇ ಹೀಗೆ ಮಕ್ಕಳಿದುರು ಅಸತ್ಯದ ಕಾರ್ಯವನ್ನು ಮಾಡಿದರೆಂದರೆ 'ಕಂಡುದನ್ನು ಕಲಿವ ಆ ಚಿಕ್ಕ ಮಕ್ಕಳಾ'ದರೂ ಪಾಪ ಕಲಿಯದೆ ಏನು ಮಾಡುವರು?

ಶಾಲೆಯಿಂದ ಬಂದ ಮಗನು, ಅಪ್ಪಾ! ನನಗೆ ಇಂದು ಮಾಸ್ತರರು ಹೊಡೆದರು, ಎಂದು ಹೇಳಿದೊಡನೆಯೇ ಅಪ್ಪನು ರೇಗಿ, "ನನ್ನ ಹುಡುಗನಿಗೆ ಪೆಟ್ಟು ಹೊಡೆಯಬೇಡಿರಿ! ಅವನು ಕಲಿಯದಿದ್ದರೂ ಚಿಂತಿಲ್ಲ" ಎಂದು ಚೀಟಿ ಬರೆದು ಕಳುಹಿಸಿ ಬಿಡುವರು. ಹೀಗಾದರೆ ಆ ಬಾಲರ ಗತಿ ಏನಾಗಬೇಕು? ಉಪಾಧ್ಯಾಯರೂ ಮಕ್ಕಳನ್ನು ನೋಡಿಲ್ಲವೆ? ಅವರಿಗೂ ಮಕ್ಕಳ ಮೇಲೆ ಪ್ರೇಮವಿಲ್ಲವೆ? ಸ್ವಾಭಾವಿಕವಾಗಿ ಅವರು ನಿಮ್ಮಿಂದೆಷ್ಟೋ ಹೆಚ್ಚಿಗೆ ದಯಾಳುಗಳಾಗಿರಬೇಕಾದುದು ಅವಶ್ಯ. ಮಾತ್ರವಲ್ಲದೆ, ಬೆತ್ತವು ಜ್ಞಾನವೃಕ್ಷದ ಬೇರಲ್ಲವೆಂದು ಈಗಲೀಗ ಪಂಡಿತರು ತಿಳಿದು, ಶಾಲೆಗಳಲ್ಲಿ ಬೆತ್ತವನ್ನು ಉಪಯೋಗಿಸಲಾಗದೆಂದು ಸಾರಿರುವರು. ಅದು ಕಾರಣ ಈ ವಿಷಯದಲ್ಲಿ ಹೆತ್ತವರೂ ಆಗಾಗ ಬಿಡುವಿದ್ದಾಗ ಶಾಲೆಗೆ ಹೋಗಿ, ಅಲ್ಲಿಯ ಕಾರ್ಯಕ್ರಮಗಳನ್ನು ಕಂಡು, ಸಮಯೋಚಿತ ಹಿತಸೂಚನೆಗಳನ್ನು ಸೂಚಿಸುತ್ತಾ ಇದ್ದರೆ ಉಪಾಧ್ಯಾಯರನ್ನು ಅವರ ಕೆಲಸದಲ್ಲಿ ಮತ್ತಷ್ಟು ಹುರಿಗೊಳಿಸಿದಂತಾಗುವು

ದಲ್ಲವೆ? ವೃಥಾ ಉಪಾಧ್ಯಾಯನು ದಂಡಾಧಿಕಾರಿ ಎಂದೂ, ಹಿಂಸಕನೆಂದೂ ಅಭಿಪ್ರಾಯ ಪಡುವುದು ತೀರಾ ಲೇಸಲ್ಲ.

ಮಾನ್ಯಗ್ರಹಸ್ಥರೇ! ನೀವೆಲ್ಲರೂ ಹೀಗೆ ಮಾಡುವಿರೆಂದು ನಾನು ಹೇಳಿದುದಲ್ಲ. ನಿಮ್ಮಲ್ಲಿ ಇದನ್ನೆಲ್ಲಾ ಅರಿತು ಕ್ರಮದಂತೆ ನಡೆವ ಯೋಗ್ಯರಾದವರನೇಕರಿರಬಹುದು. ಪರಂತು ಇಂತಹ ಹೆತ್ತವರೂ ಲೋಕದಲ್ಲಿ ಇರುವರೆಂಬುದನ್ನು ವಿಜ್ಞಾಪಿಸಿರುವೆನು ಹೊರತು ಬೇರೆಯಲ್ಲ. ಏಕೆಂದರೆ:— ನಮ್ಮ ದೃಷ್ಟಿಗೆ ಒಬ್ಬಿಬ್ಬ ಹೆತ್ತವರು ಗುರಿಯಲ್ಲ. ಇಡೀ ಸಮಾಜದಲ್ಲಿರುವ ಉಪಾಧ್ಯಾಯರ-ಹೆತ್ತವರ ಚಿತ್ರವನ್ನೆದುರಿಗಿಟ್ಟುಕೊಂಡು ಬರೆಯುವುದೇ ಉಪನ್ಯಾಸಕನ ಧರ್ಮ ವೆಂಬುದು ನೀವು ತಿಳಿಯದ ಸಂಗತಿಯಲ್ಲ. ಇನ್ನು ಮುಂದರಿಯೋಣ!

ಮಕ್ಕಳು ಈ ರೀತಿ ದುರ್ಗುಣ ದುರಾಚಾರಗಳೆಂಬ ಬಲೆಗೆ ಬಿದ್ದು ಹಾಳಾಗಲು ಕೇವಲ ಹೆತ್ತವರೇ ಕಾರಣರೆಂದು ತಿಳಿಯ ಕೂಡದು. ಮಕ್ಕಳ ದುರ್ವರ್ತನೆಗೆ ಕೆಲವು ಉಪಾಧ್ಯಾಯರೂ ಕಾರಣರಾಗುವರು. ಇದೇನು ಕೇಡುಗಾಲ? ನಾವೆಲ್ಲರೂ ಮಕ್ಕಳ ಮೇಲ್ಮೈಯನ್ನೇ ಹಾರೈಸಿ, ಆ ಕುರಿತು ಕೈಲಾದಷ್ಟು ಬೋಧಿಸುತ್ತಿರುವವರು. ಮಕ್ಕಳಲ್ಲಿರುವ ಯಾವುದೊಂದು ದುರ್ಗುಣವು ನಮ್ಮ ಕಣ್ಣಿಗೆ ಬಿದ್ದುದಾದರೆ ಅದನ್ನು ಯತ್ನಸಾಹಸಗಳಿಂದ ತಿದ್ದುವೆವು. ಹೀಗಿರುತ್ತಾ ನಾವು 'ಮಕ್ಕಳು ಕೆಟ್ಟನಡತೆಯವರಾಗಲು ಕಾರಣ ರಾಗುವೆವು' ಎಂದು ಹೇಳಿರುವುದು ವಿಚಾರಾರ್ಹವಾದುದೆಂದು ಬೋಧಕವರ್ಯರಾರಾದರೂ ಯೋಚಿಸಬಹುದು. ನಿಜವಾಗಿ ನೋಡಲು ಈ ವಿಷಯವು ವಿಚಾರಾರ್ಹವಾದುದೇ! ಸಾಮಾನ್ಯವಾಗಿ ತಮ್ಮ ಬೋಧಿಸುವ ಕಾರ್ಯವನ್ನು ಯಾರೂ ಕಮ್ಮಿಮಾಡಿಲ್ಲ. ಎಲ್ಲರೂ ಬೋಧಿಸುವವರೇ. ಬೋಧಿಸುವುದೇನೋ ಸುಲಭ. ಅದರಂತೆ ನಡೆ ವುದು ಬಹು ಕಷ್ಟ. ನುಡಿದಂತೆ ನಡೆಯುವುದು ಮಾತ್ರ ಶ್ರಮಸಾಧ್ಯ.

ಉಪಾಧ್ಯಾಯನು ಸಮಸ್ತ ಸದ್ಗುಣ ಸದಾಚಾರಗಳಲ್ಲಿ ಮಕ್ಕಳಿಗೆ ಮೇಲ್ಪಂಕ್ತಿಯಾಗಿರಬೇಕು. 'ಗುರುವಿನಂತೆ ಶಿಷ್ಯ, ತಂದೆಯಂತೆ ಮಗ' ಎಂಬ ಅನುಭವಿಕರ ವಚನಗಳನ್ನು ನೋಡಿರಿ! ಗುರುವಿನ ಆಚಾರ ವ್ಯವಹಾರಗಳು ನಿರ್ದುಷ್ಟವಾದುದಲ್ಲವಾದರೆ ಮಕ್ಕಳ ನಡತೆಯ ಗತಿ ಏನು? ಹರಿದಾಸರು ಹರಿಕಥೆಯಲ್ಲಿ ಶ್ರೋತೃವೃಂದದ ಕಡೆಗೆ ತಿರುಗಿ 'ಮಾತಾಪಿತೃ ಭಕ್ತಿಯು ಮಾನವನ ಆದ್ಯಕರ್ತವ್ಯವು;' ಎಂದು ಬೋಧಿಸಿ, ಉತ್ತರ ಕ್ಷಣದಲ್ಲೇ ಮನೆಗೆ ಹೋಗಿ ತಾಯಿತಂದೆಗಳನ್ನು ಹಿಂಸಿಸುತ್ತಿದ್ದರೆ ಅವರ ಆ ಹುರುಳಿಲ್ಲದ ಒಣಬೋಧನೆಗೆ ಏನೆನ್ನಬೇಕು? ಹಾಗೆಯೇ ಉಪಾಧ್ಯಾಯನು ಮಕ್ಕಳಿಗೆ 'ವಿದ್ಯಾರ್ಥಿಗೆ ವಿನಯಾಭರಣವೇ ಮಂಗಳಾಲಂಕಾರವು;" ಎಂದು ಬೋಧಿಸಿ, ತಾನು ಮಾತ್ರ ಉದ್ಧಟನಾಗಿ ನಡೆಯುವುದೂ, 'ಗುರುಹಿರಿಯರನ್ನು ಕಂಡಾಗ ಭಯಭಕ್ತಿಯಿಂದ ವರ್ತಿಸಬೇಕು' ಎಂದು ಮಕ್ಕಳ ಮುಂದೆ ಉಪನ್ಯಸಿಸಿ, ನಮ್ಮ ಹಿರಿಯರನ್ನು ಕಂಡಾಗ ನಾವು ಮಾತ್ರ ಅಹಂಭಾವದಿಂದ ನೆರೆಯುತ್ತಿರುವುದೂ; ಹೀಗೆ ನಾವು ಹೇಳುವುದೊಂದು ಮಾಡುವುದೊಂದಾದರೆ-ಮಕ್ಕಳಿಗೂ ನಮ್ಮ ಮಾತಿನಲ್ಲಿ ವಿಶ್ವಾಸವು ತಪ್ಪಿಹೋಗಿ ದುರ್ನಡತೆಯುಳ್ಳವರಾಗುವರು. 'ನುಡಿದು ತೋರುವುದಕ್ಕಿಂತ ನಡೆದು ತೋರುವುದು ಲೇಸು,' 'ಅಡಿತೋರಿಸುವುದು ಅರುವತ್ತು ಗುಣ, ಮಾಡಿತೋರಿಸುವುದು ಮುನ್ನೂರು ಗುಣ' ಎಂಬ ಹಿತೋಕ್ತಿಗಳನ್ನು ಪರಾಮರ್ಶಿಸಿರಿ!

ಉಪಾಧ್ಯಾಯರು ಸಿಗರೇಟು, ಹೊಗೆಬತ್ತಿಗಳನ್ನು ಸೇದುವುದು ಮಹಾ ಕೆಟ್ಟದು ಎಂದು ಬಾಯಲ್ಲಿ ಬೋಧಿಸಿ, ಮಕ್ಕಳು ಮೂತ್ರಕ್ಕೆಂದು ಹೋದಕಾಲ ನೋಡಿ ತಾವು ಸಿಗರೇಟಿಗೆ ಬೆಂಕಿ ಹಚ್ಚಿ ಸೇದತೊಡಗಿದರೆ, ಮಕ್ಕಳು ಎಂದಾದರೊಂದು ದಿನ ಅದನ್ನು ಕಂಡು ತಾವೂ ಬಿಡರು. ಹೀಗಾದರೆ ಹೊಗೆಬತ್ತಿಯನ್ನು ಸೇದಲಾಗದೆಂದು

ಬೋಧಕರು ಕ್ಲಾಸಿನಲ್ಲಿ ವಾಕ್ಯಾಲಂಕಾರಕ್ಕಾಗಿ ಹೇಳಿದುದೇ ಹೊರತು ಹಾಗೆ ಮಾಡಲಿಕ್ಕಲ್ಲವೆಂದು ಅವರು ಭಾವಿಸುವುದರಲ್ಲಿ ಆಶ್ಚರ್ಯವೇನು?

ಇನ್ನು ಮೇಲ್ತರದ ವಾತಶಾಲೆಗಳಲ್ಲಿ ಕೆಲವರು ಅಲಂಕಾರ ಪ್ರಿಯರಾದ ಬೋಧಕರಿರುವರು ಎಂದು ಯೋಚಿಸಿರಿ! ಅದರಲ್ಲೂ ಅವರು ಪ್ರೀತಿಸುವುದು ವಿದೇಶೀಯಾಲಂಕಾರವನ್ನೇ ಎಂದು ಭಾವಿಸೋಣ. ಮೈಗೆ ವಾಸ್‌ಕೋಟು, ಲೋಂಗ್‌ಕೋಟು ಎಂಬ ತರ ತರದ ನಾಲ್ಕೈದು ಅಂಗಿಗಳನ್ನು ಸೇರಿಸಿಕೊಂಡು, ಕಾಲಿಗೆ ಬೂಟ್ಸು ಧರಿಸಿಕೊಂಡು ಶಾಲೆಗೆ ಬರುವರು. ಅಷ್ಟು ಮಾತ್ರವೆ? ನೆಕ್‌ಟ್ಯಾ ಎಂಬೊಂದು 'ಗಳವಾಶ'ವು ಬೇರೆ ಇರುವುದು. ಇದನ್ನೆಲ್ಲಾ ಕಣ್ಣಾರೆ ಪ್ರತಿನಿತ್ಯವೂ ಕಂಡ ಬಾಲಕನು ತನಗೂ ಅಂತಹದೊಂದು ಒದಗಿಸಿ ಕೊಡಬೇಕೆಂದು ಹಟಹಿಡಿವನು. ತಮ್ಮ ಮಕ್ಕಳ ಮೇಲಿನ ಮಮತೆಯಿಂದ ತಂದೆಯು ಅನಾವಶ್ಯಕ ದ್ರವ್ಯ ವ್ಯಯಮಾಡಿ ಮಗನಿಗೆ ಮಾಡಿ ಕೊಡುವನು. ಇಂತಹ ಉಡುಪುಗಳನ್ನು ಧರಿಸಿದೊಡನೇ ತಾನೇ ಒಬ್ಬ ಧೊರೆ ಎಂಬ ಅಹಂಭಾವನು ಮೊಳೆದೋರಿ ಕೊನೆಗೆ ಮನೆಯಲ್ಲಿ ಕೌಪೀನದಿಂದ ಇಲ್ಲವೆ ಪಂಚೆಯನ್ನುಟ್ಟುಕೊಂಡಿರುವ ತನ್ನ ತಂದೆಯನ್ನು ಕಂಡು, ಆ ಮಗನಿಗೆ ಅವರ ಮೇಲೆ ತಿರಸ್ಕಾರ ಭಾವನೆಯುಂಟಾಗುವುದೊಂದು ಸೋಜಿಗವಲ್ಲ.

ಮಹನೀಯರೇ! ನಮ್ಮ ಭರತಖಂಡದಲ್ಲಿ ಪ್ರಾಚೀನ ಕಾಲದಲ್ಲಿ ಎಷ್ಟು ಜನರು ಪಿತೃಭಕ್ತಿ ವಿಶಾರದರಾಗಿದ್ದರೆಂಬುದು ನಮ್ಮ ಇತಿಹಾಸ ಗ್ರಂಥಗಳಿಂದ ತಿಳಿಯುವುದಲ್ಲವೆ? ಅದೇ ಭರತಖಂಡದಲ್ಲಿ ಸಂಜನಿಸಿರುವ ಈಗಿನ ಮಕ್ಕಳು ಪಿತೃಭಕ್ತಿ ಶೂನ್ಯರಾಗುವುದು ಎಷ್ಟು ಶೋಚನೀಯಾಂಶವೆಂಬುದನ್ನು ವಿಚಾರಿಗಳಾದ ನೀವೇ ಯೋಚಿಸಿರಿ. ಆದುದರಿಂದ ಉಪಾಧ್ಯಾಯನ ವೇಷ, ಭೂಷಣಗಳೂ ಸಾಮ್ಯ ಸ್ವಭಾವದ್ದಾಗಿ ಸ್ವದೇಶ ಭಕ್ತಿ ಪ್ರದರ್ಶಕವಾಗಿರತಕ್ಕದ್ದು.

ಅದುಕಾರಣ ಮಹನೀಯರೇ! ಮೇಲೆ ಹೇಳಿದಂತೆ ಉಪಾಧ್ಯಾಯನ ಬಾಯಿಯಿಂದ ಹೊರ ಹೊರಡತಕ್ಕ ಪ್ರತಿಯೊಂದು ವಾಕ್ಯವೂ ನಿರ್ದುಷ್ಟವಾದುದಾಗಿರಬೇಕಲ್ಲದೆ ನಡವಳಿಕೆಯೂ ಕೂಡ ನಿರ್ದೋಷವಾದುದಾಗಿರಬೇಕು. ಸಾಮಾನ್ಯವಾಗಿ ಸಮಸ್ತರ ನಡತೆಗಳೂ ಒಳ್ಳೆಯದಾಗಿರಬೇಕಾದುದು ಅಗತ್ಯವಾದರೂ, ಉಪಾಧ್ಯಾಯನ ನಡತೆಯು ಪರಿಶುದ್ಧವಾಗಿರಲೇ ಬೇಕೆಂಬುದನ್ನು ಮಾತ್ರ ಮರೆಯಲಾಗದು. ಏಕೆಂದರೆ:— ಎಲ್ಲಿ ವಿದ್ಯೆಯು ನೆಲಸಿರುವುದೋ ಅಲ್ಲಿ ಸಮಸ್ತ ಸದ್ಗುಣಗಳು ನೆಲೆಯಾಗಿರತಕ್ಕುದು ಅವಶ್ಯ. ಇಲ್ಲದಿದ್ದರೆ ಆ ವಿದ್ಯೆಯು ಸರ್ವಾತ್ಮನಾ ಶೋಭಿಸಲಾರದು. ಸಾಧಾರಣವಾಗಿ ವಿಚಾರಿಸಿದರೆ ಉಪಾಧ್ಯಾಯನೇ ಗ್ರಾಮದಲ್ಲಿ ಇತರರೆಲ್ಲರಿಗಿಂತಲೂ ತಿಳುವಳಿಕೆಯುಳ್ಳ ಮನುಷ್ಯನೆಂದು ಪರಿಗಣಿಸಲ್ಪಡುವನು. ಮಿತ್ರರೇ! ಇದೇನು? ಊರವರಲ್ಲಿ ಎಷ್ಟೋ ಹೆಚ್ಚಿನ ಪರೀಕ್ಷೆಗಳಲ್ಲಿ ಉತ್ತೀರ್ಣರಾದವರನೇಕರಿರುವರು. ಹೀಗಿರುತ್ತಾ ನಾವು ನಮ್ಮನ್ನೇ ಹೊಗಳಿಕೊಳ್ಳುವ ಒಣಹೆಮ್ಮೆ ಏನಿದೆಂದು ಕೇಳುವಿರೆ? ಅದರೆ, ಬೋಧಕವರ್ಗ! ಇದೇನೂ ಹೆಮ್ಮೆಯಿಂದಾಡಿದ ಮಾತಲ್ಲ. ಉಪಾಧ್ಯಾಯರಿಗಿಂತ ಹೆಚ್ಚಿನ ಪಟ್ಟಪರೀಕ್ಷೆಗಳಲ್ಲಿ ತೇರ್ಗಡೆಯಾದವರು ಹೆತ್ತವರಲ್ಲೂ ಅನೇಕರಿರಬಹುದು. ಪರಂತು, ಅವರಲ್ಲಿ ಬಹುಪಕ್ಷ ಅವರ ಕಾರ್ಯಕಲಾಪಗಳಿಂದ ಆ ವಿದ್ಯೆಯು ಅಭಿವೃದ್ಧಿಯಾಗಲು ಮಾರ್ಗವಿಲ್ಲದೆ, ಅದೆಲ್ಲಾ ನಿತ್ಯ ಉಪಯೋಗಿಸದೆ ಇರುವ ಕಬ್ಬಿಣದ ಯಂತ್ರದಂತಾಗಿರಲೂ ಸಾಕು. ಉಪಾಧ್ಯಾಯನಿಗಾದರೋ, ಹಾಗಲ್ಲ. ಸದಾಕಾಲವೂ ಅದೇ ಯೋಚನೆ. ಉಪಾಧ್ಯಾಯನು ಅನುನಿತ್ಯವೂ ವಿದ್ಯಾಭ್ಯಾಸ ಮಾಡುತ್ತಿರಬೇಕು.. ಹೊಸ ಹೊಸ ತಿಳುವಳಿಕೆಯನ್ನು ಪಡೆಯುತ್ತಾ ತನ್ನ ಜ್ಞಾನಭಂಡಾರವನ್ನು ತುಂಬಿಸುತ್ತಿರಬೇಕು ಎಂದು ಉಪಾಧ್ಯಾಯನು ತನ್ನ ಸ್ವಂತ ವ್ಯಾಸಂಗವನ್ನು ಬಿಟ್ಟುಬಿಡುವನೋ,

ಅಂದೇ ತನ್ನ ವೃತ್ತಿಗೆ ರಾಜಿಕೊಡುವುದು ಉತ್ತಮೋತ್ತಮವೆಂದು ಒಬ್ಬ ಬುದ್ಧಿವಂತರು ಹೇಳಿರುವರು. ಇದರ ಮೇಲೆ ಉಪಾಧ್ಯಾಯರಾಗುವವರು ಎಷ್ಟು ಯೋಗ್ಯತೆಯುಳ್ಳವರಾಗಿರಬೇಕೆಂಬುದನ್ನು ತಿಲಾಂತ ಯೋಚಿಸಿದ್ದಲ್ಲಿ ತಿಳಿಯಬಹುದಲ್ಲವೆ? ಇಂತಹ ಉಪಾಧ್ಯಾಯರು ಗ್ರಾಮದಲ್ಲಿ ವಿದ್ಯಾವಂತರೊಳಗೆ ಪ್ರಮುಖರು ಎಂದು ಹೇಳಿರುವುದೊಂದು ಅತಿಶಯೋಕ್ತಿಯಲ್ಲ ಎಂಬುದು ಈಗ ತಿಳಿಯಲಾರದೆ?

ಆದುದರಿಂದ ಇಂತಹ ಮಹತ್ವವಾದ ವೃತ್ತಿಯನ್ನವಲಂಬಿಸಿದ ಬೋಧಕ ವರ್ಗದ ನಡತೆಯೇ ಚಲೋದಾಗಿರದಿದ್ದರೆ, ಇತರ ವೃತ್ತಿಗಳಲ್ಲಿ ಅಹರ್ನಿಶಿಯೂ ದುಡಿಯುತ್ತಿರುವ ಹೆತ್ತವರು ಸದಾಚಾರಿಗಳೂ, ಸಚ್ಛೀಲರೂ ಆಗಿರಬೇಕೆಂಬುದು ಹೇಗೆ? ಊರಿಗೆ ಆದರ್ಶರಾಗಿರತಕ್ಕ ಉಪಾಧ್ಯಾಯರೇ 'ಬಾಯಲ್ಲೊಂದು ಕಾರ್ಯದಲ್ಲೊಂದು' ಎಂಬಂತೆ ನಡೆಯುವ ಸ್ವಭಾವದವರಾಗಿದ್ದರೆ ಊರವರು ಮೇಲೆ ಹೇಳಿದಂತೆ ನಡೆಯುವುದೊಂದು ವಿಶೇಷವಲ್ಲ. ನಾವು ಹಾಕಿ ಕೊಡುವ ಮೇಲ್ಪಂಕ್ತಿಯ ಬರಹವು ಚಲೋದಿದ್ದರೆ ಮಕ್ಕಳು ಅದನ್ನು ಕಂಡು ಸಾಧಾರಣವಾದರೂ ಬರೆವರು. ನಮ್ಮ ಬರಹವೇ ಸಾಮಾನ್ಯವಾದರೆ ಮಕ್ಕಳ ಬರಹವು ಅದರಿಂದ ಕೀಳಾಗುವುದು ಸ್ವಾಭಾವಿಕ. ಅದು ಕಾರಣ, ಮಹಾಭಾಗಾ! ಸಮಸ್ತರಿಗೂ ನಮ್ಮ ಪ್ರತಿಯೊಂದು ನಡತೆಗಳೂ ಮೇಲ್ಪಂಕ್ತಿಯಾಗಿರಬೇಕಾದುದು ಅಗತ್ಯವಾದುದರಿಂದ 'ನುಡಿದಂತೆ ನಡೆ'ವ ಹಾಗೆ ಯತ್ನಿಸುತ್ತಿರುವುದು ಉಪಾಧ್ಯಾಯನ ಮುಖ್ಯ ಕರ್ತವ್ಯವೆಂಬುದು ವಿಚಾರಿಗಳಾದ ತಮಗೆಲ್ಲರಿಗೆ ಬೇರೆ ಹೇಳಬೇಡವಷ್ಟೆ?

ಪರೋಪದೇಶ ಸಮಯೇ ಜನಾಸ್ಸರ್ವೇಪಿ ಪಂಡಿತಾಃ।
ತವನುಷ್ಠಾನ ಸಮಯೇ ಮುನಯೋಽಪಿ, ನಪಂಡಿತಾಃ॥

ಎಂದರೆ, ಇತರರಿಗೆ ಬೋಧಿಸುವುದರಲ್ಲಿ ಜನರೆಲ್ಲರೂ ಪಂಡಿತರಾಗಿರುತ್ತಾರೆ. ಅದನ್ನು ತಾನೇ ಅನುಷ್ಠಿಸುವ ಸಮಯದಲ್ಲಿ ಮುನಿಯಾದರೂ ಕೇವಲ ಮೂಢನಂತಿರುವನು; ಎಂಬ ಸಾಮಾನ್ಯವಾಕ್ಯಕ್ಕನುಸಾರವಾಗಿ ಆಗದಂತೆ ಎಚ್ಚರಿಕೆಯಿಂದಿದ್ದು, "ಮನಸ್ಯೇಕಂ ವಚಸ್ಯೇಕಂ ಕರ್ಮಣ್ಯೇಕಂ ಮಹಾತ್ಮನಾ" ಮನಸ್ಸಿನಲ್ಲಿಯೂ ಮಾತಿನಲ್ಲಿಯೂ, ಕಾರ್ಯದಲ್ಲಿಯೂ ಒಂದೇಯಾಗಿರುವ ಮಹಾತ್ಮರ ಮಾರ್ಗವನ್ನನುಸರಿಸಿರುವುದು ಮೇಲಾದುದೆಂದು ಹೇಳುವುದು ಈ ಸಂದರ್ಭದಲ್ಲಿ ಸಾಕಾಗಿದೆ ಎಂದು ತೋರುತ್ತದೆ.

ಹೀಗೆ ಉಪಾಧ್ಯಾಯರು ಒಳ್ಳಡತೆಯವರಾಗಿದ್ದು ತಮ್ಮ ನಡೆನುಡಿಗಳಿಂದ ಮಕ್ಕಳನ್ನು ತಿದ್ದುತ್ತಿರುವುದು ಮಾತ್ರವಲ್ಲದೆ, ಊರಿನ ಜನರೆಲ್ಲರಿಗೂ ಸಮಯೋಚಿತ ಹಿತಸೂಚನೆಗಳನ್ನು ಸೂಚಿಸುತ್ತಿದ್ದು ತದ್ವತ್ ನಡೆದು ತೋರಿಸಿ, ತಾವೊಂದು ನಿದರ್ಶನ ಪುರುಷರಾಗಿದ್ದುದಾದರೆ ಗ್ರಾಮಸ್ಥರಾದ ಹೆತ್ತವರಿಗೂ, ಶಿಕ್ಷಕರಿಗೂ ಪರಸ್ಪರ ಸೌಹಾರ್ದವು ಉಂಟಾಗುವುದರಲ್ಲಿ ಅಡ್ಡಿ ಇಲ್ಲ. ಉಪಾಧ್ಯಾಯರಿಗೂ ಹೆತ್ತವರಿಗೂ ಪರಸ್ಪರ ಅನುರಾಗವು ಮೊಳೆದೋರಿ ಬೆಳೆಯಲಾರಂಭವಾಯಿತೆಂದರೆ, ಮಕ್ಕಳ ವಿದ್ಯಾಭ್ಯಾಸ ಕಾರ್ಯವೂ ಸುಸೂತ್ರವಾಗಿ ಸಾಗಿ ಗ್ರಾಮವೇ ಸುಖ ಸಂತೋಷ ಭರಿತವಾಗುವುದರಲ್ಲಿ ಆಶ್ಚರ್ಯವೇನು? ಇಲ್ಲಿ ಇನ್ನೊಂದು ವಿಷಯವನ್ನು ಹೇಳಿದರೆ ಗುಣಗ್ರಾಹಿಗಳಾದ ಶ್ರೋತೃಗಳು ಬೇಸರಪಡಲಾರರೆಂದು ನಂಬಿರುವೆನು.

ಉಪಾಧ್ಯಾಯರು ಗ್ರಾಮಸ್ಥರ ಪ್ರೀತಿಗೆ ಪಾತ್ರರಾಗುವ ಬದಲು ಕೋಪಕ್ಕೆ ಗುರಿಯಾಗಲು ಕೆಲವು ಕಾರಣಗಳಿವೆ. ಉಪಾಧ್ಯಾಯರಾದವರು ಕೋರ್ಟು ಕಛೇರಿಗಳಿಗೆ ಸಾಕ್ಷಿಗಳಾಗಿಯೋ, ವಾದಿ, ಪ್ರತಿವಾದಿಗಳಾಗಿಯೋ, ಅಪರಾಧಿಗಳಾಗಿಯೋ ತಿರುಗುತ್ತಿರುವುದೂ; ಏಕಪಕ್ಷವಾಗಿ ಪಂಚಾಯಿತಿಕೆದಾರರಾಗಿ ಸೇರಿದಾ ಗ್ರಾಮಸ್ಥರಲ್ಲಿ

ಹೋರಾಡುತ್ತಿರುವುದೂ ಮೊದಲಾದ ನ್ಯಾಯ ಸಮ್ಮತವಲ್ಲದ ಕಾರ್ಯಗಳಲ್ಲಿ ಪ್ರವರ್ತಿಸುತ್ತಿರುವುದು ಗ್ರಾಮಸ್ಥರಲ್ಲಿ ಮನಃಕ್ಲೇಶವನ್ನುಂಟು ಮಾಡುವುದು. ಸ್ವಾಭಾವಿಕವಾಗಿ ದಯಾಳುಗಳೂ, ನೀತಿವಿಚಾರದರೂ ಆಗಿರಬೇಕಾದ ಉಪಾಧ್ಯಾಯರು ಇಂತಹ ಹಟಸಾಧನೆಯ ಕಾರ್ಯದಲ್ಲಿ ಸೇರಿ, ತಮ್ಮ ಹೃದಯ ಕಾಠಿಣ್ಯವನ್ನೂ, ಪಿಸುಣತೆಯನ್ನೂ, ದುರಾಲೋಚನಾಸಕ್ತತೆಯನ್ನೂ ಪ್ರದರ್ಶಿಸಿ ಮಾನವ ವರ್ಗದಲ್ಲಿ ಅತಿ ನೀಚರೆಂದು ಹೇಳಿಸಿಕೊಳ್ಳುವುದು ತುಂಬಾ ವಿಷಾದಕರ ಸಂಗತಿಯಾಗಿದೆ. ಇದರಿಂದಲೇ ಉಪಾಧ್ಯಾಯರನ್ನು ತಮ್ಮ ಮಕ್ಕಳ ಮುಂದೆಯೇ ಹೆತ್ತವರು ಮನಸ್ವೀ ನಿಂದಿಸಲು ಕಾರಣವಾಗುವುದು. ಈ ನಿಂದೆಯನ್ನು ಕೇಳಿದ ಮಕ್ಕಳ ಮನಸ್ಸಿನಲ್ಲಿ ಗುರುವಿನಲ್ಲಿದ್ದ ಪೂಜ್ಯ ಭಾವವು ಪೂಜ್ಯಸ್ಥಾನ(೦)ವನ್ನು ಹೊಂದುವುದು. ಇದನ್ನು ಹಿಂದೆಯೊಂದು ಸಲ ಹೇಳಿರುವೆನು. ಮುಖ್ಯತಾ ಇಂತಹ ದೂಷ್ಯಕಾರ್ಯಗಳಲ್ಲಿ ಪ್ರವರ್ತಿಸುವುದರಿಂದ ಉಪಾಧ್ಯಾಯನು ಗ್ರಾಮಸ್ಥನ ಪ್ರೀತಿಯನ್ನು ಸಂಪಾದಿಸುವುದರ ಬದಲು ಅಗ್ರಹವನ್ನು ಘಳಿಸುತ್ತಾನಾದುದರಿಂದ ಇಂತಹ ನಿಂದಾರ್ಹವಾದ ಕಾರ್ಯಗಳಿಗೆಂದಿಗೂ ಉಪಾಧ್ಯಾಯನು ಹೋಗುವುದನುಚಿತ. ಮಾತ್ರವಲ್ಲದೆ, ಉಪಾಧ್ಯಾಯನು ತನ್ನ ವೃತ್ತಿಯ ನಡುವೆ ಬೇರೆ ವೃತ್ತಿಗಳಲ್ಲಿ ಕೈಹಾಕಿದುದಾದರೆ ಅವನ ಸ್ವಂತ ಕಾರ್ಯವು ಸಮರ್ಪಕವಾಗಿ ಸಾಗದು. ಈ ವಿಷಯದಲ್ಲಿ ಗ್ರಾಮಸ್ಥರಾದ ನಮ್ಮ ಸನ್ಮಾನನೀಯ ಭ್ರಾತೃಗಳಿಗೊಂದು ಮಾತು ಹೇಳದೆ ಇರಲು ನಮ್ಮಿಂದಾಗದು.

ಯಾವುದೊಂದು ಕೆಲಸವೂ ಶ್ರದ್ಧಾಪೂರ್ವಕವೂ, ಸರ್ವಸಮ್ಮತವೂ ಆಗಿ ಸಾಗಬೇಕಾದರೆ ಆ ಕರ್ಮಗಾತನ ಮನವು ಉತ್ಸಾಹಭರಿತವಾದುದಾಗಿರಬೇಕೆಂಬುದು ನಿಜವಷ್ಟೆ? ಉಪಾಧ್ಯಾಯನಂತೂ ಸರ್ವದಾ ಸಂತೋಷಭರಿತನಾಗಿರಬೇಕಾದುದು ಅತೀವ ಅಗತ್ಯ. ಆದರೆ,

ಆ ರೀತಿ ಉತ್ತೇಜನ ಉದ್ಭವಿಸಲು ಆಯಾಯ ಕೆಲಸದ ತತ್ಕಾಲ ಲಭಿಸುವ ಫಲವೇ ಕಾರಣವೆಂಬುದು ಸರ್ವವಿದಿತವೇ! ಇನ್ನು ಈ ಉಪಾಧ್ಯಾಯನಿಗಾದರೋ, ಸರಕಾರದಿಂದ ದೊರೆಯುವ ದ್ರವ್ಯವು ಬಹು ಅಲ್ಪವಾದುದು. ಇದೆಂತಹ ಕಷ್ಟ? ಜನಾಂಗದ ಏಳ್ಗೆಗೂ, ದೇಶಾಭ್ಯುದಯಕ್ಕೂ ಮೂಲಕಾರಣವಾದ ವಿದ್ಯೆಯನ್ನು ಅಭಿವೃದ್ಧಿಮಾಡುವ ಸತ್ಕಾರ್ಯವನ್ನವಲಂಬಿಸಿರುವ ಉಪಾಧ್ಯಾಯರಿಗೆ ಹೊಟ್ಟೆ, ಬಟ್ಟೆಗೆ ಸಮೃದ್ಧವಾದಷ್ಟು ಧನಸಹಾಯವು ದೊರೆಯದಿರುವುದು ಎಂತಹ ಶೋಚನೀಯಾಂಶವೆಂಬುದನ್ನು ಯೋಚಿಸಿರಿ! ಆದರೆ, ಇದರಿಂದ ಸರಕಾರವನ್ನು ದೂಷಿಸಬಹುದೊ? ಎಂದಿಗೂ ಕೂಡದು. ಇಡೀ ರಾಜ್ಯಕ್ಕೇ ಹಲವು ವಿಧದಿಂದ ಆಗಾಗ ಅಸಂಖ್ಯ ದ್ರವ್ಯವ್ಯಯ ಮಾಡಬೇಕಾದ ರಾಜರಿಗೆ, ಹೀಗೆ ಸರ್ವ ಸಂಗತಿಗಳಿಗೂ ಸಂಪೂರ್ಣ ಸಹಾಯ ಮಾಡುವುದೆಂದರೆ ಹೇಗೆ ತಾನೆ ಸಾಧ್ಯ? ಹಾಗಾದರೆ ಅದಾರು ಸಹಾಯ ಮಾಡಬೇಕು? ಎಂದು ಯೋಚಿಸುವಿರೇನೋ! ನೋಡಿರಿ! ಜ್ಞಾನದಾಯಕವಾದ ವಿದ್ಯೆಯನ್ನಿತ್ತು ಕರುಣಿಸಿದ ಗುರುವಿಗೆ ಪೂರ್ವಕಾಲದಲ್ಲಿ ಎಂತಹ ಗೌರವಗಳೂ, ಮಾನಮರ್ಯಾದೆಗಳೂ, ಸಲ್ಲುತ್ತಿದ್ದುವು? ಜನರು ಅದೆಂತಹ ಸಹಾಯ ಸಾಧನ ಸಂಪತ್ತುಗಳನ್ನೊದಗಿಸಿ ಕೊಡುತ್ತಿದ್ದರು? ಮಾತ್ರವಲ್ಲದೆ, ತಮ್ಮ ಮಕ್ಕಳಿಗೆ ಕಲ್ಪತರುವಿನಂತಿರುವ ವಿದ್ಯೆಯನ್ನು ಕೊಟ್ಟುದಕ್ಕೆ ನಾವು ಏನು ಉಪಕಾರ ಮಾಡಿದರೂ ಸಾಲವೆಂದೇ ಭಾವಿಸಿ, ಸರ್ವ ಕಾರ್ಯಗಳಲ್ಲೂ ಉಪಾಧ್ಯಾಯರಿಗೆ ಸಹಾಯಕರಾಗಿಯೇ ಇರುತ್ತಿದ್ದರೆಂಬುದನ್ನು ಪ್ರಾಚೀನ ಕಾಲದ ಗುರುಮಠಗಳ ಚರಿತ್ರೆಗಳನ್ನು ಓದಿದರೆ ವ್ಯಕ್ತವಾಗುವುದು. ಅದರ ಮೇಲೆಯೂ ಇತ್ತಲಾಗಿನ ಐಗಳಮಠವೆಂದು ಕರೆಯಿಸಿಕೊಳ್ಳುವ ಶಾಲೆಗಳಿರುವಾಗಲೂ ಮಕ್ಕಳ ರಕ್ಷಕರು ಉಪಾಧ್ಯಾಯರಿಗೆ ಸರ್ವವಿಧದಿಂದಲೂ ಕೈಲಾದಷ್ಟು ಸಹಾಯಮಾಡುತ್ತಿದ್ದರೆಂಬುದು ಕೂಡಾ

ಹೋರಾಡುತ್ತಿರುವುದೂ ಮೊದಲಾದ ನ್ಯಾಯ ಸಮ್ಮತವಲ್ಲದ ಕಾರ್ಯ ಗಳಲ್ಲಿ ಪ್ರವರ್ತಿಸುತ್ತಿರುವುದು ಗ್ರಾಮಸ್ಥರಲ್ಲಿ ಮನಃಕ್ಲೇಶವನ್ನುಂಟು ಮಾಡುವುದು. ಸ್ವಾಭಾವಿಕವಾಗಿ ದಯಾಳುಗಳೂ, ನೀತಿವಿಚಾರದರೂ ಆಗಿರಬೇಕಾದ ಉಪಾಧ್ಯಾಯರು ಇಂತಹ ಹಟಸಾಧನೆಯ ಕಾರ್ಯದಲ್ಲಿ ಸೇರಿ, ತಮ್ಮ ಹೃದಯ ಕಾಠಿಣ್ಯವನ್ನೂ, ಪಿಸುಣತೆಯನ್ನೂ, ದುರಾ ಲೋಚನಾಸಕ್ತತೆಯನ್ನೂ ಪ್ರದರ್ಶಿಸಿ ಮಾನವ ವರ್ಗದಲ್ಲಿ ಅತಿ ನೀಚ ರೆಂದು ಹೇಳಿಸಿಕೊಳ್ಳುವುದು ತುಂಬಾ ವಿಷಾದಕರ ಸಂಗತಿಯಾಗಿದೆ. ಇದರಿಂದಲೇ ಉಪಾಧ್ಯಾಯರನ್ನು ತಮ್ಮ ಮಕ್ಕಳ ಮುಂದೆಯೇ ಹೆತ್ತವರು ಮನಸ್ಸೀ ನಿಂದಿಸಲು ಕಾರಣವಾಗುವುದು. ಈ ನಿಂದೆ ಯನ್ನು ಕೇಳಿದ ಮಕ್ಕಳ ಮನಸ್ಸಿನಲ್ಲಿ ಗುರುವಿನಲ್ಲಿದ್ದ ಪೂಜ್ಯ ಭಾವವು ಪೂಜ್ಯಸ್ಥಾನ(೦)ವನ್ನು ಹೊಂದುವುದು. ಇದನ್ನು ಹಿಂದೆ ಯೊಂದು ಸಲ ಹೇಳಿರುವೆನು. ಮುಖ್ಯತಾ ಇಂತಹ ದೂಷ್ಯಕಾರ್ಯ ಗಳಲ್ಲಿ ಪ್ರವರ್ತಿಸುವುದರಿಂದ ಉಪಾಧ್ಯಾಯನು ಗ್ರಾಮಸ್ಥನ ಪ್ರೀತಿ ಯನ್ನು ಸಂಪಾದಿಸುವುದರ ಬದಲು ಆಗ್ರಹವನ್ನು ಘಳಿಸುತ್ತಾನಾದು ದರಿಂದ ಇಂತಹ ನಿಂದಾರ್ಹವಾದ ಕಾರ್ಯಗಳಿಗೆಂದಿಗೂ ಉಪಾಧ್ಯಾ ಯನು ಹೋಗುವುದನುಚಿತ. ಮಾತ್ರವಲ್ಲದೆ, ಉಪಾಧ್ಯಾಯನು ತನ್ನ ವೃತ್ತಿಯ ನಡುವೆ ಬೇರೆ ವೃತ್ತಿಗಳಲ್ಲಿ ಕೈಹಾಕಿದುದಾದರೆ ಅವನ ಸ್ವಂತ ಕಾರ್ಯವು ಸಮರ್ಪಕವಾಗಿ ಸಾಗದು. ಈ ವಿಷಯದಲ್ಲಿ ಗ್ರಾಮಸ್ಥರಾದ ನಮ್ಮ ಸನ್ಮಾನನೀಯ ಭ್ರಾತೃಗಳಿಗೊಂದು ಮಾತು ಹೇಳದೆ ಇರಲು ನಮ್ಮಿಂದಾಗದು.

ಯಾವುದೊಂದು ಕೆಲಸವೂ ಶ್ರದ್ಧಾಪೂರ್ವಕವೂ, ಸರ್ವಸಮ್ಮತ ವೂ ಆಗಿ ಸಾಗಬೇಕಾದರೆ ಆ ಕರ್ಮಗಾರನ ಮನವು ಉತ್ಸಾಹಭರಿತ ವಾದುದಾಗಿರಬೇಕೆಂಬುದು ನಿಜವಷ್ಟೆ? ಉಪಾಧ್ಯಾಯನಂತೂ ಸರ್ವ ದಾ ಸಂತೋಷಭರಿತನಾಗಿರಬೇಕಾದುದು ಅತೀವ ಅಗತ್ಯ. ಆದರೆ,

ಆ ರೀತಿ ಉತ್ತೇಜನ ಉದ್ಭವಿಸಲು ಆಯಾಯ ಕೆಲಸದ ತತ್ಕಾಲ ಲಭಿಸುವ ಫಲವೇ ಕಾರಣವೆಂಬುದು ಸರ್ವವಿದಿತವೇ! ಇನ್ನು ಈ ಉಪಾಧ್ಯಾಯನಿಗಾದರೋ, ಸರಕಾರದಿಂದ ದೊರೆಯುವ ದ್ರವ್ಯವು ಬಹು ಅಲ್ಪವಾದುದು. ಇದೆಂತಹ ಕಷ್ಟ? ಜನಾಂಗದ ಏಳ್ಗೆಗೂ, ದೇಶಾಭ್ಯುದಯಕ್ಕೂ ಮೂಲಕಾರಣವಾದ ವಿದ್ಯೆಯನ್ನು ಅಭಿವೃದ್ಧಿಮಾಡುವ ಸತ್ಕಾರ್ಯವನ್ನವಲಂಬಿಸಿರುವ ಉಪಾಧ್ಯಾಯರಿಗೆ ಹೊಟ್ಟೆ, ಬಟ್ಟೆಗೆ ಸಮೃದ್ಧವಾದಷ್ಟು ಧನಸಹಾಯವು ದೊರೆಯದಿರುವುದು ಎಂತಹ ಶೋಚನೀಯಾಂಶವೆಂಬುದನ್ನು ಯೋಚಿಸಿರಿ! ಆದರೆ, ಇದರಿಂದ ಸರಕಾರವನ್ನು ದೂಷಿಸಬಹುದೊ? ಎಂದಿಗೂ ಕೂಡದು. ಇಡೀ ರಾಜ್ಯಕ್ಕೇ ಹಲವು ವಿಧದಿಂದ ಆಗಾಗ ಅಸಂಖ್ಯ ದ್ರವ್ಯವ್ಯಯ ಮಾಡಬೇಕಾದ ರಾಜರಿಗೆ, ಹೀಗೆ ಸರ್ವ ಸಂಗತಿಗಳಿಗೂ ಸಂಪೂರ್ಣ ಸಹಾಯ ಮಾಡುವುದೆಂದರೆ ಹೇಗೆ ತಾನೆ ಸಾಧ್ಯ? ಹಾಗಾದರೆ ಅದಾರು ಸಹಾಯ ಮಾಡಬೇಕು? ಎಂದು ಯೋಚಿಸುವಿರೇನೋ! ನೋಡಿರಿ! ಜ್ಞಾನದಾಯಕವಾದ ವಿದ್ಯೆಯನ್ನಿತ್ತು ಕರುಣಿಸಿದ ಗುರುವಿಗೆ ಪೂರ್ವಕಾಲದಲ್ಲಿ ಎಂತಹ ಗೌರವಗಳೂ, ಮಾನಮರ್ಯಾದೆಗಳೂ, ಸಲ್ಲುತ್ತಿದ್ದುವು? ಜನರು ಅದೆಂತಹ ಸಹಾಯ ಸಾಧನ ಸಂಪತ್ತುಗಳನ್ನೊದಗಿಸಿ ಕೊಡುತ್ತಿದ್ದರು? ಮಾತ್ರವಲ್ಲದೆ, ತಮ್ಮ ಮಕ್ಕಳಿಗೆ ಕಲ್ಪತರುವೆನಿಸಿರುವ ವಿದ್ಯೆಯನ್ನು ಕೊಟ್ಟುದಕ್ಕೆ ನಾವು ಏನು ಉಪಕಾರ ಮಾಡಿದರೂ ಸಾಲವೆಂದೇ ಭಾವಿಸಿ, ಸರ್ವ ಕಾರ್ಯಗಳಲ್ಲೂ ಉಪಾಧ್ಯಾಯರಿಗೆ ಸಹಾಯಕರಾಗಿಯೇ ಇರುತ್ತಿದ್ದರೆಂಬುದನ್ನು ಪ್ರಾಚೀನ ಕಾಲದ ಗುರುಮಠಗಳ ಚರಿತ್ರೆಗಳನ್ನು ಓದಿದರೆ ವ್ಯಕ್ತವಾಗುವುದು. ಅದರ ಮೇಲೆಯೂ ಇತ್ತಲಾಗಿನ ಏಗಳಮಠವೆಂದು ಕರೆಯಿಸಿಕೊಳ್ಳುವ ಶಾಲೆಗಳಿರುವಾಗಲೂ ಮಕ್ಕಳ ರಕ್ಷಕರು ಉಪಾಧ್ಯಾಯರಿಗೆ ಸರ್ವವಿಧದಿಂದಲೂ ಕೈಲಾದಷ್ಟು ಸಹಾಯಮಾಡುತ್ತಿದ್ದರೆಂಬುದು ಕೂಡಾ

ನಮ್ಮ ಹಿಂದಿನ ಗ್ರಂಥಗಳಿಂದ ತಿಳಿದುಬರುವುದು. ಲೇಖನ ವಿಸ್ತೃತ ಭಯದಿಂದ ಅದನ್ನಿಲ್ಲಿ ವಿಶದಗೊಳಿಸಲಾಗುವುದಿಲ್ಲವೆಂಬುದನ್ನು ಬಿನ್ನವಿಸುವೆನು.

ಈಗಲಾದರೋ ಉಪಾಧ್ಯಾಯರಿಗೆ ಸರಕಾರದವರು ಕೊಡುವ ರೆಂಬುದರಿಂದಲೋ, ಇನ್ನಾವಕಾರಣದಿಂದಲೋ ಗ್ರಾಮಸ್ಥರ ಸಹಾಯವು ಅತೀ ಕಮ್ಮಿಯಾಗುತ್ತಾ ಬಂದಿದೆ. ಸರಕಾರದವರಿಂದ ಲಭಿಸುವ ಉಪಪತ್ತಿಯು ಉಪಾಧ್ಯಾಯನೊಬ್ಬನ ಧಾರಾಳ ಖರ್ಚಿಗೂ ಸಾಲದೆಂದ ಮೇಲೆ, ಗ್ರಾಮಸ್ಥರ ಆದರವು ಈ ರೀತಿ ಕಮ್ಮಿಯಾಗುತ್ತಾ ಬಂದ ಮೇಲೆ ಉಪಾಧ್ಯಾಯರ ಜೀವನ ನಿರ್ವಹಣ ವಿಷಯದಲ್ಲಿ ತುಂಬಾ ಕಷ್ಟವೆಂದು ಸಕಲರಿಗೂ ತಿಳಿದೇ ಇದೆ. ಇಂತಹ ಕಾಲದಲ್ಲಿ ಉಪಾಧ್ಯಾಯರುಗಳು ಮೇಲೆ ಹೇಳಿದಂತೆ ಇತರ ಕಾರ್ಯಗಳಲ್ಲಿ ಸೇರುವರು. ಯಾವಾಗ ಮನುಷ್ಯನು ಅನ್ಯಯೋಚನೆಗಳಲ್ಲಿ ಸಿಲುಕಿದನೋ ಆಗ ಅವನ ಮುಖ್ಯಕಾರ್ಯವು ಸರಿಯಾಗಿ ನೆರವೇರಲು ತೊಡಕಾದುದು. ಬೋಧಕನು ಪಾಠಶಾಲೆಯಲ್ಲಿ ಪಾಠ ಹೇಳಿಕೊಡುವಾಗ ಅವನ ಮನಸ್ಸು ಬೇರೊಂದು ಜೀವನ ಮಾರ್ಗದ ಮೇಲೆ ಇದ್ದುದಾದರೆ ಅವನ ಪಾಠವದೆಷ್ಟು ಸ್ವಾರಸ್ಯವಾದೀತು? ಅದರಿಂದ ಮಕ್ಕಳೆಷ್ಟು ಉತ್ತಮರಾಗಬಲ್ಲರು? ಮಿತ್ರರಿಗಳೇ! ಯೋಚಿಸಿ ನೋಡಬೇಕು. ಇದಕ್ಕೇನು ಮಾಡೋಣ? ಎಂದು ಕೇಳುವಿರೆ? ಬಂಡಿಯನ್ನೆಳೆವ ಒಂದು ಕುದುರೆಯು ಬಡವಾದರೆ ಪುಷ್ಟವಾದ ಬೇರೊಂದು ಕುದುರೆಯು ಸಹಾಯಕವಾಗಿ ತಾನು ಹೆಚ್ಚು ಶಕ್ತಿಕೊಟ್ಟು ಹೇಗೆ ಬಂಡಿಯನ್ನೆಳೆಯಬೇಕೋ, ಹಾಗೆಯೇ ಉಪಾಧ್ಯಾಯರೆಂಬ ಕುದುರೆಗೆ ಹೆತ್ತವರೆಂಬ ಕುದುರೆಯೂ ಸಹಾಯಕವಾಗಿ ವಿದ್ಯಾರ್ಥಿಗಳೆಂಬ ಬಂಡಿಯನ್ನೆಳೆವ ಕಾರ್ಯದಲ್ಲುದ್ಯುಕ್ತರಾಗಬೇಕಾದುದು ಧರ್ಮವಲ್ಲವೆ? ತಮ್ಮ ಮಕ್ಕಳ ಮೇಲ್ಮೆಯನ್ನೇ ತ್ರಿಕರಣ ಪೂರ್ವಕವಾಗಿ ಭಾವಿಸು

ತ್ತಿರುವ ಹೆತ್ತವರು ತಮ್ಮ ಮಕ್ಕಳಿಗೆ ವಿದ್ಯೆಯನ್ನು ಕೊಟ್ಟು ಬುದ್ಧಿವಂತರನ್ನಾಗಿ ಮಾಡುವ ಗುರುವಿಗೆ ಕೈಲಾದಷ್ಟು ಸಹಾಯ ಮಾಡುವುದು ಹೆತ್ತವರ ಮುಖ್ಯ ಕರ್ತವ್ಯವಲ್ಲವೆ?

ಮಾನ್ಯರೇ! ಈ ಸಂಗತಿಯನ್ನು ಇಲ್ಲಿ ಉದಹರಿಸಿದುದೇಕೆಂದರೆ:- ಕೆಲವು ಹಳ್ಳಿಶಾಲೆಗಳಲ್ಲಿ ಇತರ ರೀತಿಯ ಸಹಾಯವಿರಲಿ, ತಿಂಗಳಿಗೊಮ್ಮೆ ಕೊಡುವಂತೆ ನಿಷ್ಕರ್ಷಿಸಿರುವ ಅಲ್ಪ ಸಂಬಳವನ್ನೇ ಹೆತ್ತವರು ಕ್ರಮವಾಗಿ ಕೊಡುವುದಿಲ್ಲವೆಂದು, ಅಂತಹ ಶಾಲೆಗಳ ಉಪಾಧ್ಯಾಯರ ಬಾಯಿಂದ ಆಗಾಗ ಕೇಳಿರುವೆನು. ಇದು ಬಹು ಶೋಚನೀಯಾಂಶವು. ಅದುಕಾರಣ ಪ್ರತಿಯೊಬ್ಬರೂ ಕೂಡಿದಷ್ಟು ಸಹಾಯಕರಾಗುವುದಲ್ಲದೆ, ಪ್ರತಿ ತಿಂಗಳ 10 ಇಲ್ಲವೆ 15 ತೀದಿಯೊಳಗೆ ಸಂಬಳವನ್ನು ಸಲ್ಲಿಸದೆ ಇರಲಾಗದು.

ಆದರೆ ಈ ಕುರಿತು ನಮ್ಮ ಮಿತ್ರರಾದ ಉಪಾಧ್ಯಾಯರಿಗೂ ಒಂದು ಮಾತು ಹೇಳುವುದು ಆವಶ್ಯವದೆ. ಏನೆಂದರೆ,- ಹೆತ್ತವರಾರೂ ಸಹಾಯಮಾಡುವುದಿಲ್ಲವೆಂದೂ, ಸರಕಾರ ಸಹಾಯವು ಅಲ್ಪವಾಗಿರುವುದೆಂದೂ ನಾವು ಮನಕಂದಿ "ದಕ್ಷಿಣೆ ಎಷ್ಟೋ ಪ್ರದಕ್ಷಿಣೆಯಷ್ಟೆ" ಎಂಬಂತೆ ಕೆಲಸ ಮಾಡುವುದು ಸರ್ವಥಾ ನಮ್ಮ ಪದವಿಗೆ ಯೋಗ್ಯವಲ್ಲ. ಕೇವಲ ಪ್ರತಿಫಲದ ದೃಷ್ಟಿಯಿಂದಲೇ ಕೆಲಸ ಮಾಡುವ ಸ್ವಾರ್ಥಪರನು ನೀಚವರ್ಗದವನು ಎಂದು ನೀತಿಜ್ಞರ ಮತ. ಈ ಸಂದರ್ಭದಲ್ಲಿ ದಕ್ಷಿಣೆ ಎತ್ತಾದರೇನು? ಪ್ರದಕ್ಷಿಣೆಯ ಫಲವಾದರೂ ಬರಲಿ! ಎಂದು ಇರುವುದು ಮೇಲಾದುದು. ಆದುದರಿಂದ ನಮ್ಮ ಮನಸ್ಸಾಕ್ಷಿಗೆ ಹೆದರಿ ನಾವು ಕೈಕೊಂಡ ಕಾರ್ಯವನ್ನು ಸರಿಯಾಗಿ ನೆರವೇರಿಸುವುದೇ ನಮ್ಮ ಧರ್ಮ. ಹಾಗೆ ನಾವು ತತ್ಕಾಲ ಸರಿಯಾದ ಫಲವು ದೊರೆಯದಿದ್ದರೂ ನಮ್ಮ ಕೆಲಸವನ್ನು ಸರ್ವ ಸಮ್ಮತವಾಗಿ ಕ್ರಮವಾದ ರೀತಿಯಿಂದ ನೆರವೇರಿಸುತ್ತಾ ಇದ್ದೆವು ಸರಿ ಇದನ್ನು

ಕಂಡು ಕೊನೆಗೆ ಗ್ರಾಮಸ್ಥರೂ ತಾವಾಗಿಯೇ ನಮ್ಮಲ್ಲಿ ಪ್ರೀತಿ ಇಟ್ಟಾರೆಂದು ನಾನು ಭಾವಿಸುತ್ತೇನೆ. ಇದಕ್ಕೊಂದು ಉದಾಹರಣೆಯನ್ನು ಕೊಡಬಹುದು.

ಒಂದಾನೊಂದು ದೇವಸ್ಥಾನವಿದೆ ಎಂದು ನೆನೆಸುವ. ಇದರ ಕಡೆಗೆ ಊರವರ್ಯಾರೂ ಆದರವಿಡುತ್ತಿದ್ದಿಲ್ಲವೆಂದು ಭಾವಿಸೋಣ. ಆದರೆ, ಅದರ ಅರ್ಚಕನು ಮಾತ್ರ ಇದೊಂದನ್ನೂ ಲಕ್ಷಿಸದೆ, ಯಾರೇನೆಂದರೂ ಕಿವಿಗೊಡದೆ, ಇದು ತನ್ನ ನಿತ್ಯಕರ್ಮವೆಂದು ತಿಳಿದು ವಿಧಿವತ್ತಾಗಿ ಸಕಾಲದಲ್ಲಿ ಅನುದಿನವೂ ಪರಮ ಭಕ್ತಿಯಿಂದ ವಿಗ್ರಹಾರಾಧನೆಯನ್ನು ಮಾಡುತ್ತಾ ಇದ್ದನೆಂದರೆ, ಕಡೆಗೆ ಒಬ್ಬೊಬ್ಬರೇ ಭಕ್ತರು ತಮಗೆ ತಾವೇ ಬಂದು ಅರ್ಚಕನಿಗೂ ತಕ್ಕ ಅನುಕೂಲವನ್ನು ಮಾಡಿಕೊಟ್ಟು ತಾವೂ ಕೃತಕೃತ್ಯರಾಗುವರು. ಆಗ ಹೇಗೆ ಊರವರಿಗೂ ಅರ್ಚಕನಿಗೂ ಪರಸ್ಪರ ಸೌಹಾರ್ದ ಉಂಟಾಗುವುದೋ ಹಾಗೆಯೇ ಉಪಾಧ್ಯಾಯರು ತನ್ನ ನಿತ್ಯಕರ್ಮವನ್ನು ಆದರದಿಂದ ನಿರ್ವಹಿಸುತ್ತಾ ಇದ್ದರೆಂದರೆ ಕೊನೆಗೆ ಗ್ರಾಮಸ್ಥರಿಗೂ ಉಪಾಧ್ಯಾಯರಿಗೂ ಪರಸ್ಪರ ಪ್ರೇಮವು ಸಂಜನಿಸಬಹುದು. ಅದು ಹೇಗಾದರಿರಲಿ, ಸರ್ವಾಂತರ್ಯಾಮಿಯಾದ ಭಗವಂತನು ಈ ನಮ್ಮ ಕೆಲಸಕ್ಕೆ ತಕ್ಕ ಫಲವನ್ನು ಕೊಡಬೇಕಲ್ಲದೆ ಇನ್ನಾರಿಂದಲೂ ಸಾಧ್ಯವಲ್ಲವೆಂಬ ಸಂಗತಿಯು ಭಾರತೀಯರಾದ ತಮಗೆಲ್ಲರಿಗೂ ಹೊಸತಲ್ಲವಾದುದರಿಂದ ಹೆಚ್ಚೇಕೆ ಹೇಳಬೇಕು.

ಸುಹೃದರಾದ ಸಭ್ಯರೇ! ಬಹಳ ಹೊತ್ತಿನಿಂದ ಅಲ್ಪಜ್ಞನಾದ ನನ್ನ ವಾಗ್ಜಾಲಗಳಿಂದ ಸರ್ವಜ್ಞರಾದ ತಮ್ಮೆಲ್ಲರನ್ನು ಬೇಸರಗೊಳಿಸಿದುದಕ್ಕಾಗಿ ಕ್ಷಮೆ ಇರಲಿ! ತಾವುಗಳೆಲ್ಲರೂ ಕ್ಷಮಾತೀಲರಾಗಿರುವಿರಾದರೂ ಇನ್ನೂ ತಮ್ಮನ್ನು ಬೇಸರಗೊಳಿಸಿ ಕ್ಷಮೆಯನ್ನು ಕೋರುವುದು ಕ್ರಮವಲ್ಲವಾದುದರಿಂದ ಈ ಉಪನ್ಯಾಸದ ಸಾರಾಂಶ

ವನ್ನು ಮಾತ್ರ ವಿಜ್ಞಾಪಿಸಿ ಇದನ್ನು ಸಂಪೂರ್ಣಗೊಳಿಸುವೆನು.

ಸಾರಾಂಶ:—

ಮಕ್ಕಳ ಮುಂದಿನ ಅಭಿವೃದ್ಧಿಗೆ ಅಗತ್ಯವಿರುವ ಬುನಾದಿ ಕಲ್ಲನ್ನು ಮನೆಯಲ್ಲಿ ಹೆತ್ತವರು ಇಡುವುದು ಮುಖ್ಯವಾದುದರಿಂದ ಮೇಲೆ ಹೇಳಿದಂತೆ ಹೆತ್ತವರು ಆಗಾಗ ಮಕ್ಕಳ ಬುದ್ಧಿಯನ್ನು ಮನೆಯಲ್ಲಿ ಉಚಿತರೀತಿಯಿಂದ ತಿದ್ದುತ್ತಿರಬೇಕು. ಶಾಲೆಯಲ್ಲಿ ಉಪಾಧ್ಯಾಯರು ಕಲಿಸುತ್ತಿರುವುದೇನೆಂದು ವಿಚಾರಿಸಿ ಮನೆಯಲ್ಲಿ ಅವನ್ನು ಗಟ್ಟಿಗೊಳಿಸುವಂತೆ ಸಾಧ್ಯವಿದ್ದಷ್ಟು ಎಚ್ಚರಿಕೆಯನ್ನು ವಹಿಸಬೇಕು. ತಾವೂ ಮಕ್ಕಳಿದುರು ಒಳ್ಳೇ ನಡೆನುಡಿಗಳನ್ನನುಸರಿಸಿರಬೇಕು. ಮಕ್ಕಳನ್ನು ಕ್ರಮವಾಗಿ ಶಾಲೆಗೆ ಕಳುಹುತ್ತಿರಬೇಕು. ಮಾತ್ರವಲ್ಲದೆ, ಬಿಡುವಿದ್ದಾಗ ಶಾಲೆಗೆ ಬಂದು ಉಪಾಧ್ಯಾಯರೊಡನೆ ತಮ್ಮ ಮಕ್ಕಳ ವಿದ್ಯಾಭ್ಯಾಸವಿಚಾರವಾಗಿ ಮಾತಾಡುತ್ತಿದ್ದು ಕಲಿಸುವ ವಿಷಯದಲ್ಲಿ ಉಪಾಧ್ಯಾಯರನ್ನು ಮತ್ತಷ್ಟು ಹುರಿಗೊಳಿಸುತ್ತಿರಬೇಕು. ಪ್ರತಿ ತಿಂಗಳಲ್ಲಿಯೂ ಸಕಾಲದಲ್ಲಿ ಸಂಬಳವನ್ನು ಸಲಿಸುತ್ತಿರಬೇಕು. ಹೆಚ್ಚೇಕೆ? ಸರ್ವವಿಧಗಳಲ್ಲಿಯೂ ಉಪಾಧ್ಯಾಯರಿಗೆ ಬೆಂಬಲರಾಗಿರಬೇಕು. ಹಾಗೆಯೇ ಉಪಾಧ್ಯಾಯರು ಸದಾಚಾರಿಗಳೂ, ಸದಯ ಹೃದಯರೂ, ಸದ್ವರ್ತನೆಯವರೂ ಆಗಿದ್ದು, ಸರ್ವ ಸಂಗತಿಗಳನ್ನು ತಾವು ನುಡಿದು ತೋರಿಸುವುದಕ್ಕಿಂತ ಪೂರ್ವವೇ ನಡೆದು ತೋರಿಸುವವರಾಗಿರಬೇಕು ತಮ್ಮ ಮನಸ್ಸಾಕ್ಷಿಗೆ ವಿರೋಧವಿಲ್ಲದೆ ತಮ್ಮ ಕಾರ್ಯಕಲಾಪಗಳನ್ನು ಸಾಗಿಸಲು ಶಕ್ತರಾಗಿರಬೇಕು. ನಿಂದಾರ್ಹವಾದ ನೀಚಕೆಲಸಗಳಲ್ಲಿ ಸೇರಲು ಹೇಸುತ್ತಿರಬೇಕು. ತಮ್ಮ ಕಾರ್ಯ ಚತುರತೆಯಿಂದ ಗ್ರಾಮಸ್ಥರ ಮನವನ್ನು ತಾವಾಗಿ ಸೂರೆಗೊಳ್ಳುವವರಾಗಿರಬೇಕು. ಬಹಳವೇನು? ಸಮಸ್ತ ಸದ್ವಿಷಯಗಳಲ್ಲಿಯೂ

ಗ್ರಾಮಕ್ಕೆ ಆದರ್ಶ ಪುರುಷರಾಗಿರಬೇಕು. ಹೀಗಿರುವುದು ಆ ಉಭಯತರಾದ ಹೆತ್ತವರ ಮತ್ತು ಉಪಾಧ್ಯಾಯರ ಮುಖ್ಯ ಕರ್ತವ್ಯವೆಂಬುದರ ವಿಜ್ಞಾಪನೆಯೊಂದಿಗೆ ಈ ಉಪನ್ಯಾಸವನ್ನು ಮುಗಿಸಲು ಅಪ್ಪಣೆ ಬೇಡುತ್ತೇನೆ.

ಹೊಲಿ ಇನ್‌ಫೆಂಟ್ ಸ್ಕೂಲ್,
ಸುರತಕಲ್, ದ. ಕನ್ನಡ.
ತಾ. 12—10—1918.

ಇತಿ,— ವಿದ್ವದ್ವಿಧೇಯ,
ಎಸ್. ಸುಬ್ಬರಾವ್,
ಪ್ರಥಮೋಪಶಿಕ್ಷಕ.

ಸಮಾಪ್ತ

ವಿಕ್ಟೋರಿಯಾ ಮುದ್ರಾಶಾಲೆ, ಬಂಟ್ವಾಳ, ದಕ್ಷಿಣ ಕನ್ನಡ.

ಶ್ರೀ ದೇವಿ ಪ್ರಸಾದ

ಸಂಜೀವನಧಾರಾ

ಸಮಸ್ತ ವಿಧವಾದ ಜ್ವರಗಳು, ಚೆಮ್ಮು, ಕಫ, ಖಾಸ, ಶ್ವಾಸ, ಕೊಲೆರಾ, ವಾಂತಿ ಭೇದಿ, ಅಜೀರ್ಣ, ವಾಯುಶೂಲೆ, ವಾತ ಮುಂತಾದ ಸಮಸ್ತ ನೋವುಗಳು, ವಿಷಜಂತುಗಳ ಕಡಿತ, ಖಿಜ್ಜಿ, ಫಾಯು, ಗಜಕರ್ಣ ಮುಂತಾದ ಸಮಸ್ತ ವಿಧವಾದ ರೋಗಗಳಿಗೆ ಬಾಹ್ಯಲೇಪನಕ್ಕೆ ವ ಆಂತರ ಉಪಯೋಗಕ್ಕೂ ಸಂಜೀವನ ಸದೃಶವಾದ ಒಂದೇ ಮಹೌಷಧ. ಸಮಸ್ತ ರೋಗಗಳಿಗೆ ಸವಿಸ್ತರ ಅನುಪಾನ ಪತ್ರ ಬಾಟ್ಲಿಯೊಂದಿಗೆ ದೊಡ್ಡ ಬಾಟ್ಲಿ ೧ರ ರೂ. 2—0—0 ಸಣ್ಣ ಬಾಟ್ಲಿ ೧ರ ರೂ. 0—8—0.

ಅಶೋಕಾರಿಷ್ಟ

ಸ್ತ್ರೀಯರ ರಕ್ತ ಮತ್ತು ಶ್ವೇತ ಶ್ರಾವ, ಪ್ರದರ ಸೋಮ, ವ ಮುಂತಾದ ಸ್ತ್ರೀ ರೋಗಗಳಿಗೆ ಸಂಜೀವನ ೧-೮-೦.]



ಶಾರಿಬಾದ್ಯರಿಷ್ಟ

ಪ್ರಮೇಹ, ಉದ ದಂಶ, ಕುಷ್ಠ, ಭಗಂದರ, ವಾತ ರಕ್ತ ಮುಂತಾದ ಸಮಸ್ತ ರೋಗ [ಗಳಿಗೆ ದಿವ್ಯ ಔಷಧ ೧-೮-೦.

ಮಕರಧ್ವಜ:— ಜ್ವರ, ಶಕ್ತಿಹೀನತೆ, ಮೂತ್ರ ಸಮ್ಬಂಧವಾದ ರೋಗಗಳಿಗೂ, ವಾತಪಿತ್ತ, ಕಫ ಜನ್ಯ ಸಮಸ್ತ ವಿಧವಾದ ರೋಗಗಳಿಗೆ ರಾಮಬಾಣ ಆಯುರ್‌ವೃದ್ಧಿ.

ಕ್ರಯ: 1 ವಾರದ ಔಷಧಿಗೆ ರೂಪಾಯಿ 1—0—0.

ಪ್ರಸೂತ ಕಲ್ಯಾಣ:— ಬಾಳಂತಿಯರೀಗೆ ಪ್ರಸೂತವಾಯು, ಪ್ರದರ ಜ್ವರ, ಗ್ರಹಣೀ ಮುಂತಾದ ಸಮಸ್ತ ವಿಧವಾದ ಸೂತಿಕಾಧೋಷಕ್ಕೆ ಮಾತ್ರೆಸಹಿತ ಬಾಟ್ಲಿ ೧ರ 2-8-0.

ಜ್ವರ ಸಂಹಾರಿ:—ಯೇಕಾಹಿಕ, ದ್ವ್ಯಾಹಿಕ, ತ್ರ್ಯಹಿಕ, ಚಾತುರ್ಥಿಕ, ತ್ರಿದೋಷ ಜನ್ಯ, ಉರಿಶೀತ, (ಯಿನ್‌ಫ್ಲ ಏಂಜಾ) ಥಂಡಿ, ವಿಷಮ ಮುಂತಾದ ಸಮಸ್ತ ವಿಧವಾದ ಜ್ವರಗಳಿಗೆ ಮಹರ್ಷಿಪ್ರಣೀತ ಖಾತ್ರಿಯಾದ ಮಹೌಷಧ, ಮೆಲೇರಿಯಾ ಜ್ವರಗಳಿಗೆ ಅನುಭವಸಿದ್ಧವಾದ ಕೈಕಂಡ ಸುಪ್ರಸಿದ್ಧ ಪ್ರಯೋಗ. 8 ಔನ್ಸಿನ ಬಾಟ್ಲಿ ೧ರ 1-4-0.

ಎಲ್ಲಾ ಔಷಧಗಳ ಬಗ್ಗೆ ವಿಳಾಸ:—

ಮ್ಯಾನೆಜರ್,— ದೇವಿ ಪ್ರಸಾದ ಔಷಧಾಶ್ರಮ,

ಪಾಂಡೇಶ್ವರಂ (ಪೋಸ್ಟು)

ಬಾಳಕೂರು, ದಕ್ಷಿಣ ಕನ್ನಡ.

ಶೀಘ್ರದಲ್ಲೇ ಪ್ರಕಾಶಿತವಾಗುವುದು!

ಎಸ್. ಎನ್. ಶ್ಯಾಣಿ, ಸುರತಕಲ್,

ಇವರಿಂದ ರಚಿತವಾದ

ಯಕ್ಷಗಾನ ಸುಲೋಚನಾ ಸಹಗಮನ

ಮತ್ತು

ಸೌಪರ್ಣಕವಧೆ

ಶ್ರೀ ಮದ್ರಾಮಾಯಣದಲ್ಲುಕ್ತವಾಗಿರುವ ಈ ಕಥೆಯು ಸುಲಭವಾದ ತಿಳಿಗನ್ನಡದಲ್ಲಿ ಮನೋಹರವಾದ ಚಾಲುಗಳ ಪದ್ಯಗಳಿಂದ ಒಡಗೂಡಿ, ಉತ್ತಮವಾದ ಕಾಗದದಲ್ಲಿ ಅಂದವಾಗಿ ಬೇಗದಲ್ಲೇ ಮುದ್ರಿಸಲ್ಪಡುವುದು. ಅಪೇಕ್ಷಕರು ಈಗಲೇ ಹೆಸರನ್ನು ದಾಖಲು ಮಾಡಿಸಿಕೊಂಡಲ್ಲಿ ಬಲು ಉತ್ತಮ! ತ್ವರೆ ಪಡಿರಿ!
ಬೆಲೆ: ನಾಲ್ಕಾಣೆ ಮಾತ್ರ.

ವಿದ್ಯಾರ್ಥಿಗಳ (ಬ್ಲ್ಯಾಕ್‌ಬೋರ್ಡ್) ನೀಲಿಕಪ್ಪು ಶಾಯಿ!
ಗುಳಿಗೆಗಳು ೧೪ಳಕ್ಕೆ ರೂ. ೧—೮—೦ ಮಾತ್ರ. ಟಿ. ಖ. ಬೇರೆ.
ಪ್ರತಿ ಶಾಲೆಗಳಲ್ಲೂ ತರಿಸಿ, ವಿದ್ಯಾರ್ಥಿಗಳಿಗೆ ವದಗಿಸಿ ಕೊಡಲು ಇದರಷ್ಟು ಉತ್ತಮ ಶಾಯಿ ಬೇರೆ ಇರದು ಒಂದೇ ಒಂದು ಬಾರಿ ತರಿಸಿ ಪರೀಕ್ಷಿಸಿದಲ್ಲಿ ತಾನಾಗಿಯೇ ತಿಳಿಯುವುದು.

ವಿಳಾಸ:— ಎಸ್. ಆರ್. ಹೆಬ್ಬಾರ್ ಎಂಡ್ ಬ್ರದರ್ಸ್,
ಬುಕ್ ಸೆಲರ್ಸ್, ಪಬ್ಲಿಷರ್ಸ್, ಸ್ಟೇಶನರ್ಸ್,
ಜನರಲ್ ಮರ್ಚಂಟ್ಸ್ ಎಂಡ್ ಕಮಿಶನ್ ಏಜಂಟ್ಸ್,
ಸುರತಕಲ್ ದ. ಕನ್ನಡ.

ಸುಗಂಧ ಕಲಾನಿಧಿ:—ಇದೊಂದು ಕೈಗಾರಿಕೆ ಬೋಧಕ ಪುಸ್ತಕ. ಇದನ್ನು ಮು। ಕೆ. ಪುಟ್ಟಪ್ಪ, 'ಕಲಾಪ್ರಸಾರಕ' ಕಾರ್ಯಾಲಯ, ಬೆಂಗಳೂರು ಸಿಟಿ, ಇವರು ಬರೆದು ಪ್ರಕಟಿಸಿರುವರು ಇದರಲ್ಲಿ ಎಲ್ಲಾ ವಿಧದ ಸುವಾಸನಾದ್ರವ್ಯಗಳೂ, ಪರಬತ್ತುಗಳೂ, ದಂತಮಂಜನ, ವಾರ್ನೀಷ್, ಜಪಾನ್ ವಾರ್ನೀಷ್ ವಗೈರೆ 166 ವಿಧದ ವಸ್ತುಗಳನ್ನು ತಯಾರಿಸುವ ಕ್ರಮಗಳನ್ನೊಳಗೊಂಡಿದೆ ನಮ್ಮ ದೇಶಾಭಿವೃದ್ಧಿಗೆ ಮೂಲಾಧಾರವಾದೀ ಕೈಗಾರಿಕೆಯ ಅಭಿವೃದ್ಧತೆಯನ್ನು ಬಯಸಿ ಪ್ರಕಟಿಸಿರುವೀ ಗ್ರಂಥಕರ್ತರ ಉದ್ದೇಶವು ಸ್ತುತ್ಯವಾಗಿದೆ ಪ್ರತಿಯೊಬ್ಬನೂ ಈ ಗ್ರಂಥವನ್ನು ತರಿಸಿಕೊಂಡು, ಇದರಲ್ಲುಕ್ತವಾಗಿರುವವುಗಳಲ್ಲಿ ಆವುದಾದರೊಂದೆರಡು ವಸ್ತುಗಳನ್ನು ತಯಾರಿಸಲು ಪ್ರಯತ್ನಿಸುವುದಲ್ಲದೆ, ಈ ಗ್ರಂಥಕರ್ತರಿಂದ ಇನ್ನೂ ಕೆಲವು ಕೈಗಾರಿಕೆಗಳನ್ನು ಬೋಧಿಸುವ ಪುಸ್ತಕವು ಪ್ರಕಾಶಿತವಾಗುವಂತೆ ಪ್ರೋತ್ಸಾಹಿಸುವುದು ಅತ್ಯಗತ್ಯವೆಂದು ಸೂಚಿಸುವೆವು. ಪುಸ್ತಕದ ಬೆಲೆ: ರೂ 1-0-0 ಮಾತ್ರ.

ವಿಳಾಸ:— ಕೆ. ಪುಟ್ಟಪ್ಪ,
ಕಲಾಪ್ರಸಾರಕ ಕಾರ್ಯಾಲಯ, ಡೊರ್ ನಂ. 12
ಟ್ಯಾಂಕ್‌ರೋಡ್, ಬೆಂಗಳೂರು ಸಿಟಿ.

ಇವುಗಳಲ್ಲದೆ,—ನಮ್ಮ ಕಡೆಗೆ ಕಳುಹುತ್ತಲಿರುವ 'ಕರ್ಣಾಟಕ ನಂದಿನೀ'(ಮಾಸಪತ್ರಿಕೆಯ ಸಂಪುಟ 2ನೇ ಸಂಚಿಕೆ 7-12) ನಂಜನಗೂಡು, ಮೈಸೂರು ಜಿಲ್ಲೆ; 'ಕಂಠೀರವ' (ವಾರಪತ್ರಿಕೆ) ಮಂಗಳೂರು; ಈ ಪತ್ರಿಕೆಗಳನ್ನು ಸಾದರದಿಂದ ಸ್ವೀಕರಿಸಿರುವೆವು. ಅಭಿಪ್ರಾಯವನ್ನು ಹಿಂದಿನಿಂದ ಕೊಡುವೆವು. —ಸಂಪಾದಕ,—'ಸದ್ಬೋಧಕ' ಗ್ರಂಥಮಾಲೆ, ಸುರತಕಲ್.

ಬಲಾಸಾರಿವಾದಿ ತೈಲ:- ಮೆದುಳಿಗೆ ಜ್ಞಾಪಕಶಕ್ತಿಯನ್ನೂ, ದೃಷ್ಟಿಗೆ ತಂಪನ್ನೂ ಕೊಡುವ, ವಾತ, ಪಿತ್ಥ, ಶಿರೋಭ್ರಮಣ ಇತ್ಯಾದಿ ಸಮಸ್ತ ರೋಗಗಳನ್ನೂ ಹೋಗಲಾಡಿಸುವ ಅತ್ಯುತ್ತಮ ಅಭ್ಯಂಜನ ತೈಲ. 1ಸೀಸೆಯ ಬೆಲೆ: ರೂ. 1-0-0ಮಾತ್ರ ಟ ಖ. ಬೇರೆ. **ಹೆಬ್ಬಾರರ ಯುಕೆಲಿಪ್ಟಸ್** ಎಂಬ ಅತ್ಯುತ್ತಮ ನೀಲಗಿರಿ ತೈಲ:- ಅತ್ಯಪೂರ್ವ ಫಲಕಾರಿ! ದಿವ್ಯ ಸಂಜೀವಿನೀ!! ಪ್ರತಿ ಸೀಸೆಯ ಮೇಲೆ ರಾಧಾಕೃಷ್ಣನ ಚಿತ್ರ ವಿರುವುದನ್ನೇ ಕೊಂಡುಕೊಳ್ಳಿರಿ!!! 1ಔನ್ಸು ಸೀಸೆಯ ಬೆಲೆ: 0-5-0; ಡಜನು ಸೀಸೆಗಳಿಗೆ ರೂ. 3-0-0 ಟ. ಖ ಬೇರೆ. **ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದ ಜೋಯಿಯವರ ಪ್ರಸಿದ್ಧವಾದ ಆತಂಕ ನಿಗ್ರಹ ಗುಳಿಗೆ:**- ಇದು ಅಮೃತ ಗುಣವನ್ನು ಉಂಟುಮಾಡುವುದು. 32ಮಾತ್ರೆಗಳಿರುವ ಡಬ್ಬಿಗೆ: ರೂ. 1-0-0; ಟ. ಖ. ಬೇರೆ.

ಇವುಗಳಲ್ಲದೆ ಇನ್ನೂ ಅನೇಕ ಔಷಧಿಗಳೂ, ಪುಸ್ತಕಗಳೂ ಇವೆ.

ವಿಳಾಸ:— ಎಸ್. ಆರ್. ಹೆಬ್ಬಾರ್ ಎಂಡ್ ಬ್ರದರ್ಸ್,
ಜನರಲ್ ಮರ್ಚೆಂಟ್ಸ್ ಎಂಡ್ ಕಮ್ಮಿಶನ್ ಏಜಂಟ್ಸ್,
ಸುರತಕಲ್, ದ. ಕನ್ನಡ.

'ಸದ್ಬೋಧಕ ಗ್ರಂಥಮಾಲೆ.'

(ತ್ರೈಮಾಸಿಕ ಪುಸ್ತಕ.)

ಇದರಲ್ಲಿ ಮೂರು ತಿಂಗಳಿಗೊಮ್ಮೆ ಕಥಾ, ಕಾದಂಬರೀ, ನಾಟಕ, ಕಾವ್ಯ, ಪ್ರಬಂಧ ಮೊದಲಾದ ಗ್ರಂಥಗಳಲ್ಲಿ ಆವುದಾದರೊಂದು ಸಂಪೂರ್ಣ ಪುಸ್ತಕವೂ, ಚಿಕ್ಕಚಿಕ್ಕ ಉಲ್ಲೇಖನಗಳೂ, ಸ್ವೀಕಾರ, ವಿಮರ್ಶೆ ಇತ್ಯಾದಿ ವಿವಿಧ ವಿಷಯಗಳೂ ಪ್ರಕಟವಾಗುವುವು. ಭಾಷಾಭಿಮಾನಿಗಳೆಲ್ಲರೂ ಅಗತ್ಯ ಈಗಲೇ ಹೆಸರನ್ನು ತಿಳಿಸಿ ಚಂದಾದಾರರಾಗಿ ಪ್ರೋತ್ಸಾಹಿಸಬೇಕು. ಇದೇ ದಸರಾ ಸಮಯ ಇದರ ಪ್ರಥಮ ಪುಸ್ತಕವು ಪ್ರಸಿದ್ಧವಾಗುವುದು. ಇದರಲ್ಲಿ ವ್ಯಾಪಾರಿಗಳ ಜಾಹೀರಾತುಗಳಿಗೆ ತುಂಬಾ ಅನುಕೂಲ!

ವಾರ್ಷಿಕ ಚಂದಾ:— ಅಂಚೆ ವೆಚ್ಚ ಸೇರಿ ರೂ. 1—0—0 ಮಾತ್ರ.

ವಿಳಾಸ:— ಎಸ್. ರಂಗಪ್ಪಯ್ಯ, ಸಂಪಾದಕ ಮತ್ತು ಪ್ರಕಾಶಕ,
'ಸದ್ಬೋಧಕ ಗ್ರಂಥಮಾಲೆ,' ಸುರತಕಲ್, ದ. ಕನ್ನಡ.

ವಿಕ್ರೀತಕ್ಕೆ ಸಿದ್ಧವಿದೆ!

ಹನೂಮದ್ರಾಮಾಯಣ	2—1—0	ಹರಿಶ್ಚಂದ್ರ	....0—2—0
ವೆಂಕಟಗಿರಿ ಮಾಹಾತ್ಮೆ	....0—12—0	ಮಹಿಳಾಸುನೀತಿ ಶತಕಂ....	....0—2—0
ಜಯವಿಜಯ (ನಾವೆಲ್)	....0—12—0	ಭಜಗೋವಿಂದ....	....0—1—0
ಅಹ್ನಿಕ ಮಂಜರೀ....	....1—0—0	ವಿನಾಯಕ	....0—1—0
ಚಂದ್ರಹಾಸ	....0—2—0	ದುಂದುಭಿ ಆಖ್ಯಾನ(ಯಕ್ಷಗಾನ)	0—4—0
ಧ್ರುವ	....0—2—0	ಚಂದ್ರಮೌಳಿ ಕಾಳಗ(ಯಕ್ಷಗಾನ)	0—4—0
ಪ್ರಹ್ಲಾದ....	....0—2—0	ಸುಂದೋಪ ಸುಂದಾಖ್ಯಾನ	....0—3—0
ಸಾವಿತ್ರಿ....	....0—2—0		

ಇವುಗಳಲ್ಲದೆ ಇನ್ನೂ ಇತರ ಪುಸ್ತಕಗಳೂ, ಬರವಣಿಗೆ ಸಾಮಗ್ರಿಗಳೂ, ತರತರದ ಸಾಬೂನುಗಳೂ, ಅಂಗಿಗುಂಡಿಗಳೂ, ಜಿಂತಾನ್, ವೆಸ್ಲಿನ್, ಕಸ್ತೂರಿ ಮಾತ್ರೆ ವಗೈರೆ ವಿವಿಧ ಸಾಮಗ್ರಿಗಳು ಮಿತವಾದ ಬೆಲೆಗೆ ದೊರೆಯುವುವು. ಅಪೇಕ್ಷಕರು ಬರೆಯಿರಿ.

ವಿಳಾಸ:— ಎಸ್. ಆರ್. ಹೆಬ್ಬಾರ್ ಎಂಡ್ ಬ್ರದರ್ಸ್,
ಜನರಲ್ ಮರ್ಚಂಟ್ಸ್ ಎಂಡ್ ಕಮಿಶನ್ ಏಜಂಟ್ಸ್,
ಸುರತಕಲ್, ದಕ್ಷಿಣ ಕನ್ನಡ

THE MYSORE 1912
REVENUE & AGRICULTURAL GAZETTE.

ಮೈಸೂರು ರೆವಿನ್ಯೂ ಮತ್ತು ವ್ಯವಸಾಯಿಕ ಗೆಜೆಟ್.

Published every fortnight.

ಹದಿನೈದು ದಿನಕೊಮ್ಮೆಂದಾವರ್ತಿ ಪ್ರಯಿಷ್ಟ ಮಾಡಲ್ಪಡುತ್ತೆ.

WORLD NEWS PAPER EXHIBITION

Monday 1st April 1912.

Vol: VI] ಸೋಮವಾರ ೧೯೧೨ ಏಪ್ರಿಲ್ ೧ನೇತಾರೀಕು. **[No. 11**

ಪರಿವಿಡಿ.

ಪ. ಸಂ. ಶುಬ್ಬಿಯಕ್ಕೆ ಅಂಡೆ ಸಲಿಸಿರುವುದರ ವಿಷಯವಾಗಿ ಮೈಸೂರು ಪ

ಕಾಫೆಯನ್ನು ಮುದ್ರಿಸಿ ಪ್ರಕಟಿಸಿದವರು

Annual Subscription including postage Rs. 1-8-0.

॥ श्री ॥

सत्यं वद धर्मं चर

Madhura Vanee

A High Class Monthly in Kanada

DEVOTED TO

Educational, Religious, Moral and Scientific Matters

[ಸಂ. ೧] ಫೆಬ್ರವರಿ—೧೯೧೨ [ಸಂ. ೧

ಮಧುರವಾಣೀ

ವಿದ್ಯಾ, ಮತ, ನೀತಿ, ಪ್ರಕೃತಿಶಾಸ್ತ್ರ ವಿಷಯಗಳನ್ನೊಳಕೊಂಡಿರುವ

ಉತ್ತಮವರ್ಗದ

ಕರ್ಣಾಟಕ ಮಾಸಪತ್ರಿಕೆ

Edited and Published by

Hanuman

AT HANUMAN & Co., MYSORE

Mysore:

PRINTED AT THE SREENIVASA PRESS

1912

ಸ್ವದೇಶಿ ! (ಸತ್ಯಮ್ಮೇವಜಯತೆ) ಸ್ವದೇಶಿ ! !

ಗುಣವಾಗದಿದ್ದರೆ ಹಣವಾಪಸ.

ಮುದಿವನಲೀದ್ಭವಗಂಳಿಗೆ

ಈ ಗುಳಿಗೆಯು ನೇಚನೆಯಿಂದ ಜನನೇಂದ್ರಿಯ ಶಿಥಿಲತೆ, ನಿರ್ಬಲತೆ, ನಪುಂಸಕತ್ವ ಕ್ಷೀಣತೆ, ಸ್ವಪ್ನಾಪಸ್ಥೆ ಇವು ಗುಣವಾಗಿ, ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತ ಶೋಧಕ, ಕಾಮೋತ್ತೇಜಕ, ಮನೋ.ಹ್ಲಾದಕ ಗರ್ಮಿ ಟಾಕಿ ಗುಪ್ತಪ್ರದೇಶದಮೇಲೆ ಹುಟ್ಟಿರುವ ಎಲ್ಲಾ ಬಕ್ಕೆಗಳೂ, ಹುಣ್ಣುಗಳೂ, ಪಿತ್ತದ ಬಾಧೆಗಳೂ, ಕಟಿಶೂಲೆ, ಪಾತರೋಗ, ಮುಂತಾವುವು ಅತಿ ಜಾಗ್ರತೆ ಗುಣವಾಗಿ, ಶರೀರಕ್ಕೆ ಆರೋಗ್ಯವೂ, ಕಾಂತಿಯೂ, ರತಿಸುಖಕ್ಕೆ ಸಂಪೂರ್ಣ ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೧೦ ಗುಳಿಗೆಯರಿಗೆ ದೀಕಾಗುವದು. ಬೆಲೆ. 12 ಗುಳಿಗೆಗೆ 1 ರೂ. ಅಂಚೆಖರ್ಚಿಗೆ 60 ಳನ್ನು ತರಿಸಿಕೊಂಡರೆ 4 ರೂ. ಗೆ ಕೊಡುವೆವು. ಟಿ. ಖ. 4 ಆಣೆ ಬೆಲೆಯ ಪತ್ರಿಕೆಯನ್ನು ಔಷಧದ ಸಂಗಡಲೇ ಕಳುಹಿಸುವೆವು. ಅಧಿಕಾರಿ ಸ್ವಾರಸ್ಯವೇ ಕಳುಹಿಸಿದರೆ ಸರ್ವ ಸಾಮಾನ್ಯ ಕ್ಯಾಟಲಾಗ್ ಪುಟ ರವಾನಿಸುವೆವು.

ವಿಳಾಸ :— ವೈದ್ಯ ಜಿ. ಬೆಲ್. ಶೋಧಿಸಿ ಮತ್ತು ಕಂಪನಿ,
ಪೋಸ್ಟ್ ಒನವಾಸ,
ಉತ್ತರಕನ್ನಡಾ ಜಿಲ್ಲಾ.

ಮಾಸ ಭಕ್ತಿವಿಜಯ. ಪತ್ರಿಕೆ

ಶ್ರೀರಾಘವೇಂದ್ರಾಚಾರಿ ಸದ್ವಿಷಯಗಳನ್ನು ಸಿರೂಪಿಸುವ ಮಾಸಸಂಚಿಕೆ ಡೆಮ್ಮಿ ೪ ಫಾರಂ ಇದರಲ್ಲಿ ಆಕ್ಯುತ್ತಮ ಗ್ರಂಥಗಳು ಶುದ್ಧವಾದ ಭಾಷಾಶೈಲಿಯಲ್ಲಿ ಬರೆಯಲ್ಪಡುವವು. ಗ್ರಂಥಗಳಿಗೆ ತಕ್ಕುಮನೆ ! ನೇ|| ಪಂಡಿತ ಸೀತಾರಾಮಶಾಸ್ತ್ರಿಗಳೇ ಸಂಪಾದಕರು ! ! ಮುದ್ದಾದ ಮುದ್ರಣ. ವಾರ್ಷಿಕ ಚಂದಾ ಅಂಚೆವೆಚ್ಚಸಹಿತ 1—4—0 ಮಾತ್ರ.

ವಿಳಾಸ :— ಎಡಿಟರ್ 'ಭಕ್ತಿವಿಜಯ' ಮೈಸೂರು.

ಹನುಮಾ, ಮತ್ತು ಕಂಪನಿ, ಮೈಸೂರು.

ಒಕ್ಕಲಿಗರೂ ಒಕ್ಕಲತನವೂ

(PUBLISHED UNDER THE AUSPICES OF THE
Dharwar Agricultural Association.)

ಒಕ್ಕಲಿಗರೂ ಒಕ್ಕಲತನವೂ

ಎಂಬ

ಮಾಸಪತ್ರಿಕೆಯು.

WORLD NEWS PAPER
KESARALLI
Shimoga Dist, Karnat

ವರ್ಷ ೧೧ | ಮಾರ್ಚ ೧೯೨೧. | ಸಂಚಿಕೆ ೧.



ಸಂಪಾದಕರು.

ರಾ. ರಾ ಮಲ್ಲಾರಿ ಲಿಂಗೋ ಕುಲಕರ್ಣಿ ಅಸ್ಸಿಂಗ ಡೆ. ಡಾಯರೆಕ್ಟರ ಬೇ. ಖಾತೆ ವಕ್ಕಿಲ ಧಾರವಾಡ.

ಮಿ. ಎಚ್. ಪ್ಲಿ. ಕೇವಡೆ ಎಲ್ ಎಬಿ. ಸುಪರಿಂಟೆಂಡೆಂಟ ಸರಕಾರಿ ಫಾರ್ಮ ಧಾರವಾಡ.

ಮಿ. ಗುಡುಂಡ ರಾಮರಾವ ದೇಸಾಯಿ ಬಿ. ಎ. ಎಲ್. ಎಲ್. ಬಿ.

ವಾರ್ಷಿಕ ಚಂದಾ ಹಣವು ಮುಂಜೇವೆಚ್ಚ ಸೇರಿ ... ೧—೦—೦

ಒಂದು ಸಂಚಿಕೆಗೆ ... ... ೦—೩—೦

REGISTERED NO. B. 999

ಕಸದಿಂದ ರಸಬರಿಗಳು.

ದನಗಳ ಹಕ್ಕೆಯೊಳಗಿನ ಕಸವೆಂದು ತಿಪ್ಪೆಯಲ್ಲಿ ಬಿಸಾಡುವ ಮೇವಿನ ವಿಷಯವಾಗಿ ನೀವು ಸ್ವಲ್ಪವಾದರೂ ವಿಚಾರ ಮಾಡಿರುವಿರೋ? ಬಂದೇ ಸವನೆ ನಡೆಯುತ್ತಿರುವ ಈ ತರದ ಹಾನಿಯನ್ನು ಬಂದವರಿಡಿದರೆ ಪ್ರತಿವರ್ಷ ಎಷ್ಟೋ ಹಣದ ಬೆಳೆಕಾಯವಾಗುವದು. ಕಿರ್ಲೋಸ್ಕರ ಬಂಧುಗಳ ಹೊಸ

ಮೇವು ಕೊರೆಯುವ ಯಂತ್ರವನ್ನು

ಇದರ ಸಲುವಾಗಿಯೆ ತಯಾರ ಮಾಡಿರುತ್ತದೆ. ಇದರ ಉಪಯೋಗದಿಂದ ಮೇವು ವ್ಯರ್ಥವಾಗಿ ಹಾಳಾಗುವದಿಲ್ಲ. ಈ ಯಂತ್ರದಿಂದ ಸಣ್ಣಾಗಿ ಕೊರೆದ ಕಳಿಕೆಯನ್ನು ಬುಟ್ಟಿಯಲ್ಲಿ ಹಾಕಿ ದನಗಳ ಮುಂದೆ ಇಟ್ಟರೆ ಅವು ಏನೂ ಬಿಡದೆ ತಿನ್ನುತ್ತವೆ. ಈಗಿನ ಮೇವಿನ ತುಟ್ಟಾಗ್ರತೆಯ ಕಾಲಕ್ಕೆ ದನಗಳುಳ್ಳ ಪ್ರತಿಯೊಬ್ಬ ರೈತನು ಈ ಯಂತ್ರವನ್ನು ಅವಶ್ಯವಾಗಿ ಕೊಂಡು ಅದರಿಂದ ಲಾಭಪಡೆಯಬಹುದು. ಯಂತ್ರವು ಕಬ್ಬಿಣದ್ದಿದ್ದು ಅದರ ಅಲಗು ಉತ್ತಮವಾದ ಉಕ್ಕಿನಿಂದ ಮಾಡಿರುತ್ತದೆ. ಯಂತ್ರದ ಕಿಮ್ಮತ್ತು ೩೫ ರೂಪಾಯಿ ಬೇಕಾದವರು ಕೂಡಲೆ ಮಾಡಿರಿ

ಕಿರ್ಲೋಸ್ಕರ ಬಂಧು
ಪೋ—ಕಿರ್ಲೋಸ್ಕರವಾಡಿ
ಜಿಲ್ಲಾ—ಸಾತಾರೆ



ಯೂನಿಯನ್ ವಿಜಸ್ಟಿ ವಸ್ತುಂಬಯಿ.

(ಗ) ಜೋಳಿಕ್ಕೆ ತಗಲುವ ಕಾಡಿಗರೋಗ ಪ್ರತಿಬಂಧಕ ತುಪ್ಪೇದ ಚೀಟುಗಳು ಪ್ರತಿಯೊಂದಕ್ಕೆ ೩ ಬಿಗೆ. ೫೦೦ ಚೀಟುಗಳುಳ್ಳ ಬೆಟ್ಟುಗಗಳೇ ಸೂರಲಿಕ್ಕೆ ದೊರೆಯುವವು.

(ಖ) ಆರಿನಿಂದ ಉತ್ಪನ್ನವಾಗುವ ಬಹುವಿಧ ಬೀಜಗಳು ಪರದೆ ಸಲುವಾಗಿ ಸರ್ವೋತ್ತಮ ರೀತಿ ಮಾಡಬೇಕು.

(ಗ) ಕಬ್ಬು, ಬಜಾಕು ಮತ್ತು ಇತರ ಬಾಗಾಯಿತ ಬೈರುಗಳ ಸಲುವಾಗಿ ಕೃತ್ರಿಮ ಗೊಬ್ಬರಗಳು:—

ಈ ಮೇಲೆ ಬರೆದ ಸಾಮಾನುಗಳು ಯೂನಿಯನ್ ವಿಜಸ್ಟಿ, ಪ್ರಾಗಮಹಾಲ, ಮುಂಬಯಿ (೩) ಇವರ ಅಡತಿಗೆ ದೊರೆಯುವವು.

ಶಾಖೆ ವಿಳಾಸ "ಮ್ಯಾನೇಜರ್" ಮುಂಬಯಿ.

80, 106, 133, 188, 214

37. ಸಾಮಾಜಿಕರಿಗೆ ಲೇಖನ—A Letter to T. S. Members—
K. Narahari Sastri 146

38. ಸೋದರಭಾವ—Brotherhood—K. Madhava Rao 17, 102

39. ಸೋದರಭಾವ—Brotherhood—V. Venkanna Bhatta 323

40. ಹೊಸ ಜನರಲ್ ಸೆಕ್ರೆಟರಿಯವರು—New General Secretary 256

T. R. ಪೆಂಕಿಚಿರಮಣಯ್ಯನವರಿಗೆ
V. P. ಪೋರ್ಟ್, ತ್ರಿಚಿನಾಪಲ್ಲಿ.

ತಾರೀಕು 9ನೇ ಜುಲೈ 1915.

ಸ್ವದೇಶಾಭಿಮಾನಿ.

ಮಂಗಳೂರು ಶುಕ್ರವಾರ ತಾರೀಕು 9ನೇ ಜುಲೈ 1915

ಬಾಲಿಕಾ ಪಾಠಶಾಲೆಯ ವಿಷಯ ಇನ್ನೂ ಕೆಲವು ಮಾತುಗಳು

ಸರಕಾರದವರು ಮಂಗಳೂರಲ್ಲಿ ಒಂದು ಸಕೆಂಡರಿ ಬಾಲಿಕಾ ಪಾಠಶಾಲೆಯನ್ನು ಸ್ಥಾಪಿಸುವುದು ಏಕೆ ಅತ್ಯವಶ್ಯವೆಂತ ಕಳದ ಸಂಚಿಕೆಯಲ್ಲಿ ಪ್ರಸ್ತಾಪಿಸಿದೆವು. ಇಂಥಾ ಸಂಸ್ಥೆಯ ಸ್ಥಾಪನೆಯು ಶೀಘ್ರದಲ್ಲಿಯೇ ಆಗಬೇಕಾಗಿದೆಂದು ತೋರಿಸುವ ಇನ್ನೂ ಕೆಲವು ನವೀನ ವಿದ್ಯಮಾನಗಳು ನಮ್ಮ ತಿಳುವಳಿಕೆಗೆ ಬಂದಿರುತ್ತವೆ. ಹಿಂದೂ ಬಾಲಿಕೆಯರ ಸಂಪರ್ಕವೇ ದೋಷಕರವೆಂತ ತಿಳಿಕೊಂಡು ಇಲ್ಲಿಯ ಕ್ರೈಸ್ತ ಸೆಕೆಂಡರಿ ಶಾಲೆಯೊಂದರಲ್ಲಿ ಹಿಂದೂ ಬಾಲಿಕೆಯರಿಗೆ ಈ ವರುಷ ಪ್ರವೇಶವು ದೊರಕಿರದೆಂದೂ ಸಂಪರ್ಕ ದೋಷ ಭಾವನೆಯು ಶಾಲೆಯಲ್ಲಿ ಬಿಚ್ಚಿಕೊಳ್ಳುತ್ತಿರುವದನ್ನು ನೋಡಿ ಕೆಲವು ಹಿಂದೂ ಬಾಲಿಕೆಯರ ಹೆತ್ತವರು ತಮ್ಮ ಮಕ್ಕಳನ್ನು ಶಾಲೆಯಿಂದ ಹಿಂದಕ್ಕೆ ಕರೆಸಿರುವರೆಂದೂ ಕೇಳುತ್ತೇವೆ. ಇಷ್ಟೇ ಅಲ್ಲ, ಇಲ್ಲಿಯ ಜಿಲ್ಲಾಧಿಕಾರಿಗಳಲ್ಲೊಬ್ಬರಾದ ಯುರೋಪಿಯ ಅವೀಸರರು ಈ ಕ್ರೈಸ್ತ ಶಾಲೆಯಲ್ಲಿ ಕ್ರೈಸ್ತರಲ್ಲದ ಇತರ ಬಾಲಿಕೆಯರನ್ನು ಯಾವ ರೀತಿ ನಡಿಸುತ್ತಿರುವರೆಂಬುದನ್ನು ತಿಳಿಕೊಂಡು ಮಂಗಳೂರಲ್ಲಿ ಕ್ರೈಸ್ತರಲ್ಲದ ಬಾಲಿಕೆಯರ ಬಗ್ಗೆ ಒಂದು ಸೆಕೆಂಡರಿ ಶಾಲೆಯನ್ನು ಸ್ಥಾಪಿಸುವುದು ಅಗತ್ಯವಾಗಿದೆ ಎಂಬ ತನ್ನ ಅಭಿಪ್ರಾಯವನ್ನು ಕೆಲವು ಹಿಂದೂ ಗೃಹಸ್ತರೊಡನೆ ಸೂಚಿಸಿರುವರೆಂಬುದಾಗಿ ನಹ ಕೇಳುತ್ತೇವೆ.

ಶಿಕ್ಷಣಾಬಿರುಚಿಯು ಹಿಂದೂ ಮತ್ತು ಕ್ರೈಸ್ತರಲ್ಲದ ಇತರ ಜಾತಿಯ ಬಾಲಿಕೆಯರಲ್ಲಿ ಏನೆ ದಿನೆ ವೃದ್ಧಿಸುತ್ತಿರುವುದು. ಇದಕ್ಕೆ ಸಿಕ್ಕುಂತೆ ಶಾಲೆಗಳು ಇಲ್ಲದೆ ಹೋದರೆ ಕ್ರೈಸ್ತ ಶಾಲೆಗಳು ಎಷ್ಟು ದೋಷಕರವೆಂತ ಕಂಡುಬಂದರೂ ಕೆಲವರಾದರೂ ಈ ದೋಷಗಳೆಲ್ಲವನ್ನು ಮೂಲೆಗೊತ್ತಿ ಶಾಲಾ ಉಪಾಧ್ಯಾಯಿಗಳನ್ನು ಹೇಗಾದರೂ ಸಮಾಧಾನ ಪಡಿಸಿ ತಮ್ಮ ಮಕ್ಕಳಿಗೆ ಪ್ರವೇಶವು ದೊರಕುವಂತೆ ಪ್ರಯತ್ನಪಡುವರು. ಇಂಥಾ ಸಂದರ್ಭಗಳಲ್ಲಿ ಅನ್ಯರನ್ನು ದೂರಿ ಫಲವಿರದು. ಹಾಗೆ ದೂರುವುದು ನರಿಯೂ ಅಲ್ಲ ಇತ್ತ ಲಾಗೆ ಸಾಧಾರಣ ಹತ್ತಿಪ್ಪತ್ತು ವರುಷಗಳ ಕಾಲದಿಂದ ಬಾಲಿಕೆಯರ ಶಿಕ್ಷಣದ ಬಗ್ಗೆ ಇರುವ ಈ ವಿಪರೀತ ಅಡಚಣೆಗಳನ್ನು ಪೂರ್ಣ ತಿಳಿದವರಾಗಿದ್ದರೂ ಈ ವಿಷಯದಲ್ಲಿ ಏನೂ ತಿಳಿಯದವರಂತೆ ನಾವು ವರ್ತಿಸುತ್ತಿದ್ದೇವೆ. ಪ್ರತಿ ವರುಷದಲ್ಲಿಯೂ ಇಲ್ಲಿ ವಿದ್ಯಾವಂತರ ಸಂಖ್ಯೆಯು ಹೆಚ್ಚುತ್ತಿರುವುದು. ಆ ಜಾತಿಯವರನ್ನು ನೋಡಿ ಈ ತಿಯವರು ತಂತಮ್ಮ ಜಾತಿಯ ಹುಡುಗರ ಬಗ್ಗೆ ದ್ರವ್ಯಸಂಗ್ರಹವನ್ನು ಮಾಡುತ್ತ ಹೇರಳ ದ್ರವ್ಯ ರಾಶಿಯನ್ನು ಕಲ್ಲು, ಮಣ್ಣು, ಸುಣ್ಣಗಳಲ್ಲಿ ರೂಪಾಂತರಗೊಳಿಸುರುವರು. ಇನ್ನೂ ನಾನಾ ವಿಧಾನಗಳಲ್ಲಿ ಒಂದೊಂದೇ ಜಾತಿಯ ವಿದ್ಯಾಭಿವೃದ್ಧಿ ಸಾಧನೆಯಲ್ಲಿ ನಾವು ನಿರತರಾಗಿರುತ್ತೇವೆ. ಬಾಲೆಯರಿಗೆ ಉಚಿತವಾದ ಶಿಕ್ಷಣವು ಸೂಕ್ಷ್ಮೋಷಾದ ವಿನಹ ಯಥಾರ್ಥವಾದ ಅಭಿವೃದ್ಧಿಯನ್ನು ನಾವು ವಿದ್ಯೆಯಲ್ಲಿ ಪಡೆಯಲಾರೆವೆಂಬ ಮಾತನ್ನು ನಾವು ಪದೇ ಪದೇ ಹೇಳಿಕೊಳ್ಳುತ್ತಿರುವೆವು. ಹೀಗಿದ್ದರೂ ಈ ಶಿಕ್ಷಣ ಪ್ರಸರಣೆಯಲ್ಲಿ ನಾವು ಮಾಡಿದ ನರಿಯಾದ ಒಂದು ಸಾಧನೆಯಾದರೂ ಇರದು. ಇದರ ಕಾರಣವೇನು? ಅಭಿಮಾನ, ಅದರಲ್ಲಿಯೂ ಹೆಮ್ಮಕ್ಕಳ ಅಭಿಮಾನವನ್ನು ಕಾಪಾಡುವುದರಲ್ಲಿ ಇನ್ನೂ ಅನಾದರತೆಯನ್ನು ತೋರುವುದೇ.?

ಶಾಸ್ತ್ರಿಗಳವರ ಆಯುರ್ವೇದೌಷಧ ಗೃಹ, ಮಂಗಳೂರು.

ವರ್ಷಗಳ ತಮ್ಮ ಚಿಕಿತ್ಸೆ ಅನುಭವವನ್ನು ಎಮ್. ವಿ. ಶಾಸ್ತ್ರಿಗಳವರು ಈ ಚಿಕ್ಕ ಪುಸ್ತಕ ರೂಪದಲ್ಲಿ ಪ್ರಕಟಿಸಿರುವರು. ಪಾಶ್ಚಾತ್ಯ ರೀತಿಗಳಲ್ಲಿ ಚಿಕಿತ್ಸೆ ನಡೆಯುತ್ತ ಆಯುರ್ವೇದ ಚಿಕಿತ್ಸಾ ಕ್ರಮಗಳ ಪರಿಚಿತಿಯಿಲದೆ ಇವರ ಳೆಲ್ಲವು ಅಣಿಲೆಕಾಯಿ ಪಂಡಿತರ ಅಪಾಯಕರ ಸಾಧನಗಳೆಂತ ತಿಳಿಯುವಂಥ ಅರ್ವಾಚೀನರಲ್ಲಿ ಸಲವರು ಶಾಸ್ತ್ರಿಗಳ ಈ ಚಿಕ್ಕ ಪುಸ್ತಕವನ್ನು ಓದಿ ನೋಡಿದರೆ ಆಯುರ್ವೇದ ವಿದ್ಯೆಯಲ್ಲಿ ಇಂಥವರಿಗೆ ವಿಶ್ವಾಸವು ಉಂಟಾಗದೆ ಇರದು. ಆಯುರ್ವೇದವು ಇತರ ವೈದ್ಯಗಳಂತೆ ಪರಿಪೂರ್ಣ ಯುಕ್ತಿಯುಕ್ತ ಮತ್ತು ಸ್ವತಂತ್ರ ವಿದ್ಯೆಯಾಗಿದೆ ಎಂಬುದನ್ನು ತೋರಿಸಿಕೊಟ್ಟು, ಈ ವಿದ್ಯೆಯಲ್ಲಿ ಜನರಿಗೆ ಪೂರ್ಣಾಭಿಮಾನವೂ, ಗೌರವವೂ ಉಂಟಾಗುವ ಉದ್ದೇಶವನ್ನು ತಮ್ಮ ನುಂದಿಟ್ಟುಕೊಂಡು ಶಾಸ್ತ್ರಿಗಳವರು ತಮ್ಮ ವೃತ್ತಿಯನ್ನು ನಡೆಸುತ್ತಿದ್ದಾರೆಂಬುದು ಶಾಸ್ತ್ರಿಗಳವರ ಈ ಚಿಕ್ಕ ಪುಸ್ತಕ ಪಠಣದಿಂದ ವಾಚಕರಿಗೆ ವ್ಯಕ್ತವಾಗದೆ ಇರದು. ಕಳದ ನಾಲ್ಕು ವರುಷಗಳಿಂದ ತಮ್ಮ ಔಷಧ ಗೃಹಕ್ಕೆ ಒಂದಿರುವ ರೋಗಿಗಳ ತಪಸೀಲು ಪಟ್ಟಿಯನ್ನು ತಯ್ಯಾರಿಸಿ ಈ ಪ್ರಾಂತ್ಯಗಳಲ್ಲಿ ಸಾಮಾನ್ಯವಾದ ರೋಗಗಳು ಯಾವುವೆಂಬುದನ್ನು ನಿಶ್ಚಯಿಸಿಕೊಂಡು, ಶಾಸ್ತ್ರಿಗಳವರು ರೋಗಿಗಳ ಚಿಕಿತ್ಸೆಯನ್ನು ಕೈಕೊಳ್ಳುತ್ತಿದ್ದಾರೆಂತ ಸೂಚಿಯಲ್ಲಿ ಬರೆದ ಇವರ ಅನುಭವದಿಂದ ತೋರಿಬರುತ್ತದೆ. ಆರ್ಯರ ಈ ಪ್ರಾಚೀನ ವಿದ್ಯೆಯು ಚರಕ ಮತ್ತು ಸುಶ್ರುತ ಮೊದಲಾದ ಮಹರ್ಷಿಗಳಂಥವರ ನಂತರದಲ್ಲಿ ಇದರ ಸಮರ್ಪಕವಾದ ವ್ಯವಸಾಯ ಪರಿಶೋಧನೆಗಳನ್ನು ಮಾಡುವಂಥವರಿಲ್ಲದೆ ಪ್ರಕೃತ ಜೀರ್ಣಾವಸ್ಥೆಗೆ ಬಂದಿದೆಯಾದರೂ ಈಗಲೂ ಸಹ ಇದನ್ನು ಉಚ್ಚಸ್ಥಿತಿಗೆ ತರಲು ತುಂಬಾ ಅವಕಾಶವಿದೆ ಎಂಬುದು ಶಾಸ್ತ್ರಿಗಳಂಥವರ ಪರಿಶ್ರಮದಿಂದ ತಿಳಿಕೊಳ್ಳಬಹುದು. ಬಾಲ್ಯದಿಂದ ಸಂಸ್ಕೃತ ವಿದ್ಯೆಯಲ್ಲಲ್ಲೇ ನಿರತರಾಗಿದ್ದು ಮೈಸೂರು ಕಾಶೀ ಪ್ರಾಂತ್ಯಗಳಲ್ಲಿರುವ ಸಂಸ್ಕೃತ ವಾರಶಾಲೆಗಳಲ್ಲಿ ತಮ್ಮ ಅಭ್ಯಾಸವನ್ನು ಬಲಪಡಿಸಿ ನಂತರ ವಿದ್ಯಾಸಿನ ರಾಜ್ಯವೈದ್ಯ ವಿ. ಗೋಪಾಲಾಚಾರ್ಯರ ಆಯುವೇದ ಪಾಠಶಾಲೆಯಲ್ಲಿ ಕೆಲವು ವರುಷಗಳ ವರೆಗೆ ಶಿಕ್ಷಣವನ್ನು ಪಡದ ಆಯುರ್ವೇದ ಭೂಷಣ ಎಮ್. ವಿ. ಶಾಸ್ತ್ರಿಗಳವರು ಈ ವಿದ್ಯೆಯ ವ್ಯವಸಾಯವನ್ನು ಮಾಡಲು ತುಂಬಾ ಯೋಗ್ಯರಾಗಿರುವರು. ಇಂಥವರಿಗೆ ಇವರ ವೃತ್ತಿಯಲ್ಲಿ ಮಹಾಜನರ ಯಥೋಚಿತ ಪ್ರೋತ್ಸಾಹವು ಮಾತ್ರ ಬೇಕಾಗಿದೆ. ಇಂಥಾ ಪ್ರೋತ್ಸಾಹವು ಇವರಿಗೆ ದೊರಿಯಬೇಕೆಂದು ಅಪೇಕ್ಷಿಸುವೆವಲ್ಲದೆ ಇವರು ತಮ್ಮ ವರ್ಚಸ್ಸಿನಿಂದ ಅಣಿಲೆಕಾಯಿ ಪಂಡಿತರು ಮಾಡುವ ಹಾವಳಿಯನ್ನು ಸಾಧ್ಯವಾದಷ್ಟು ಮಟ್ಟಿಗೆ ನಿವಾರಿಪಡಿಸಬೇಕೆಂಬುದಾಗಿ ಕೋರುತ್ತೇವೆ.

ಎಕ್ಸಿಕ್ಯೂಟಿವ್ ಗವರ್ನರವರ ಸಭೆಗೆ ನಮ್ಮ ಜಿಲ್ಲೆಯ ಮೆಂಬರರು.

ಗವರ್ನರವರ ನ್ಯಾಯವಿಧಾಯಕ ಸಭೆಗೆ ದಕ್ಷಿಣ ಕನ್ನಡಾ ಮತ್ತು ಮಲಬಾರ್ ಜಿಲ್ಲೆಗಳಲ್ಲಿರುವ ಬೋರ್ಡುಗಳ ಮತ್ತು ಮುನ್ಸಿಪಾಲಿಟಿಗಳ ತರಫಿನಿಂದಲೂ ವರ್ಗದಾರರ ತರಫಿನಿಂದಲೂ ಕೂಡ ಒಟ್ಟಿಗೆ ಇಬ್ಬರು ಮೆಂಬರುಗಳನ್ನು ಬರುವ ನವಂಬರ ತಿಂಗಳಲ್ಲಿ ಚುನಾಯಿನತಕ್ಕದ್ದಾಗಿದೆ. ಈ ಸಂಗತಿ ಎಲ್ಲರಿಗೂ ಗೊತ್ತಿರುವಂಥಾದ್ದೇ ಸರಿ ನ್ಯಾಯವಿಧಾಯಕ ಸಭೆಯ ಮೆಂಬರುಗಳ ಸಂಖೆಯನ್ನು ಹೆಚ್ಚಿಸಿ ಅವುಗಳ ಕುರಿತು ಹೊಸ ಕ್ರಮ ನಿಬಂಧನೆಗಳನ್ನು ಜಾರಿಗೆ ತಂದ ತರುವಾಯ ಆ ಸಭೆಗೆ ನಮ್ಮ ಜಿಲ್ಲೆಯಿಂದ ಏನೋ ವಿಶ್ವಪ್ರಯತ್ನಗಳನ್ನು ಮಾಡಿ ಹಿಂದೆ ಒಂದಾವರ್ತಿ ಒಬ್ಬ ಮೆಂಬರನನ್ನು ಕಳುಹಿಸಿದ್ದೆವೆಂಬುದು ನಿಜ ಆದರೆ ಅನಂತರ ಈ ರೀತಿ ಒಬ್ಬನನ್ನಾದರೂ ಚುನಾಯಿಸಿ ಕಳುಹಿಸಲಿಕ್ಕೆ ನಮಗೆ ಸಾಧ್ಯವಾಗಲಿಲ್ಲ.

ಕಾಲಕಾಲಕ್ಕೂ ಮಲಬಾರಿನಿಂದಲೇ ಮಲಬಾರಿಗಳನ್ನೇ ಚುನಾಯಿಸುತ್ತ ಬರುತ್ತಿರುವರು. ಮಲಬಾರಿನವರು ನಮಗಿಂತ ವಿದ್ಯಾಂಸರೂ ಹೆಚ್ಚಿನ ಯೋಗ್ಯತೆವುಳ್ಳವರೂ ಎಂತ ಹೇಳ ಕೂಡುವುದಿಲ್ಲ. ಹಾಗಾದರೆ ಮಲಬಾರಿನವರೇ ವರ್ಷೇ ವರ್ಷೇ ಈ ಚುನಾವಣೆಯ ರಂಗಸ್ಥಳದಲ್ಲಿ ಜಯಪ್ರದರಾಗುವುದಕ್ಕೆ ಕಾರಣವೇನು? ಮಲಬಾರು ಜಿಲ್ಲೆಯು ವಿಸ್ತೀರ್ಣದಲ್ಲಿ ನಮ್ಮ ಜಿಲ್ಲೆಯಗಿಂತಲೂ ದೊಡ್ಡದಾಗಿದ್ದು, ಆ ಜಿಲ್ಲೆಯಲ್ಲಿ ವೋಟು ಮಾಡುವವರ ಸಂಖೆಯು ನಮ್ಮವರಿಗಿಂತಲೂ ಅಧಿಕವಾಗಿದ್ದುದರಿಂದಲೇ ಅವರು ನಮ್ಮನ್ನು ತಳ್ಳಿದಿಟ್ಟು ತಮ್ಮ ಜಿಲ್ಲೆಯವರನ್ನೇ ಚುನಾಯಿಸಲು ಶಕ್ತರಾದರು. ಮಲಬಾರಿಯ ಮೆಂಬರುಗಳು ಎಂತಹ ವಾಗ್ಮಿಗಳಾದರೂ ಎಷ್ಟು ಯೋಗ್ಯತೆವುಳ್ಳವಾದರೂ ಅವರಿಗೆ ನಮ್ಮ ಜಿಲ್ಲೆಯಲ್ಲಿನ ಜನರ ಸಂಕಷ್ಟಗಳು, ಅವಶ್ಯಕತೆಗಳು, ಸ್ಥಿತಿಗತಿಗಳು ಇವೇ ಮೊದಲಾದುವುಗಳ ವಿಷಯದಲ್ಲಿ ನಮ್ಮ ಜಿಲ್ಲೆಯಿಂದ ಆರಿಸಲ್ಪಡಬಹುದಾದ ಮೆಂಬರನಿಗೆ ಇರುವಷ್ಟು ಜ್ಞಾನವು ಎಂದಿಗೂ ಇರಲಾರದು. ನಮ್ಮ ಜಿಲ್ಲೆಯ ಕಷ್ಟನಷ್ಟಗಳನ್ನು ನಿವಾರಣೆಮಾಡುವ ಬಗೆಯು ಅವರಿಗೆ ಸೂಚಿಸಲಿಕ್ಕೆ ಸಾಧ್ಯವೂ ಇಲ್ಲ. ಹೀಗಾಗಿ ಮಲಬಾರಿನವರು ನಮ್ಮ ಜಿಲ್ಲೆಯ ಪ್ರತಿನಿಧಿಗಳಾಗಲು ಸರ್ವಥಾ ಯೋಗ್ಯರಲ್ಲ.

ಅರ್ಥಸಾಧಕ ಪತ್ರಿಕೆ

ರಸವತ್ತಾದ ಅರ್ಥಸಾಧಕ ವಿಷಯಗಳನ್ನು ಪ್ರತಿಪಾದಿಸುವ

ಶ್ರೇಷ್ಠವರ್ಗದ ಮಾಸಪತ್ರಿಕೆ

ಮೈಸೂರು ಅರ್ಥಸಾಧಕ ಸಭೆಯ ಆಶ್ರಯದಿಂದ ಪ್ರಕಟವಾಗಿದೆ.

ಸಂಪುಟ ೧] ಜನವರಿ ೧೯೧೫. [ಸಂಚಿಕೆ ೧

ಮುಖ್ಯ ವಿಷಯಗಳು.

ಅರ್ಥಸಾಧಕ ವಿಷಯಗಳ ಮೇಲೆ ಪ್ರಸಿದ್ಧ ಲೇಖಕರು ಬರೆಯುವ ಅಪೂರ್ವ ಲೇಖನಗಳು; ಹಿಂದುದೇಶದ ಮತ್ತು ಅನ್ಯದೇಶದ ಅರ್ಥಸಾಧನ ಪತ್ರಿಕೆಗಳಿಂದ ಆರಿಸಿ ತೆಗೆದ ಮನೋರಂಜಕವಾದ ಲೇಖನಗಳ ಸಾರಾಂಶ; ಅರ್ಥಸಾಧಕ ವಿಷಯಗಳ ಮೇಲೆ ಮಾಡಿದ ಮುಖ್ಯ ಮುಖ್ಯವಾದ ಭಾಷಣಗಳು, ಉಪನ್ಯಾಸಗಳು, ಮಾಸ ಮಾಸವೂ ಕೊಡುವ ಸಮಯೋಚಿತ ಅರ್ಥಸಾಧನ ವಿಷಯಗಳು-ಇವುಗಳಿಗೆ ಸಂಬಂಧಪಟ್ಟ ಚಿತ್ರಗಳು.

ವಾರ್ಷಿಕಚಂದಾ

ಮೈಸೂರು ಸಂಸ್ಥಾನದಲ್ಲಿರುವವರಿಗೆ ರೂ. ೦—೦—೦
ಸಂಸ್ಥಾನದ ಹೊರಗಿರುವವರಿಗೆ ರೂ. ೩—೦—೦

ಜಿಡಿಯು ಸಂಚಿಕೆ ೧ಕ್ಕೆ ೪ ಆಣೆ.

ಅರ್ಥವಿಚಾರಕ್ಕೆ ಸಂಬಂಧಪಟ್ಟ ವ್ಯಾಪಾರದ ಪ್ರಕಟನೆಗಳ ದರ.

ಒಂದು ಸಾರಿಗೆ ಪೂರ್ಣಪುಟಕ್ಕೆ ... ರೂ. ೧೦-೮-೦
,, ಅರ್ಧ ,, ೬-೪-೦
,, ಕಾಲು ,, ೪-೦-೦

ನಾಲ್ಕು ಪತ್ರಿಕೆಗಳಿಗೆ ಮಿಂಚಿದ ಚಿಕ್ಕಚಿಕ್ಕ ಪ್ರಕಟನೆಗಳಿಗೆ ಪಂಕ್ತಿಯೊಂದಕ್ಕೆ ೧ ರೂ.೬ ಪೈ. ವಿಶೇಷ ವಿಷಯಗಳನ್ನು ಬೆಂಗಳೂರಿನಲ್ಲಿರುವ "ಅರ್ಥಸಾಧಕ ಪತ್ರಿಕಾ" ಕರ್ತರಿಗೆ ಬರೆದು ತಿಳಿದುಕೊಳ್ಳಬಹುದು.

ವಿವಿಧ ವಿಷಯ ವಿಮರ್ಶೆ.

ವ್ಯವಸಾಯಕ್ಕೆ ಅತ್ಯವಶ್ಯವಾಗಿ ಬೇಕಾದುದು ನೀರು. ಆ ನೀರನ್ನು ಚೆನ್ನಾಗಿ ಬದಗಿಸಿಕೊಳ್ಳುವ ವಿಷಯದಲ್ಲಿ ನಮ್ಮ ಮೈಸೂರು ಸೀಮೆಯು ತೀರ ಹಿಂದೆ ಬಿದ್ದಿದೆ. ಸಂಸ್ಥಾನದಲ್ಲಿ ಇರುವ ಸುಮಾರು ೨೨ ಸಾವಿರ ಕೆರೆಗಳಲ್ಲಿ ೬ ರಲ್ಲಿ ಒಂದು ಭಾಗವಾದರೂ ಸರಿಯಾದ ಕ್ರಮದಲ್ಲಿ ಇಲ್ಲವೆಂಬುದು ಬಹು ಶೋಚನೀಯವಾಗಿದೆ. ಇದರ ಭಾರವು ಮರಾಮತ್ ಇಲಾಖೆಯ (Public Works Dept.) ಒಂದು ಭಾಗದವರಿಗೆ ಸೇರಿರುವುದರಿಂದ ಅಲ್ಲಿಯ ಲೋಪವನ್ನು ಕ್ರಮಪಡಿಸುವುದರಲ್ಲಿ ಸರ್ಕಾರದವರು ತಮ್ಮ ಸಂಪೂರ್ಣ ಗಮನವನ್ನು ಕೊಡದಿರಲಾರರು. ಈ ೨೫ ವರ್ಷಗಳಿಂದ ೨೫೦೦ ಕೆರೆಗಳು ಮಾತ್ರ ಕ್ರಮಪಟ್ಟಿವೆಯೆಂಬುದು ಅಷ್ಟು ಹಿತಕರವಾಗಿ ಕಾಣುವುದಿಲ್ಲ. ಅವುಗಳಲ್ಲಿಯೂ ಕಾಲಗಳಿತವಾಗಿ ದಿನೇದಿನೇ ಹೂಳು (ಕೆಸರು) ಹೆಚ್ಚುತ್ತ ಬಂದಿರುವುದರಿಂದ, ಕ್ರಮಪಟ್ಟ್ಯು ಪ್ರಯೋಜನವಾಗಲಿಲ್ಲ. ವಿಚಾರಣೆಗೆ ಸಿಕ್ಕದ ಕೆರೆಗಳಂತೂ ೧೯,೫೦೦-ರ ವರೆಗೆ ಇವೆ. ಹಿಂದೆ ನಷ್ಟದು ಬಂದಂತೆ, ವರ್ಷಕ್ಕೆ ೧೦೦ ಕೆರೆಗಳ ಪ್ರಕಾರ ಕ್ರಮ:

ತುಣುಕು ಮಿಣುಕು.

(Tit-Bits.)

"ಏಕ ಚಕ್ರ ಭಾಸ್ಕರ"ರಿಂದ.

ಯಾವ ಬಟ್ಟೆಯನ್ನಾಗಲಿ ಇಸ್ತ್ರಿ ಮಾಡುವಾಗ ಅಂಚಿನಿಂದಲೋ ಮೂಲೆಯಿಂದಲೋ ಇಸ್ತ್ರಿಮಾಡುವುದಕ್ಕಿಂತ ಮಧ್ಯದಿಂದ ಇಸ್ತ್ರಿಮಾಡುತ್ತ ಹೋಗುವುದು ಉತ್ತಮವೆಂಬುದನ್ನು ನಮ್ಮ ಅಗಸರೂ ದರ್ಜಿಯವರೂ ತಿಳಿದಿರಬೇಕು.

***

ಹಿತ್ತಾಳೆ, ತಾಮ್ರ, ಕಂಚು, ಬೆಳ್ಳಿ-ಈ ಪಾತ್ರೆಗಳನ್ನು ಶುದ್ಧಿ ಮಾಡಲು ನಮ್ಮವರು ಹುಣಸೆಯ ಹಣ್ಣನ್ನು ಉಪಯೋಗಿಸುತ್ತಾರಲ್ಲವೇ? ಅದರ ಜೊತೆಗೆ ಸ್ವಲ್ಪ ಉಪ್ಪನ್ನು ಸೇರಿಸಿ, ಉಜ್ಜಿ ತೊಳೆದರೆ, ಪಾತ್ರೆಯು ಮತ್ತಷ್ಟು ಬೇಗನೆಯೂ ಜೆನ್ನಾಗಿಯೂ ಶುಭ್ರವಾಗುತ್ತದೆ.

***

ಬಹು ಜನರು ಬೆಳಗಿನ ಹೊತ್ತು ದೋಸೆ ಉಪ್ಪಿಟ್ಟುಗಳನ್ನು ತಿನ್ನುವರು. ಇದೆಲ್ಲಕ್ಕಿಂತ ಉದ್ದಿನ ಬೇಳೆ ಮಿಶ್ರವಾಗಿ ಆವಿಯಲ್ಲಿ ಬೆಂದ ಇಡ್ಡಲಿಯು (ಕಡಬು) ಮೈಗೆ ಒಳ್ಳೆಯದೆಂಬುದನ್ನು ಎಲ್ಲರೂ ಅರಿಯಬೇಕು. ಆವಿಯಲ್ಲಿ ಬೆಂದ ಯಾವ ಪದಾರ್ಥವಾದರೂ ದೇಹಕ್ಕೆ ಆರೋಗ್ಯಕರವಾದುದು.

***

ಗಿರಾಕಿ—"ಸೇಟರೇ! ಒಂದುಗಜ ಒಳ್ಳೇ ರೇಷ್ಮೆ ಬೇಕು. ಕೈಮೇಲೆ ಹಣ ಕೊಟ್ಟರೆ ಏನು ಕೊಡಬೇಕಾಗುತ್ತೆ?"

ಸೇಟ್—"ನಾಲ್ಕೇ ರೂಪಾಯಿ."

ಗಿರಾಕಿ—"ನನ್ನಲ್ಲಿ ಈಗ ಅಷ್ಟಿಲ್ಲ. ಸಾಲವಾದರೆ ಎಷ್ಟಕ್ಕೆ ಕೊಡುತೀರಿ?"

ಸೇಟ್—"ಎಂಟುರೂಪಾಯಾಗುತ್ತೆ. ಅರ್ಧ ಹಣ ಈಗ ಕೊಟ್ಟುಬಿಟ್ಟು, ರೇಷ್ಮೆ ತೆಕ್ಕೊಳ್ಳಿ."

***

ಒಬ್ಬ ಉಪನ್ಯಾಸಕನು (ಸಭಿಕರನ್ನು ಕುರಿತು) "ನೋಮಾರಿಗಳಾದ ಹೆಂಗಸರು ಹರಟೆಗೆ ಕೂಡುವುದು ಯಾವ ತಿಂಗಳಲ್ಲಿ ಕಡಿಮೆ, ಗೊತ್ತೇ?"

ಸಭಿಕನೊಬ್ಬನು (ಆತುರದಿಂದ)—"ಅವರಿಗೆ ನೆಗಡಿ, ಕೆಮ್ಮು—ಹಿಡಿದಾಗ."

"ಅಲ್ಲವೇ ಅಲ್ಲ. ಬರುವ ತಿಂಗಳಲ್ಲಿ ಅವರ ಅರ್ಧಂಟ ಸ್ವಲ್ಪ ಕಡಿಮೆ."

"ಅದು ಹೇಗೆ ಸ್ವಾಮಿ?"

"ನೋಡಿ, ಫೆಬ್ರುವರಿಯಲ್ಲಿ ಇಪ್ಪತ್ತೆಂಟೇ ದಿನಗಳಲ್ಲವೆ?"

***

ಸಾಯುವ ಸ್ಥಿತಿಯಲ್ಲಿರುವ ಕೃಷ್ಣಸೆಟ್ಟರು ಮಗನನ್ನು ಕರೆದು,—"ಏನು ಮಾಡಲೋ ನುಗೂ! ನಾನು ಕಷ್ಟಪಟ್ಟು ಕೂಡಿಹಾಕಿದ ದುಡ್ಡೆಲ್ಲ ನಿನ್ನ ಕೈಗೆ ಸಿಕ್ಕಿದರೆ, ಹುಚ್ಚಾಬಟ್ಟೆ ಖರ್ಚುಮಾಡಿಬಿಡ್ತೀಯಲ್ಲಾ!"

ಮಗ—"ಯೋಚನೆ ಮಾಡಬೇಡಪ್ಪಾ! ಸರ್ಕಯ್ಯಲ್ಲಿ ತುಂಬಾ ದಿನ ನಿಲ್ಲೋದಿಲ್ಲ!"

***

ಯಜಮಾನ—ಏನೋ! ಕಂಡಕಂಡವರಲ್ಲಿ ಕೈನೀಡ್ತಿಯಾ! ದುರಭ್ಯಾಸ! ಇನ್ನಷ್ಟು ಜೆನ್ನಾಗಿ ಕೆಲಸ ಮಾಡಿ ದುಡೀಬಾರದೇನೋ?"

ಆಳು—"ಏನ್ಮಾಡಲಿ ಸೋಮಿ! ಚಿಕ್ಕಂದಿನಿಂದ ನಮ್ಮ ಕೂಲಿಮಟದ ಅಯ್ನೋರು ಕಲಿಸಿಕೊಟ್ಟ ಬುದ್ಧಿ, ಕೈನೀಡು ಕೈನೀಡು ಅಂತ!"

***

ಪಟ್ಟಣವಾಸಿ—"ಏನಯ್ಯಾ ಗೌಡಾ, ನೀವೆಲ್ಲಾ ಹೀಗಿದ್ದರೆ ಹ್ಯಾಗೆ? ಎಲ್ಲಾದ್ರಲ್ಲೂ ಮುಂದಾಗಬೇಕು. ಓ ಬಲೆ-ಅನ್ನಿಸಿಕೋಬೇಕು."

ಹಳ್ಳಿಯ ರೈತ—"ಅದೇನ್ ಬುದ್ದೀ, ಅಂಗಂತೀರಾ? ನಾವು ಕಸ್ಟಾಮಾಡಿ ದುಡಿಯೋಕಿಲ್ಲವ್ರೇ?"

"ಅದಲ್ಲ ಕಣಯ್ಯಾ. ಓ ಬಲೆ—ಅಂದ್ರೆ ಓದು-ಬರಹ-ಲೆಕ್ಕ, ಕಲ್ತೊಕ್ಕೋಬೇಕು. ಇದಕ್ಕೆ ಇಂಗ್ಲೀಷಿನಲ್ಲಿ 'ತ್ರೀ ಆರ್ಸ್' (Three R's) ಅಂತಾ ಹೇಳ್ತಾರೆ."

"ತಿರೀ ಆರ್ಸೋದು ಎಂಗೆ ಸನ್ನೊಡೆಯಾ?"

———o———

Registered No. M. 117

1920

ಅರ್ಥಸಾಧಕ ಪತ್ರಿಕೆ

ಮೈಸೂರು ಅರ್ಥಸಾಧಕ ಸಭೆಯ ಆಶ್ರಯದಿಂದ

ಬಿಡಿ ಪ್ರತಿ ೬ ಕಾಸು.] ಪ್ರತಿ ಶನಿವಾರ ಪ್ರಕಟಿಸಲ್ಪಡುವುದು. [ಚಂದಾ ವರ್ಷಕ್ಕೆ ೧ ರೂ

ಸಂಪುಟ ೬] ಬೆಂಗಳೂರು:—ಸರ್ ೧೯೨೦ ನೆಯ ಇಸವಿ ಆಗಸ್ಟ್ ೨೮ ನೆಯ ತಾರೀಖು, ಶನಿವಾರ [ಸಂಚಿಕೆ ೨೯

೧೯೨೦ ನೆಯ ವರ್ಷದ ಮೈಸೂರು ಸರ್ಕಾರದ ಸಾಲ.

Shimoga

ಬಡ್ಡಿ ಶೇಕಡಾ

ಪರಮಾನದ ತಿಂಗಳ್ಗಳ್ಳ.

ಸೆಪ್ಟಂಬರ್ ೩೦ರ ವರೆಗೂ ಬಿಡುಗಡೆ ಕೊಡಲಾಗುವುದು.

ಖರೀದು ಮೂಬಲಗು ರೂ. ೧೦೦, ೨೫೦, ೫೦೦, ೧೦೦೦, ಮತ್ತು ಮೇಲ್ಪಟ್ಟೆ ಕೊಡಲ್ಪಡುತ್ತದೆ.

ಮೊಬಲಗನ್ನು ಮೈಸೂರು ಸರ್ಕಾರದ ಖಜಾನೆಗಳಲ್ಲಿ ಪಾವತಿಮಾಡಬಹುದು.

ಬೆಂಗಳೂರಿನಲ್ಲಿರುವ ಮದರಾಸು ಬ್ಯಾಂಕಿನಲ್ಲಿಯೂ ಮೈಸೂರು ಬ್ಯಾಂಕಿನಲ್ಲಿಯೂ ಪಾವತಿ ಮಾಡಬಹುದು.

ಸಂಲಗ್ನ ಷರತ್ತುಗಳು ೧೯೨೦ನೇ ಜೂನ್ ೨೯ನೇ ತಾರೀಖಿನ ಎಫ್. ಎಲ್. ೮೬೬-ಜಿ. ಎಫ್. ೨೮೯-೧೯-೨ ನೇ ನಂಬರಿನ ನೋಟಿಫಿಕೇಷನ್ನಿನಲ್ಲಿ ಕಂಡುಬರುವವು

ಕಾರ ನಿರತ ಪತ್ರಿಕೋದ್ಯೋಗಿಗಳ ಸಂಘ, ತೀರ್ಥಹಳ್ಳಿ
ಟಕ ವೃತ್ತಪತ್ರಿಕಾ ಪ್ರದರ್ಶನ
6—1—1962.

ಗಳನ್ನು ಎಲ್ಲಾ ಖಜಾನೆಗಳಲ್ಲಿಯೂ

ಕನ್ನಡ ಕೋಗಿಲೆ.

ಸಂಪುಟ ೩. | ಜುಲಾಯಿ ೧೯೧೭. | ಸಂಚಿಕೆ ೪.

ಇಂಗ್ಲಿಷೂ ದೇಶೀಯಭಾಷೆಗಳೂ.

ಮೇಲಿನ ಶಿರೋಲೇಖನವನ್ನಿಟ್ಟುಕೊಂಡು ಬ್ರಹ್ಮಶ್ರೀ ಆತ್ಮಾರಾಮ ಶಾಸ್ತ್ರಿಗಳವರು ಸ್ವದೇಶಾಭಿಮಾನಿಯು ಕಳೆದ ಮೇ ತಿಂಗಳ ನಾಲ್ಕೂ ಅಂಕಗಳಲ್ಲಿ ಉಪಯುಕ್ತವೂ, ಸಯುಕ್ತಿಕವೂ ಆದ ಒಂದು ಅನುಕರಣೀಯ ಮತ್ತು ಅನುಸರ್ಜ್ಞೀಯ ಲೇಖನವನ್ನು ಬರೆದಿದ್ದರು. ಇದು ಏತದ್ದೇಶೀಯರಾದ ಕನ್ನಡಿಗರಿಗೆ ಒಂದು ಹಿತೋಪದೇಶವಾಗಿತ್ತು, ಆದ್ದರಿಂದ ಆ ಮಹಸ್ತ್ರೀಯರನ್ನೂ ಅವರ ಹಿತಸೂಚನಗಳನ್ನೂ ಅಭಿನಂದಿಸುವದಕ್ಕೆ ನವ್ಯ ಕನ್ನಡಕೋಗಿಲೆಯ ಅಪರಿಹಾರ್ಯವಾದ ಕರ್ತವ್ಯಗಳಲ್ಲಿ ಒಂದಾಗಿದೆ. ಕಾರಣ, ಆ ಲೇಖದ ಸಾರಾಂಶವನ್ನು ಇಲ್ಲಿ ಬರೆದು, ಮೇಲಿಂದ ನಮ್ಮ ಅಭಿಪ್ರಾಯಗಳನ್ನು ಕೊಡಬೇಕೆಂದಿದ್ದೇವೆ.

ಬ್ರಹ್ಮಶ್ರೀ ಶಾಸ್ತ್ರಿಗಳ ಲೇಖನದ ಸಾರಾಂಶವು ಹೀಗಿರುತ್ತದೆ:— ಈಗಿನ ಶಿಕ್ಷಣಕ್ರಮದ ದೆಸೆಯಿಂದ ಕನ್ನಡಕ್ಕೆ ಶಿಕ್ಷಿತೀಯರನ ಹೆಮ್ಮೆಟ್ಟಿನಿಗಾದ "ಸಾಯಬೇಕೊ? ಬದುಕಬೇಕೊ?" ಎಂಬ ವಿಷಮಾವಸ್ಥೆ ಬಂದೊದಗಿದೆ. ಪ್ರಾಥಮಿಕ ಶಿಕ್ಷಣವು ದೇಶೀಯಭಾಷೆಯಿಂದಲೆ ಆಗುತ್ತಿದ್ದರೂ, ಮಾಧ್ಯಮಿಕ ಹಾಗು ಉಚ್ಚ ಶಿಕ್ಷಣಗಳು ಪರಭಾಷೆಯಿಂದಾಗುವದರಿಂದ ಮೇಲಿನ ವಿದ್ಯಾರ್ಥಿಗಳಿಗೂ ಕನ್ನಡಕ್ಕೂ ಸೋಡಜೀಟು ಆದಂತಾಗಿದೆ. ಶುದ್ಧಕನ್ನಡದಿಂದ ಪತ್ರವ್ಯವಹಾರ ಮಾಡುವದಾಗಲಿ, ಸಂಭಾಷಣಮಾಡುವದಾಗಲಿ ಅವರಿಂದಾಗದು. ಆದರೆ ಮಿ. ಏಟ್ಸ್‌ರಂಥ ವಿದ್ಯಾಪ್ರಿಯಪರೀಕ್ಷಕರು ಬಂದಾಗ ಮಾತ್ರ ಕೆಲಕೆಲರು "ಶಿಕ್ಷಣವು ಕನ್ನಡದಿಂದಾಗ

ಮಾತನಾಡಬೇಕಾಗಿ ಬಂತು. ಆ ಉಪನ್ಯಾಸದಲ್ಲಿ ದೊರೆತನದವರಿಗೂ; ಸ್ವದೇಶ ಸಂಸ್ಥಾನಕ್ಕೂ ಇರುವ ಸಂಬಂಧವನ್ನು ಕುರಿತು ಯುಕ್ತಿಯುಕ್ತವಾಗಿ ಚರ್ಚಿಸಿದರು. ರಾಜಕೀಯ ವಿಷಯಗಳಲ್ಲಿ ಇವರು ಮಿತಾಭಿಪ್ರಾಯವುಳ್ಳವರು. ಪ್ರತಿ ವಿಷಯಗಳನ್ನೂ ನ್ಯಾಯಸ್ಥಾನಗಳ ಹಾಗೆ ಜೆನ್ನಾಗಿ ಮನಸ್ಸಿನಲ್ಲಿ ಚರ್ಚಿಸಿ, ನಿಷ್ಪಕ್ಷಪಾತಬುದ್ಧಿಯಿಂದ ಯುಕ್ತಾಯುಕ್ತಗಳನ್ನು ನಿರ್ಣೈಸುವರು. ಹಿಂದುಗಳೂ, ಆಂಗ್ಲೇಯರೂ ಮಿತ್ರಭಾವದಿಂದ ಕಲೆತು ಮೆರೆಯುವದಕ್ಕೆ ಇವರು ಕಲಕತ್ತೆಯಲ್ಲಿ ಒಂದು **Club**ನ್ನು ಸ್ಥಾಪಿಸಿದರು. ಇವರು ಬ್ರಿಟಿಷ್ ದೇಶದಲ್ಲಿಯೂ, ಬ್ರಿಟಿಷ್ ಪ್ರತಿಷ್ಠಾಪನೆಗಳಲ್ಲಿಯೂ ಅಭಿಮಾನವುಳ್ಳವರು. ಆದರೂ ಹೀಗೆಂದು ಹೇಳುವುದರಿಂದ ಸಿಂಹಂವರಿಗೆ ದೇಶಾಭಿಮಾನ ಕಮ್ಮಿಯೆಂದು ಹೇಳಲಾಗದು. ದೇಶೀಯಾಶಯಗಳಲ್ಲಿ ಅಧಿಕ ವಿಶ್ವಾಸವುಳ್ಳವರಾದ್ದರಿಂದಲೆ ಮೈಸೂರಾಯಿಯವರ ಸಭೆಯಲ್ಲಿ ಅವರನ್ನು ನ್ಯಾಯಶಾಸ್ತ್ರಮಂತ್ರಿಯನ್ನಾಗಿ ನಿಯಮಿಸಿದಾಗ ದೇಶದಲ್ಲೂ ಒಂದೆ ವಿಧವಾಗಿ ಹೊಗಳಲಾರಂಭಿಸಿತು.

ಆ ಉದ್ಯೋಗದಲ್ಲಿ ಸಿಂಹರವರು ಆರು ತಿಂಗಳು ಮಾತ್ರ ಇದ್ದು, ಯಾವ ಕಾರಣದಿಂದಲೊ ಆ ಪದವಿಯನ್ನು ಬಿಟ್ಟರು. ಅನಂತರ ಸೆರಕಾರದವರು ಅಡ್ವೊಕೇಟ್ ಜನರಲ್ ಪದವಿಯನ್ನೆ ಕೊಟ್ಟರು. ೧೯೧೫ರಲ್ಲಿ ಬೊಂಬಾಯಿ ನಗರದಲ್ಲಿ ನಡೆದ ಜೀಯ ಮಹಾಸಭೆಗೆ ಅಧ್ಯಕ್ಷತೆಯನ್ನು ವಹಿಸಿದ್ದರು. ಆಗ ಇವರು ಕೊಟ್ಟ ಭಾಷಣವು ಸರ್ವರಿಗೂ ವಿಸ್ಮಯಕಾರಿಯಾಗಿರುವದು. ಇವರ ಶಕ್ತಿಸಾಮರ್ಥ್ಯಕ್ಕೆ ಮೆಚ್ಚಿ ಇಂಡಿಯಾಸೆರಕಾರದವರು **C. P. E.** ಮತ್ತು **Sir.** ಎಂಬ ಗೌರವ ಬಿರುದಿನಿಂದ ಸನ್ಮಾನಿಸಿದರು. ಇಂಥ ದೇಶಾಭಿಮಾನಿಗಳನ್ನು ಇಂಡಿಯಾಸೆರಕಾರದವರು ಸಾಮ್ರಾಜ್ಯಸಭೆಗೆ ಹೈಂದವಸಭ್ಯರನ್ನಾಗಿ ಆರಿಸಿದರು. ಈ ಮಹನೀಯರ ಚರಿತ್ರವು ಸರ್ವಜನಾಮೋದಕವೂ, ಆದರ್ಶಸ್ವರೂಪವೂ ಆಗಿದೆ. ದೇಶಾಭಿಮಾನಿಗಳಾದ ಈ ಮಹನೀಯರು ಇಂಗ್ಲೆಂಡಿನಲ್ಲಿ ನಡೆದ ಆಂಗ್ಲಸಾಮ್ರಾಜ್ಯಸಭೆಗೆ ಹೈಂದವಪ್ರತಿನಿಧಿಯಾಗಿ ಹೋಗಿದ್ದು, ಈಗ ತಾನೆ ಸ್ವದೇಶಕ್ಕೆ ಹಿಂತಿರುಗಿದರು. ಈ ಮಹನೀಯರಿಗೆ ಭಗವಂತನು ಆಯುರಾರೋಗ್ಯಗಳನ್ನು ಕೊಟ್ಟು, ಕಾಪಾಡಲಿ!

ನಮ್ಮ ನೋಟ.

"ನೀತಿಬೋಧ" ಈ ಪುಸ್ತಕವನ್ನು ವಿಷ್ಣು ಶ್ರೀನಿವಾಸ ರಂಗೈ ಶೇಣ್ವಿಯವರು ಕಳುಹಿದ್ದಕ್ಕಾಗಿ ಅವರಿಗೆ ನಮ್ಮ ಕೃತಜ್ಞತಾಪೂರ್ವಕ ವಂದನೆಗಳು. ಹಿಂದಿನಿಂದ ವಿಮರ್ಶಿಸುವೆವು.

ಬೋಧಿನಿ

Registered No. M. 1196.

115

BODHINI

BODHINI

Vol. III. Part II.

ಸಂಪುಟ	ಸಂಚಿಕೆ
೩.	೨.

ನೊವೆಂಬರ್ ೧೯೧೭.

ಪ್ರಭಾಕರ ಮುದ್ರಾಯಂತ್ರ, ಉಡುಪಿ.

ಪರಿಮಳವೇ ಪರಿಮಳ! ಒದಿನೋಡಿರಿ!! ಸುಗಂಧವೇ ಸು

ದೇಶಿ ವಿದೇಶೀಯ ಅತ್ತರುಗಳನ್ನೂ ಸೆಂಟ್ಸುಗಳನ್ನೂ ಕೊಂಡುಕೊಂ
ವೃಥಾ ಹಣವನ್ನು ವೆಚ್ಚಮಾಡದಿರಿ!

ನಿಮಗೆ ಸುಗಂಧದ್ರವ್ಯ ಬೇಕಾಗಿದ್ದರೆ ಹೆಚ್ಚಿನ ವೆಚ್ಚವಿಲ್ಲದೆ ಶಾಸ್ತ್ರೋಕ್ತವಾ
ದೇವರಿಗೂ ಸಮರ್ಪಿಸಬಹುದಾದ, ಒಂದು ಸಲ ಲೇಪಿಸಿದರೆ
೩ ದಿವಸಗಳವರಿವಿಗೂ ಅನೋಘವಾದ ಪರಿಮಳವನ್ನು ಬೀರು

ಅತ್ಯುತ್ತಮ ಕುಂಕುಮಾಗರು ಗಂಧ

ಒಂದು ತುಂಡನ್ನಾದರೂ ತರಿಸಿಟ್ಟುಕೊಂಡು ಉಪಯೋಗಿಸಿರಿ. ಪ್ರತಿ
ಯಲ್ಲಿಯೂ ಸಂಗ್ರಹಕ್ಕೆ ಯೋಗ್ಯವಾದುದು. ಬೇಕೆಂಬಾಗ್ಗೆ ಸಿಗುವ ಸದಾಥ
ಇದು ಹಲವು ವರುಷಗಳಿಂದೀಚೆಗೆ ಸಿಗುತ್ತಿರಲಿಲ್ಲ. ಸಿಕ್ಕಿದರೂ ಕೃಷ್ಣಾಗರು ಅ
ಹಲ್ಮಿ ಗಂಧ ವಿನಹ ಪ್ರಶಸ್ತವಾದ **"ಕುಂಕುಮಾಗರು ಗಂಧ"**ವು ದೊರೆಯು
ಇಲ್ಲ. ಅಂಥಾ ಉತ್ಕೃಷ್ಟವಾದ ಗಂಧವನ್ನು ನಾವು ಬಹು ಪ್ರಯತ್ನದಿಂದ ಸಂ
ಸಿರುವೆವು. ಗ್ರಾಹಕರು ಇಂಥಾ ಉತ್ತಮ ಸಂಧಿಯನ್ನು ಹೋಗಲಾಡಿಸದೆ ನ
ಗಾಗಿ ಒಂದು ತುಂಡನ್ನಾದರೂ ತರಿಸಿಕೊಳ್ಳಿರಿ! ಎಲ್ಲರೂ ತರಿಸಿಕೊಳ್ಳುವಂ
ಸುಲಭವೆಲೆ ಇಟ್ಟಿದೆ. ಬೇಗನೇ ಬರೆಯಿರಿ, ನಂತರ ಸಿಗಲಾರದು. **ಸ್ವಲ್ಪವೇ ಉ**

3 ತೊಲಾ ಲಾಗ್ಯಾತು 3 ಸೇರು ವರೆಗಿನ ತುಂಡುಗಳು ಸಿಗುವುವು.

ಕ್ರಯಃ ತೊಲಾ ೧ಕ್ಕೆ 0-2-0 ಸೇರು ೧ರ 2-8-0

ಟಪ್ಪಾಲ್ ಖರ್ಚು ಬೇರೆ; ವಿ. ಪಿ. ಮೂಲಕ ಕಳುಹಿಸುವೆವು.

ನಮ್ಮಲ್ಲಿ ಅತ್ಯುತ್ತಮವಾದ ಶ್ರೀಗಂಧ, ಚಂದನ, ಕೃಷ್ಣಾಗರು, ಗಂಧ
ಎಣ್ಣೆ, ಗಂಧದ ಪುಡಿ, ದಶಾಂಗ ಕೂಡಾ ಸಿಗುತ್ತದೆ. ಹೆಚ್ಚಿನ ವಿವರಗಳಿ
ಅರ್ಧಾಣೆ ಚೀಟು ಸಮೇತ ಬರೆದುಕೊಳ್ಳಬೇಕು.

ಉಡುಪಿಯಲ್ಲಿಯೇ ತಯಾರಾಗತಕ್ಕ

ಹಿತ್ತಾಳೆ ಮತ್ತು ತಾಂಬ್ರದ ದೇವತಾರ್ಚನ ಸಾಮಗ್ರಿಗಳು

ಮದ್ದಗಿರಿ ಪಂಚಪಾತ್ರೆಗಳು—ಸೇರು $\frac{1}{4}$, $\frac{1}{2}$, $\frac{3}{4}$, 1, $1\frac{1}{4}$, $1\frac{1}{2}$, 1
2ಸೇರಿನ ತೂಕ ಉಳ್ಳವು.

ಮದ್ದಗಿರಿ ಉದ್ಧರಿಣೆ—ತೊಲಾ 4, 6, 8, 12 ಪರೆಗೆ.

ಕೊಂಬಿನ ಗಿಂಡಿಗಳು—$\frac{1}{4}$ ಸೇರು ಲಾಗ್ಯಾತು 3 ಸೇರು ವರೆಗೆ

ಜಲಾರಿಗಳು—$\frac{1}{2}$ ಸೇರಿನಿಂದ 3 ಸೇರಿನ ವರೆಗೆ.

ಸಂಪುಟಗಳು— $\frac{1}{2}$ ಸೇರಿನಿಂದ 3ಸೇರಿನ ವರೆಗೆ.

ಹಿತ್ತಾಳೆಯ ಆರತಿಗಳು - ಏಕಾರತಿ, ಧೂಪಾರತಿ, ಪಲಗಾರತಿ, ಮೂರಾ ಸಂಚಾರತಿ, ಕುದುರೆಪಂಚಾರತಿ, ಶೇಷಾರತಿ (ನಾಗಾರತಿ), ತೇರಾರತಿ, ಪಂಚ ಬ್ರಾರತಿ ಮಗೈರೆ ಸಣ್ಣದು ದೊಡ್ಡದು ತರವಾರು

ಸೋಮಸೂತ್ರಗಳು— 3 ಇಂಚು ಅಗಲಕ್ಕಿತು ಬೇಕಷ್ಟು.

ಕಾಲುಪೀಠಗಳು— 3 ಇಂಚು ಅಗಲಾಗಿಲು ಬೇಕಾದಷ್ಟು.

ಗಂಟೆಗಳು— ಉತ್ತಮ ಸ್ವರವುಳ್ಳ ಕಂಚಿನಿಂದ ತಯಾರಿಸಿದ ಪ್ರಾಣದೇವರ ಪ್ರತಿಮೆಯುಳ್ಳುದು. ಸಣ್ಣದು ದೊಡ್ಡದು ತರವಾರು.

ಶಂಖದ ಅಡ್ಡಣಿಗೆಗಳು— ಹಿತ್ತಾಳೆ ಬಾಬತು ಸಣ್ಣದಾಗಿ 3 ನಮೂನೆ.

ನೀರಾಂಜನಗಳು— ಒಂದು ಗೆಣಿನಿಂದ ಒಂದು ಮೊಳದ ವರೆಗಿನ ಹಿತ್ತಾಳೆಯ ದೀಪಗಳು.

ತುಳಸಿವೃಂದಾವನಗಳು—ಬಹು ಸಣ್ಣ ಸೈಜಿನಿಂದ ತರವಾರು.(ಹಿತ್ತಾಳೆಯವು)

ಶ್ರೀಮುದ್ರೆ ಜೋಡುಗಳು— ದೊಡ್ಡದು, ಯಡತರ, ಸಣ್ಣದು,— ಈ 3 ನಮೂನೆ ಏನಹ ಪಂಚಮುದ್ರೆ (1 ಮುದ್ರೆಯಲ್ಲಿ 5)

ಇನ್ನೂ ಅನೇಕ ವಿಧವಾದ ಸಾಮಾನುಗಳೂ ಸಿಗುವುವು. ಬೇಕಾದವರು ಸೈಜು ಸಮೇತ ಬರೆಯಬೇಕು.

ಸ್ಪೆಶ್ಯಲ್ ಸೈಜು ಬೇಕಾದವರಿಗೆ

ಉತ್ತಮ ಕಾರಾಗಿರರಿಂದ ತಯಾರಿಸಿ ಕಳುಹಿಸೋಣಾಗುವುದು.

ಉಡುಪಿ ಶ್ರೀಕೃಷ್ಣ ಪಠಗಳು

೧ಕ್ಕೆ ೦—೦—೩, ೧೦೦ಕ್ಕೆ ೧—೨—೦.

ಇತರ ಪಠಗಳು.

ಲಕ್ಷ್ಮಿ, ಸರಸ್ವತಿ, ಗಣಪತಿ, ಈಶ್ವರ, ರಾಮ, ಕೃಷ್ಣ, ಕೋಲಾಪುರ ಮುಕಾಂಬಿಕಾ ಇತ್ಯಾದಿ.

ಮುತ್ತು

ಶ್ರೀಂಗೇರಿ ಜಗದ್ಗುರುಗಳು, ಶಾರದಾ, ಮೈಸೂರು ಮಹಾರಾಜರು, ಯುವರಾಜರು, ದಿವಾನ್ ವಿಶ್ವೇಶ್ವರಯ್ಯನವರು, ಕೆ. ಪಿ. ಪುಟ್ಟಣ್ಣ ಶೆಟ್ಟರು, ಬಡೋದಾ ಮಹಾರಾಜರು, ದಾದಾಬಾಯಿ ನೌರೋಜಿ, ಗೋಖಲೆ, ರವೀಂದ್ರನಾಥ ಠಾಗೋರ್, ಸ್ವಾಮಿ ವಿವೇಕಾನಂದ ಮಗೈರೆ ಮಹನೀಯರ ಭಾವಚಿತ್ರಗಳು ಸಹ ನಮ್ಮಲ್ಲಿ ದೊರೆಯುವು

ವಿಳಾಸ:—

ಮೆನೇಜರ್, ಪ್ರಭಾಕರ ಮುದ್ರಾಯಂತ್ರ,

ಉಡುಪಿ (ದಕ್ಷಿಣ ಕನರಾ).

ವಿಷಯಗಳು

ಕ್ರಮ ಸಂಖ್ಯೆ	ವಿಷಯ	ಪುಟ
13	ಪ್ರಾಸಂಗಿಕ ವಿಷಯ	1
14	ಸಂಕಲ್ಪ	3
15	ಸಮುದಾಕರಣ ಸಕ್ಕಪಾರ್ಶ್ವ ಪರಿಶೀಲನೆ	9
16	ಪ್ರಾಮಾಣ್ಯ	14
17	ಸ್ಮೃತಿಪ್ರಾಮಾಣ್ಯ ನಿರಾಸ	16
18	ಪೂರ್ವಪಕ್ಷಸಿದ್ಧಾಂತ ವಿಭಾಗವಿವೇಚನೆ	17
19	ಅಭ್ಯಾಸ ಪರಿಚಯ	21
	ಸಮಸ್ಯಾ ಅಧಿಕರಣ ಪಟ್ಟಿ	(5—8)
	ಶ್ರೀ ಸೋದೆ ವಾದಿರಾಜ ಗುರುಪರಂಪರೆಯ ಚಿತ್ರ	(3—6)

ಸಪ್ತೈಕಾ ನ್ಯಾಯವಿವರಣ

ಶ್ರೀಮನ್ಮಧ್ವಸಿದ್ಧಾಂತಾಚಾರ್ಯರಿಂದ ಪ್ರಣೀತವಾದ ಶ್ರೀಮದ್ಭಾಷ್ಯಸೂತ್ರಗಳ ಪೂರ್ವಪಕ್ಷ ಮತ್ತು ಸಿದ್ಧಾಂತ ಯುಕ್ತಿಗಳನ್ನು ಶ್ರೀಮದಾಚಾರ್ಯರವರು ಅನುವ್ಯಾಖ್ಯಾನದಲ್ಲಿ ಸಂಕ್ಷೇಪವಾಗಿ ಹೇಳಿದ್ದನ್ನು ಅದೇ ಕ್ರಮದಿಂದ ಹೇಳುವುದೇ ನ್ಯಾಯವಿವರಣವೆಂಬ ಗ್ರಂಥವು. ಇದು—ಸಮನ್ವಯ, ಅವಿರೋಧ, ಸಾಧನ, ಫಲ—ಎಂಬ ನಾಲ್ಕು ಅಧ್ಯಾಯಗಳಿಂದ ಕೂಡಿದ್ದು ಇದು ಕೆಲವು ಭಾಗಕ್ಕೆ ಶ್ರೀಮತ್ ವಾದಿರಾಜಾಚಾರ್ಯರವರೂ, ಉಳಿದ ಭಾಗಕ್ಕೆ ಶ್ರೀರಘೂತ್ತಮತೀರ್ಥರೂ ಟೀಕುಮಾಡಿರುವರು. ಈ ಮತ್ಪೂರ್ವ ಗ್ರಂಥವನ್ನು ಬಹು ಶ್ರಮದಿಂದ ಸಂಗ್ರಹಿಸಿ, ಪಂಡಿತರಿಂದ ಸರಿಪಡಿಸಿ ಮಾಡಿಸಿ ಸಹಾಯಿಗಳಾಗಿ ಪ್ರಕಟಿಸುತ್ತಿದ್ದೇವೆ. ಪಾರಾಯಣ ಮಾಡುವವರಿಗೂ ಸೂತ್ರಾರ್ಥವನ್ನು ತಿಳಿಯುವವರಿಗೂ ಸಹಾಯಕವಾಗಿ ಅತ್ಯುಪಯುಕ್ತವಾದ ಗ್ರಂಥವಾಗಿರುವುದರಿಂದ ಇದನ್ನು ಸಕಲ ಸಜ್ಜನರೂ ಸಂಗ್ರಹಿಸಿಡತಕ್ಕದ್ದು ಅತ್ಯವಶ್ಯ. ಬೆಲೆ ಕೂಪ್ಯಾ ೨—೦—೦ ಮಾತ್ರವೇ. ಹಾಸಲು ಬೆನೆ. ೨ ಪಿ. ಮಾಲಿಕ ಕಳುಹಿಸುವೆವು.

ಇದಲ್ಲದೆ ಇನ್ನೂ ಅನೇಕ ನಮೂನೆಯ ಪುಸ್ತಕಗಳು
ನಮ್ಮಲ್ಲಿ ಮಾರಾಟಕ್ಕೆ ಸಿಕ್ಕುತ್ತವೆ.

ಎಲ್ಲಾ ವಿಧಕ್ಕೂ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬೇಕು.

ಮೆನೇಜರ್,

ಪ್ರಭಾಕರ ಮುದ್ರಾಮಂದಿರ, ಉಡುಪಿ. (ದ. ಕ.)

ಸಚಿತ್ರ
ತಿಳಿಗನ್ನಡ

ಬೋಧಿನಿ

ಉತ್ತಮ
ಮಾಸಪತ್ರಿಕೆ

ಸಂಪುಟ ೩ | ನೊವೆಂಬರ್ ೧೯೧೭ | ಭಾಗ ೨

೧೩. ಮುಂಗಳೂರು ಗಣಪತಿ ಸೆಕೆಂಡರಿ ಶಾಲೆಯಲ್ಲಿ ಮಕ್ಕಳು ಹಾಡುವ ಪ್ರಾರ್ಥನೆಯ ಪದಗಳು

ಹೇ ಮಾತೆ, ಹೇ ಭ್ರಾತೆ! ವಿಮಲಗುಣ ಪೂರಿತೆ!।
ಸುಮನ ಸಂಪೂಜಿತ! ಸೌಖ್ಯದಾತ! ॥
ನೀಮಾವಲಂಬಿತವೆ ನೀ ಮಾಡಿದುಪಕಾರ ?
ನಾ ಮರೆಯಲೆಂತದನು ಜನ್ಮದಾತೆ! ॥ ೧ ॥

ಶಿಶುವಾಗಿ ನಾ ಮುನ್ನ ಅಂಬೆಗಾಲಿಕ್ಕುತಾ
ಕೆಸರಾಟಗಳನಾಡುತಿರಲು ನೋಡಿ,
ಹಸುಕರುವನಿಂತಂತೆ ಹಸನಾಗಿ ಸಲಹುತ್ತೆ,
ನೀಸರನ ಪರಿಯೆನ್ನನಾಗಿಸಿದಳಾರೋ ? ॥ ೨ ॥

ಮೂಢಾತ್ಮರಾಗಿರಲು ನಿನ್ನ ನೀಪ ಮುನ್ನ
ಕಾಡುಕಪಿಗಳ ತೆರದಿ ನಡೆಯುತಿರಲು,
ನೀಡಿ ನಿನ್ನಯ ದಿವ್ಯ ನಡುನೋಟವನು, ನಮ್ಮ
ಜಡಬಾಧೆಯನು ತೊಡೆದು ಪಡೆದಳಾರೋ? ॥ ೩ ॥

ಹಡೆದಾಕೆ ತಾನೇನ ಮಾಡಿದಳೊ? ಮಾನ್ಯವೆ?
ಕುಡಿಸಿದಳು ಹಾಲನಾ ಮೊಲೆಯನೂಡಿ!
ಕುಡಿಸಿರುವೆ ನೀನೀಗ ದೃಢವಾದುದರಿವೆಂಬ
ಕಡಲ ಕಡೆಯಲು ದೊರೆತ ಹಾಲ ನೀನು! ॥ ೪ ॥

ಅತ್ತು ಕಾಡುವ ಪೂಳಸೆತ್ತ ಹೋದರು ಹೋಗು.
ಮುತ್ತೆ ನಿನ್ನಯ ಕಾಟ ತಪ್ಪಿತೆಂದು,
ತುತ್ತಿಕ್ಕುತೆಮ್ಮನಾ ಹೆತ್ತವರು ಕಳುಹಿದರೆ,
ಮುತ್ತಿಕ್ಕುತಾದರವನಿತ್ತಳಾರೋ ?

ಕನಸಿನೊಳು ನೆನಸಿನೊಳು ನೆನೆಯದಿರಲಾಪೆವೆ ? !
ಮನಸಿನೊಳು ನಿನ್ನಯಾ ದಿವ್ಯ ಮೂರ್ತಿ
ಚಿಣ್ಣಾದ ಬಾಲರಿಂ ಹಣ್ಣಾದವರ ತನಕ
ಸುಣ್ಣಗಾರೆಯೊಳಂತು ಬಣ್ಣಿಸಿರಲು !

ಹೇ ಮಾತೆ, ಹೇ ಮಾತೆ! ಬೇಸರವ ನೀಗು ನೀ ;
ನಮಗಿತ್ತೆ ನಶ್ವರದ ಜನ್ಮವನ್ನು ! ॥
ಸುಮ್ಮನಾಯಿತು ಎಂದು ಕೆಮ್ಮನಾಗಲು ಬೇಡ; ।
ದುಸ್ಸಾನವನು ಬಟ್ಟು ನೋಡು ನೋಡು !

ನಿನ್ನ ಕೀರ್ತಿಯೆ ಕೀರ್ತಿ ! ನಿನ್ನ ಮೂರ್ತಿಯೆ ಮೂರ್ತಿ ! ।
ನಿನ್ನ ಸೂಕ್ತಿಯೆ ಸೂಕ್ತಿ, ಮುಕ್ತಿಯೆನಗೆ!॥
ನಿನ್ನ ತೋಷವೆ ತೋಷ! ನಿನ್ನ ರೋಷವೆ ರೋಷ! ॥
ನಿನ್ನದಾಶಯವಲ್ಲದಿಲ್ಲವೆನಗೆ !

ಕುಂಬಾರನಾದೊಡೇಂ ? ಬಿರಳನೀಯನೆ ತಾನು ॥
ನಂಬಿರ್ದ ಗುರುವಿಗೇ ಕಾಲವ್ಯನು ! ॥
ಜಂಬಾರಿಸುತನೇನು ಪಾಂಚಾಲನಂ ಪಿಡಿದು
ಕುಂಭಜಂಗೊಪ್ಪಿಸನೆ ? ನೋಡು ನೋಡು !

ಅಹೋ ! —ಮಾತೆನೀ ಮಾತನೀ ನಂಬುವುದುನಿಶ್ಚಯಂ ।
ಏತೆರದ ಕೊರತೆ ನಿನಗಾಗಲಂದು, ।
ಈ ತನುವನೀ ಮನವನೀ ಧನವ ನಿನಗಾಗಿ
ನಾ ತೆರಲು ನಿಂದಿಹೆನು ! ನೋಡು ನೋಡು!

೧೪. ಮತಬೋಧೆ (ದೇವರು ಎಲ್ಲೆಲ್ಲಿಯೂ ಇರುವನು)

I ತರಗತಿ. **ಕಾಲ: ½ ಘಂಟೆ.**

ಉದ್ದೇಶ—ಮಕ್ಕಳಲ್ಲಿ ದೈವಭಕ್ತಿಯನ್ನು ಹೆಚ್ಚಿಸುವುದು. ದೇವರು ಸರ್ವವ್ಯಾಪಕನು. ದೇವರು ದುಷ್ಟನಿಗ್ರಹಶಿಷ್ಟಪರಿಪಾಲನಾರ್ಥವಾಗಿ ಭೂಮಿಯಲ್ಲಿ ಅವತಾರವಾಡುವನು; ದೇವರು ಒಬ್ಬನೇ.—ಈ ವಿಷಯಗಳನ್ನು ಮಕ್ಕಳ ಮನಸ್ಸಿನಲ್ಲಿ ದೃಢಪಡಿಸುವುದು.

ಉಪಕರಣಗಳು—ಕಂಭವನ್ನು ಭೇದಿಸಿಕೊಂಡು ದೇವರು ನರಸಿಂಹಾವತಾರ ಮಾಡಿದುದನ್ನು ತೋರಿಸುವ ಚಿತ್ರಪಠ, ಹಿರಣ್ಯಕಶಿಪುವನ್ನು ನರಸಿಂಹಸ್ವಾಮಿಯು ಸಂಹರಿಸಿದುದನ್ನು ತೋರಿಸುವ ಚಿತ್ರ, ರಾಕ್ಷಸನ ಚಿತ್ರ.

ವಿಷಯ	ಬೋಧನಕ್ರಮ
ಅವತಾರಿಕೆ—ಹಗಲೂ, ರಾತ್ರೆಯೂ, ಸುಖಬಂದಾಗಲೂ, ಕಷ್ಟಕಾಲದಲ್ಲಿಯೂ, ಐಶ್ವರ್ಯಬಂದ ಕಾಲದಲ್ಲಿಯೂ, ದಾರಿದ್ರ್ಯದಲ್ಲಿಯೂ ಕಾಪಾಡತಕ್ಕವನು ಭಗವಂತನು.	ಉಚಿತವಾದ ಪ್ರಶ್ನೆಗಳ ಸಹಾಯದಿಂದ ಈ ವಿಷಯಗಳನ್ನು ಮಕ್ಕಳ ಬಾಯಿಂದಲೇ ಹೊರಡಿಸಿ ಆವೃತ್ತಿಮಾಡಿಸುವುದು.
I ಮತಬೋಧೆ (ಪ್ರಹ್ಲಾದನ ಕಥೆ):—	
ಮಹಾವಿಷ್ಣುವು ವೈಕುಂಠದಲ್ಲಿದ್ದಾನೆ.	ಮಹಾಪುರುಷರ ನಿವಾಸಸ್ಥಾನವನ್ನು ವಿವರಿಸುವುದರ ಮೂಲಕ ಏಸ್ಲುವು ವೈಕುಂಠದಲ್ಲಿರುವನೆಂಬುದನ್ನು ತಿಳಿಸುವುದಲ್ಲದೆ ಹಕ್ಕ ಉದಾಹರಣೆಗಳಿಂದ ವೈಕುಂಠಲೋಕವನ್ನು ವರ್ಣಿಸುವುದು.
ಒಂದು ಸಮಯದಲ್ಲಿ ಸನಕಾದಿ ಋಷಿಗಳು ವೈಕುಂಠದ ಬಾಗಿಲಿಗೆ ಬಂದರು. ಜಯವಿಜಯರು ಆ ಋಷಿಗಳನ್ನು ಒಳಕ್ಕೆ ಬಿಡಲಿಲ್ಲ.	ರಾಜಾಧಿರಾಜರುಗಳ ಮತ್ತು ಇತರ ದೊಡ್ಡ ಮನುಷ್ಯರ ದರ್ಶನಕ್ಕೋಸ್ಕರ ಅನೇಕರು ಅವರ ವಾಸಸ್ಥಾನದ ಬಾಗಿಲ ಬಳಿ ಬರುತ್ತಿರುವುದನ್ನೂ ದ್ವಾರಪಾಲಕರು ಅವರನ್ನು ಸುಲಭವಾಗಿ ಒಳಕ್ಕೆ ಬಿಡದೆ ತಮ್ಮ ದಣಿಗಳ ಅಪ್ಪಣೆಯನ್ನು ಪಾಲಿಸುವುದನ್ನೂ ಜ್ಞಾಪಿಸಿ ಬಾಲಕರಿಂದಲೇ ಉತ್ತರವನ್ನು ಹೇಳಿಸುವುದು.

ವಿಷಯ

ಋಷಿಗಳಿಗೆ ಕೋಪಬಂದಿತು. ಆಗ ಅವರು ಆ ಕಾವಲುಗಾರರಿಗೆ ಶಾಪವನ್ನು ಕೊಟ್ಟರು.

ಇದರಿಂದ ಜಯವಿಜಯರಿಬ್ಬರೂ ಭೂಲೋಕದಲ್ಲಿ ಹಿರಣ್ಯಾಕ್ಷ ಹಿರಣ್ಯಕಶಿಪು ಎಂಬ ರಾಕ್ಷಸರಾಗಿ ಹುಟ್ಟಿದರು. ಇವರಿಬ್ಬರೂ ಲೋಕಕ್ಕೆ ಬಹಳ ಹಿಂಸೆಯನ್ನು ಕೊಟ್ಟರು. ಅಣ್ಣನಾದ ಹಿರಣ್ಯಾಕ್ಷನನ್ನು ವಿಷ್ಣುವು ವರಾಹಾವತಾರಮಾಡಿ ಕೊಂದನು.

ತಮ್ಮನಾದ ಹಿರಣ್ಯಕಶಿಪುವಿನ ಹಾವಳಿ ಹೆಚ್ಚಾಗಿದ್ದಿತು. ತಾನೇ ಲೋಕಕ್ಕೆಲ್ಲ ದೊರೆಯೆಂದು ಇವನು ಹೊಗಳಿಸಿಕೊಳ್ಳುತ್ತಿದ್ದನು. ಈತನಿಗೆ ಪ್ರಹ್ಲಾದನೆಂಬ ಒಬ್ಬ ಮಗನಿದ್ದನು. ಈ ಹುಡುಗನು ದೇವರಲ್ಲಿ ಹೆಚ್ಚಾಗಿ ಭಕ್ತಿಯಿಟ್ಟುಕೊಂಡಿದ್ದನು. ತಂದೆಯು ಇವನಿಗೆ ಓದುಬರಹ

ಬೋಧನಕ್ರಮ

ಒಳಕ್ಕೆ ಹೋಗಲು ಬಂದವರ ಯೋಗ್ಯತೆಯನ್ನರಿತು ಕಾವಲುಗಾರರು ಅವರನ್ನು ಸಂದರ್ಭಾನುಸಾರ ಒಳಕ್ಕೆಬಿಡುವುದೇ ಆಗಲಿ, ಈಚೆಯೇ ನಿಲ್ಲಿಸುವುದೇ ಆಗಲಿ— ಇವುಗಳನ್ನು ಮಾಡುವುದಿಲ್ಲವೆಂದೂ, ಮಹಾತ್ಮರಾದವರಿಗೆ ಈ ರೀತಿ ಅವಮಾನವಾದರೆ ಅವರು ಕೋಪಿಸಿಕೊಳ್ಳುವರೆಂದೂ, ಅವರು ವಿಧಿಸತಕ್ಕ ಶಿಕ್ಷೆಗೆ ಪೂರ್ವದಲ್ಲಿ ಶಾಪವೆಂಬುದಾಗಿ ಹೆಸರಿತ್ತೆಂದೂ ತಕ್ಕ ಉದಾಹರಣೆಗಳ ಸಹಾಯದಿಂದ ಬಾಲಕರಿಂದಲೇ ಉತ್ತರವನ್ನು ಹೇಳಿಸುವುದು

ದೊಡ್ಡವರು ಕೊಟ್ಟ ಶಿಕ್ಷೆ ತಪ್ಪಲಾರದು. ಸ್ವರ್ಗಸೌಖ್ಯವನ್ನನುಭವಿಸುತ್ತಿದ್ದವರು ಭೂಲೋಕದಲ್ಲಿ ಹುಟ್ಟುವುದೂ, ಶತ್ರಾಪಿ ಮಹಾಭಯಂಕರವಾದ ರಾಕ್ಷಸಜನ್ಮದಲ್ಲಿ ಹುಟ್ಟುವುದೂ, ವಿಶೇಷವಾದ ಪಾಪವನ್ನು ಮಾಡಿದುದರಿಂದಲ್ಲದೆ ಬೇರೆಯಲ್ಲವೆಂಬುದನ್ನು ತಿಳಿಸುವುದು ರಾಕ್ಷಸರ ಆಕಾರವನ್ನು ತೋರಿಸಿ ಅವರ ಅಂಗಾಂಗಗಳನ್ನೂ ಆಹಾರವಿಹಾರಗಳನ್ನೂ ವರ್ಣಿಸುವುದರ ಮೂಲಕ ಅವರಿಂದ ಲೋಕಕ್ಕೆ ಎಷ್ಟುಮಟ್ಟಿನ ತೊಂದರೆಯಾಗಬಹುದೆಂಬುದನ್ನು ಊಹಿಸಿ ಬಾಲಕರೇ ಹೇಳುವಂತೆ ಮಾಡುವುದು. 'ಲೋಕೋಪದ್ರವವುಂಟಾದಾಗ ಭಗವಂತನು ಅವತಾರವನ್ನು ಮಾಡಿ ಲೋಕೋದ್ಧಾರವನ್ನು ಮಾಡುವನು' ಎಂಬುದನ್ನು ದೃಷ್ಟಾಂತಗಳಿಂದ ವ್ಯಕ್ತಪಡಿಸುವುದಲ್ಲದೆ ವಿಷ್ಣುವು ವರಾಹಾವತಾರವನ್ನು ಮಾಡಿ ಹಿರಣ್ಯಾಕ್ಷನನ್ನು ಕೊಂದ ಕಥೆಯನ್ನು ಚಿತ್ರದ ಸಹಾಯದಿಂದ ಸಂಕ್ಷೇಪವಾಗಿ ತಿಳಿಸುವುದು.

ತಾವೇ ಲೋಕನಾಯಕರೆಂದು ಹೊಗಳಿಕೊಳ್ಳುವುದು ದುಷ್ಟರ ಸ್ವಭಾವವೆಂದೂ ಗುರುಹಿರಿಯರಲ್ಲಿ ಭಕ್ತಿಯಿಡದೆ ಮುತ್ತರಾಗುತ್ತಾರೆಂದೂ ತಿಳಿಸುವುದು. ಬಾಲ್ಯದಿಂದಲೂ ಭಗವಂತನಲ್ಲಿ ಭಕ್ತಿಯನ್ನು ತೋರಿಸುವುದು ಮತ್ತು ಆ ವಿಧವಾದ ಕಾರ್ಯಗಳಲ್ಲಿ ಉತ್ಸಾಹಪಡುವುದು. ಇವು ಭಕ್ತರ ಸ್ವಭಾವವೆಂಬುದನ್ನು ಮಕ್ಕಳ ಉದಾಹರಣೆಗಳಿಂದ ವ್ಯಕ್ತಪಡಿ

ವನ್ನು ಕಲಿಸುತ್ತಿದ್ದನು.

ಒಂದು ದಿವಸ ರಾಕ್ಷಸನು ಮಗನನ್ನು ಕರೆದು ತೊಡೆಯ ಮೇಲೆ ಕೂರಿಸಿಕೊಂಡು ಹೇಳಿದುದೇನೆಂದರೆ:—

ರಾಕ್ಷಸ—ಮಗುವೆ, ನಿನಗೆ ಉಪಾಧ್ಯಾಯರು ಏನು ಹೇಳಿ ಕೊಟ್ಟಿರುವರು ?

ಪ್ರಹ್ಲಾದ—ಅಯ್ಯ, ಲೋಕದಲ್ಲಿ ದೇವರೇ ದೊಡ್ಡವನು. ಅವನು ಎಲ್ಲೆಲ್ಲಿಯೂ ಇದ್ದಾನೆ. ಜಗತ್ತು ಹುಟ್ಟುವುದೂ ಅವನಿಂದಲೇ, ಇರುವುದೂ ಅವನಿಂದಲೆ, ಕೊನೆಗೆ ನಾಶವಾಗುವುದೂ ಅವನಿಂದಲೇ. ಅವನನ್ನು ನಾವು ಭಜಿಸಬೇಕು. ಇದೇ ಉತ್ತಮವಾದ ಕೆಲಸವೆಂದು ತಿಳಿದಿದ್ದೇನೆ.

ರಾ—ಈ ನನ್ನ ಮಗನು ಶತ್ರುವಿನ ಪಕ್ಷವಾಗಿ ಮಾತನಾಡುತಿದ್ದಾನೆ. ಇಂತಹ ಕೆಟ್ಟಮಾತುಗಳನ್ನು ಅವನಿಗೆ ಬೋಧಿಸಕೂಡದು. ಸರಿಯಾದ ಬುದ್ಧಿವಾಮವನ್ನು ಹೇಳಬೇಕು. ಹೀಗೆಂದು ಗುರುಗಳಾದ ಶುಕ್ರಾಚಾರ್ಯರಿಗೆ ಹೇಳಿದನು. ಆ ದಿನ ಮೊದಲುಗೊಂಡು ಶುಕ್ರಾಚಾರ್ಯರು ಪ್ರಹ್ಲಾದನಿಗೆ ಬೇರೆ ವಿಷಯವನ್ನು ಹೇಳಿಕೊಟ್ಟರು.

ಸುವುದು. ದೊಡ್ಡ ದೊಡ್ಡ ಮನೆತನದವರು ತಮ್ಮ ಮಕ್ಕಳನ್ನು ಬಾಲ್ಯದಲ್ಲಿಯೇ ವಿದ್ಯಾಭ್ಯಾಸಕ್ಕೆ ಬಿಡುವುದು ಪದ್ಧತಿಯೆಂಬುದನ್ನು ವಿವರಿಸಿ, ಬಾಲ್ಯದಲ್ಲಿ ವಿದ್ಯಾಭ್ಯಾಸಮಾಡದಿದ್ದರೆ ಉಂಟಾಗುವ ಅನರ್ಥಗಳನ್ನು ವಿಶದಪಡಿಸುವುದು. ಬಾಲ್ಯದಲ್ಲಿ ವಿದ್ಯಾಭ್ಯಾಸವನ್ನು ಮಾಡುವುದು ಮುಖ್ಯವೆಂಬುದನ್ನು ಮಕ್ಕಳ ಮನಸ್ಸಿಗೆ ನಾಟುವಂತೆ ಬೋಧಿಸುವುದು

ತಂದೆಯು ಪುತ್ರವಾತ್ಸಲ್ಯದಿಂದ ತನ್ನ ಮಕ್ಕಳನ್ನು ತೊಡೆಯಮೇಲೆ ಕೂಡಿಸಿಕೊಂಡು ಹೇಳಬೇಕಾದ ಸಂಗತಿಗಳನ್ನು ಹೇಳುವ ಲೋಕಸ್ವಭಾವವನ್ನು ಜ್ಞಾಪಿಸುವುದು. ಮಕ್ಕಳ ವಿದ್ಯಾಭ್ಯಾಸದಲ್ಲಿ ಕೇವಲ ಶ್ರದ್ಧೆಯನ್ನು ವಹಿಸುವ ತಾಯಿತಂದೆಗಳು, ತಮ್ಮ ಮಕ್ಕಳು ಪಾಠಶಾಲೆಯಲ್ಲಿ ಕಲಿತುದನ್ನು ಮನೆಯಲ್ಲಿ ವಿಚಾರಿಸುವ ಪದ್ಧತಿಯನ್ನು ಸ್ಪಷ್ಟಪಡಿಸಿ, ಇದರಿಂದ ಬರುವ ಲಾಭಗಳನ್ನು ವಿವರಿಸುವುದು.

ಸೃಷ್ಟಿಸ್ಥಿತಿಲಯಗಳಿಗೆಲ್ಲ ಭಗವಂತನೇ ಕಾರಣಕರ್ತನೆಂದೂ ಅವನನ್ನು ಧ್ಯಾನ ಮಾಡಬೇಕಾದುದು ನಮ್ಮ ಕರ್ತವ್ಯವೆಂದೂ ತಿಳಿಸಿ, ಹಲಗೆಯ ಮೇಲೆ ಬರೆದು ಆನೃತ್ತಿ ಮಾಡಿಸುವುದು.

ಹಿರಣ್ಯಕಶಿಪುವು ಶಿವಭಕ್ತನು. ಪ್ರಹ್ಲಾದನು ವಿಷ್ಣುಭಕ್ತನು. ಮಗನು ವೈಷ್ಣವನಾಗಿರುವುದು ತಂದೆಗೆ ಸರಿಬೀಳಲಿಲ್ಲ. ಗುರುಗಳು ಹೇಳಿಕೊಟ್ಟುದು ತಂದೆಗೆ ಸಮಾಧಾನವಿಲ್ಲದಿದ್ದರೆ, ತನ್ನ ಅಭಿಪ್ರಾಯಾನುಸಾರವಾದ ವಿಷಯಗಳನ್ನು ಹೇಳಿಕೊಡುವಂತೆ ಗುರುಗಳಿಗೆ ತಂದೆಯು ಹೇಳತಕ್ಕುದು ಲೋಕದ ನಡವಳಿಕೆಯೆಂದೂ, ಆದರೆ ಹೀಗೆ ಹೇಳುವಾಗ ಯುಕ್ತಾಯುಕ್ತ ವಿವೇಚನೆಯನ್ನು ಮಾಡಿ ಹೇಳಬೇಕೆಂದೂ ಸ್ಪಷ್ಟಪಡಿಸುವುದು.

ಪ್ರಕೃತದಲ್ಲಿ ಹಿರಣ್ಯಕಶಿಪುವು ಹೇಳಿದುದು ಅಸಂಗತವೆಂದು ವಿವರಿಸುವುದು.

ವಿಷಯ

ಪ್ರಹ್ಲಾದನು ಶುಕ್ರಾಚಾರ್ಯರ ಮಾತನ್ನು ಲಕ್ಷ್ಯಮಾಡದೆ, ತನ್ನ ಜತೆಯ ಹುಡುಗರಿಗೆಲ್ಲ ದೇವರ ಮಹಿಮೆಯನ್ನೇ ಬೋಧಿಸುತ್ತಾ ಬಂದನು.

ಹಿರಣ್ಯಕಶಿಪುವು ಪ್ರಹ್ಲಾದನನ್ನು ಕರೆದು, "ಈಚೆಗೆ ನೀನು ಏನು ಕಲಿತುಕೊಂಡೆ?" ಎಂಬುದಾಗಿ ಕೇಳಿದನು. ಆಗ ಪ್ರಹ್ಲಾದನು, "ದೇವರೇ ಜಗತ್ತಿಗೆಲ್ಲ ಒಡೆಯನು. ಅಂಥ ಮಹಾವಿಷ್ಣುವಿನಲ್ಲಿ ವಿರೋಧಮಾಡಿಕೊಂಡರೆ ನಾವು ನಾಶವಾಗುತ್ತೇವೆ"—ಹೀಗೆಂದು ತಂದೆಗೆ ಅರಿಕೆ ಮಾಡಿದನು. ಆಗ ರಾಕ್ಷಸನು ಅತಿಯಾಗಿ ಮಗನಮೇಲೆ ಕೋಪಿಸಿಕೊಂಡು ಅವನನ್ನು ಕೊಲ್ಲಿಸಬೇಕೆಂದು ಅವನಿಗೆ ವಿಷವನ್ನು ಹಾಕಿಸಿದನು. ಇನ್ನೊಂದು ವೇಳೆ ಸಮುದ್ರಕ್ಕೆ ನೂಕಿಸಿದನು. ಮತ್ತೊಂದು ವೇಳೆ ಬೆಟ್ಟದ ಮೇಲಿಂದ ತಳ್ಳಿಸಿದನು. ಆದರೆ ಯಾವಾಗಲೂ ದೇವರನ್ನು ಭಜಿಸುತ್ತಿದ್ದ ಪ್ರಹ್ಲಾದನಿಗೆ ಕೇಡೇನೂ ಆಗಲಿಲ್ಲ.

ಹಿರಣ್ಯಕಶಿಪುವು ಇದನ್ನು ಕಂಡು ಮಗನನ್ನು ಕರೆಯಿಸಿ, ಎಲಾ? ನೀನು ಚಂಡಾಲ. ನೀನೇ ನನಗೆ ಶತ್ರುವಾಗಿದ್ದೀಯೆ. 'ದೇವರು' ಎಂದು ನೀನು ಹೇಳತಕ್ಕವನು ಯಾರು? ಲೋಕಕ್ಕೆಲ್ಲ ನಾನು ದೊರೆಯಾಗಿರುವಾಗ ಅವನು ಹೇಗೆ ಒಡೆಯನಾದಾನು?

ಪ್ರ—ಜಗತ್ತಿಗೆಲ್ಲ ಅವನು ಹೊರತು ಇನ್ನು ಯಾರೂ ಒಡೆಯರಲ್ಲ. ಲೋಕಕ್ಕೆಲ್ಲ ಅವನೇ ದೊಡ್ಡವನು.

ಬೋಧನಕ್ರಮ

ಭಗವದ್ಭಕ್ತನ ಸ್ವಭಾವವನ್ನು ಇಲ್ಲಿ ಚೆನ್ನಾಗಿ ವಿವರಿಸಿ, ಪ್ರಹ್ಲಾದನೂ ಪರಮ ಭಾಗವತ ಶಿರೋಮಣಿಯಾಗಿದ್ದನೆಂದು ತಿಳಿಸುವುದು.

ದೇವರೇ ಜಗತ್ತಿಗೆಲ್ಲ ಒಡೆಯನೆಂಬುದನ್ನೂ, ನಾವು ಆತನಿಗೆ ವಿರೋಧವಾಗಿ ನಡೆಯಬಾರದೆಂಬುದನ್ನೂ ವಿವರಿಸಿ ತಿಳಿಸುವುದು.

ಕೃದ್ಧರಾದವರು ಎಂತೆಂತಹ ಅತ್ಯಾಚಾರಗಳನ್ನಾದರೂ ಯುಕ್ತಾಯುಕ್ತ ವಿವೇಚನೆಯಿಲ್ಲದೆ ಮಾಡಿಬಿಡುತ್ತಾರೆಂದು ವಿವರಿಸುವುದು. ಹಿರಣ್ಯಕಶಿಪುವು ಈ ಕಾಲದಲ್ಲಿ ಕೃದ್ಧನಾಗಿದ್ದುದರಿಂದಲೂ ಮತ್ತು ಅವನು ಸ್ವಭಾವತಃ ರಾಕ್ಷಸನೇ ಆದುದರಿಂದಲೂ ಪ್ರೇಮಪಾತ್ರನಾದ ಪುತ್ರನನ್ನೂ ಲಕ್ಷಿಸದೆ, ಇಂತಹ ಕಠಿನವಾದ ಶಿಕ್ಷೆಗಳನ್ನು ವಿಧಿಸಿದನೆಂದು ಹೇಳುವುದು.

ದೇವರು ಭಕ್ತವತ್ಸಲನಾದುದರಿಂದ ಪ್ರಹ್ಲಾದನಿಗೆ ಕೇಡೇನೂ ಆಗಲಿಲ್ಲವೆಂದು ಹೇಳಿ, ವಿದ್ಯಾರ್ಥಿಗಳಿಗೆ ದೇವರ ವಿಷಯದಲ್ಲಿ ಭಕ್ತಿರಸವು ಹುಟ್ಟುವಂತೆ ಮಾಡುವುದು.

ಹಿರಣ್ಯಕಶಿಪುವು ಎಷ್ಟುಮಟ್ಟಿಗೆ ಅಹಂಕಾರಿಯಾಗಿದ್ದನೆಂದು ಮಕ್ಕಳಿಂದಲೇ ಹೇಳಿಸುವುದು. ಅಹಂಕಾರಪಡುವುದರಿಂದ ಆಗುವ ಅನರ್ಥಗಳನ್ನು ವಿವರಿಸುವುದು.

ಪ್ರಹ್ಲಾದನಲ್ಲಿ ನಿಜವಾದ ದೈವಭಕ್ತಿಯನ್ನು ಇಲ್ಲಿ ಪ್ರಕಾಶಪಡಿಸುವುದು; ಮತ್ತು ಭಕ್ತರೆಲ್ಲರೂ ದೃಢವಾದ ಭಕ್ತಿಯುಳ್ಳವರಾಗಿರಬೇಕೆಂದು ತಿಳಿಸುವುದು.

ವಿಷಯ

ರಾ— ಹಾಗಿದ್ದರೆ ಅವನೆಲ್ಲಿದ್ದಾನೆ? ತೋರಿಸು.

ಪ್ರ— ಅವನು ಎಲ್ಲೆಲ್ಲಿಯೂ ಇದ್ದಾನೆ. ಅವನಿಲ್ಲದೆ ಇರುವ ಸ್ಥಳವೇ ಇಲ್ಲ.

ರಾ— ಹಾಗಾದರೆ ಈ ಕಂಭದಲ್ಲಿ ಇದ್ದಾನೋ?

ಪ್ರ— ಕಂಭದಲ್ಲಿಯೂ ಇದ್ದಾನೆ.

ರಾ— ಹಾಗಾದರೆ ತೋರಿಸು. ನೀನು ತೋರಿಸದಿದ್ದರೆ ನಿನ್ನನ್ನು ಸೀಳಿಬಿಡುತ್ತೇನೆ.

ಪ್ರ— ಈ ಕಂಭದಲ್ಲಿಯೇ ತೋರಿಸುತ್ತೇನೆ ಎಂದು ದೇವರನ್ನು ಹಲವು ಬಗೆಯಲ್ಲಿ ಕೊಂಡಾಡಿದನು.

ಸ್ತೋತ್ರ:—

ಪರಮಾತ್ಮನಾರೆಂದು ತಿಳಿಯಲೆಳಸುವೆಯಾ ।
ಇರುವನೆತ್ತಲೆನುತ್ತ ಕೇಳಲಿಚ್ಛಿಪೆಯಾ ॥ ೧ ॥

ಅಣುರೇಣುತೃಣಕಾಷ್ಠಗಳಲಿರುವನವನು ।
ಕಣುಗಳನು ತೆರೆದವಗೇ ಗೋಚರಿಸುತಿಹನು ॥ ೨ ॥

ದಿನವನಲಿ ತನ್ನ ಪಡಿನೆಳಲನಟ್ಟಿಹನು ।
ಮನುಜನಲಿ ತನ್ನ ಪದಿಮೆಯ ಹುಯ್ದಿಹನು ॥ ೩ ॥

ಚುಕ್ಕಿಗಳ ಮಿನುಗಿನಿಂದೆಯಿಕ್ಕುತಿಹನು ।
ಉಕ್ಕಿ ಮಳೆಸುರಿವ ಮುಗಿಲಲ್ಲಿಯಳುತಿಹನು ॥ ೪ ॥

ಇಳಿಯುಸುರುತಂಬಿಲವನುಸುರುಬಿಡುತಿಹನು ।
ಚಳಿಗಾಲದಿರುಳಿನಲಿ ಕನಸನಾಂತಿಹನು ॥ ೫ ॥

ಬೋಧನಕ್ರಮ

ಭಗವಂತನು ಸರ್ವತ್ರವ್ಯಾಪಕನೆಂಬುದನ್ನು ಇಲ್ಲಿ ವಿವರಿಸಿ ತಕ್ಕ ಉದಾಹರಣೆಗಳನ್ನು ಕೊಡುವುದು.

ದೇವರು ಎಲ್ಲ ಕಡೆಗಳಲ್ಲಿಯೂ ಇರುವುದು ಸುಳ್ಳೆಂಬುದಾಗಿ ಹಿರಣ್ಯಕಶಿಪುವು ತಿಳಿದು ಈ ರೀತಿಯಾಗಿ ಮಗನನ್ನು ಹೆದರಿಸಿದುದಕ್ಕೆ ಕಾರಣವನ್ನು ಸ್ಪಷ್ಟಪಡಿಸುವುದು.

ವಿಷಯ

ತೊದಲುಲಿವ ಹಳ್ಳದಲಿ ಮೆಲ್ಲಡಿಯಿಡುವನು ।
ಗದಗದಿಪ ನೆರೆಯಸೆಳೆಯಿಂದಲೋಡುವನು ॥ ೬ ॥
ದೆಸೆಗಳಂತರೆದು ಕಿವಿಯಾರೆ ಕೇಳುವನು ।
ವಿಸುನಿಯಾಗಸದಿ ಕೆಳೆನುಡಿಯ ನುಡಿಯುವನು ॥ ೭ ॥

ಮಾಗಿಪವಸಂತ ಕಾಲದೊಳಾಡುತಿಹನು ।
ಕೋಗಿಲೆಯ ಕಲಕಂಠದಿಂ ಪಾಡುತಿಹನು ॥ ೮ ॥

ಬಿರಿದತಮ್ಮಲರ್ಗಳಲಿ ಮುಗುಳುನಗುತಿಹನು ।
ಬಿರುಗಡಲ ನಿಲುಗನ್ನಡಿಯಲಿ ನಿರುಕಿಪನು ॥ ೯ ॥

ಬೆಳದಿಂಗಳಿಂದುವಿಂಗಹಗಹಿಸುತಿಹನು ।
ಮುಳಿವಿಲ್ಲಿನುಯ್ಯಾಲೆಯಲಿ ತೂಗುತಿಹನು ॥ ೧೦ ॥

ಕಲ್ಲಾಯ್ತರಿಮೆಯಿಂದೆಲ್ಲವರಿದಪನು ।
ಬಿಲ್ಲಾಳತೋಳಿಂದ ಬಿಲ್ಲು ಬಾಗಿಪನು ॥ ೧೧ ॥

ತಳತಳಿಪಬಣ್ಣಗಳ ಮುಗಿಲುಗಳನೇರಿ ।
ಬೆಳಕುಗಳೋರಂತೆಯಲಿ ನಡೆದಪನುಮಿರಿ ॥ ೧೨ ॥

ಆ ಸ್ವಾಮಿಯು ಬಾಲಕನ ಭಕ್ತಿಗೆ ಮೆಚ್ಚಿದನು. ಅಲ್ಲಿದ್ದ ಕಂಭವು ಭಟಾರನೆ ಸೀಳುಸೀಳಾಗಿ ಹೋಯಿತು. ಆ ಕಂಭದೊಳಗಿನಿಂದ ಸ್ವಾಮಿಯು, ಮನುಷ್ಯನ ಮೈ ಮತ್ತು ಸಿಂಹದತಲೆಯುಳ್ಳವನಾಗಿ ಬಹಳ ಆರ್ಭಟದಿಂದ ಈಚೆಗೆ ಬಂದನು; ಮತ್ತು ಹಿರಣ್ಯಕಶಿಪುವನ್ನು ಹಿಡಿದು ಕೊಂದುಹಾಕಿದನು.

ಒಟ್ಟು ಪಾಠವನ್ನು ಪುನರಾವೃತ್ತಿ ಮಾಡುವುದು.

ಬೋಧನಕ್ರಮ

ಗಾನರೂಪದಲ್ಲಿರುವ ದೇವರ ಸ್ತೋತ್ರವನ್ನು ಮಕ್ಕಳಿಂದ ಹೇಳಿಸಿ, ದೇವರ ಸರ್ವತ್ರ ವ್ಯಾಪಕತ್ವವನ್ನೂ ಸರ್ವಕರ್ತೃತ್ವವನ್ನೂ ವಿವರಿಸಿ ತಿಳಿಸುವುದು.

ಭಾವನೆಯಿದ್ದ ಕಡೆಯಲ್ಲೆಲ್ಲ ದೇವರು ಇರುವನೆಂಬುದನ್ನು ತಿಳಿಸುವುದು.

ಸ್ವಾಮಿಯು ಭಕ್ತಪರಾಧೀನನೆಂಬುದನ್ನು ವಿವರಿಸುವುದು. ಸ್ವಾಮಿಯು ಕಂಭವನ್ನು ಭೇದಿಸಿಕೊಂಡು ಬಂದುದನ್ನೂ ನರಸಿಂಹಾವತಾರವನ್ನೂ ಚಿತ್ರಪಟದ ಸಹಾಯದಿಂದ ವಿವರಿಸಿ ತೋರಿಸುವುದು; ಮತ್ತೊಂದು ಚಿತ್ರದ ಸಹಾಯದಿಂದ ಸ್ವಾಮಿಯು ಹಿರಣ್ಯಕಶಿಪುವನ್ನು ಕೊಂದುದನ್ನು ತೋರಿಸುವುದು. ದುಷ್ಟನಿಗ್ರಹಶಿಷ್ಟಪರಿಪಾಲನಾರ್ಥವಾಗಿ ದೇವರು ಅವತಾರವನ್ನು ಮಾಡುತ್ತಿರುತ್ತಾನೆಂಬುದನ್ನು ಬಾಲಕರ ಸಹಾಯದಿಂದ ಹೇಳುವುದು. (ಈ ವಿಷಯವನ್ನು ಹಲಗೆಯಮೇಲೆ ಬರೆದು ಅವೃತ್ತಿಮಾಡಿಸುವುದು.)

(ಮುಂದರಿಯುವುದು)

-T. NARASIMHA SASTRY.

೧೫. ಪಂಪಮಹಾಕವಿಯ ಸಹಸ್ರವಾರ್ಷಿಕ ಮಹೋತ್ಸವ

(ಕಳೆದ ಸಂಚಿಕೆಯಿಂದ ಮುಂದರಿಸಿದುದು.)

ಪಂಪನ ಕಾವ್ಯವು ಸುಂದರವೂ, ಮಧುರವೂ, ಗಂಭೀರವೂ, ಸ್ವಾಸಾದಿಕವೂ, ಎಂದು ಮೊದಲಾಗಿ ಹೇಳಿದರೆ ಅದು ಅವನ ಕಾವ್ಯದ ಸಾಮಾನ್ಯ ವರ್ಣನೆಯೆಂದು ಆರಾದರೂ ತಿಳಿಯಬಹುದು. ಆದರೆ, ಕಿಂಚಿತ್ ತುಲನೆ ಮಾಡಿದರೆ ನಾವು ಹೇಳುವ ಅರ್ಥವು ಸ್ಪಷ್ಟವಾಗುವುದು. ಮೊದಲನೆಯದಾಗಿ ನಿರರ್ಗಳವಾದ ಸರಣಿಯು ಕನ್ನಡ ಭಾಷೆಯಲ್ಲಿ ಇಲ್ಲವೇ ಇಲ್ಲ. ಇದು ಹೊರತಾಗಿ ಹಿಂದುಸ್ಥಾನದೊಳಗಿನ ಇತರ ಭಾಷೆಗಳಲ್ಲಿಯೂ ಕೂಡ ಕ್ವಚಿತ್ತಾಗಿ ಇರಬಹುದೆಂದೂ ತೋರುತ್ತದೆ. ಅಕ್ಷರಗಳೂ ಶಬ್ದಗಳೂ ಒಂದಕ್ಕೊಂದು ಸಹಕಾರಿಯಾದ ಉಚ್ಚಾರದಲ್ಲಿ ಅವರೊಳಗೆ ಕೂಡಿಬರುವಷ್ಟು ಮತ್ತೆಲ್ಲಿಯೂ ದೊರೆಯಲಿಕ್ಕಿಲ್ಲ. ಪಂಪರಾಯನ ಪದ್ಯವೇ ಆಗಲಿ, ಗದ್ಯವೇ ಆಗಲಿ, ಅದರಲ್ಲಿಯ ಗಂಭೀರವಾದ ಅರ್ಥವು ಸಹಜವಾಗಿಯೇ ಅನುಪಮೇಯವಾಗಿದೆ. ಪಂಪನ ಗ್ರಂಥಗಳಲ್ಲಿ ಜೈಮಿನಿ-ರಾಜಶೇಖರಗಳ ಅಶ್ಲೀಲತೆಯು ಇಲ್ಲ; ಗಿರಿಜಾಕಲ್ಯಾಣದಲ್ಲಿಯ ಕ್ಲಿಷ್ಟ ವಿಷಯವಿಲ್ಲ. ಕುಮಾರವ್ಯಾಸನ ಭಾರತದಲ್ಲಿಯ ವ್ಯಾಕರಣ ದೋಷಗಳಿಲ್ಲ. ಷಡಕ್ಷರಿಯ ಶಬ್ದಾಡಂಬರವೂ ಇಲ್ಲ. ಪಂಪನ ಕಾವ್ಯವು ಸ್ವಲ್ಪಮಾತ್ರವಾಗಿದ್ದರೂ ಅದು ಬಹಳವಾಗಿ ಶುದ್ಧವೂ, ಮಧುರವೂ, ಉದಾತ್ತವೂ, ಈಶ್ವರದತ್ತವಾದ ಸ್ವಾಸಾದಿಕವೂ, ಆಗಿದೆ. ಪ್ರಥಮ ವಾಚನದಲ್ಲಿಯೇ ಅವನ ವಾಗ್ಧೋರಣವು ವಾಚಕರ ಹೃದಯದಲ್ಲಿ ಮನೆಮಾಡಿಕೊಳ್ಳುವುದಾಗಿದೆ. ರಾಜಶೇಖರವಿಳಾಸವನ್ನೂ, ಜೈಮಿನಿಭಾರತವನ್ನೂ ಓದುವಾಗ, ಸಭ್ಯರು ಪುಸ್ತಕವನ್ನು ಮುಚ್ಚಿಡುವಷ್ಟು ಅಶ್ಲೀಲವಾದ ಭಾಗಗಳು ಬರುತ್ತವೆ. ಪಂಪನು ಅವರು ಕೊಳೆಗುಂಡಿಯ ತನಕ ಹೋಗಿ ಹೇಳುವ ಎಲ್ಲ ಅರ್ಥವೂ ವ್ಯಕ್ತವಾಗುವಂತೆ ಸಹಜವಾಗಿಯೇ ಬರೆದಿರುತ್ತಾನೆ! ಒಂದೇ ಉದಾಹರಣವು:—ಕಥಾ ನಾಯಿಕೆಯು ನಾಯಕನನ್ನು ನೆನೆದು ಮೂರ್ಛೆ ಹೊಂದಿರಲು ಸಖಿಯರು ಅವಳನ್ನು ಶೀತೋಪಚಾರದಿಂದ ಎಚ್ಚರಿಸಲು ಅವಳು ಏನೂ ಮಾತಾಡದಿರುವಳು. ಮುಂದೆ ಅವಳ ತಂದೆತಾಯಿಗಳು ಬಂದು—

ಇಸತೇಕಾವುದೊ ನೋವಿದೆಮ್ಮದೆಸೆಯಿಂ ಮೇಣಾಪುದೋ? ಮೇಣ್ ಸಖೀ
ಜನದಿಂ ಬಂದುದೊ? ನಿನ್ನ ಬಂಧುಜನದಿಂ ಮೇಣ್ ಪುಟ್ಟಿತೋ? ಮತ್ಸುಹೃ ।
ಜ್ಜನದಿಂ ಮೇಣ್ ತೊಡರ್ದತ್ತೊ ವಿಸ್ಮಯಮಿದೇಂ ಪೇಳೆಂಬುದುಂ ಕೂಡೆ ಕ
ಣ್ಬನಿಯಂ ಸೂಸಿದಳೊಂದುಮಂ ನುಡಿದಳಿಲ್ಲಾ ಕನ್ನೆ ತನ್ನಂದಮಮ್ ॥

ಎಂಬ ಈ ವರ್ಣನೆಯನ್ನು ಓದುವಾಗ ಅದೆಲ್ಲ ಮಾತಿನ ಚಿತ್ರವು ಕಣ್ಣುಕಟ್ಟಿದಂತಾಗಿ ಮೈಮೇಲೆ ಮುಳ್ಳುಬಾರದೆ ಇರವು! ಇದರಂತೆಯೇ ಅನೇಕ ವೈರಾಗ್ಯ ವಿಚಾರಗಳೂ ಅಲ್ಲಲ್ಲಿ ಬಂದಿವೆ. ಅವೆಲ್ಲವನ್ನು ಅವತರಿಸುತ್ತಾ ಬಂದರೆ ವಿಸ್ತಾರವಾಗಬಹುದು. ಕನ್ನಡದಲ್ಲಿ ಜೈನರ ಬರಹವೇ ಉತ್ಕೃಷ್ಟವು. ಅದರಲ್ಲಿಯೂ ಇವನದು ಎಲ್ಲಕ್ಕೂ ಮೇಲು! ನೇಮಿಚಂದ್ರನೇ ಮೊದಲಾದವರಲ್ಲಿ ಅವ್ಯವಸ್ಥೆ ಕಾಣುತ್ತದೆ. ರತ್ನತ್ರಯದಲ್ಲಿಯ ಉಳಿದವರೂ ಜನ್ನನೂ ಸಾಧಾರಣವಾಗಿ ಇವನನ್ನು ಸಗಟಟ್ಟಬಹುದು. ಎಲ್ಲ ದೃಷ್ಟಿಗಳಿಂದ ನೋಡಿದರೆ, ಅವರೂ ಇವನ ಮುಂದೆ ನಿಷ್ಪ್ರಭರಾಗಬಹುದು.

ಪಂಪನು ಕನ್ನಡ ಕಾಳಿದಾಸನೆಂದು ಮೊದಲಾಗಿ ಹೇಳಲು ಅನೇಕ ದಿವಸಗಳಿಂದ ಗ್ರಾಹಿಕೊಡುವ ನಮ್ಮ ಹೃದಯವೂ ಒಂದು ಸಾಕ್ಷ್ಯವಾಗಿದೆ. ಅದಿಲ್ಲದಿದ್ದರೆ, ಇದೆಲ್ಲ ಉಪಕ್ರಮಕ್ಕೆ ಅವಕಾಶವೇ ಇರುತ್ತಿರಲಿಲ್ಲ! ಈ ಮಾತುಗಳೆಲ್ಲ ಹೃದಯಗಮ್ಯವಾದುದರಿಂದ, ಹೀಗೆಯೇ ಏಕೆಂದು ಕಾರಣಗಳನ್ನೂ ಹೇಳಲು ಬಾರವು. ವಾಚಕರ ಈ ಮಾತನ್ನು ತಮ್ಮ ಹೃದಯಕ್ಕೆ ಹೊಂದಿಸಿ ಏನು ಉತ್ತರಬರುವುದೋ ನೋಡಬೇಕು. ನಾವು ಹೇಳುವ ಮಾತು ಅಲ್ಲವೆಂದು ಉತ್ತರಬಂದರೂ ನಮಗೆ ಪರಮ ಸಂತೋಷವೇ ಸರಿ. ಅದು ನಮ್ಮ ಆತ್ಮವಂಚನೆಯಾಗಿದ್ದರೂ ಇರಬಹುದು.

ನಮ್ಮ ಕವಿರಾಯನು ಆತ್ಮಸ್ತುತಿಯನ್ನು ಮಾಡಿಕೊಂಡ ಬಗ್ಗೆ ಅನೇಕರು ಆಕ್ಷೇಪಿಸುತ್ತಾರೆ. ಅದಕ್ಕೆ ನಮ್ಮ ಹತ್ತರ ಬೇಕಾದಷ್ಟು ಉತ್ತರವಿದೆ. ನಮ್ಮ ಕವಿವರ್ಯನ ಆ ಆತ್ಮವಿಶ್ವಾಸ ಪೂರ್ವಕವಾದ ವಚನಗಳ ವಿಪರ್ಯಾಸವನ್ನು ಈ ರೀತಿ ಮಾಡುವುದು ಅರಸಿಕತನವೇ ಸರಿ. ಈ ಕವಿಯ ವಿಷಯವಾಗಿ ಈ ವರೆಗಿನ ಅಧಿಕಾರಿಗಳಾದ ಆವ ಕನ್ನಡ ಮಹಾಕವಿಗಳೂ ಒಂದು ಶಬ್ದವನ್ನೂ ಹೇಳದೆ ಎಲ್ಲರೂ ಒಂದೇ ಸ್ವರದಲ್ಲಿ ಇವನ ಸ್ತುತಿಮಾಡುವಲ್ಲಿ ಈ ಮಾತನ್ನು ನಾವು ಕುಳಿತುಕೊಂಡು ಎತ್ತಿ ಆಡುವುದು ಚಮತ್ಕಾರಿಕವಾಗಿದೆ. ಅವನ ವರದವಾಣಿಯ ಅನುಭವವು ನಮಗೆ ಬಂದರೆ ತೀರಿತು; ಅವನು ತನ್ನ ವಿಷಯವಾಗಿ ಏನಾದರೂ ಹೇಳಲೊಲ್ಲನೇಕೆ?

ಜೈನರದು ಸ್ವತಂತ್ರವಾದ ವಿಚಾರಪದ್ಧತಿ. ಬ್ರಾಹ್ಮಣರೇ ಮೊದಲಾದವರು ಯಾವಾಗಲೂ ತಮ್ಮನ್ನು ದೇವರಿಗೂ ತತ್ಸದೃಶರಾದ ಸಾಧುಸಂತರಿಗೂ ಹೋಲಿಸಿ ತಾವು ಹೀನರೆಂದು ಹೇಳಿಕೊಳ್ಳುತ್ತಿರುವುದು ಸಹಜವಾಗಿದೆ. ಇಲ್ಲಿ ಹೇಗೆ ಸ್ವೈರವಾದ ವಾಗ್ಝರಿಯು ಹರಿಯುವುದೋ, ಹಾಗೆಯೇ, ಸ್ವತಂತ್ರ ವಿಚಾರಗಳಲ್ಲಿಯೂ ಹರಿಯುವುದು. ಮಹಾಕವಿಗಳ ವಾಕ್ಯಗಳಿಗೆ ಅಡ್ಡ ಬರಲು ನಾವಾರು? ಪಂಪಕವಿಯು ಸಂಕುಚಿತ ವಿಚಾರದವನಾಗಿದ್ದರೆ "ಕ್ಷಿತಿಗೆ ಸಮಸ್ತ...ಒಂದಳಂಕೃತಿಯ ವೋಲ್" ಆದ ಕಾವ್ಯಗಳ ಪ್ರಕಾಶದಿಂದ ಅವನು 'ಸಮಸ್ತ ಭೂತಳಕೆ ಬೆಳಗು'ತ್ತಲೇ ಇರಲಿಲ್ಲ! ಇನ್ನು, ಪಂಪನು ನಮ್ರಭಾವವನ್ನು ವ್ಯಕ್ತಮಾಡಿಲ್ಲವೆಂತಲೂ ಅಲ್ಲ; ಪೂರ್ವ ಗ್ರಂಥಕಾರರು "ಜ್ಞಾನರ್ಧಿ ಸಂಪನ್ನರೆಂದಿರದಾಂ ದೃಷ್ಟಸೆನಾ ಕಥಾಬ್ಧಿಯುಮನೆನೀಸನ್ಮನಂದಂದೆನೋ" ಎಂದು ಹೇಳಿ, ಜಿನೇಂದ್ರಗುಣಸ್ತುತಿಯಿಂದ ಮುಕ್ತಿಯೂ ಸಾಧ್ಯವಿರಲು "ಪೆರರೀವುದೇಂ, ಪೆರರ ನೂಡುವದೇಂ, ಪೆರರಿಂದವಪ್ಪುದೇಮ್" ಎಂಬುದಾಗಿ ನಿಸ್ಪೃಹತೆಯನ್ನು ತೋರಿಸಿ, ಜಿನನನ್ನು ಸಹಜವಾಗಿ ಸ್ತುತಿಸಿದವನ ಪುಣ್ಯವು ಅಗಣ್ಯವಿರಲು "ತಾಂ ತನ್ಮಯ (ಜಿನ ಮಯ)ನಾಗಿ ತಚ್ಚರಿತಮಂ ಕಾವ್ಯಂಗಳೊಳ್ಕೂಡೆ ಬಂ ಣಿಸೆ ಪೇಳ್ದಾ ತನ ಕರ್ಮವಿರ್ಜರೆಯನಂತಿಂತುಂ ಸಲ್ಪರ್ಕುಮೇ || ಎಂದು ಅತೀವ ಉದಾರ ಮನಸ್ಕನಾಗಿ ಹೇಳುವುದರಿಂದ—ಸ್ವಲ್ಪ ಆವೇಶದಲ್ಲಿ ತನ್ನ ಕಾವ್ಯಗಳು "ಮುನ್ನಿನ ಕಬ್ಬಮನೆಲ್ಲ ಮಿಕ್ಕಿಮಿಟ್ಟಿದುವು" ಮುಂತಾಗಿ ಹೇಳುವುದು ಸಹಜವಾಗಿ ಕ್ಷಮ್ಯವಾಗಿದೆ. ತಮ್ಮನ್ನು ಎರಡನೆಯವರು ಸ್ತುತಿಸುವುದೇ ಒಳ್ಳೆಯದು. ಆದರೆ, ಕವಿಗಳು ಉಜ್ವಲ ಪ್ರತಿಭೆಯಲ್ಲಿರುವಾಗ್ಗೆ ಅವರ ಕೈಯನ್ನು ಹಿಡಿಯುವವರು ಯಾರು? ಅದ್ವೈತನಾದ ಮರಾಠಿಯ ತುಕಾರಾಮನು ತಾನು ವಾಂಡುರಂಗನು—ಎಂದರೆ ದೇವರೇ ಆದೆನೆಂದು ಹೇಳಿಕೊಂಡಿದ್ದಾನೆ. ಇದು ಇಲ್ಲಿ ಆತ್ಮಸ್ತುತಿಯ ಪರಮಾವಧಿಯಾಗಲಿಲ್ಲವೇ? ಹೀಗಿದ್ದರೂ, ಅವನ ಕಾವ್ಯಕ್ಕೆ ಯಾವ ವಿಧವಾದ ಕುಂದು ಬಂದಿಲ್ಲ. ಕವಿಯು ತನ್ನ ವಿಷಯವಾಗಿ "ಮುಂದಃ ಕವಿಯಶಃ ಪ್ರಾರ್ಥೀಗಮಿಷ್ಯಾಮ್ಯುಪಹಾಸ್ಯತಾಮ್"

''ಕಾಲೋಽಹ್ಯಯಂ ನಿರವಧಿರ್ವಿಪುಲಾಚ ಪೃಥ್ವೀ'' ಅಥವಾ ''ಇದುವೆ ಸುಕವಿಪ್ರಮೋದಪ್ರದವಿದುವೆ ಸಮಸ್ತ ಭವ್ಯಲೋಕ ಪ್ರಮುದಪ್ರದಮ್'' ಎಂದೂ ಬೇಕಾದುದು ಹೇಳಲಿ, ಕಾವ್ಯ ಪರಿಕ್ಷೆಮಾಡುವಾಗ ಅದೆಲ್ಲ ಗೌಣಪ್ರಶ್ನೆಯಾಗಿದೆ. ಮುಖ್ಯ ಪ್ರಶ್ನೆಯು ಅವನ ಕಾವ್ಯದ ಪರಿವಾಳವು ಹೇಗೆ ಇಳಿದೆ ಎಂಬುದೇ ಆಗಿದೆ.

ಈ ಆಕ್ಷೇಪದಂತೆಯೇ ಇವನು ಸಂಸ್ಕೃತ ಶಬ್ದಗಳನ್ನು ಬಹಳವಾಗಿ ಉಪಯೋಗಿಸುವ ಬಗ್ಗೆಯೂ ಆಕ್ಷೇಪಿಸುವುದು ನಿರರ್ಥಕವಾಗಿದೆ. ಸಂಸ್ಕೃತದಿಂದ ಕನ್ನಡಕ್ಕೆ ಶೋಭೆ ಬಂದುದನ್ನು ಎಲ್ಲರೂ ಒಪ್ಪುವರು. ಶಬ್ದಗಳು ಸಂಸ್ಕೃತವೋ ಕನ್ನಡವೋ ಬೇಕಾದ್ದು ಇದ್ದರೂ ಗ್ರಂಥರಚನಾ ಕುಶಲತೆಯಿಂದಲೇ ಕವಿಯ ಯೋಗ್ಯತೆಯು ಗೊತ್ತಾಗುವುದು. ಸ್ವಧರ್ಮವಿಷಯಕ ಪ್ರೀತಿಯಿಂದ ಉದ್ಭೂತವಾದ ಸ್ಪೈರವಾದ ಸ್ಫೂರ್ತಿಯಿಂದ ಆದಿಪುರಾಣವು ಮೇಲ್ತರದ್ದಾಗಿದ್ದು, ಕನ್ನಡ ಶಬ್ದಗಳದೆಸೆಯಿಂದ ಬೇಕೆಂದು ಮಾಡಿದ ಪ್ರಯತ್ನದಿಂದ ಪರಧರ್ಮದ ವಿಷಯವಾದ ಉದಾಸೀನತೆಯಲ್ಲಿ ಮತ್ತೂ ಹೆಚ್ಚು, ಕವಿಯ ಪ್ರತಿಭೆ ನಿಂತು ಇವನು ಮಾಡಿದ ಭಾರತವು ಅಷ್ಟೊಂದು ಉತ್ಕೃಷ್ಟವಾಗಲಿಲ್ಲವೆಂದು ನಮ್ಮ ಕಲ್ಪನೆಯಾಗಿದೆ.

ಪಂಪನ ಕಾವ್ಯವು ಇಷ್ಟು ಉಪಮಾತೀತವಾಗಿರಲು ಅದು ಜನರಲ್ಲಿ ಪ್ರಖ್ಯಾತಿಯನ್ನು ಹೊಂದದೆ ಇರುವುದಕ್ಕೆ ಕಾರಣಗಳೇನಾದರೂ ಇರಬೇಕಲ್ಲವೇ? ಎಂಬುದನ್ನು ಕುರಿತು ವಿಚಾರ ಮಾಡುವಾಗ ಕನ್ನಡವಾಙ್ಮಯದ ದುರ್ದೈವವು ಬಲವತ್ತರವಾಗಿದೆಯೆಂದು ಹೇಳಬೇಕಾಗುವುದು! ಇವನ ಕಾವ್ಯದ ಪ್ರಸಿದ್ಧಿಗೆ— ಅರ್ಯಧರ್ಮದಮುಂದೆ ಅಯಶಸ್ವಿಯಾದ ಇವನ ಸ್ವಧರ್ಮವೇ ಕಾರಣವಾಗಿರಬಹುದೆಂದರೆ ತಪ್ಪಾಗಲಿಕ್ಕಿಲ್ಲ! ಪ್ರಸ್ತುತ ಲೇಖಕನ ಅನುಭವವನ್ನೇ ಹೇಳಹೋದರೆ, ಆಶ್ಚರ್ಯವಾಗಬಹುದು! ನಮ್ಮ ಸುಶಿಕ್ಷಿತ ವರ್ಗವೆಲ್ಲ ಮಾತೃಭಾಷೆಯಾದ ಕನ್ನಡದ ವಿಷಯಗಳಲ್ಲಿ ಅನೇಕ ದಿವಸಗಳಿಂದ ಉದಾಸೀನವಾಗಿದೆ. ಕನ್ನಡದಲ್ಲಿ ಜೈನ ಲಿಂಗವಂತ ಬ್ರಾಹ್ಮಣರೆಂಬ ಮೂರು ವಂಥಗಳು. ಅದೇ ಮರಾಠಿಯ ವಾಙ್ಮಯದಮಾತು ಎಷ್ಟು ವಿಪರೀತವಾಗಿದೆ ನೋಡಿರಿ! ಅವರಲ್ಲಿ ಅನೇಕ ದಿವಸಗಳಿಂದ ಒಂದೇ ಬ್ರಾಹ್ಮಣಧರ್ಮವೂ ಅದರಲ್ಲಿಯೂ ಒಂದೇ ಅದ್ವೈತಪಂಥವೂ ವಾಙ್ಮಯಪ್ರವಾಹದಲ್ಲಿ ಕಡೆಯವರೆಗೂ ಕಾಣಬರುತ್ತಿದೆ. ಅಲ್ಲಿ ಕಿಂಚಿತ್ತಾದರೂ ಅನ್ಯಥಾ ವಿಚಾರಕ್ಕೆ ಆಸ್ಪದನೇ ಇಲ್ಲ. ಎಲ್ಲರೂ ತಮ್ಮ ಪೂರ್ವಜರ ವಿಷಯದಲ್ಲಿ ಭಕ್ತಿಪೂರ್ವಕವಾಗಿ ಒಂದೇ ವಿಚಾರಮಾಡುವರು. ಮರಾಠಿಯವರ ಉನ್ನತಿಗೆ ಇದೂ ಒಂದು ಕಾರಣವಾಗಿದೆ. ವಿಶೇಷವೇಕೆ? ಮರಾಠ ದೇಶಗಳಲ್ಲಿ ಹಳ್ಳಿಯೊಳಗಿನ ರೈತರೆಲ್ಲರೂ ಚಾತುರ್ಮಾಸ್ಯದಲ್ಲಿ ಪಾಂಡವಪ್ರತಾಪ—ರಾಮವಿಜಯ—ನೊವಲಾದ ಪೂರ್ವದ ಸುಲಭ ಮರಾಠೀ ಗ್ರಂಥಗಳನ್ನು ಈಗಲೂ ಓದುತ್ತಿರುವರು. ಅವರು ಆ ಅಲ್ಪ ವಾಚನ-ಶ್ರವಣಗಳಿಂದ ಉದಾತ್ತವಾದ ವೇದಾಂತ ವಿಚಾರಗಳಿಂದ ತುಂಬಿಹೋಗಿರುವರು. ಅವರ ಸರಿಯಲ್ಲಿಯೇ ಇರುವ ನಮ್ಮ ಎಷ್ಟೋ ಬ್ರಾಹ್ಮಣ ಆಚಾರ್ಯರಲ್ಲಿ ಆ ಪಾಟೀಲರ ವೈರಾಗ್ಯ ವಿಚಾರಗಳ ನುತ್ತು ಪುರಾಣ ಪುಣ್ಯಕಥೆಗಳ ಲವಲೇಶಜ್ಞಾನವಾದರೂ ಇರುವುದಿಲ್ಲ. ಅದ್ವೈತರು ನರಕಗಾಮಿಗಳು. ನಾವೇ ಶ್ರೇಷ್ಠರು ಎಂಬೀ ವೊದಲಾದ ದುರಭಿಮಾನವು ಮಾತ್ರ ಅಂಗುಷ್ಠ ಹಿಡಿದು ನೆತ್ತಿಯ ವರೆಗೂ ಅವರಲ್ಲಿ ತುಂಬಿಹೋಗಿರುವುದು. ಪಾಪ! ಅವರಿಗೇನು ವಸ್ತುಸ್ಥಿತಿಯು ತಿಳಿಯುವುದು, ತಾವೇ ಅಜ್ಞಾನಾಂಧಕಾರದಲ್ಲಿ ಮುಳುಗಿದ್ದು, ಅಜ್ಞಾನಿಗಳಾದ ಆ ಬಡರೈತರೇ ತಮಗಿಂತಲೂ ಅನೇಕ ಪಾಲಿಗೆ ಲೇಸೆಂದು? ಹೀಗೆ ಸ್ಥಿತಿಯಿರುವುದರಿಂದ ಜೈನ ಲಿಂಗಾಯಿತರ ಪದ್ಧತಿಯಾದ ಕನ್ನಡ ಗ್ರಂಥರಚನೆಯ ಕಡೆಗೂ

ಕನ್ನಡ ಭಾಷೆಯ ಕಡೆಗೂ ನೋಡುವ ಬಗೆ ಹೇಗೆ? ವೈಭವಶಾಲಿಯಾದ ವಿಶಾಲ ಮನಸ್ಸಿನವರಾದ ಮೈಸೂರು ಸರಕಾರದವರು ನಮ್ಮ ಪಂಪಕವಿಯ ಆದಿ ಪುರಾಣವನ್ನು ಬಯಲಿಗೆ ಬರಮಾಡಿ ೧೦-೧೨ ವರ್ಷಗಳಾಗಿ ಹೋದರೂ ಪ್ರಸ್ತುತ ಲೇಖಕನಿಗೆ—ಬೆಳಗಾವಿಯಲ್ಲಿ—ಅದರ ವಾರ್ತೆಯೇ ಇರಲಿಲ್ಲವೆಂಬ ಮಾತನ್ನು ಇಲ್ಲಿ ವಿಶೇಷವಾಗಿ ಹೇಳುತ್ತೇವೆ. ಮುಂದೆ ಏನೋ ಯೋಗಾಯೋಗದಿಂದಲೇ ಕರ್ಣಾಟಕ ಕವಿಚರಿತೆಯು ನಮ್ಮ ದೃಷ್ಟಿಗೆ ಬೀಳಲು ಆ ಗ್ರಂಥವೇ ನಮ್ಮನ್ನು ಕನ್ನಡದ ಕಡೆಗೆ ಎಳೆದು ತಂದಿದೆ! ಆ ಉತ್ಕೃಷ್ಟ ಗ್ರಂಥದ ಗೌರವವು ಕೂಡ ನಮ್ಮಿಂದ ಏನೂ ಆಗಿಲ್ಲ.

ಇಲ್ಲಿ, ನಮ್ಮ ಕವಿವರ್ಯನ ಧರ್ಮದ ವಿಷಯವಾಗಿ ಒಂದೆರಡು ಶಬ್ದಗಳನ್ನು ಹೇಳಬೇಕು. ನಿಷ್ಪಕ್ಷಪಾತ ಬುದ್ಧಿಯಿಂದ ನೋಡಲು, ಎಲ್ಲಾ ಧರ್ಮ ಪಂಥಗಳಿಂದಲೂ, ಜಗತ್ತಿನ ಉನ್ನತಿಯೇ ಆಗಿರುವುದು. ಮತ್ತು ಆರ್ಯ ಧರ್ಮವು ಅತೀವ ಪ್ರಾಚೀನವೂ ಶ್ರೇಷ್ಠವೂ ಆಗಿದ್ದು, ಆದರ ಮುಂದೆ ಇತರೆಗೆ ಜಗತ್ತಿನೊಳಗಿನ ಆವ ಧರ್ಮಗಳೂ ಯಶಸ್ವಿಯಾಗಲಿಲ್ಲ. ಈ ಮಾತನ್ನು ಎಲ್ಲರೂ ನಂಬಬಹುದೆಂದು ಕಾಣುತ್ತದೆ. ಬೌದ್ಧ ಜೈನರ ಒಂದು ಭಾಗವಾದ ಅಹಿಂಸಾ ತತ್ವವು ವೈದಿಕ ಮತದಲ್ಲಿ ಮೊಲಿಂದಲೂ ಇದೆ. ಆದರೆ, ಸರ್ಪ ಸತ್ರದಲ್ಲಿಯ "ಇಂದ್ರಾಯ ತಕ್ಷಕಾಯ"ವೆಂಬ ವಚನದಂತೆ ಯಜ್ಞಗಳೂ, ಅಪರಲ್ಲಿ ಪಶುವಧೆಯನ್ನು ಹೇಳುವ ವೇದಗಳವಿ, ನೀವೂ—ಎಲ್ಲರೂ ನಮಗೆ ಬೇಡವೆಂದ ಜೈನರು ಮೊದಲಾದವರು ಹೇಳಿದ್ದರೆ, ಅವರಿಂದ ಅಹಿಂಸಾ ತತ್ವದ ಪುರಸ್ಕಾರವೇ ಆಗುತ್ತಿದ್ದಿಲ್ಲವೆಂದು ತೋರುತ್ತದೆ. ನಡುವೆ ನಿಂತು ನ್ಯಾಯಾಧೀಶರಂತೆ ವಿಚಾರಮಾಡಿ, ಮೂಕ ಜೀವಿಗಳನ್ನು ಕೊಂದು ದೇವರನ್ನು ತೃಪ್ತಿಪಡಿಸುವುದಕ್ಕಿಂತ, ಯಜ್ಞಮಾಡುವವನು ತನ್ನನ್ನು ತಾನೇ ಅಗ್ನಿ ಸಮರ್ಪಣಮಾಡುವುದು ವಿಶೇಷವಾಗಿ ತೋರಬಹುದು. ಆದರೆ, ಹಾಗೆ ಎಲ್ಲಿಯೂ ಪ್ರಚಾರವು ಕಂಡು ಬರುವುದಿಲ್ಲ.—ಯಜ್ಞಗಳಲ್ಲಿ ವಧೆಹೊಂದಿದ ಪ್ರಾಣಿಯು ಮೋಕ್ಷವೈದುವ ಮಾತು ಒತ್ತಟ್ಟಿಗಿರಲಿ. ಈ ದೃಷ್ಟಿಯಿಂದ ನೋಲಾಗಿ ಬೌದ್ಧ ಜೈನರ ಐತಿಹಾಸಿಕ ಮಹತ್ವವು ತಿಳಿಯಬಹುದು.

ಅಥವಾ, ಈ ಮತಭೇದಗಳನ್ನು ಒತ್ತಟ್ಟಿಗಿಟ್ಟು ವಿಚಾರಮಾಡಿದರೂ ಸಾಗುವಂತಿದೆ. ಜೈನನಾದ ಪಂಪ ಮಹಾಕವಿಯು ಇನ್ನುಮೇಲೆಯೂ ಮಾನ್ಯನಾಗದಿರುವುದು ನಮ್ಮ ಭಾಷಾಭಿಮಾನಕ್ಕೆ ಲಾಂಛನಾಸ್ಪದವೇ ಆಗುವುದು. ಮತಗಳನ್ನು ಬಿಟ್ಟರೆ, ಉಳಿದೆಡೆ ಎಲ್ಲಕಡೆಗೂ ಅವನು ಹಾರುವನೇ ಆಗಿ ತೋರುವನು:—

'ಗುಣಾಗುಣವಿವೇಕ ಮೂಳರತಿಮೂರ್ಖರೆಮ್ಮಂದಿಗರ್ ।
ಪ್ರಣಾಮಮೊಳಿ ಪುಣ್ಯಮುಂ ಪಡೆವರಾದಿ ತೀರ್ಥೇಶ್ವರಾ' ॥

ಎಂಬಲ್ಲಿ 'ತೀರ್ಥೇಶ್ವರಾ' 'ಜಿನಾಧೀಶ್ವರಾ' ಎಂಬುವಕ್ಕೆ ಬದಲಾಗಿ 'ರಾಮೇಶ್ವರಾ', 'ವಿಶ್ವೇಶ್ವರಾ' ಎಂದು ಬರೆದರೆ ಬ್ರಾಹ್ಮಣರ ವಿಚಾರಕ್ಕನುಸಾರವಾಗಿಯೇ ಎಲ್ಲ ಅರ್ಥವಾಗಬಹುದು. ನಮ್ಮ ಕವಿಗಳು ಜೈನರು ಆವರು ರಾಮದಾಸಸ್ವಾಮಿಗಳಂತೆ ಹಾರುವರಾಗಿದ್ದರೆ, ಎಷ್ಟು ಉತ್ಕೃಷ್ಟವಾಗುತ್ತಿತ್ತು? ತನ್ನ ಉತ್ಕೃಷ್ಟ ಕಾವ್ಯಗಳನ್ನು—'ಅರಿಕೇಸರಿಗಲ್ಲದನಸ್ತುಗೀವುವೇ' ಎಂದು ಪಂಪನು ಹೇಳಿ ತನ್ನ ಸ್ವಾಮಿಯ ಗುಣವರ್ಣನೆಯನ್ನು ವಿಶೇಷವಾಗಿ ಮಾಡುತ್ತಾನೆ. ಜನ್ನನೂ ತನ್ನ ಇಬ್ಬರು ಸ್ವಾಮಿಗಳ ವಿಜಯವನ್ನು ಚಿತ್ರಿಸಿದ್ದಾನೆ. (ಕ.ಚರಿತೆನೋಡಿರಿ) ರಾಮದಾಸಸ್ವಾಮಿಗಳವರೂ ಶ್ರೀ ಶಿವಾಜಿ ಮಹಾರಾಜರವರ ಕುಲದೇವ

ಯಾದ ತುಳಜಾಭೋವಾನಿಯವರನ್ನು—'ನಿನ್ನ ಅರಸನ ಅಭಿವೃದ್ಧಿಯನ್ನು ನೀನೇ ಮಾಡು' ಎಂದು ಮೊದಲಾಗಿ ಕೇಳಿಕೊಂಡಿರುವರು! ಈ ಎಲ್ಲ ಸಮಾನವಿಚಾರಗಳನ್ನು ನೋಡಲಾಗಿ ಯಾರಿಗೆ ನಮ್ಮ ಜೈನಕವಿ ವರ್ಯರ ವಿಷಯವಾಗಿ ಪೂಜ್ಯಬುದ್ಧಿಯುತ್ಪನ್ನವಾಗಲಿಕ್ಕಿಲ್ಲ?

ನಮ್ಮಲ್ಲಿ ಹೀಗೆ ಹಿಂದಿನವರಿಂದಲೂ ಮುಂದಿನವರಿಂದಲೂ ಮಾನ್ಯಮಾಡಲ್ಪಟ್ಟ ಕನ್ನಡ ವಾಙ್ಮಯ ಸಾಮ್ರಾಜ್ಯಾಧಿಪತಿಯಾದ ಕವಿರಾಯನಾಗಿರಲು ನಮಗೆ ಅತ್ಯಂತ ಉತ್ಸಾಹವುಂಟಾಗಬೇಕು! ಆ ಕಾಲವು ನಮ್ಮ ದೇಶದ ವೈಭವದ ಉತ್ತುಂಗಶಿಖರವೇ ಆಗಿದ್ದಿರಬಹುದು. ಸ್ವತಃ ಕವಿಯೇ 'ಚತುರಂಗ ಬಲ ಭಯಂಕರ'ನಾಗಿದ್ದು 'ಕವಿಯೊ ಸತ್ಕವಿಯೋ ಕವಿತಾಗುಣಾರ್ಣವಮ್' ಎನಿಸಿಕೊಂಡಿದ್ದು ಅವನ ಸ್ವಾಮಿಯು ಕೂಡ ಸಪಾದಲಕ್ಷೆಕ್ಷಿತೀಶನಾಗಿದ್ದನು. ಆ ಅರಿಕೇಸರಿಯ ತಂದೆಯಾದ ನರಸಿಂಹ ಭೂಪನು ಗಂಗೆಯಲ್ಲಿ ತನ್ನ ಕುದುರೆಗಳನ್ನು—ಮರಾಠಿಗರು ಅಟಕ ಪಟ್ಟಣದ ಆಚೆಯ ನೀರನ್ನು ಕುದುರೆಗಳಿಗೆ ಕುಡಿಸಿದಂತೆ—ತೊಳೆದು ಜಯಶಾಲಿಯಾಗಿದ್ದನು. ಅದಕ್ಕೂ ಉತ್ಸವಪ್ರದವಾದಕಾಲವು ನಮ್ಮ ಇತಿಹಾಸದಲ್ಲಿ ಇನ್ನೊಂದೆಲ್ಲಿಂದ ಬರಬಹುದು? ಎಂದು ನಾವು ಕನ್ನಡ ಭಾಷಾಭಿಮಾನಿಗಳಿಗೆ ಈ ಪ್ರಸಂಗದಲ್ಲಿ ಒಂದು ಸೂಚನೆಯನ್ನು ಮಾಡಬೇಕೆಂದಿರುವೆವು. ಆ ಸೂಚನೆಯನ್ನು ಕನ್ನಡಿಗರೆಲ್ಲರೂ ಶಿರಸಾವಂದ್ಯಮಾಡುವರೆಂತಲೂ ನಮ್ಮ ಮನೋದೇವತೆಯು ನಮಗೆ ಉತ್ಸಾಹದಿಂದೆ ನಮ್ಮ ಅಂತರ್ಯಾಮಕ್ಕೆ ಹೇಳುತ್ತಿದೆ! ಜೈನಲಿಂಗಾಯಿತ ಧರ್ಮಪಂಥಗಳು ಬ್ರಾಹ್ಮಣ ಧರ್ಮದ ಮುಂದೆ ಜಯಹೊಂದಲಿಲ್ಲವೆಂಬ ಮಾತನ್ನು ನಾವು ಮನಗಂಡಿರುತ್ತೇವೆ. ಆದರೆ, ಸರಸ್ವತಿಯ ಆಸ್ಥಾನದಲ್ಲಿ ಆ ಮಾತಿಗೆ ಎಳ್ಳಷ್ಟಾದರೂ ಮಹತ್ವವಿಲ್ಲ. ಈ ಸಮಯದಲ್ಲಿ ಕನ್ನಡಿಗರು 'ಪಸರಿಪ ಕನ್ನಡಕ್ಕೊಡೆಯನೊರ್ವನೆ'—ಇದ—**ಪಂಪನ ಸಹಸ್ರವಾರ್ಷಿಕ ಮಹೋತ್ಸವದ** ಸಿದ್ಧತೆಯನ್ನು ಮಾಡುವುದಕ್ಕೆ ನಡುಕಟ್ಟಬೇಕೆಂಬುದೇ ನಮ್ಮ ಅಂತಃಕರಣ ಪೂರ್ವಕವಾದ ನಮ್ರಸೂಚನೆಯು! ಪಾಶ್ಚಾತ್ಯರಲ್ಲಿ ಶೇಕ್ಸ್‌ಪಿಯರನ ತ್ರಿಶತ ಸಾಂವತ್ಸರಿಕ ಮಹೋತ್ಸವಗಳಾಗುತ್ತಿದ್ದುದ್ದು, ಹಿಂದುಸ್ಥಾನದ ಸಾಮ್ರಾಜ್ಯವು ಕೈಬಿಟ್ಟಶಃ—ನಮ್ಮ ಶೇಕ್ಸ್‌ಪಿಯರನನ್ನು ನಾವು ಬಿಡಲಾರೆವು—ಎಂದು ಅವರು ಉಚ್ಚಸ್ವರದಿಂದ ಹೇಳುತ್ತಿದ್ದಾರೆ! ತೇಜಸ್ವಿಗಳಾದ ಮಹಾರಾಷ್ಟ್ರೀಯರು —ಶ್ರೀ ಶಿವಾಜಿ ಮಹಾರಾಜರ ಉತ್ಸವ, ಪ್ರಾತಃಸ್ಮರಣೀಯರಾದ ಪೂಜ್ಯ ರಾಮದಾಸರ ಸ್ಮಾರಕದಿವಸವಾದ ದಾಸನವಮಿಯ (ಮಾಘ ಶು. ನವಮಿ—ಪ್ರತಿವರ್ಷಕ್ಕೆ) ಉತ್ಸವ ಮೊದಲಾದುವುಗಳನ್ನು ಕೈಕೊಂಡಿರುವರು. ಹೆಚ್ಚೇಕೆ? ಅವರಲ್ಲಿ ಕ್ರಾಂತಿಕಾರಕ ಗ್ರಂಥಕಾರರಾದ ವಿಷ್ಣುಶಾಸ್ತ್ರಿ, ಚಿಪಳೂಣಕರರ ಶ್ರಾದ್ಧತಿಥಿಯ (ಫಾ. ಕೃ. ೧೩) ದಿನ ಪ್ರತಿವರ್ಷ ಸಭೆಗೂಡಿಸಿ ಅವರ ಸ್ಮಾರಕದಿನವನ್ನು ಅವರು ಅತ್ಯಂತ ಉತ್ಸಾಹದಿಂದೆ ಜರಗಿಸುತ್ತಿರುವರು. ಸುತ್ತುಮುತ್ತು ಇಷ್ಟೆಲ್ಲಪ್ರಕಾರಗಳು, ಮಲಗಿದವರೂ ಎಚ್ಚರವಾಗುವಂತೆ ನಡೆದಿರಲು, ಕನ್ನಡಿಗರಾದ ನಾವು ನಮ್ಮ ದೀರ್ಘನಿದ್ರೆಯಿಂದ ಎಚ್ಚತ್ತು ಆ ಕಾರ್ಯಾರಂಭಗಳಿಗೆ ತಕ್ಕಂತೆ ಏನಾದರೂ ಮಾಡಿ, ಅವರಿಗೆ,—ನಮ್ಮ ಪೂರ್ವೇತಿಹಾಸವೂ ಬೇಕಾದಷ್ಟು ಉತ್ಸಾಹಪ್ರದವಾಗಿದೆ. ನಾವು ಜಗದ್ವಂದ್ಯರಾದ—ಕಾಳಿದಾಸ—ರಾಮದಾಸ—ತುಕಾರಾಮ—ಪಂಪಮೊದಲಾದವರ ಅಭಿಮಾನವನ್ನು ತ್ರೈಲೋಕ್ಯದ ಸಾಮ್ರಾಜ್ಯವನ್ನುಕೊಟ್ಟರೂ ಬಿಡುವವರಲ್ಲ! ನಾವು ನಮ್ಮ ಭಾಷಾಸಾಮ್ರಾಜ್ಯಾಧಿಪತಿಯಾದ ಪಂಪನ ಉತ್ಸವವನ್ನು ಕೈಕೊಂಡಿರುವೆವು. ಅವನ ಸಹಸ್ರವಾರ್ಷಿಕಮಹೋತ್ಸವಕ್ಕೆ ನಾವು ಅವನ ಉತ್ಕೃಷ್ಟಗ್ರಂಥವಾದ ಆದಿಪುರಾಣವನ್ನು ಮುದ್ರಿಸಿರುವೆವು. ಅವನ ಗ್ರಂಥಗಳ

ಸಪ್ತಸ್ವಾರ್ಷಿಕಮಹೋತ್ಸವವು ೧೪೬೫ರಲ್ಲಿ ಬರುವುದಾಗಿದೆ. ಆವರೆಗೆ ನಾವು ನಮ್ಮ ಸಾಹಿತ್ಯವನ್ನು ಬಂಗಾಳಿಗೆ ಸರಿಯಾಗಿತಂದು ಕುಳ್ಳಿರಿಸುವೆವು—ಎಂದು ಮೊದಲಾಗಿ ಉತ್ತರ ಕೊಡಬೇಕೆಂಬುದಾಗಿ ನಮ್ಮ ಸೂಚನೆಯಾಗಿದೆ. ನಮಗೆ ಜನರ ಆಂತರಿಕಕಾರಣಗಳು ಬೇಕಾಗಿವೆ. ಶಿವಾಜಿಯವರು ಮರಾಟರಾಗಿದ್ದರೂ ನಮಗೆಲ್ಲರಿಗೆ ಪೂಜ್ಯರಿರುತ್ತಿರುವಲ್ಲಿ—ಅವರ ಉತ್ಸವವನ್ನೂ ನಾವು ಕೈಕೊಳ್ಳುವೆವು. ಶ್ರೀ ಶಿವಾಜೀಮಂದಿರಕ್ಕೆಂದು ಮರಾಟಿಗರಲ್ಲಿ ಒಂದು ವ್ಯಕ್ತಿಯು ಹದಿನೈದುಸಾವಿರ ರೂಪಾಯಿಗಳನ್ನು ಅರ್ಪಿಸುತ್ತಿರಲು ಅದರ ಅನುಕರಣವಾದರೂ ನಮ್ಮಲ್ಲಿ ಆಗಿ, ನಮ್ಮ ಸಾಹಿತ್ಯದ ಉನ್ನತಿಯು ಉತ್ತರೋತ್ತರವಾಗಿ ಆಗುತ್ತಿರಲೆಂದು ಜಗನ್ನಿಯಂತನನ್ನು ಕೇಳಿಕೊಂಡು ಇಲ್ಲಿ ನಿಲ್ಲುವೆವು! —S. B. P.

೧೬. ಶಾಂತಿನಿಕೇತನ

1. ಹೊತ್ತಾರೆ ಸೂರ್ಯನ ಕಿರಣಗಳುಬಂದು ನಮ್ಮನ್ನು ನಿದ್ರೆಯಿಂದ ಎಚ್ಚರಿಸುತ್ತ;—'ಉತ್ತಿಷ್ಠತ-ಜಾಗ್ರತ!' ಎನ್ನುತ್ತಿವೆ. ಆದರೆ, ಸಂಧ್ಯಾಕಾಲದ ಮೋಹವನ್ನು ಭಂಗಗೊಳಿಸುವರಾರು? ಇಡೀ ದಿವಸವೂ ನಾವು ಮಾಡುತಲಿದ್ದ ಕರ್ಮ-ಚಿಂತೆಗಳ ವೇಸ್ಮರನದಿಂದ, ನಮ್ಮ ಮನಸ್ಸನ್ನು ಉದಾರಶಾಂತಿಯನ್ನಿತ್ತು ನಿರ್ಮಲಗೊಳಿಸಲು ಉಪಾಯವೇನಿದೆ? ಹಗಲಿನ ಚಿಂತಾತರಂಗಗಳು ಚಿರನ್ತನವಾದುದನ್ನು ಪರದೆಗಟ್ಟಿ ಅಡಗಿಸಿರಿಸಲು, ಈ ಜಾಲವನ್ನೆಲ್ಲ ಕತ್ತರಿಸಿ, ನಮ್ಮ ಚೇತನವನ್ನು ಅನಂತವಾದುದರ ಮುದಲ್ಲಿ ಜಾಗ್ರತಗೊಳಿಸುವುದುಹೇಗೆ;—ಅಯ್ಯಾ, 'ಉತ್ತಿಷ್ಠತ,-ಜಾಗ್ರತ!'

ಹಗಲು ಹೊತ್ತಿನಲ್ಲಿ, ನಾನಾ ಕರ್ಮಗಳು, ನಾನಾ ಚಿಂತೆಗಳು, ನಾನಾ ಪ್ರವೃತ್ತಿಗಳು, ಒಂದೊದಾಗಿ ಬಂದು ನಮ್ಮನ್ನು ಆವರಿಸಿ ಮುಚ್ಚಿಬಿಡುವಾಗಲೆ,—ನಮ್ಮನ್ನು ಪವಿತ್ರನಾದ ಪರಮಾತ್ಮನಿಂದ ದೂಕ್ಕೊಯ್ದು ಅಡಗಿಸುವ ಯೋಚನೆಮಾಡುತ್ತಿರುವಾಗಲೆ, ಆಗಾಗ, ಈ 'ಉತ್ತಿಷ್ಠತ-ಜಾಗ್ರತ!' ಮಹಾಮಂತ್ರಧ್ವನಿಯು ನಮ್ಮ ಮನಸ್ಸಿನಲ್ಲಿ ಎಚ್ಚರಗೊಳದೆ ಇದ್ದರೆ, ನಮ್ಮ ಅಂತರಾತ್ಮನು ಅಲ್ಲಿಗಲ್ಲಿಗೆ ಮಗೊಳ್ಳುತ, ತಾನಾಗಿ ತನ್ನನ್ನೆ ನೇಣುಹಾಕಿಕೊಳ್ಳುವಂತಿದೆ. ಆದಾಗಲೆ, ನಮ್ಮ ಅಬಲತೆಯಿಂದ ಆತ್ಮನನ್ನು ಹೊರಕ್ಕೆಳೆದು ನಮ್ಮ ಉದ್ಧಾರಕ್ಕಾಗಿ ಪೆಚಾಡುವುದೂ ಕೂಡ ಅನಗತ್ಯವಾಗುವುದು. ನಮ್ಮನ್ನು ಆವರಿಸಿಕೊಂಡಿರುವ ಮೋಹಪಾಶಗಳು ಅತ್ಯಂತ ಸತ್ಯವಾಗಿ ತೋರುವುವು. ಅದುಕಾರಣ, ಶಾಶ್ವತವಾದ ಅನಂತವೂ ಅತೀತವೂ ಆದ ಸತ್ಯದ ಕಡೆಗೆ ನಮ್ಮ ವಿಶ್ವಾಸವೂ ತೋರದು. ಹೆಚ್ಚೇಕೆ? ಸತ್ಯದ ಕಡೆ ಉಂಟಾಗಬಹುದಾದ ಅವಿಶ್ವಾಸವನ್ನಾಗಲಿ ಸಂಶಯವನ್ನಾಗಲಿ ಪ್ರಕಟಿಸುವ ಯೋಚನೆಯು ಕೂಡ ನಮ್ಮಲ್ಲಿ ಉಂಟಾಗುವುದು ಕಠಿಣ. ಎಲ್ಲಾ ಹಗಲಿನ ನಾನಾ ವ್ಯಾಪಾರಗಳ ಕಲಧ್ವನಿಗಳ ಮಧ್ಯೆ, ಮನಸ್ಸಿನ ಗಭೀರತೆಯ ಮಧ್ಯೆ, ಒಂದು ವೀಣೆಯು ಯಾವಾಗಲೂ ಸುಂದರವಾಗಿ ತೀವ್ರವಾಗಿ ಧ್ವನಿಗೆಯ್ಯುತಿರಲಿ,—'ಉತ್ತಿಷ್ಠತ-ಜಾಗ್ರತ!'

2 ಸಂಶಯದಿಂದುಂಟಾಗುವ ವೇದನೆಯಾದರೂ, ಅದೆ ಉತ್ತಮ. ಆದರೆ, ನಮ್ಮಲ್ಲಿ ಉಂಟಾಗುವ ಜಡತೆಯು ಕೇವಲ ಸಂಶಯವನ್ನು ಕೂಡಾ ಅವರಿಸಿ ಇರುತ್ತಿದೆಯಲ್ಲ,—ಅಂದರಿಂದಲಾದರೂ ನಾವು ಸೆರೆಬಿಡಿಸಿಕೊಂಡಿರಬೇಕು. ನಮ್ಮ ಅಜ್ಞಾನವನ್ನು ಕುರಿತಾಗಿಯೆ ನಮ್ಮೊಳಗೆ ಅಜ್ಞಾನವಿರುವುದಾದರೆ, ಅಂತಹ ಅಜ್ಞಾನದಂಥ ಅಜ್ಞಾನವೆ ಬೇರೆ ಯಾವುದೂ ಇಲ್ಲ. ನಾನು ಈಶ್ವರನನ್ನು ತಿಳಿದಿಲ್ಲ, ಅವನನ್ನು ಪಡೆದಿಲ್ಲವೆಂಬುವಷ್ಟಾದರೂ ಜ್ಞಾನವು ನಮ್ಮಲ್ಲಿ ಮೂಡಿದರೆ, ಅಲ್ಲಿಗೇ—'ಉತ್ತಿಷ್ಠತ-ಜಾಗ್ರತ!' ವಾಯಿತು! ಅಚೇತನವನ್ನು ಭೇದಿಸಿ ನಮ್ಮಲ್ಲಿ ಇಷ್ಟಾದರೂ ವೇದನೆಯುಂಟಾಗಲಿ! ನಮಗೇನೂ ಅರಿಯದು, ನಾವಿನ್ನೂ ಸತ್ಯವನ್ನು ಪಡೆದಿಲ್ಲವೆಂದು ನಮ್ಮ ಅಂತರತಮ ಪ್ರಕೃತಿಯು ಅಳುತಿರಲಿ! 'ಸಂಶಯದ ಕತ್ತಲಲಿ ಕಾಣೆ ಹಾದಿಯನೂ ;' ಎಂಬುದೇ ನಮ್ಮ ಮನಸ್ಸಿನ ಹಾಡಾಗಿರಲಿ!

ಈಶ್ವರನಿರುವನೆಂದು ನಾವು ಅನ್ನುತ್ತೇವೆ, ನಾವು ನಾಸ್ತಿಕರಲ್ಲ, ನಾವುಸಂಶಯಿಗಳಲ್ಲವೆಂದೇ ನಾವು ತಟಕ್ಕನೆ ಕುಳಿತಿರುವೆವು. ಈಶ್ವರನನ್ನು ಕುರಿತಾಗಿರುವ ನಮ್ಮ ಅಭಿಪ್ರಾಯದೊಡನೆ, ಮತ್ತಾರ ಅಭಿಪ್ರಾಯವು ಸರಿಬೀಳದೊ ಅವರೆ ನಮ್ಮ ಪಾಷಾಂಡಿಗಳು! ಅವರೇ ನಾಸ್ತಿಕರು! ಅವರಲ್ಲವೆ ಸಂಶಯಾತ್ಮರು! ಇಷ್ಟಕ್ಕಾಗಿಯೆ ಜಗತ್ತಿನಲ್ಲಿ ಎಷ್ಟು ಯುದ್ಧಗಳು, ಎಷ್ಟು ತಂಡಗಳು, ಎಷ್ಟು ವಿವಾದ ವಿರೋಧಗಳು, ಎಷ್ಟು ಶಾಸನ ಪೀಡಗಳು, ಅವುಗಳ ಅಂತ್ಯವೇನೂ ತೋರದು. ನಾವು—ನಮಗೆ ಸರಿಬೀಳುವ ಪಕ್ಷ, ಸರಿಬೀಳದ ಪಕ್ಷವೆಂಬುವ ಎರಡು ದೊಡ್ಡ ಭಾಗಗಳಾಗಿ ಮನುಷ್ಯಸಂಸಾರವನ್ನೆ ವಿಭಾಗಗೊಳಿಸಿ, ಈಶ್ವರನು ನಮಗೇ ಸೇರಿದವನೆಂದೂ ನಾವು ಪುಣ್ಯಶಾಲಿಗಳೆಂದೂ ಭಾಗ್ಯವಂತರಾಗಿ ಹಿಗ್ಗಿಕೊಂಡಿರುವೆವು; ಈ ವಿಷಯದಲ್ಲಿ ನಮಗೆ ಚಿಂತೆಯೂ, ಸಂಶಯವೂ ಇಲ್ಲ. ಇಷ್ಟರ ತಾತ್ಪರ್ಯವೇನೆಂದರೆ,—ಮಾತುಗಳ ಮೂಲಕವಾಗಿಮಾತ್ರ ನಾವು ಈಶ್ವರನನ್ನು ಸ್ವೀಕರಿಸಿಕೊಂಡು, ವಿಕ್ಕಿನ ಸಂಸಾರದಿಂದ ಅವನನ್ನು ದೂರೀಕರಿಸಿದಂತಾಯಿತು. ನಮ್ಮ ಜೀವಿತದ ಕ್ಷಣಕ್ಷಣದಲ್ಲಿ, ಇಡೀ ಜಗತ್ತಿನಲ್ಲಿ, ಈಶ್ವರನಿಗೆ ನಾವು ಸ್ಥಾನ ಕೊಟ್ಟಿಲ್ಲ. ಹಗಲಿನಲ್ಲಿ ಮೂಡಿಬರುತ್ತಿರುವ 'ಉತ್ತಿಷ್ಠತ,-ಜಾಗ್ರತ!'ವೆಂದು ಶಂಖಘೋಷದಿಂದ ಹೇಳುತ್ತಿರುವ ಆ ಸೂರ್ಯನಾರಾಯಣನೂ ನಮ್ಮಲ್ಲಿ ಈಶ್ವರನ ಇರವನ್ನು ಮೂಡಿಸಿಲ್ಲ; ಸಂಜೆಯಲ್ಲಿ, ಕಣ್ಬೆಟ್ಟು ಸದ್ದಿರದೆ ಶಾಂತಭಾವದಿಂದ ನಮ್ಮ ಕಡೆಗೆ ನೋಡುತ್ತಿರುವ ಆ ತಾರಗೆಗಳಾದರೂ, ನಮ್ಮಲ್ಲಿ ಈಶ್ವರ ಸಂಬಂಧವಾದ ಯಾವ ಭಾವನೆಯನ್ನೂ ಹುಟ್ಟಿಸಿಲ್ಲ; ಮತ್ತಾ ಅಂಧಕಾರದಲ್ಲಿ, ನಿದ್ರಾವಶರಾಗಿ ನಾವು ಬಿದ್ದುಕೊಂಡಾಗಲಾದರೂ, ನಮ್ಮನ್ನೆ ದಿಟ್ಟಿಸುತ ದಣಿಯದೆ ಹಾಸುಗೆಯ ಬಳಿಯಲ್ಲಿ ನಿಂತಿದ್ದ ಆ ಜಗಜ್ಜನನಿಯ ಸ್ನಿಗ್ಧಮೂರ್ತಿಯನ್ನಾದರೂ ನಾವು ನೆನಸಲಿಲ್ಲ! ಈ ಅನಿರ್ವಚನೀಯವಾದ ಅದ್ಭುತವಾದ ಜಗತ್ತನ್ನು, ನಮ್ಮ ಆಸ್ತಿಪಾಸ್ತಿ ನಮ್ಮ ಮನೆಮಾರುಗಳೊಳಗೇ ಸಂಕುಚಿತವಾಗಿ ಕೂಡಿಸಿ ಇಡಲಿಕ್ಕೂ ನಾವು ಹೇಸಲಿಲ್ಲ. ನಾವು ಈಶ್ವರನ ಜಗತ್ತಿನಲ್ಲಿ ಜನ್ಮವೆತ್ತದೆ, ಕೇವಲವಾಗಿ ನಮ್ಮ ಮನೆಯಲ್ಲಿ ಹುಟ್ಟಿದವರಂತೆ. 'ನಾವು, ನಾವು, ನಾವು' ಅಲ್ಲದೆ, ಇಲ್ಲಿ ಬೇರೆ ಯಾವ ಮಾತುಗಳಿಗೂ ಎಡೆಯೆ ಇಲ್ಲ. ಇಷ್ಟಾದರೂ, ನಾವು ಈಶ್ವರನನ್ನು ಪರಿಗ್ರಹಿಸಿಕೊಳ್ಳುತ್ತೇವೆ; ಅವನ ವಿಷಯವಾಗಿ ನಮ್ಮಲ್ಲಿ ಸಂಶಯವೇನೂ ಇರದು!!

(ಸಶೇಷ)

-M. N. K.

೧೭. ಮೂಕಪ್ರಾಣಿಗಳ ಗೋಳು



ಸಜ್ಜನರೆ ! ಸಂದುಗೊಂದಿಗಳಲ್ಲಿಯೂ, ರಾಜಬೀದಿಗಳಲ್ಲಿಯೂ, ಸಂತೆಗಳಲ್ಲಿಯೂ, ಜಾತ್ರೆಮಹೋತ್ಸವ ಮೊದಲಾದ ಆನಂದಕೂಟಗಳಲ್ಲಿಯೂ ಈ ಗೀತವನ್ನು ಪಾಡಿರಿ ! ಈ ಚಿತ್ರಲೇಖನವನ್ನೂ ನಿಮ ಮತ್ತು ನಿಮ್ಮ ಆಪ್ತರ ಮನೆಗಳಲ್ಲಿ ಪ್ರಸಿದ್ಧವಾದ ಸ್ಥಳಗಳಲ್ಲಿ ಗೋಡೆಗೆ ಅಂಟಿಸಿರಿ ! ನಮ್ಮ ಹೃದಯ ವಿದ್ರಾವಕವಾದ ಪ್ರಾರ್ಥನೆಗಳು ನಿಮ್ಮ ಸದಯಾಂತಃಕರಣದಲ್ಲಿ ಅರ್ಪಿತಂಗಳಾಗಲಿ !

ರಾಗ: ಕೇದಾರಗೌಳ ಅಟ್ಟತಾಳ (ಗೋವಿಂದಂ ಭಜೆ ಗೋವಿಂದಂ ಭಜೆ ಎಂಬಂತೆ)

ಲಾಲಿಸಿರಿ ಸಜ್ಜನರೆ ನಮ್ಮಯ । ಗೋಳುಗಳನೀಂ ಕೃಪೆಯೊಳು ॥

ಪಾಲಿಸಿರಿ ಕೊಲ್ಲದೆಯೆ ನಮ್ಮಾ । ಬೀಳನುಣ್ಣಲೆಳಸದೆ ॥ ಪ

ಪೆಣನಮುಟ್ಟಲ್ ಸ್ನಾನಮಾಳ್ಪಿರಿ । ಪೆಣವ ತಿನ್ನುವೆನೆಂಬಿರಿ ॥

ನೆಣಮೊದಲಾದೆಲ್ಲವುಂ ನಮ । ಗೆಣೆಯೆನಲ್ ನಮಗಿಲ್ಲವೇ ? ॥ ೧

ತನ್ನ ಪಾರಿಗಿಂದೆಲ್ಲ ಪ್ರಾಣಿಗ । ಳನ್ನು ಕಾಣ್ಬೆವೆಂಬಾರ್ಯರ ॥

ಸನ್ನುತ ಧರ್ಮಗಳು ನಿಮ್ಮೊಳ್ । ಸೊನ್ನೆಯಾದುವದೇತಕೆ ॥ ೨

ಬೇಡಿರ್ಪೆ ನಮ್ಮ ಜೀವಹತ್ಯವ । ಮಾಡಬೇಡಿರಿ ದೈನ್ಯದಿಂ ॥

ಬೇಡಿಕೊಂಬೆವು ನಿಮ್ಮ ಪಾದಕೆ । ಮಾಡುವೆವು ಬಹುವಂದನೆ ॥ ೩

ಕಾಳುಬೇಳೆಯು ಪಣ್ಣುಗಳ್ ಶಾ । ಕಾಳಿ ನಿಮಗಾಹಾರವು ॥

ಜಾಳು ಹುಲ್ಲುಂ ಎಲೆಗಳುಂ ಕಂದ । ಮೂಲಗಳೆ ನಮಗನ್ನವು ॥ ೪

ಹೊಲವನುಳುವೆವು ನೀರನೆತ್ತುತೆ । ಸಲಹುವೆವು ತೋಟಂಗಳಂ ॥

ಎಳೆದು ಬಂಡಿಯ ದೂರದೂರಿಗೆ । ಸುಲಭದಿಂ ನಿಮ್ಮನ್ನೊಯ್ವೆವು ॥ ೫

ಅಡವಿಗಿಡುಗಳು ಒಣಗಿದ ಪು । ಲ್ಲೊಡಲಿಗಿಕ್ಕಿಕೊಳ್ಳುತೆ ॥

ಒಡೆಯರೆ ಪಾಲ್ಕೊಸರುಗಳನುರೆ । ಕೊಡುವುದಂ ನೀಂ ಮರೆತಿರೆ ॥ ೬

ನಮ್ಮ ಮೈಕೂದಲುಗಳಿಂದಲೆ । ನಿಮ್ಮ ಹೊದಿಕೆಗಳಪ್ಪವು ॥

ನಮ್ಮ ಗಾನಗಳಿಂದ ಬೇಸರೊಳ್ । ನಿಮ್ಮ ಮನಮತಿ ಸುಖಿಪುದು ॥ ೭

ಅರಿಗೇಂ ವ್ಯಥೆಯನ್ನು ಕೊಡದೆಯೆ । ದಾರಿಗರಿಗತಿವೋದವಂ ॥

ಬೀರುತಿರುವೀ ನಮ್ಮೊಳೀತಕೆ । ಕ್ರೂರತನವಂ ತೋರ್ಪಿರಿ ॥ ೮

ಮಾಂಸಭಕ್ಷಕಗನುಕಂಪವು । ಧ್ವಂಸವಾಗುವುದಲ್ಲವೆ ? ॥
ಸ್ವಾಂತಗಳೆ ಕೆಡುತೆಲ್ಲವುಂ ನಿ । ರಂಶವಾಗುವುದಲ್ಲವೆ ? ॥ ೯ ॥
ಕಾಳಿ ಚೌಡಿ ಮಹೇಶ್ವರೀ ಮಾಂ । ಕಾಳಭೈರವಿ ಮೊದಲಹ ॥
ಮೇಲೆನಿಪ ದೇವತೆಗಳೆಮಗುಂ । ಶೀಲಗಳೆ ನಿಮ್ಮಂತೆಯೆ ॥ ೧೦ ॥
ನಮ್ಮ ಜೀವವನೊಕ್ಕಲಿಕ್ಕಲ್ । ನಿಮ್ಮ ಸ್ವಾಣಗಳುಳಿವುವೇ ? ॥
ಅಮ್ಮಗಳ್ ಮೆಚ್ಚುವರೆ ಮೃತ್ಯುವು । ಬಿಮ್ಮನೆ ಬೆನ್ನಂಟಿದೆ ॥ ೧೧ ॥
ಉರಿಯಕಂಡು ಪತಂಗಮುದರ । ಲ್ಲುರುಳುವಂತೆಯೆ ನೀಂಗಳು ॥
ಬರಿಯ ಭ್ರಾಂತಿಯೊಳೆಮ್ಮ ಕೊಂದುಂ । ಡುರುಳದಿರಿ ನರಕಾಂಧ್ರವೊಳ್ ॥ ೧೨ ॥
ಧರಣಿಯಲಕಾಪುರವಕೇಶನು । ಪೊರೆವನೆಲ್ಲರನನುದಿನಂ ॥
ಸ್ಮರಿಸುತಾ ಭಗವಂತನಂ ಮನ । ಮಿರಿಸಿರೈ ಸನ್ಮಾರ್ಗದೊಳ್ ॥ ೧೩ ॥

—ಶಾ. ವೆಂಕಟರಮಣಯ್ಯ,
ಹಲಕೂರು.

೧೮. ಭರತಖಂಡದೊಳಗಣ ವಿದ್ಯಾವತಿಯರು

(ಕಳೆದ ಸಂಚಿಕೆಯಿಂದ ಮುಂದರಿಸಿದುದು.)

೩. **ಲೀಲಾವತಿ:**—ಈಕೆಯು ಸುಪ್ರಸಿದ್ಧ ವಿದ್ಯಾವತಿಯು. ಈಕೆಯ ತಂದೆಯು ಜ್ಯೋತಿಷವಿದ್ಯಾನಿಪುಣನೆಂದು ಪ್ರತೀತಿಯುಂಟು; ಹೆಸರು ಭಾಸ್ಕರಾಚಾರ್ಯ ಎಂದು ಹೇಳುವರು.

ಈಕೆಯು ಒಂದು ಗಣಿತ ಶಾಸ್ತ್ರವನ್ನು ಬರೆದಿರುವಳು. ಅದು ಬಹುಮಟ್ಟಿಗೆ ಯುಕ್ತಿಯುಕ್ತವಾಗಿರುವುದರಿಂದ, ಅನೇಕ ಭಾಷೆಗಳಿಗೆ ಭಾಷಾಂತರಿಸಲ್ಪಟ್ಟು ಪರಮೋತ್ಕೃಷ್ಟತೆಯನ್ನು ಪಡೆದಿರುವುದು.

ಶ್ಲೋಕ ॥ ಜನನೀ ಜನ್ಮಸೌಖ್ಯಾನಾಂ ವರ್ಧನೀ ಕುಲಸಂಪದಂ ।
ಪದವೀ ಪೂರ್ವಪುಣ್ಯಾನಾಂ, ಲಿಖ್ಯತೇ ಜನ್ಮಪತ್ರಿಕಾ ॥

ಎಂದು ಹೇಳುವ ಶ್ಲೋಕೋತ್ಪತ್ತಿಗೆ ಈಕೆಯೇ ಕಾರಣಭೂತಳೆಂದು ನಾವು ಊಹಿಸಬಹುದು. ತಂದೆಯಾದ ಭಾಸ್ಕರಾಚಾರ್ಯನು, ಈಕೆಯ ಜನ್ಮಕಾಲ ವಿಶೇಷದಿಂದ, ಈಕೆಗೆ ಬಾಲ್ಯದಲ್ಲೇ ವೈಧವ್ಯದೆಶೆಯು ಪ್ರಾಪ್ತವಾಗುವುದೆಂದು ತಿಳಿದಿದ್ದನು. ಆದರೂ—ಈಶ್ವರಮನ್ತರೇಣಾಪಿ ನಕಾರಣಂ ಪತ್ತಯೇ ಸತೀನಾಮ್ ॥ ಎಂಬ ವಾಕ್ಯವನ್ನು ಹಿಡಿದು, ಈಕೆಯು ವೈಧವ್ಯವನ್ನು ಹೋಗಲಾಡಿಸಲು, ತನ್ನ ಮಾನವಯತ್ನದಲ್ಲಿ ತಕ್ಕ ಏರ್ಪಾಡುಗಳನ್ನು ಮಾಡಿದನಾದರೂ, ಈಕೆಯ ಪೂರ್ವಾರ್ಜಿತ ಕರ್ಮವಿಶೇಷಗಳು ಈಕೆಯನ್ನು ಬಿಡಲಿಲ್ಲ. ಮನ್ಮಥನು ಎಂಥವನು? ಜಗನ್ಮಾತೆಯಾದ ಸಾಕ್ಷಾಲ್ಲಕ್ಷ್ಮೀದೇವಿಯೇ ತಾಯಿಯು; ವಿಶ್ವೋತ್ಪತ್ತಿಗೆ ಮೂಲಕರ್ತನೂ ಲಕ್ಷ್ಮೀಪತಿಯೂ ಆದ ಶ್ರೀಮನ್ಮಹಾವಿಷ್ಣುವೇ ತಂದೆಯು. ಅವನಾದರೋ

ವಿಷಮೋಯುಧ ಉಳ್ಳವನು; ಆದರೂ ಪುರಾಕೃತ ಕರ್ಮವಿಶೇಷದಿಂದ, ಈಶ್ವರನ ಅಗ್ರಹಕ್ಕೆ ಪಾತ್ರನಾಗಿ ಸುಟ್ಟು ಬೂದಿಯಾದನು. ಇಂಥುದರಲ್ಲಿ ವಿಧಿಯನ್ನು ಮೀರಿಸಲು ಭಾಸ್ಕರಾಚಾರ್ಯನು ಎಷ್ಟು ಮಾತ್ರ ದವನು? ಲೀಲಾವತಿಯು ಅಷ್ಟು ಹೆಚ್ಚಿನವಳೇ?

ಭಾಸ್ಕರಾಚಾರ್ಯನು, ಸ್ವತಃ ಜ್ಯೋತಿಷನಿಪುಣನಾದುದರಿಂದ, ಲೀಲಾವತಿಯು ವಿವಾಹಕ್ಕೆ ಪ್ರಾಪ್ತ ವಯಸ್ಕಳಾಗುತ್ತಲಿ, ದೀರ್ಘಾಯುವಾದ, ಒಳ್ಳೆಯ ಒಬ್ಬ ವರನನ್ನು ಹುಡುಕಿ ಪರಮ ಪ್ರಶಸ್ತವಾದ ದಿನ ಲಗ್ನವನ್ನು ನಿಷ್ಕರ್ಷಿಸಿ ಆ ಲಗ್ನಕಾಲವನ್ನು ಸುಸೂತ್ರವಾಗಿ ತಿಳಿಯಲು ಸಿದ್ಧಾಂತವನ್ನು ಅನುಸರಿಸಿ ಒಂದ ಯಂತ್ರವಿಶೇಷವನ್ನು ನಿರ್ಮಿಸಿ, ಲೀಲಾವತಿಯ ಪಾಣಿಗ್ರಹಣದ ಇತರ ಕಾರ್ಯಗಳಲ್ಲಿ ಅತ್ಯಾಸಕ್ತ ನಾಗಿದ್ದನು. ಮತ್ತು ಬಹು ಜಾಗರೂಕತೆಯಿಂದ ಆಗಾಗ್ಗೆ ಯಂತ್ರವನ್ನು ನಿರೀಕ್ಷಿಸುತ್ತಲೇ ಇದ್ದನು

ಲೀಲಾವತಿಯು ಮದುವಣಗಿತ್ತಿಯಾದ ಕಾರಣ, ಪರಿಪರಿಯಾದ ವಿಶೇಷ ಆಭರಣಗಳಿಂದ ಪರಿಭೂಷಿ ಯಾಗಿದ್ದಳು. ಅಷ್ಟುಮಾತ್ರವಲ್ಲ. ತನ್ನ ವಿವಾಹದ ಲಗ್ನಕಾಲವು ಎಂದಿಗೆ ಸಮೀಪಿಸುತ್ತದೆ ನೋಡೋಣ, ಎಂಬುದರಲ್ಲಿ ವಿಶೇಷ ತವಕಗೊಂಡಿದ್ದಳು. ಮೊದಲನೆಯ ಬಾರಿ, ಭಾಸ್ಕರಾಚಾರ್ಯ ಯಂತ್ರವನ್ನು ಪರೀಕ್ಷಿಸಿ ಹೋಗಿದ್ದನು. ಬಳಿಕ ಸ್ವಲ್ಪ ಕಾಲಕ್ಕೆನೆ ಲೀಲಾವತಿಯೂ ನೋಡಹೋ ದ್ದಳು. ಹೀಗೆ ನೋಡುತಿರುವಲ್ಲಿ, ಲೀಲಾವತಿಯ ಮೂಗುತಿಯ ಮುತ್ತೊಂದು ಜಾರಿ, ಆ ಜಲಯಂ ಕ್ಕುರುಳಿ, ಜಲದ್ವಾರವನ್ನು ಬಂಧಿಸಿತು. ಅಯ್ಯೋ ಪಾಪ! ಲೀಲಾವತಿಯ ದುರದೃಷ್ಟವನ್ನು ಏನೆಂ ಹೇಳೋಣ! ಈ ಸಂಗತಿಯು ಯಾರಿಗೂ ತಿಳಿಯದು. ಮುಖ್ಯವಾಗಿ ವಿಧಿಯೇ ಬಲಾಢ್ಯನು. ಆತನಾ ಯನ್ನು ಕೆಡಿಸಲು ಪುನಃ ಅವನಿಗೇ ಆಳವಲ್ಲ; ಇಂಥುದರಲ್ಲಿ ಇನ್ನು ಯಾರು ತಾನೇ ಏನುಮಾಡಬಲ್ಲರು ಭಾಸ್ಕರಾಚಾರ್ಯನು ಪುನಃ ಬಂದು ನೋಡುವಲ್ಲಿ ಜಲವು ಉಕ್ಕಿರಲಿಲ್ಲ. ಲೀಲಾವತಿಯ ಮೂಗುತಿ ಮುತ್ತೇ ಇದಕ್ಕೆ ಕಾರಣವು. ಭಾಸ್ಕರಾಚಾರ್ಯನ ಉತ್ಸಾಹವು ಮುರಿಯಿತು. ಮಾಡಿದ ಪ್ರಯತ್ನವು ಇಂ ಈಪರಿಯಾಗಿ ಭಂಗವಾಯಿತು. ಆದರೂ ಲೀಲಾವತಿಯ ವಿವಾಹವು ನಿಲ್ಲಿಸಲ್ಪಡಲಿಲ್ಲ. ಲೀಲಾವತಿ ಜನ್ಮಕಾಲ ವಿಶೇಷಫಲವು ಅಳೆಯ ಬೆನ್ನುಹತ್ತುವುದನ್ನು ಬಿಡಲೂ ಇಲ್ಲ. ವಿವಾಹಿತಳಾದ ಕೆಲವು ಕ ದಲ್ಲಿಯೇ, ದೀರ್ಘಾಯುವಾದ ಪತಿಯೂ ಅಲ್ಪಾಯುವಾದನು. ಲೀಲಾವತಿಗೆ ವೈಧವ್ಯದ ವಿಧವ ಅತಿಶಯಿಸಿತು. ಭಾಸ್ಕರಾಚಾರ್ಯನು ಪ್ರೇಮಪಾತ್ರಳಾದ ಮಗಳ ದುಃಖವನ್ನು ನೋಡಿ ಹೇಗೆ ಸ ಬಲ್ಲನು? ಲೀಲಾವತಿಯು ಅಜೀವಪರ್ಯಂತವೂ ಹಿಂಬಾಲಿಸಿರುವ ಪತಿವಿಯೋಗದ ದುಃಖವನ್ನು ದ ತೊಲಗಿಸಲು ಏನುಮಾಡಬೇಕೆಂಬುದನ್ನು ಪರ್ಯಾಲೋಚಿಸಿ, ವಿದ್ಯಾಭ್ಯಾಸವನ್ನು ಮಾಡಿಸಿದನು. ಲೀ ವತಿಯೂ ಹೆಚ್ಚಿನ ವಿಶ್ವಾಸದಿಂದ ತಂದೆಯು ಕಲಿಸಿದ ವಿದ್ಯೆಯನ್ನೆಲ್ಲಾ ಲೀಲಾಮಾತ್ರದಲ್ಲಿ, ಅತ್ಯಲ್ಪಕ ದಲ್ಲಿಯೇ ಕಲಿತಳು. ವಯಸ್ಸಿನಲ್ಲಿ ಬಾಲೆಯೆನಿಸಿಕೊಂಡಿದ್ದರೂ, ವಿದ್ಯೆಯಲ್ಲಿ ಅತಿ ವೃದ್ಧಳಾಗಿದ್ದ ಈಕೆಯು ನಿಮಿಷಮಾತ್ರದಲ್ಲಿ ಮರದಲ್ಲಿನ ಎಲೆಗಳನ್ನೆಲ್ಲಾ ಲೆಕ್ಕಿಸಿ ಹೇಳಬಲ್ಲವಳಾಗಿದ್ದಳೆಂದು ಬಹಳವ ಪ್ರತೀತಿಯುಂಟು.

೭. **ಸುಲೀಬಾದೇವಿ:**—ಈಕೆಯು ಬ್ರಾಹ್ಮಣ ಸ್ತ್ರೀ. ಕಾಶೀನಗರದ ಸಮೀಪದಲ್ಲೇ ರಾಮನಗರವು ಈಕೆಯ ಜನ್ಮಭೂಮಿ. ಕೃಷ್ಣವರ್ಮನೆಂಬ ಬ್ರಾಹ್ಮಣನು ಈಕೆಯ ತಂದೆ.

ಕೃಷ್ಣವರ್ಮನಿಗೆ ಈಕೆಯ ಮೇಲೆ ಅಧಿಕ ವಾತ್ಸಲ್ಯವಿದ್ದುದರಿಂದ, ಈಕೆಗೆ ಗೀರ್ವಾಣ ಭಾಷಾ ಭ್ಯಾಸವನ್ನು ಮಾಡಿಸಿದನು. 'ಸ್ತ್ರೀಯರಿಗೆ ಬುದ್ಧಿಯು ಪುರುಷರ ಬುದ್ಧಿಗಿಂತ ನಾಲ್ಕಡಿ' ಎಂದು ಪೂರ್ವಿಕರು ಹೇಳುತ್ತಿದ್ದರು. ಇದು ಸಟೆಯೆ? ಸುಲೀಬಾದೇವಿಯು ಅತ್ಯಲ್ಪ ಕಾಲದಲ್ಲೇ, ನಾಟಕಾಲಂಕಾರ ಸಾಹಿತ್ಯಗಳಲ್ಲೂ ಜ್ಞಾನವನ್ನು ಸಂಪಾದಿಸಿದಳಲ್ಲದೆ, ವೇದ-ವೇದಾಂಗಗಳೆಲ್ಲವನ್ನೂ ಅಭ್ಯಾಸಮಾಡಿದಳು. ಈಕೆಯು ಪ್ರಾಪ್ತವಯಸ್ಕಳಾಗುತ್ತಲೆ, ಕೃಷ್ಣವರ್ಮನು, ಯೋಗ್ಯವರನನ್ನು ಹುಡುಕಿ, ಮದುವೆಮಾಡಿ ಕೊಟ್ಟನು. ಆ ವರನ ಹೆಸರು ಜಗನ್ನಾಥಶಾಸ್ತ್ರಿ, ಒಳ್ಳೆಯ ಪಂಡಿತ.

ಸುಲೀಬಾದೇವಿಯು ಪತಿಯಲ್ಲಿ ಪೂರ್ಣಾನುರಾಗವಿದ್ದವಳು. ಅತಿಥಿಅಭ್ಯಾಗತರ ಸೇವೆಯನ್ನು ಅತ್ಯಂತ ವಿಶ್ವಾಸದಿಂದ ನಡೆಸುತ್ತಿದ್ದಳು. ತನ್ನ ಗೃಹಕೃತ್ಯ ಕಾರ್ಯಗಳನ್ನು ಬಹು ವಿಚಕ್ಷಣೆಯಿಂದ ಸ್ವತಃ ನೋಡಿಕೊಳ್ಳುತ್ತಿದ್ದಳು. ಇಷ್ಟು ಮಾತ್ರವಲ್ಲ, ಗೀರ್ವಾಣ ವಿದ್ಯಾಶಾಲೆಯೊಂದನ್ನು ಏರ್ಪಡಿಸಿ, ಬಾಲಕಿಯರಿಗೂ, ಬಾಲವಿಧವೆಯರಿಗೂ ಅತ್ಯಾಸಕ್ತಿಯಿಂದ ವಿದ್ಯೆಯನ್ನು ಕಲಿಸುತ್ತಿದ್ದಳು. ತೀರ್ಥಯಾತ್ರೆಗಳಲ್ಲಿ ಅನುರಾಗಿಯಾಗಿದ್ದಳು. ಇಷ್ಟೇ ಅಲ್ಲ, ಈಕೆಯು ಪಂಡಿತರ ಸಭೆಗಳಿಗೂ ಹೋಗಲು ಇಷ್ಟವುಳ್ಳವಳು. ಶ್ರೀರಂಗಪಟ್ಟಣಕ್ಕೆ ಈಕೆಯು ಯಾತ್ರಾರ್ಥಿಯಾಗಿ ಹೋಗಿದ್ದ ಕಾಲದಲ್ಲಿ, ಅಲ್ಲಿ ವೇದಾಂತ ರಹಸ್ಯಗಳನ್ನು ಚರ್ಚಿಸುತ್ತಿದ್ದ ಒಂದಾನೊಂದು ವಿದ್ವತ್ಸಭೆಗೆ ಹೋಗಿ, ಈಕೆಯೂ ಅವರಲ್ಲಿ ಬೆರೆತು ಜೀವಾತ್ಮನ ವಿಚಾರವಾಗಿ ಚರ್ಚಿಸಿದಳು. ಅಲ್ಲಿನ ವಿದ್ವನ್ಮಣಿಗಳು ಈಕೆಯ ವಿದ್ಯಾನೈಪುಣ್ಯಕ್ಕೆ ವಿಶೇಷವಾಗಿ ಮೆಚ್ಚಿ, "ಪಂಡಿತ" ಎಂಬ ಹೆಸರನ್ನು ಕೊಟ್ಟರೆಂದೂ ಅಂದಿನಿಂದ ಈಕೆಗೆ "ಪಂಡಿತ ಸುಲೀಬಾದೇವಿ' ಎಂದು ಹೆಸರಾಯಿತೆಂದೂ ತಿಳಿಯಬರುತ್ತದೆ.

ಈಕೆಯು ತನ್ನ ಜೀವಿತಕಾಲದಲ್ಲಿ ವೇದಾಂತ ವಿಷಯಗಳನ್ನು ಬೋಧಿಸುವ "ತತ್ವದರ್ಶನಂ" ಎಂಬ ಪುಸ್ತಕವನ್ನು ಗೀರ್ವಾಣ ಭಾಷೆಯಲ್ಲಿ ರಚಿಸಿರುವಳು. ಈಕೆಯು ತನ್ನ ವಾರ್ಧಿಕ್ಯದಲ್ಲಿ, ವೈಧವ್ಯ ಶೆಯನ್ನು ಅನುಭವಿಸಬೇಕಾಗಿ ಬಂದುದರಿಂದ ಸಹಗಮನ ಪದ್ಧತಿಯನ್ನು ಅನುಸರಿಸಿದಳು. ಈಕೆಯು ಶ್ರಾಯಶಃ ಕ್ರಿ. ಶ. 1550ನೆಯ ಕಾಲಕ್ಕಿಂತಲೂ ಮೊದಲಿನವಳೇ ಎಂದು ತೋರುತ್ತದೆ.

೮. **ಮುಕ್ತಾಬಾಯಿ:** — ಈಕೆಯು ಮಹಾರಾಷ್ಟ್ರದೇಶಕ್ಕೆ ಸೇರಿದವಳು. 'ಭಕ್ತವಿಜಯ' ಎಂಬ ಮಹಾ ಗ್ರಂಥದಲ್ಲುಕ್ತವಾಗಿರುವ ಸಂಸ್ಕೃತ 'ಭಗವದ್ಗೀತಾ' ಗ್ರಂಥಕ್ಕೆ ಮಹಾರಾಷ್ಟ್ರಭಾಷೆಯಲ್ಲಿ ಟೀಕೆಯನ್ನು ಬರೆದಿರುವ ಜ್ಞಾನದೇವನೆಂಬ ಮಹಾಭಕ್ತನು ಈಕೆಗೆ ಸಹೋದರನಾಗಬೇಕು.

ಈಕೆಯು ಮಹಾಭಕ್ತಳು. ವಿದ್ಯಾವಂತೆ. ಬಹ್ಮಚಾರಿಣಿ. ಮದುವೆಯಾಗಲಿಲ್ಲ. ತನ್ನ ಜೀವಮಾನವೆಲ್ಲಾ ಧರ್ಮೋಪದೇಶದಲ್ಲೇ ಕಳೆಯುತ್ತಿದ್ದಳು. ಚಾಂಗದೇವನೆಂಬ ಮಹಾ ಸಿದ್ಧಪುರುಷನನ್ನು ಈಕೆಯು ಸಂವಾದದಲ್ಲಿ ಗೆದ್ದಿಸಿ, ಅತನನ್ನು ಶಿಷ್ಯನನ್ನಾಗಿ ಮಾಡಿಕೊಂಡಳೆಂದು ಹೇಳುತ್ತಾರೆ. ಇದರಿಂದ ಈಕೆಯು ಅಪ್ರತಿಭಾಶಾಲಿಯೆಂದು ತೋರುತ್ತದೆ.

ಮುಕ್ತಾಬಾಯಿಯು ಭಕ್ತಿರಸಪೂರಿತವಾದ ಅನೇಕ ಕೀರ್ತನೆಗಳನ್ನು ರಚಿಸಿರುವಳು. ಇವೆಲ್ಲವೂ ಧರ್ಮೋಪದೇಶಯುಕ್ತಗಳಾಗಿ, ಅನೇಕಮಂದಿ ಭಕ್ತರಿಗೆ ಸಂತೋಷವನ್ನುಂಟುಮಾಡುತ್ತಾ ಮಹಾರಾಷ್ಟ್ರದೇಶದಲ್ಲಿ ಈಗಲೂ ಪ್ರಚಾರದಲ್ಲಿ ನಿಂತಿರುವುವು.

೯. ಮೃಗನಯನೆ:—ಈಕೆಯು ಘೂರ್ಜರ ದೇಶದ ರಾಜಪುತ್ರಿಯಾಗಿ, ಗ್ವಾಲಿಯರ
ಮಹಾರಾಜ ಮಾನಸಿಂಹನಿಗೆ ಪತ್ನಿಯಾಗಿ ನೆಗಳ್ತಿಗೆ ಬಂದ ರಾಜ ರಮಣಿ. ಈಕೆಯು ಸೌಂದರ್ಯದ
ರತೀದೇವಿಯನ್ನೂ, ಗಾನದಲ್ಲಿ ಗಂಧರ್ವರನ್ನೂ ಮೀರಿಸುತ್ತಿದ್ದಳೆಂದು ಹೇಳಬಹುದು. ದೃಷ್ಟಾಂ
ವಾಗಿ—ಈಕೆಯ ಹೆಸರು ದಿಕ್ಕತುಷ್ಟಯಗಳಲ್ಲೂ ಪ್ರಸರಿಸಿರುವುದು; ಗ್ವಾಲಿಯರ್ ಸಂಸ್ಥಾನದಲ್
ಗಾನವಿದ್ಯೆಯು ಅಧಿಕವಾಗಿ ಗೌರವಿಸುತ್ತಿದ್ದುದು, ಅದೇ ಸಂಸ್ಥಾನದಲ್ಲಿ ಗಾನವಿದ್ಯೆಯನ್ನು ಕಡೆಹ
ಯ್ದಿದ್ದ ಬಹುಮಂದಿ ನಿದ್ಯಾವಂತರು ಇದ್ದುದು, ತಾನಸೇನನೆಂಬ ಸಂಗೀತ ವಿದ್ಯಾಪಾರಂಗತನೋವ
ನು ಈಕೆಯ ವಿಶಾಲವಾದ ಯಶಸ್ಸನ್ನು ಕೇಳಿ ಗ್ವಾಲಿಯರ್ ಸಂಸ್ಥಾನಕ್ಕೆ ಬಂದಿದ್ದು, ಈಕೆಂ
ಪಾಂಡಿತ್ಯವನ್ನು ನೋಡಿ ಆನಂದಪರವಶನಾದುದು ಮೊದಲಾದುವನ್ನು ಹೇಳಬಹುದಾಗಿರುವುದು.

ಈಕೆಯು ಅನೇಕ ರಾಗಗಳನ್ನು ಹೊಸದಾಗಿ ಕಂಡುಹಿಡಿದಂಥ ಸಂಗೀತವಿದ್ಯಾಸಮರ್ಥಳೆಂದ
ಹೇಳುವರು.

೧೦. ಇಂದುಲೇಖೆ:—ಈಕೆಯು ಸಂಸ್ಕೃತದಲ್ಲಿ ಕವಿತಾಸಾಮರ್ಥ್ಯವನ್ನು ಪಡೆದಿ
ಳೆಂದೂ, "ಸುಭಾಷಿತ ರತ್ನಭಾಂಡಾರ" ಮತ್ತು "ಸುಭಾಷಿತಾವಳಿ"ಗಳೆಂಬ ಗ್ರಂಥಗಳನ್ನು ರಚಿಸಿರು
ಳೆಂದೂ ಹೇಳುವರೇ ಹೊರತು, ಈಕೆಯ ವಿಷಯವಾಗಿ ಮತ್ತೇನೂ ಪ್ರಕಟವಾದಂತೆ ತೋರಿಬರಲಿಲ್ಲ.

೧೧. ಸಂಗಮಿತ್ರ:— ಪ್ರಸಿದ್ಧ ಚರಿತ್ರಕಾರನೂ, ಬೌದ್ಧಮತೋದ್ಧಾರಕನೂ ಆ
ಅಶೋಕಮಹಾರಾಜನ ಮಗಳೇ ಈಕೆ. ಈಕೆಯು ತನ್ನ ಚಿಕ್ಕಪ್ಪನಾದ ಮಹೇಂದ್ರನೊಡನೆ, ಸಿಂಹ
ದ್ವೀಪಕ್ಕೆ ಹೋಗಿ, ತಾನೂ ಬೌದ್ಧಬೋಧಕಳಾಗಿ, ಅಲ್ಲಿನ ರಾಜದಂಪತಿಗಳೀರ್ವರನ್ನೂ ಬೌದ್ಧ
ಮತಾವಲಂಬಿಗಳನ್ನಾಗಿ ಮಾಡಿದಳೆಂದೂ, ಆಗ್ಗೆ ಈಕೆಗೆ ಇಪ್ಪತ್ತು ವರ್ಷಗಳ ವಯಸ್ಸೂ ಕೂಡ ಆಗಿರಲಿ
ವೆಂದೂ ಹೇಳುತ್ತಾರೆ.

ವಾಚಕರಿಗೆ ಚಿರಪರಿಚಿತನಾದ ಅಶೋಕ ಮಹಾರಾಜನು ಉಜ್ಜುಗಿಸಿದ ಅನೇಕ ಕಾರ್ಯಗಳಲ್
ಈಕೆಯು ಪ್ರವೇಶಿಸಿ, ದೇಶವಾತ್ಸಲ್ಯದಿಂದ ಪ್ರಜೆಗಳಿಗೆ ಅನೇಕ ಸೌಕರ್ಯಗಳನ್ನು ಮಾಡಿಕೊಟ್ಟಳೆಂದ
ತಿಳಿಯಿಬರುತ್ತದೆ. ಈಕೆಯು ಕ್ರಿಸ್ತಪೂರ್ವ ಮೂರನೆಯ ಶತಮಾನದಲ್ಲಿದ್ದ ನಾರೀಮಣಿಯಾಗಿರುವಳ

೧೨. ಲಕ್ಷ್ಮೀದೇವಿ:—ಈಕೆಯು ವಿಥಿಲದೇಶದ ರಾಜಾ ಚಂದ್ರಸಿಂಹನ ಪಟ್ಟದ ರಾಣಿ
ಈಕೆಗೆ ವಿದ್ಯೆಯಮೇಲೆ ಪೂರ್ಣಾನುರಾಗವಿದ್ದುದರಿಂದ ತನ್ನ ದೇಶದ ಅನೇಕಮಂದಿ ಪಂಡಿತರನ್ನು ತನ
ಅರಮನೆಯಲ್ಲೇ ಇರಿಸಿಕೊಂಡಿದ್ದಳು.

ಈಕೆಯು ವಿದ್ಯಾನೈಪುಣ್ಯವನ್ನು ಪಡೆದಿದ್ದಕಾರಣ, ವಿಶಾಕ್ಷಪ ವ್ಯಾಖ್ಯಾನವನ್ನು ಬರೆದಿರುವಳ
ಅದರಿಂದ ಈಕೆಯ ವಿದ್ಯಾಪ್ರೌಢಿಮೆಯು ಹೊರಬೀಳುವುದು.

೧೩. ಮೋಹನಾಂಗಿ:—ಕೃಷ್ಣದೇವರಾಯರ ಮೋಹದ ಪುತ್ರಿಯೇ ಈಕೆ. ಕವಿತ
ಸಾಮರ್ಥ್ಯವನ್ನು ಪಡೆದ ವಿದುಷೀಮಣಿಯು. ಈಕೆಯ ದ್ವಿತೀಯಾವಸ್ಥೆಯಲ್ಲೇ ಪತಿವಿಯೋಗವಾಯ
ತೆಂದೂ, ಆಗ ಈಕೆ ಸಹಗಮನವನ್ನು ಮಾಡಿದಳೆಂದೂ ಹೇಳುತ್ತಾರೆ. ಈಕೆಯೂ ಪಂಡಿತ ಸುಲಿಗ
ದೇವಿಯೂ ಸಮಕಾಲೀನರೇ ಇರಬಹುದು

—K. SREENIVASACHA

೨೦. ಆಲಸ್ಯದ ಹುಡುಗ

ವಾಮನನ ಸ್ವಭಾವವು ಅಷ್ಟೇನೂ ಕೆಟ್ಟದಿರಲಿಲ್ಲ. ಆತನ ಆಚರಣೆಯು ಡಾಂಭಿಕದ್ದಾಗಿರಲೂ ಇಲ್ಲ. ಪರಂತು, ಆತನಲ್ಲಿ ಅಲಕ್ಷ್ಯ ಮತ್ತು ಆಲಸ್ಯ ಇವೆರಡು ದುರ್ಗುಣಗಳು ಮಾತ್ರವೇ ಬೇರೂರಿದ್ದುವು. ಕ್ಲಾಸಿನಲ್ಲಿ ಉಪಾಧ್ಯಾಯರು ಪಾಠವನ್ನು ಹೇಳಿಕೊಡುವಾಗ—ವಾಮನನು ಪುಸ್ತಕದೊಳಗಿನ ಚಿತ್ರಗಳಿಗೆ ಬಣ್ಣಹಾಕುವುದು, ಬಾಂಕಿನಮೇಲೆ ತನ್ನ ಹೆಸರನ್ನು ಕೊರೆಯುವುದು,—ಈ ಕೆಲಸಗಳಲ್ಲಿ ನಿರತನಾಗಿರುತ್ತಿದ್ದನಲ್ಲದೆ ಪಾಠದಕಡೆಗೆ ಲಕ್ಷ್ಯಕೊಡುತ್ತಿರಲಿಲ್ಲ.

ಇನ್ನು ಮನೆಯಲ್ಲಿ ಅಭ್ಯಾಸಮಾಡುವುದೆಂದರೆ ಅದೂ ಇಲ್ಲ. ಕ್ಷಣಕಾಲವೂ ಮನೆಯಲ್ಲಿ ಇರಲಾರನು. ರಜಾದಿವಸಗಳನ್ನಂತೂ ಇಸ್ಪೀಟು, ಚೆಂಡು,—ಇವೇ ಮೊದಲಾದ ಆಟಗಳಿಂದ ಕಳೆಯುವನು.

ಶಾಲೆಯು ಪ್ರಾರಂಭವಾಗಲು—"ಪರೀಕ್ಷೆಗೆ ಇನ್ನು ಒಂಭತ್ತು ಹತ್ತು ತಿಂಗಳ ಅವಕಾಶವಿನೆ; ಪುಸ್ತಕಗಳನ್ನೊೀದಲಿಕ್ಕೆ ನಾಳೆಯಿಂದ ಪ್ರಾರಂಭಿಸಬೀಕು"—ಈ ಮನೋನಿಶ್ಚಯದಿಂದಲೇ ವೃಥಾ ಕಾಲ ಹರಣವನ್ನು ಮಾಡುತ್ತಿದ್ದನಲ್ಲದೆ ಆತನ ಅಭ್ಯಾಸದ "ನಾಳೆ"ಯು ಬರುತ್ತಿರಲೇ ಇಲ್ಲ. ಪುಸ್ತಕಗಳನ್ನು ಕೈಯಲ್ಲಿ ಹಿಡಿಯುವುದೂ ಇರಲಿಲ್ಲ. ಪರೀಕ್ಷೆಗೆ ಏಳೆಂಟು ದಿವಸಗಳು ಉಳಿವಾಗ ಉಪಾಯವಿಲ್ಲದೆ ಓದತೊಡಗುವನು. ಮಾಡುವುದೇನು? ಪಾಠಗಳು ಮುಂದಟ್ಟಾಗುವುವೆ? ಒಂದು ವರುಷದ ಅಭ್ಯಾಸವು ಏಳೆಂಟು ದಿವಸಗಳಲ್ಲಿ ಪೂರೈಸಲು ಸಾಧ್ಯವೆ? ಪರೀಕ್ಷೆಯ ಕಾಲವು ಬಂತೆಂದರೆ ಆತನಿಗೆ ಅದೊಂದು ದೊಡ್ಡ ಆಪತ್ತಿನಂತೆ ಪರಿಣಮಿಸುತ್ತಿತ್ತು.

ವಾಮನನಿಗೆ ದೇವರಮೇಲೆ ಒಳ್ಳೆಯ ಶ್ರದ್ಧೆಯು ಇದ್ದಿತು. ಸರಿಯಾಗಿ ಅಭ್ಯಾಸಮಾಡದುದರಿಂದ ಪರೀಕ್ಷೆಯ ಭಯವು ಆತನಲ್ಲಿ ಹೊಕ್ಕಿಕೊಂಡಿರಲು ಆಸ್ಪದವಾಯಿತು. ಪರೀಕ್ಷೆಯಲ್ಲಿ ಉತ್ತೀರ್ಣನಾಗಲು ದೇವರನ್ನು ಪ್ರಾರ್ಥಿಸಿಕೊಳ್ಳುವುದೊಂದೇ ಉಳಿಯಿತು. ಮನಃಪೂರ್ವಕವಾಗಿ ಪ್ರಾರ್ಥಿಸಿದನು, ಎಷ್ಟೋ ಹರಿಕೆಗಳನ್ನು ಹೇಳಿಕೊಂಡನು. ತಾಯಿಯನ್ನು ಛಲಹಿಡಿದು ಸತ್ಯನಾರಾಯಣವ್ರತವನ್ನೂ ಮಾಡಿಸಿದನು.

ಪರೀಕ್ಷೆಗೆ ಹದಿನೈದೇ ದಿವಸಗಳು ಉಳಿದುವು. ವಾಮನನ ಲಕ್ಷ್ಯವು ಪಾಠದಕಡೆಗೆ ಹೋಗದೆ ದೇವರಪ್ರಾರ್ಥನೆಗಳೂ, ಹರಿಕೆಗಳೂ ಮತ್ತೂ ಮತ್ತೂ ಹೆಚ್ಚಿದುವು. ದಿನನಿತ್ಯವೂ ಸಾಯಂಕಾಲ ಊರಿನ ದೇವಾಲಯಗಳಿಗೆಲ್ಲ ಹೋಗಿ, "ಹೇ ರಾಮ, ಕೃಷ್ಣ, ಈಶ್ವರ, ಗಣಪತಿ! ನನ್ನನ್ನು ಪರೀಕ್ಷೆಯಲ್ಲಿ ಉತ್ತೀರ್ಣನನ್ನಾಗಿಮಾಡು"—ಮತ್ತು ದಿನಕ್ಕೆರಡಾವರ್ತಿ ತನ್ನ ಮನೆಯ ದೇವರ ಕೋಣೆಗೆ ಹೋಗಿ 'ಸ್ವಾಮಿಯೆ! ನನ್ನನ್ನು ಪರೀಕ್ಷೆಯಲ್ಲಿ ಉತ್ತೀರ್ಣನನ್ನಾಗಿಮಾಡು"—ಇದೇ ಪ್ರಾರ್ಥನೆಯನ್ನು ಭಕ್ತಿಯುಕ್ತನಾಗಿಯೂ ಶುದ್ಧಾಂತಃಕರಣನಾಗಿಯೂ ಮಾಡತೊಡಗಿದನು.

ವಾಮನನು ದೇವರ ಇದಿರು ನಿಂತು ತುಟಿಗಳನ್ನಲ್ಲಾಡಿಸುವುದನ್ನು ವಾಮನನ ಅಜ್ಜಿಯು ನೋಡಿ, ಏಗೆಂದು ಪ್ರಶ್ನೆಮಾಡಿದಳು:—ವಾಮನಾ, ಇವೇನಿದು, ಅಸ್ಪಷ್ಟವಾಗಿ ದೇವತಾಪ್ರಾರ್ಥನೆಯು?

ವಾಮನ:—ಅಜ್ಜಿ, ನಮ್ಮ ಪರೀಕ್ಷಾಕಾಲವು ಸವಿಾಪಿಸಿತು. ಪರೀಕ್ಷೆಯಲ್ಲಿ ಉತ್ತೀರ್ಣನಾಗಲು ಪ್ರಾರ್ಥನೆಮಾಡಿದೆನಲ್ಲದೆ ಬೇರೆಯಿಲ್ಲ.

ಅಜ್ಜಿಯು ಏನೂ ಮಾತನಾಡಲಿಲ್ಲ. ರಾತ್ರಿ ಊಟವಾದನಂತರ ವಾಮನನು ಓದತೊಡಗಿದನು. 5 ನಿಮಿಷಗಳಲ್ಲಿಯೆ ನಿದ್ರೆಯುಬಂದಿತು; ಪುಸ್ತಕಗಳನ್ನು ಮಡಚಿಟ್ಟನು. ಹತ್ತಿರವೇ ಕುಳಿತಿದ್ದ ಅಜ್ಜಿಯು, "ಏನೊ ವಾಮನಾ, ಅಭ್ಯಾಸ ಮುಗಿಯಿತೇನೊ?" ಎಂದು ಕೇಳಿದಳು.

ವಾಮನ:—ಹೌದು, ಅಜ್ಜಿ, ಸ್ವಲ್ಪ ಅಭ್ಯಾಸಮಾಡಿ ಮುಗಿಸಿದೆನು.

ಅಜ್ಜಿ:—ಪರೀಕ್ಷೆಯು ಹತ್ತಿರ ಬಂದಿತಲ್ಲವೆ?

ವಾಮನ:—ಹೌದು, ಏನಾಯಿತು? ನಾಳೆ ಅಭ್ಯಾಸಮಾಡುವೆನು.

ಅಜ್ಜಿ:—ವಾಮನ, ನಿನಗೊಂದು ಕಥೆಯನ್ನು ಹೇಳಲೆ?

ವಾಮನ.—ಹೇಳು ಹೇಳು, ಅಜ್ಜಿ, ಬೇಗನೆ ಹೇಳು.

ವಾಮನನ ನಿದ್ದೆಯು ಪಲಾಯನವಾಯಿತು; ಹಾಸಿಗೆಯಿಂದೆದ್ದು ಕುಳಿತನು. ಅಜ್ಜಿಯು ಕ ಯನ್ನು ಹೇಳತೊಡಗಿದಳು:—

"ಪೂರ್ವದಲ್ಲಿ ಒಂದು ಹಳ್ಳಿಯಲ್ಲಿ ತಪೋದತ್ತನೆಂಬ ಒಬ್ಬ ಬ್ರಾಹ್ಮಣನಿದ್ದನು. ಆತನ ಚಿಕ್ಕಂದಿನಿಂದ ವಿದ್ಯಾಭ್ಯಾಸಕ್ಕೆ ಏನೂ ಮನಸ್ಸುಕೊಡಲಿಲ್ಲ. ತಂದೆಯು ಎಷ್ಟು ಬುದ್ಧಿ ನಾದವನ್ನು ಹೇ ದರೂ ಕಿವಿಗೊಡದೆ, ಪುಸ್ತಕವನ್ನು ಕೈಯಲ್ಲಿ ಕೊಟ್ಟರೂ ಬಿಸಾಟು ಹೊರಟುಹೋಗುತ್ತಿದ್ದನು. ತಪೋ ದತ್ತನು ಪ್ರಾಯಭರಿತನಾದನು. ವೆಬ್ಬಗಳನೂ ವಿದ್ಯಾವಿಹೀನನೂ ಆದುದರಿಂದ, ಎಲ್ಲಿಯೂ ಅವನನ್ನ ವಿಚಾರಿಸುವುದಾಗಲೀ, ಸತ್ಕರಿಸುವುದಾಗಲೀ ಇಲ್ಲದೆ ಎಲ್ಲರೂ ತಿರಸ್ಕರಿಸಿದರು. ಉದರಪೋಷಣೆಯನ್ನ ದರೂ ಮಾಡಿಕೊಳ್ಳಲು ದುಸ್ತರವಾಯಿತು. ಪಶ್ಚಾತ್ತಾಪಪಟ್ಟನು; ರೋದಿಸಿದನು. ಉಪಯೋಗವೇನು? ವಿದ್ಯೆಯು ಬರುವುದೆ? ನಂತರ ಆತನು ಒಂದು ನದಿಯ ತೀರದಲ್ಲಿ ವಿದ್ಯಾಪ್ರಾಪ್ತಿಗಾಗಿ ದೇವರನ್ನ ಕುರಿತು ತಪವನ್ನುಮಾಡಲು ಕುಳಿತನು. ನದಿಯ ನೀರನ್ನುಮಾತ್ರ ಕುಡಿದು ತಪವನ್ನು ಮಾಡುತ್ತಿರು ಈತನ ಹೇತುವನ್ನು ಇಂದ್ರನು ತಿಳಿದು, ಬಡ ಬ್ರಾಹ್ಮಣನಾಗಿ ಆತನಿದ್ದೆಡೆಗೆ ಬಂದು, ಆತನು ಕೂತಲ್ಲಿಂ ಸ್ವಲ್ಪ ದೂರ ನಿಂತು, ತಪೋದತ್ತನು ನೋಡುತ್ತಿರುವಾಗಲೆಲ್ಲ ನದಿಯ ದಡದಿಂದ ಒಂದೊಂದು ಮಣ್ಣಿ ಮಳಲನ್ನು ನದಿಯಲ್ಲಿ ಬಿಸಾಡಲಾರಂಭಿಸಿದನು.

ತಪೋದತ್ತ:—(ಇದನ್ನು ನೋಡಿ) ಹೇ ಬ್ರಾಹ್ಮಣ! ಇವೇನುಮಾಡುತ್ತಿರುವೆ?

ಬ್ರಾಹ್ಮಣ:—ಜನ ಜಾನುವಾರುಗಳು ನದಿಯನ್ನು ಹಾದುಹೋಗಲು ಹೊಗೆಯ ಸೇತುವೆಯನ್ನ ಕಟ್ಟುತ್ತೇನೆ.

ತಪೋದತ್ತ:—(ನಕ್ಕು) ಎಲೊ ಮೂರ್ಖ! ನದಿಯಲ್ಲಿ ಹೊಗೆಯ ಸೇತುವೆಯನ್ನು ಕಟ್ಟಲೆ ದೀತೆ? ಹೊಗೆಯೆಲ್ಲವೂ ನೀರಿನೊಂದಿಗೆ ಬಳೆದುಹೋಗುತ್ತಿರುವುದನ್ನು ನೀನು ಕಾಣಲಾರೆಯಾ?

ಬ್ರಾಹ್ಮಣ:—ಮಹಾಶಯ! ತಾವು ಇಷ್ಟು ವಿಚಾರಶೀಲರಾಗಿದ್ದರೆ, ಮೂರ್ಖರಂತೆ, ಅಭ್ಯಾಸವ ಮಾಡದೆನೇ ವಿದ್ಯೆಯು ತನ್ನಂದ ತಾನೆ ಸಂಘಟಿಸಲು ಈ ಪ್ರಯತ್ನಕ್ಕೆ ಕೈಹಾಕುತ್ತಿದ್ದಿರೆ? ಗುರುಗ

ಅಭ್ಯಾಸವೂ ಇಲ್ಲದೆ ಬರೇ ತಪದಿಂದ ಮತ್ತು ದೇವರ ಪ್ರಾರ್ಥನೆಯಿಂದ ವಿದ್ಯೆಯು ಲಭಿಸುವುದೆ? ಮಳಲಿನಿಂದ ಸೇತುವೆಯನ್ನು ಕಟ್ಟುವುದು, ಆಕಾಶಕ್ಕೆ ಬಣ್ಣಕೊಡುವುದು, ಅಕ್ಷರಗಳ ವಿನಾ ಶಬ್ದಗಳನ್ನು ಬರೆಯುವುದು,—ಇವೆಲ್ಲ ಹೇಗೆ ಅಶಕ್ಯವೊ ಹಾಗೆಯೇ ಗುರುಪದೇಶವಿಲ್ಲದೆಯೂ ಅಭ್ಯಾಸಮಾಡದೆಯೂ ಬರೇ ದೇವತಾ ಪ್ರಾರ್ಥನೆಯಿಂದ ವಿದ್ವಾಂಸನಾಗುವುದೂ ಅಶಕ್ಯವು.

ತಪೋದತ್ತನು ಇದನ್ನು ಕೇಳುತ್ತಲೇ 'ವೃಥಾ ಬಂಡೆಕಲ್ಲಿನಮೇಲೆ ನೀರು ಹೊಯ್ಯುತ್ತಿದ್ದೆನಲ್ಲ' ಎಂದು ಪಶ್ಚಾತ್ತಾಪಪಟ್ಟು ಕೂಡಲೇ ತಪವನ್ನು ಬಿಟ್ಟು ಮನೆಗೆ ಹಿಂತಿರುಗಿ ತಾನು ಪ್ರಾಯಭಗಿತನೆಂದೆಣಿಸದೆ ಶ್ರಮಪ್ರಯತ್ನಗಳಿಂದ ವಿದ್ಯಾವ್ಯಾಸಂಗವನ್ನುಮಾಡಿ ಪಂಡಿತನಾದನು."

ಅಜ್ಜ:—(ಕಥೆಯನ್ನು ಮುಗಿಸಿ) ವಾಮನಾ! ಕಥೆಯೇನೊ ಮುಗಿಯಿತು. ಇದರಿಂದ ನಿನಗೇನು ಬುದ್ಧಿವಾದವು ಲಭಿಸಿತು? ಹೇಳು.

ವಾಮನ:—(ಮಾತನಾಡಲಿಲ್ಲ.)

ಅಜ್ಜ:—ವಾಮನ! ಏಕೆ ಮೌನವಾಗಿರುವೆ? ಅಭ್ಯಾಸವನ್ನು ಮಾಡದೆ ಬರೇ ದೇವತಾ ಪ್ರಾರ್ಥನೆಯಿಂದ ಪರೀಕ್ಷೆಯಲ್ಲಿ ಉತ್ತೀರ್ಣನಾಗುವುದು ನಿಜವೆ?

ವಾಮನ:—ಅಜ್ಜ, ದೇವತಾ ಪ್ರಾರ್ಥನೆಯಿಂದ ಕೆಟ್ಟದ್ದೇನಿದೆ?

ಅಜ್ಜ:—ಕೆಟ್ಟದ್ದೇನಿಲ್ಲ. ಈಶ್ವರನ ಪ್ರಾರ್ಥನೆಯನ್ನು ಮಾಡಬೇಕೆಂಬುದೇನೊ ನಿಜ. ಆದರೆ ಪ್ರಥಮತಾ ತಾನು ಮಾಡಶಕ್ಯ ಕರ್ತವ್ಯವನ್ನು ಮನಃಪೂರ್ವಕವಾಗಿ ಮಾಡಿಯೇ ತೀರಬೇಕಲ್ಲದೆ ಕರ್ತವ್ಯವನ್ನು ಬಿಟ್ಟು ಮಾಡಿದ ಪ್ರಾರ್ಥನೆಗೆ ದೇವರು ಎಂದೂ ಒಲಿಯಲಾರನು. ಯಾವಾತನು ಉದ್ಯೋಗವನ್ನು ಮಾಡುತ್ತಾನೋ ಆತನಿಗೆ ಪರಮೇಶ್ವರನು ಬೆಂಬಲನಾಗಿರುವನೆಂದು ತಿಳಿ.

ವಾಮನನ ಮನಸ್ಸಿಗೆ ಈ ಉಪದೇಶವು ಚೆನ್ನಾಗಿ ನಾಟಿತು. ಅಂದಿನಿಂದ ಆತನು ಮನಃಪೂರ್ವಕವಾಗಿ ವಿದ್ಯಾಭ್ಯಾಸವನ್ನು ಮಾಡಲಾರಂಭಿಸಿದನು.

— ಬಾಲಕ.

ಸ್ವೀಕಾರ

ಮಲೆನಾಡನ್ನು ಎಲ್ಲಾ ವಿಧಗಳಿಂದಲೂ ಅಭಿವೃದ್ಧಿಪಡಿಸಬೇಕೆಂಬ ಚರಮೋದ್ದೇಶವುಳ್ಳ 'ಮಲೆನಾಡು ಸಮಾಚಾರ'ವೆಂಬ ಈ ಮಾಸಪತ್ರಿಕೆಯು ಕೇವಲ ಗ್ರಾಹ್ಯವಾದುದು.

ವಾರ್ಷಿಕ ಚಂದಾ—ಸ್ಥಳದವರಿಗೆ 0—12—0 ಪರಸ್ಥಳದವರಿಗೆ 1—0—0

ಶಿವಮೊಗ್ಗಾದಲ್ಲಿರುವ ಯೂನಿಯನ್ ಪ್ರಿಂಟಿಂಗ್ ವರ್ಕ್ಸ್ ಎಂಬುದರ ಮೇನೇಜರರಾದ ಮೆ. ಪಿ. ಸಿಂಗಪ್ಪಯ್ಯನವರಿಂದ ಮುದ್ರಣವನ್ನು ಹೊಂದಿ, ಪ್ರಕಾಶಿಸಲ್ಪಟ್ಟಿದ್ದು.

'ಕರ್ನಾಟಕ ಕೊಲೇಜು ಮಿಸ್ಸಲಿನಿ' ಎಂಬ ಇಂಗ್ಲಿಷು-ಕನ್ನಡ ಉತ್ತಮ ಪತ್ರಿಕೆಯ ಪ್ರಥಮ ಸಂಚಿಕೆಯನ್ನು ಪ್ರೀತಿಪೂರ್ವಕವಾಗಿ ಕಳುಹಿಸಿದುದಕ್ಕೆ ನಮ್ಮ ಅನೇಕಾನೇಕ ಧನ್ಯವಾದಗಳನ್ನು ಮಾನ್ಯ ಸಂಪಾದಕರಾದ ಶ್ರೀಯುತ ಎ. ಬಿ. ಗಜೇಂದ್ರ ಗದಗಕಾರರಿಗೆ ಸಮರ್ಪಿಸುವೆವು. ಪತ್ರಿಕೆಯು ಗುಣಾನುವಾದವನ್ನು ಸ್ವಲ್ಪ ವಿಳಂಬದಿಂದ ಜನವರಿ ಮಾಹೆಯ ಬೋಧಿನಿಯಲ್ಲಿ ಪ್ರಚುರ ಪಡಿಸುವೆವು.

'ಆಲ್ ಇಂಡಿಯಾ ಅಡ್‌ವರ್‌ಟೈಜರ್' ಎಂಬ ಅಭಿದಾನದಿಂದ ಶೋಭಿಸುವ ಈ ಪಕ್ಷಪತ್ರಿಕೆಯ ಪ್ರಥಮ ಸಂಪುಟದ ಪ್ರಥಮ ಸಂಚಿಕೆಯು ನಮ್ಮಕೈಸೇರಿತು. ಇದರೊಳಗಣ ಲೇಖನಗಳು ಎಲ್ಲಾ ವಿಧ ವಾಚಕರ ಅವಗಾಹನೆಗೆ ಸಮಂಜಸವಾಗುವ ಹಾಗೆ ಸುಲಭ ಶೈಲಿಯಿಂದಲೇ ಬರೆದಂಥವುಗಳಾಗಿ ಮಾನವರ ಸಂಸಾರಿಕ ಜೀವನ ನಿರ್ವಹಣೆಗೆ ಅನುಕೂಲವಾದ ಲೇಖಗಳೂ, ವಾಚಕರಿಗೆ ಜಿಗು ಯುಂಟಾಗದಂತೆ ನೀತಿಬೋಧಕವಾದ ಸಣ್ಣಸಣ್ಣ ಕಥೆಗಳೂ, ಹಾಸ್ಯರಸಯುಕ್ತವಾದ ಸಂದರ್ಭಗಳು ಉಪಯುಕ್ತವಾದ ವಿಷಯಗಳೂ, ಈ ಪ್ರಥಮ ಸಂಚಿಕೆಯಲ್ಲಿವೆ. ಪತ್ರಿಕೆಯ ವಾರ್ಷಿಕ ವರ್ಗಣೆಯ ದೊಡ್ಡವರಿಗೂ ಬಡವರಿಗೂ ಅನುಕೂಲವಾಗಿಯೇ ಇರುತ್ತದೆ. ಎಲ್ಲರೂ ಇದನ್ನು ತರಿಸಿನೋಡಿರಿ.

ಚಂದಾಹಣ. 1—8—0

ವಿಳಾಸ:— ಮೆನೇಜರ್,

"ಆಲ್ ಇಂಡಿಯಾ ಅಡ್‌ವರ್‌ಟೈಜರ್'

ಬೆಂಗಳೂರು ಸಿಟಿ.

ಗಣಪತಿ ಸೆಕೆಂಡರಿ ಶಾಲೆಯ ವಿದ್ಯಾರ್ಥಿಗಳ ಸ್ಟೇಶನರಿ ಸಂಘದ ಪ್ರಥಮ ವರ್ಷದ ವರದಿಯು ನಮ್ಮ ಕೈಸೇರಿಯಿದೆ. ಒಂದು ಶಾಲೆಯ ವಿದ್ಯಾರ್ಥಿಗಳೊಳಗೆ ಮಿತವ್ಯಯದ ಚಾಳಿಯನ್ನು ವೃದ್ಧಿಪಡಿಸುವ ಸೂಕ್ರಮವು ಶ್ಲಾಘನೀಯವಾದುದು. ಪರಸ್ಪರ ಸಹಾಯವು ಈ ಸಂಘದ ಬುನಾದಿಯಾಗಿರುತ್ತದೆ. ವಿದ್ಯಾರ್ಥಿಗಳಿಗೆ ಅತ್ಯಲ್ಪ ಕ್ರಯದಿಂದ ಅವರಿಗೆ ಬೋಧನಾಕಾರ್ಯಕ್ಕೆ ಬೇಕಾಗುವ ಸಾಮಾನುಗಳನ್ನೆಲ್ಲ ಒದಗಿಕೊಡುವಷ್ಟು ಬಡಹೆತ್ತವರಿಗೆ ಈ ಶಾಲೆಯ ಮೇಸ್ಟರರು ಮಾಡುವ ಉಪಕಾರವು ಮಹತ್ತರವಾದುದು ಸರಿ. ಈ ಆದರ್ಶವನ್ನು ಇತರ ಶಾಲೆಗಳು ಏಕೆ ಅನುಸರಿಸಲು ಬಾರದು? ಸಂಘದ ವ್ಯವಸ್ಥೆಗೆ ಮಾರುವ ಕ್ರಮಗಳು ಚೆನ್ನಾಗಿವೆ. ಸಂಘವು ಚಿರಕಾಲಪರ್ಯಂತ ಬಾಳಲಿ.

ಮೇಹಸಮ್ಮಂಧವಾದ ಮೂತ್ರಘಾಟಾಶ್ಮರಿ ಉರಿ ಮೂತ್ರಗಳನ್ನು 24 ಘಂಟೆಯಲ್ಲಿಯೇ ನಿಲ್ಲಿಸುವ ಪ್ರಸಿದ್ಧವಾದ

ವಸ್ತ್ಯಾನುಯಾಂತಕ ವಟಿಕಾ.

ಇದರ ಸೇವನೆಯಿಂದ 20 ತರದ ಮೇಹಗಳು ಕೂಡಲೇ ನಿಲ್ಲುವದು. ಅಶ್ಮರಿಯೆಂಬ ಕ ಸಹಾ ಇದ್ದಲ್ಲಿ ಕೂಡಲೆ ಮೂತ್ರದೊಂದಿಗೆ ಬೀಳುವದು. 12 ಮಾತ್ರೆಗಳಿರುವ ಡಬ್ಬಿ 1ರ ಕ್ರ ರೂಪಾ 1—4—0. 12 ಡಬ್ಬಿ ಕೊಳ್ಳುವವರಿಗೆ 13—12—0. ವಿ. ಪಿ. ಚಾರ್ಜು ಬ

ನಮ್ಮಲ್ಲಿ ಇನ್ನೂ ಅನೇಕ ಸಿದ್ಧೌಷಧಗಳು ದೊರೆಯುತ್ತವೆ. ಅಪೇಕ್ಷಕರು ಅರ್ಧಾಣೆ ಸ್ಟಾ ಇಟ್ಟು ನಮಗೆ ಪತ್ರವನ್ನು ಬರೆದರೆ ಕೆಟಲಾಗನ್ನು ಕಳುಹಿಸುವೆವು.

ನಮ್ಮ ವಿಳಾಸ:— ವೈದ್ಯ ಬಿ. ವಿಠಲ ಭಟ್ಟ,

ಆಯುರ್ವೇದ ವೈದ್ಯಮಂದಿರ, ಉಡುಪಿ

ಮೇಲಾದ ನಿರಾಶಾರೂಪವಾದ ಕಠಿಣ ವಜ್ರಾಘಾತದ ವೇತನೆಯನ್ನೂ ಸಹಿಸುವಷ್ಟು ಕಠಿಣವಾಗಿ ಆ ಅಬಲೆಯ ಅಂತಃಕರಣವು ಹೇಗಿರಬೇಕು? ಆದರೆ ಅಬಲೆಯಾದರೂ ಬಾಲ್ಯದಿಂದ ತಪಸ್ವಿಯ ತಪೋವನ ದಲ್ಲಿ ಬೆಳೆದಂಥವಳು. ತಪಸ್ವಿಯ ಉದಾತ್ತವಾದ ಚಾರಿತ್ರ್ಯದ ಮಾದರಿಯು ಯಾವಾಗಲೂ ಅವಳ ಕಣ್ಣಮುಂದೆ ತಟ್ಟಿರುತ್ತಿತ್ತು. ಆಕೆಯ ಮನಸ್ಸು ಕ್ಷಣಮಾತ್ರ ವಿಕಾರವಶವಾಯಿತು. ಆದರೆ ಆಕೆಯ ಮನಸ್ಸಿನಮೇಲಾದ ದೃಢಸಂಸ್ಕಾರವು ತನ್ನ ಗುಣವನ್ನು ಹೇಗೆ ಬಿಟ್ಟೀತು? ಆಕೆಯು ಮನಸ್ಸನ್ನು ಗಟ್ಟಿ ಮಾಡಿದಳು, ಪದರಿನಿಂದ ಕಣ್ಣೀರನೊರಸಿಕೊಂಡಳು; ಮತ್ತು ದುಃಖದಿಂದ ಭಗ್ನವಾದ ತನ್ನ ಶರೀರವನ್ನು ಆಶ್ವಸಿತವಾಗಿಮಾಡಿ ಸುದರ್ಶನನನ್ನು ಮರೆತುಬಿಡಬೇಕೆಂದು ನಿಶ್ಚಯಿಸಿ ತನ್ನ ನಿತ್ಯಕೃತ್ಯಕ್ಕೆ ತೊಡಗಿದಳು.

೪ನೆಯ ಪ್ರಕರಣ

ವಿವಾಹ

ಪ್ರಿಯ ವಾಚಕರೇ, ಸುನಂದಿನಿಯ ಪ್ರೇಮಲಮಿತ್ರನಂತೂ ಆಕೆಯನ್ನಗಲಿದನು! ಅವಳಾದರೂ ತನ್ನ ಪ್ರಿಯ ಮಿತ್ರನನ್ನು ಮರೆತುಬಿಡುವ ನಿಶ್ಚಯಮಾಡಿದಳು! ಇನ್ನುಮೇಲೆ ನಾವಾದರೂ ಕೆಲಹೊತ್ತು ಸುನಂದಿನಿಯನ್ನು ಮರೆತುಬಿಡೋಣ. ಆಕೆಯು ತನ್ನ ನಿತ್ಯ ವ್ಯವಸಾಯಗಳಲ್ಲಿ ತೊಡಗಿರುವಾಗ ಇನ್ನೊಂದು ಕಡೆಗೆ ಏನು ನಡೆದಿತ್ತು? ಅದರಿಂದ ಸುನಂದಿನಿಯ ಸ್ಥಿತಿಯಲ್ಲಿ ಯಾವ ತರದ ಉತ್ಕ್ರಾಂತಿಯು ಸಂಭವಿಸಿತು? ಎಂಬುದನ್ನು ನೋಡುವುದಕ್ಕಾಗಿ ಬೇರೊಂದುಕಡೆಗೆ ಹೋಗೋಣ ನಡೆಯಿರಿ.

ರಾಜರ ದುಃಖವು ರಾಜರಿಗೇ ಗೊತ್ತೆಂಬಮಾತು ಸುಳ್ಳಲ್ಲ. ಇತರ ಸಾಮಾನ್ಯ ಮನುಷ್ಯರಿಗೆ ತಮ್ಮ ತಮ್ಮ ಕುಟುಂಬದ ಚಿಂತೆಯಿರುತ್ತದೆ; ಆದರೆ ಸಾಮ್ರಾಜ್ಯವನ್ನಾಳುವ ನರಪಾಲಕರು ಲಕ್ಷಾವಧಿ ಕುಟುಂಬಗಳ ಸಂಸಾರದ ಚಿಂತೆಯನ್ನು ವಹಿಸಬೇಕಾಗುತ್ತದೆ ಆದುದರಿಂದ 'ರಾಜ್ಯಾಭಿಷೇಕದಲ್ಲಿ ಅರಸರ ತಲೆಯಮೇಲೆ ಬೀಳುವ ಅಭಿಷೇಕದ ಧಾರೆಯು ಜಲಬಿಂದುವಿನದಾಗಿರದೆ, ಒಂದರಹಿಂದೊಂದು ಬರುವ ಘಾವೀಸಂಕಟಗಳ ದ್ಯೋತಕವಾಗಿರುತ್ತದೆ' ಎಂದು ಒಬ್ಬ ಕವಿಯು ಅನ್ನುತ್ತಾನೆ. ಈ ಕವಿಯ ಉಕ್ತಿಯು ಬೇರೆ ಅರಸರ ವಿಷಯವಾಗಿ ಹೇಗೇ ಇರಲಿ—ಅಕಬರ ಬಾದಶಹನ ಸಂಬಂಧದಿಂದ ಮಾತ್ರ ಅಕ್ಷರತಃ ನಿಜವಾಗಿತ್ತು. ಅವನು ತನ್ನ ಆಡಳಿತದ ಆರಂಭದಲ್ಲಿಯೇ ಅನೇಕ ದಾಳಿಗಾರರ ಸಮಾಚಾರವನ್ನು ಕೇಳಬೇಕಾಯಿತು. ಎಷ್ಟೋ ಮಹಾ ಪ್ರತಾಪಿಗಳಾದ ರಜಪೂತರಾಜರು ಅವನ ಬದ್ಧವೈರಿ ಗಳಾಗಿದ್ದರು; ಅವರನ್ನು ತನ್ನ ಅಂಕಿತದಲ್ಲಿ ತರುವುದಕ್ಕಾಗಿ ಅವನು ದಕ್ಷನಾಗಿರಬೇಕಾಗಿತ್ತು. ಈ ರಜಪೂತರಾಜರಲ್ಲಿ ರಾಜವುತ್ರಕುಲತಿಲಕನಾದ ಮಹಾರಾಣಾ ಪ್ರತಾಪಸಿಂಹನು ಅಗ್ರಗಣ್ಯನಾಗಿದ್ದನು. ಇವನು ನಿಲ್ಲಿಸಿದಂಥ ಸ್ವಾಭಿಮಾನ ಹಾಗು ಸ್ವದೇಶಾಭಿಮಾನಗಳ ಪತಾಕೆಯ ಬುಡದಲ್ಲಿ ಎಷ್ಟೋ ರಜಪೂತ ರಾಜರೂ ಸರದಾರರೂ ಒಟ್ಟುಗೂಡಿದ್ದರು. ಅಭಿಮಾನಿಯಾದ ಪ್ರತಾಪಸಿಂಹನು ಮುಸಲ್ಮಾನರ ಮಾಂಡಲಿಕತ್ವವನ್ನು ಒಪ್ಪಿಕೊಳ್ಳಲು ಮನಸ್ಸುಳ್ಳವನಿರಲಿಲ್ಲ. ಇಂಥವನನ್ನು ಹಾದಿಗೆ ತರಬೇಕಾದರೆ ಮೊದಲು ಇವನಿಗೆ ಸಹಾಯಮಾಡುವಂಥ ಸಣ್ಣಸಣ್ಣ ರಜಪೂತ ಸರದಾರರನ್ನು ಹಣ್ಣಿಗೆ ತರಬೇಕೆಂಬ ವಿಚಾರದಿಂದ ಅಕಬರನು ಶಕ್ತಿಗಡದ ರಾಣಾನಮೇಲೆ ಸೈನ್ಯವನ್ನು ಕಳಿಸಿದ್ದನು. ಏಕೆಂದರೆ—ಅಕಬರನು ಚಿತ್ತೂರ

ಮೇಲೆ ತನ್ನ ಸೈನ್ಯವನ್ನು ಕಳುಹಿಸಲು ಶಕ್ತಿಗಡದ ರಾಣಾನು ತನ್ನ ರಾಜ್ಯದೊಳಗಿಂದ ಆ ಸೈನ್ಯಕ್ಕೆ ದಾರಿಯನ್ನು ಕೊಡಲಿಲ್ಲ. ಬಾದಶಹನ ಅಪಮಾನಕ್ಕೆ ಇವಕ್ಕೂ ಹೆಚ್ಚಿನದೇನಾಗಬೇಕು? ಆದುದರಿಂದ ಕೂಡಲೇ ೪೦ ಸಾವಿರ ಸೈನ್ಯವನ್ನು ರಾಜಾ ಮಾನಸಿಂಹನ ಕೈಕೆಳಗೆಕೊಟ್ಟು ಶಕ್ತಿಗಡದಮೇಲೆ ಕಳಿಸಿದನು. ಈ ಸೈನ್ಯವು ಒಂದೇ ಸವನೆ ಎರಡು ತಿಂಗಳುಗಳ ವರೆಗೆ ಶಕ್ತಿಗಡವನ್ನು ಬಲವಾಗಿ ಮುತ್ತಿತ್ತು. ಆದುದರಿಂದ ಪ್ರಜೆಗಳ ವ್ಯವಹಾರವು ಕಟ್ಟಾಯಿತು. ಕಿಲ್ಲೆಯಮೇಲಂತೂ ಒಂದೇಸವನೆ ತೋಪಿನ ಮಳೆಯು ಸುರಿದಂತಾಗುತ್ತಿತ್ತು! ಪಾಪ! ರಾಣಾನು ಏನುಮಾಡಿಯಾನು? ನಿರುಪಾಯನಾಗಿ ಶರಣುಹೋಗಬೇಕಾಯಿತು. ಮೊಗಲರು ಅವನನ್ನು ಸೆರೆಹಿಡಿದರು. ಅನಸೊಡನೆ ಅವನ ಅಂತಃಪುರದೊಳಗಿನ ಸ್ತ್ರೀಯರೂ ಸೆರೆ ಹಿಡಿಯಲ್ಪಟ್ಟರು.

ಮಾನಸಿಂಹನು ದರಬಾರವನ್ನು ನೆರಸಿ ಸೆರೆಹಿಡಿಯಲ್ಪಟ್ಟ ಸ್ತ್ರೀಯರಲ್ಲಿ ಒಬ್ಬೊಬ್ಬಳನ್ನೇ ಕರೆದ ಅವರವರ ಅಪರಾಧದ ವಿಚಾರಣೆಯನ್ನು ಮಾಡಿ ಬಿಟ್ಟುಕೊಟ್ಟನು. ಕೊನೆಗೆ ಹದಿನಾರು ವರ್ಷದ ವಯಸ್ಸಿನ ರೂಪವತಿಯಾದ ತರುಣಿಯೊಬ್ಬಳು ಉಳಿದಳು! ಅವಳನ್ನು ಮಾನಸಿಂಹನು ತನ್ನ ಅಂತಃಪುರಕ್ಕೆ ಕಳಿಸಿಕೊಟ್ಟು ಆ ದಿವಸದ ದರಬಾರದ ಕೆಲಸವನ್ನು ಪೂರ್ಣಮಾಡಿದನು.

ಸಾಯಂಕಾಲದಲ್ಲಿ ಮಾನಸಿಂಹನು ಆಕೆಯ ಡೇರೆಯಲ್ಲಿಹೋಗಿ, ಆಕೆಯನ್ನು ಎದುರಿಗೆ ಕರೆಸಿ ಅವಳ ಲಾವಣ್ಯದ ಪ್ರಶಂಸೆಯನ್ನು ಮಾಡತೊಡಗಿದನು! ಮತ್ತು ಇಂಥ ಅಪ್ರತಿಮ ಲಾವಣ್ಯವು ಸಾವ ಭೌಮಬಾದಶಹನ ಉಪಭೋಗಕ್ಕೇ ಯೋಗ್ಯವಾದುದರಿಂದ, ನಾನು ನಿನ್ನನ್ನು ಬಾದಶಹನಕಡೆಗೆ ಕಳಿಸತಕ್ಕ ನಿದ್ದೇನೆ ಎಂದೂ ಸೂಚಿಸಿದನು. ಆಗ ಆ ಬಾಲಿಕೆಯು, ನಮ್ರತೆಯಿಂದ—"ಮಹಾರಾಜರೇ, ನೀವು ಗೋಬ್ರಾಹ್ಮಣ ಪ್ರತಿಪಾಲಕರಾದ ಹಿಂದೂಗಳು! ಕ್ಷತ್ರಿಯಕುಲದಲ್ಲಿ ಜನ್ಮತಾಳಿದವರು! ಅದರಲ್ಲಿಯೂ ರಜಪೂತ ವೀರಪುರುಷರು! ತಾವು ಇತರ ಸ್ತ್ರೀಯರನ್ನು ಬಂಧಮುಕ್ತಮಾಡಿದಾಗ ಪ್ರಕಟಿಸಿದ ಔದಾರ್ಯ ಭಾಗವು ಈ ಅಭಾಗಿನಿಗೆ ಏಕೆ ದೊರೆಯಬಾರದು? ನಾನು ಅಂಥ ಯಾವ ಅಪರಾಧವನ್ನು ಮಾಡಿದ್ದೇನೆ? ತಾವು ನ್ಯಾಯಕರ್ಮಚತುರರೂ, ಧರ್ಮಶೀಲರೂ, ವಿವೇಕಿಗಳೂ ಆಗಿರುವಿರೆಂದು ದೇಶದಲ್ಲಿ ಪ್ರಸಿದ್ಧಿಯುಂಟು. ಹೀಗಿದ್ದು, ಈ ಅಬಲೆಯ ವಿಷಯದಲ್ಲಿಮಾತ್ರ ಆ ಮಾತನ್ನು ಏಕೆ ಸುಳ್ಳುಗೊಳಿಸುವಿರಿ?

ಈ ಪ್ರಶ್ನೆಗಳಿಗೆ ಮಾನಸಿಂಹನು ಏನು ಉತ್ತರವನ್ನು ಕೊಡಬೇಕು? ನಿಜವಾಗಿ ಆ ಕುಮಾರಿಯ ಯಾವ ಅಪರಾಧವನ್ನೂ ಮಾಡಿದ್ದಿಲ್ಲ; ಮತ್ತು ಮಾನಸಿಂಹನಂಥ ವೀರಪುರುಷನು ನಿರಪರಾಧಿಯೂ ಬಾಲಿಕೆಯನ್ನು ಪೀಡಿಸುವುದೆಂದರೆ ಕ್ಷತ್ರಿಯಧರ್ಮದ ವಿರುದ್ಧಕಾರ್ಯವಲ್ಲವೇ? ಮಾನಸಿಂಹನಿಗೆ ತ ಕಾರ್ಯವನ್ನು ಸಮರ್ಥಿಸುವುದಾಗಲಿಲ್ಲ. ಅವನು ನಕ್ಕನು. ಪುನಃ ಗಂಭೀರಮುದ್ರೆಯಿಂದ ವಿಚ ಮಾಡಹತ್ತಿದನು. ತಲೆಯಮೇಲೆ ಕೈಯಾಡಿಸುತ್ತ ಉತ್ತರವನ್ನು ಶೋಧಿಸಹತ್ತಿದನು. ಆದರೆ ಏನೂ ತೋಚಲಿಲ್ಲನು. 'ಸಾಕು, ಸಾಕು. ನ್ಯಾಯಾನ್ಯಾಯವು ನನಗೆ ಗೊತ್ತಿಲ್ಲ' ಎಂದು ಸ್ಪಷ್ಟವಾಗಿ ಉತ್ತರ ಕೊಡುವುದೂ ಅವನಿಂದಾಗಲಿಲ್ಲ. ಇದು ಅವನ ಮನಸ್ಸಿನಮೇಲಾದ ಹಿಂದೂಧರ್ಮ ಸಂಸ್ಕಾರದ ಪ್ರಭಾವವೋ ಅಥವಾ ಆ ತರುಣಿಯ ಸತೀತ್ವದ ಪರಿಣಾಮವೋ ತಿಳಿಯದು! ಮಾನಸಿಂಹನು ನಿರುತ್ತರನಾಗಿ ಕುಳಿತುಕೊಂಡನು! ಇಷ್ಟರಲ್ಲಿ ಬಾದಶಹನ ಕಡೆಯಿಂದ ಒಬ್ಬ ಸೇವಕನು ಬಂದಿದ್ದಾನೆಂದು ಕಾವ

ಗಾರನು ತಿಳಿಸಿದನು. ನಾನು ಶಕ್ತಿಗಡವನ್ನು ಜಯಿಸಿದ ವರ್ತಮಾನವನ್ನು ಕೇಳಿ ಬಾದಶಹನು ಸಂತುಷ್ಟನಾಗಿ ನನಗೆ ಗೌರವಯುಕ್ತವಾದ ಪತ್ರವನ್ನು ಕಳಿಸಿರಬಹುದು; ಒಳ್ಳೇದು. ಏನಿರುವುದೋ ನೋಡುವಾ ಎಂದು ಉತ್ಸುಕತೆಯಿಂದ ಆ ಕುಮಾರಿಯ ವಿಷಯವನ್ನು ಇಷ್ಟಕ್ಕೇ ಬಿಟ್ಟು ತನ್ನ ದೇರೆಗೆ ಹೊರಟು ಹೋದನು.

ಮಾನಸಿಂಹನ ತರ್ಕವು ನಿಜವಾಗಿತ್ತು. ಬಾದಶಹನಕಡೆಯಿಂದ ಬಂದ ಪತ್ರದಲ್ಲಿ ನಿಜವಾಗಿ ಮಾನಸಿಂಹನ ಅಪೇಕ್ಷೆಯಂತೆಯೇ ಒಂದು ಸಂಗತಿಯು ಇತ್ತು. ಬಾದಶಹನು ಅವನ ಶೂರತನದ ಹಾಗು ರಾಜನಿಷ್ಠೆಯ ಪ್ರಶಂಸೆಯನ್ನುಮಾಡಿ ಸಮಶೇರಜಂಗ ಮತ್ತು ದೋಸ್ತ ಇಸತಲನತ (ಬಾದಶಹನ ನಿತ್ರ) ಎಂಬ ಬಿರುದುಗಳನ್ನು ಕೊಟ್ಟ ಸಂಗತಿಯನ್ನೂ ಇನ್ನೂ ಅನೇಕ ಪಾರಿತೋಷಕಗಳನ್ನು ಕೊಡುವ ತನ್ನ ಉದ್ದೇಶವನ್ನೂ ಆ ಪತ್ರದ್ವಾರದಿಂದ ತಿಳಿಸಿದ್ದನು. ಆ ಪತ್ರವನ್ನೋದಿ ಮಾನಸಿಂಹನಿಗೆ ಬಹಳೇ ಸಂತೋಷವಾಯಿತು. ಮೊದಲೇ ಅಕಬರ ಬಾದಶಹನು ಸಕ್ಕರೆಯಂಥ ಸವಿಸವಿ ಮಾತುಗಳನ್ನಾಡಿ ಎರಡನೆಯವರಿಂದ ಕೆಲಸಮಾಡಿಸಿಕೊಳ್ಳುವುದರಲ್ಲಿ ಚತುರನು; ಅದರಲ್ಲಿಯೂ ಅವನಿಗೆ ಕರತಲಾಮಲಕವಾಗಿ ಸಹಾಯವಾಡುವಂಥ ಮತ್ತು ಕೇಳುವವರ ಮನಸ್ಸನ್ನು ಪ್ರಸನ್ನೀಕರಿಸುವಂಥ ಉರ್ದುಭಾಷೆಯು. ಅಂದಮೇಲೆ ಕೇಳುವುದೇನು? ಕಲ್ಲುಸಕ್ಕರೆಯ ಹರಳಿನಂತಿರುವ ಆ ಪತ್ರದೊಳಗಿನ ಪ್ರತಿಯೊಂದು ಶಬ್ದವು ಮಾನಸಿಂಹನ ಮನಸ್ಸಿಗೆ ಅಮೃತಬಿಂದುವಿನಂತೆ ಸುಖಕರವಾದುದರಲ್ಲಿ ಆಶ್ಚರ್ಯವೇನು?

ಪತ್ರವನ್ನೋದಿದನಂತರ ಮಾನಸಿಂಹನು ಪ್ರಸನ್ನಚಿತ್ತದಿಂದ ಆ ಸೇವಕನಿಗೆ ನಿರೋಪಕೊಟ್ಟನು. ಮತ್ತು ತಾನು ಒಂದೆರಡು ಗಳಿಗೆಗಳವರೆಗೆ ವಿಶ್ರಾಂತಿತೆಗೆದುಕೊಳ್ಳುವುದಕ್ಕಾಗಿ 'ವಿಶ್ರಾಮ ಭವನ'ವೆಂಬ ಹೆಸರಿನ ತನ್ನ ಡೇರೆಯಲ್ಲಿ ಹೋಗಿ ಗುಡುಗುಡಿಯನ್ನು ತೆಗೆದುಕೊಂಡು ಸುಗಂಧೀ ತಂಬಾಕಿನ ಧೂಮ್ರವನ್ನು ಮೇಲಿಂದಮೇಲೆ ಪಾನಮಾಡುತ್ತಲೂ ಭಾವೀಐಶ್ವರ್ಯದ ಸುಖಸ್ವಪ್ನಗಳನ್ನು ಅನುಭವಿಸುತ್ತಲೂ ಬಿದ್ದುಕೊಂಡನು. ಕೆಲ ಹೊತ್ತಿನಮೇಲೆ ದ್ವಾರಪಾಲಕನು ಬಂದು 'ಯಾವನೋ ಒಬ್ಬ ತಪಸ್ವಿಯು ತಮ್ಮ ದರ್ಶನಾರ್ಥಿಯಾಗಿ ಬಂದಿರುವನು' ಎಂದು ತಿಳಿಸಿದನು.

ಮಾನಸಿಂಹನು ಧಾರ್ಮಿಕವೃತ್ತಿಯ ಮನುಷ್ಯನಿದ್ದನು. ಹಿಂದೂಧರ್ಮದ ಪುರಾಣ ಗ್ರಂಥಗಳನ್ನು ಅವನು ಚೆನ್ನಾಗಿ ಓದಿದ್ದನು. ಮತ್ತು ತಪಸ್ವಿ, ಸಾಧು, ಸಂತ ವೆಂದಲಾದವರಮೇಲೆ ಅವನ ಶ್ರದ್ಧೆಯು ಬಹಳವಿತ್ತು. ತಪಸ್ವಿಯು ಭೆಟ್ಟಿಯಾಗುವ ಇಚ್ಛೆಯಿಂದ ಬಂದಿದ್ದಾನೆಂಬುದನ್ನು ಕೇಳಿದ ಕೂಡಲೇ ಅವನು ಎದ್ದನು; ಮತ್ತು ಅತನಿಗೆ ಸ್ವಾಗತವಾಡುವುದಕ್ಕಾಗಿ ಡೇರೆಯ ಬಾಗಿಲ ವರೆಗೆ ಹೋದನು. ಯಾವನಾದರೊಬ್ಬ ಸನ್ಯಾಸಿಯಾಗಲಿ, ಬೈರಾಗಿಯಾಗಲಿ, ಸಾಧುಪುರುಷನಾಗಲಿ ಧರ್ಮಕಾರ್ಯಕ್ಕಾಗಿ ಪ್ರಾರ್ಥನೆಗೆ ಬಂದಿರಬಹುದೆಂದು ಅವನು ತಿಳಿದಿದ್ದನು. ಇಂಥ ಧರ್ಮಕೃತ್ಯಕ್ಕೆ ಉದಾರತನದಿಂದ ಸಹಾಯವಾಡುವ ಅವನ ಮನಸ್ಸಿನ ಪ್ರವೃತ್ತಿಗೆ ಈ ವೇಳೆಯ ಅವನ ಆನಂದಿತ ಮಾನಸಿಕಸ್ಥಿತಿಯು ಉತ್ತೇಜನಕೊಟ್ಟುದರಿಂದ ಅವನು ತಪಸ್ವಿಯ ದರ್ಶನ ತೆಗೆದುಕೊಳ್ಳಲಿಕ್ಕೆ ಕಿಂಚಿತ್ತಾದರೂ ವಿಲಂಬ ಮಾಡಲಿಲ್ಲ.

ಮಾನಸಿಂಹನು ಬಾಗಿಲವರೆಗೆ ಹೋದ ಕೂಡಲೇ ಭವ್ಯವಾದ ತೇಜಃಪುಂಜವೂ ವಿಭೂತಿಮಂಡಿತವೂ ಜಟಾಧಾರಿಯೂ ಆದ ಮೂರ್ತಿಯೊಂದು ಅವನ ಸನ್ಮುಖದಲ್ಲಿ ಬಂದು ನಿಂತಿತು. ಕೂಡಲೇ ಮಾನ

ಸಿಂಹನು ಅವನಿಗೆ ಶಿರಸಾಷ್ಟಾಂಗ ನಮಸ್ಕಾರವನ್ನು ಮಾಡಿದನು. ತಪಸ್ವಿಯು ಯೋಗ್ಯವಾದ ಆಶೀರ್ವಾದ
ವನ್ನು ಮಾಡಿದ ಕೂಡಲೇ ಮಾನಸಿಂಹನು ಅವನಿಗೆ ಕೂಡ್ರಲಿಕ್ಕೆ ಉಚಿತಾಸನವನ್ನಿತ್ತು 'ಏನು ಆಜ್ಞೆಯದೆ,
ಎಂದು ಕೈಜೋಡಿಸಿ ನಮ್ರತೆಯಿಂದ ವಿಚಾರಿಸಿದನು. ಅದಕ್ಕೆ ತಪಸ್ವಿಯು, "ಮಹಾರಾಜರೇ, ನೀವ
ದಿಲ್ಲೀಶ್ವರನ ಸೇನಾಧಿಪತಿಗಳು ಮತ್ತು ಅಕಬರ ಬಾದಶಹನಂಥ ಐಶ್ವರ್ಯಶಾಲಿಯಾದ ಬಾದಶಹನ
ಕಂಠಮಣಿಸ್ವರೂಪರು; ನಾನು ಯಃಕಶ್ಚಿತ ದುರ್ದ್ರನಾದ ನಿವೃತ್ತಿಪರ ಬ್ರಹ್ಮಚಾರಿಯು ನನ್ನಂಥವನ ಸರ್ವಸ್ವ
ವನ್ನು ಹರಣಮಾಡಿದರೆ ನಿಮಗೇನು ಲಾಭವಾಗುವುದು? ಆದಕಾರಣ ನನ್ನ ಭಿಕ್ಷಾಧನವನ್ನು ತಿರುಗಿ ಕೊಡ
ಬೇಕೆಂದು ಬೇಡಿಕೊಳ್ಳುವುದಕ್ಕಾಗಿ ನಿಮ್ಮ ಕಡೆಗೆ ಬಂದಿದ್ದೇನೆ." ಎಂದನು.

ಮಾನಸಿಂಹನಿಗೆ ಈ ಮಾತಿನ ಅಭಿಪ್ರಾಯವು ಸ್ಪಷ್ಟವಾಗಿ ತಿಳಿಯಲಿಲ್ಲ. ಅವನು ವಿಚಾರದಲ್ಲಿ
ಬಿದ್ದನು. ಶಕ್ತಿಗಡವನ್ನು ತೆಗೆದುಕೊಂಡಾಗ ತನ್ನ ಸೈನಿಕರು ಲೂಟಿಮಾಡುವ ಸಮಯದಲ್ಲಿ ಇವ
ದ್ರವ್ಯವನ್ನು ಸೂರೆಮಾಡಿದರೋ ಏನೋ ಎಂಬ ಶಂಕೆಯು ಅವನ ಮನಸ್ಸಿನಲ್ಲಿ ಹುಟ್ಟಿತು. ಆದರೆ
ಲೂಟಿಯು ವೇಳೆಯಲ್ಲಿ ಬಡಬ್ರಾಹ್ಮಣರಿಗೆ ಯಃಕ್ಶಿಂಚಿತ್ತಾದರೂ ಉಪದ್ರವ ಮಾಡಬಾರದೆಂದು ಅವನ
ಯಾವಾಗಲೂ ತನ್ನ ಸೈನಿಕರಿಗೆ ಕಟ್ಟಪ್ಪಣೆಯನ್ನು ವಿಧಿಸಿದ್ದನು. ತನ್ನ ಆ ಆಜ್ಞೆಯನ್ನು ಯಾ
ನಾದರೂ ಮೀರಬಹುದೆಂಬ ಕಲ್ಪನೆಯು ಸಹ ಅವನಲ್ಲಿದ್ದಿಲ್ಲ. ಆದರೂ ತಪಸ್ವಿಯಿಂದ ಸರ್ವ ಸಂಗ
ಯನ್ನು ಕೇಳಿಕೊಂಡು, ಅಮೇಲೆ ತನ್ನ ಅಪ್ಪಣೆಗೆ ಅಮಾನ್ಯವಾಗಿ ನಡೆದವನನ್ನು ಯಥಾಯೋಗ್ಯವಾಗಿ ಶಿಕ್ಷಿ
ಬೇಕೆಂಬ ಉದ್ದೇಶದಿಂದ ಅವನು ತಪಸ್ವಿಯನ್ನು ಕುರಿತು—"ಸಾಧುಮಹಾರಾಜರೇ, ನನ್ನ ಸೈನಿಕರು
ತಮಗೆ ಅಪರಾಧಮಾಡಿದಕ್ಕಾಗಿ ಕ್ಷಮೆ ಇರಲಿ; ತಮ್ಮ ಯಾವ ಯಾವ ವಸ್ತುಗಳು ಹೋಗಿರುವುವು
ಹಾಗು ಅವುಗಳನ್ನು ಯಾರು ಒಯ್ದರು—ಎಂಬ ವಿಷಯವಾಗಿ ತಮಗೆ ಗೊತ್ತಿದ್ದ ಸಂಗತಿಯನ್ನು ಹೇಳಿದರೆ
ನಾನು ಈಗಿಂದೀಗಲೇ ಈ ವಿಷಯದ ವಿಚಾರಣೆಮಾಡಿ, ತಮ್ಮ ದ್ರವ್ಯವನ್ನು ತಮಗೆ ಕೊಡಿಸುತ್ತೇನೆ
ಅಲ್ಲಿಯವರೆಗೂ ಬಾಯಿಯಲ್ಲಿ ನೀರು ಸಹ ಹಾಕುವುದಿಲ್ಲ ಎಂದನು".

ತನ್ನ ಮಾತಿನ ಅರ್ಥವು ಮಾನಸಿಂಹನಿಗೆ ತಿಳಿಯಲಿಲ್ಲ ಎಂಬುದನ್ನು ನೋಡಿ ತಪಸ್ವಿಯು ಮಾ
ಸಿಂಹನಿಗೆ ಅಂದುದೇನಂದರೆ—"ಮಹಾರಾಜರೇ, ನೀವು ಕ್ಷತ್ರಿಯ ವೀರರೂ ನ್ಯಾಯವಂತರಾದ ಪ್ರಭು
ಗಳೂ ಆಗಿರುವಿರಿ. ಪರಮೇಶ್ವರನು ನಿಮಗೆ ಸದ್ಬುದ್ಧಿಯನ್ನು ಕೊಟ್ಟು ಶಕ್ತಿಗಡದಲ್ಲಿ ಸೆರೆಸಿಕ್ಕಿ ಎಲ್ಲಸ್ತ್ರಿ
ಜನರನ್ನು ನಿಮ್ಮ ಕಡೆಯಿಂದ ಬಂಧಮುಕ್ತಮಾಡಿಸಿದನು. ಆದರೆ ಒಬ್ಬ ಅಭಾಗಿನಿಯಾದ ತರುಣ
ಬಾಲೆಯು ನಿಮ್ಮ ನೆರೆಮನೆಯಲ್ಲಿ ಬಂದಿದ್ದಾಳೆ; ಆಕೆಯೇ ನನ್ನ ಧನವು. ಅದನ್ನಷ್ಟು ನನಗೆ ದಯಮಾಡಿ
ಕೊಡುವ ಕೃಪೆಯಾಗಬೇಕು".

ಈಗ ಮಾತ್ರ ತಪಸ್ವಿಯ ಭಾಷಣದ ತಾತ್ಪರ್ಯವು ಮಾನಸಿಂಹನ ಲಕ್ಷ್ಯದಲ್ಲಿ ಬಂತು. ಆದರೂ
ಅವನ ಮನಸ್ಸಿನಲ್ಲಿ ಒಂದು ಶಂಕೆಯು ಉದ್ಭವಿಸಿತು. ಈ ತಪಸ್ವಿಯು ಸರ್ವಸಂಗ ಪರಿತ್ಯಾಗ ಮಾ
ದವನು! ಅದರಲ್ಲಿಯೂ ಬ್ರಹ್ಮಚಾರಿಯು! ಇವನಿಗೂ ಶಕ್ತಿಗಡದಲ್ಲಿ ಸೆರೆಸಿಕ್ಕ ಆ ತರುಣಿಗೂ ಸಂಬಂಧವೇನು!

Printed by P. N. Prabhu, at the Prabhakara Press, Udipi.

ಎರಡನೆಯ ತರಂಗ

ಉಪಾಧ್ಯಾಯಪದವಿ

ಗೋಪಾಲಕೃಷ್ಣ ಗೋಖಲೆಯವರು ಬಿ. ಎ. ಪರೀಕ್ಷೆಯನ್ನು ಕೊಟ್ಟು ಕೂಡಲೆ 'ದಕ್ಷಿಣ ವಿದ್ಯಾ ಸಂಘ' (Deccan Educational Society)ಕ್ಕೆ ಸಭ್ಯರಾಗಿ ಸೇರಿದರು. ಈ ದಕ್ಷಿಣ ವಿದ್ಯಾಸಂಘವು ಮಹಾರಾಷ್ಟ್ರದೇಶದಲ್ಲಿ ವಿದ್ಯೆಯನ್ನು ಅಭಿವೃದ್ಧಿಮಾಡುವುದಕ್ಕಾಗಿ ದೇಶಪ್ರಮುಖರಾದ ಆಪ್ಟೆ, ಅಗರಕರ್, ತಿಲಕ್, ಮೊದಲಾದ ದೇಶಾಭಿಮಾನಿಗಳಿಂದ 1884ರಲ್ಲಿ ಸ್ಥಾಪಿಸಲ್ಪಟ್ಟಿತು. ಆಗಲೆ, ಪೂನಾ ನಗರದಲ್ಲಿ ಫರ್ಗ್ಯೂಸನ್ ಕಳಾಶಾಲೆ (Fergusson College) ಯು ಸ್ಥಾಪಿಸಲ್ಪಟ್ಟಿದ್ದಿತು. ಈ ಸಂಘದಲ್ಲಿ ಯಾವಜ್ಜೀವ ಸಭ್ಯರಾಗಿ ಸೇರುವವರು ಮೇಲೆ ಹೇಳಿದ ಕಳಾಶಾಲೆಯಲ್ಲಿ ಯಾಗಲಿ, ಈ ಸಂಘದವರ ಇತರ ಪಾಠಶಾಲೆಯಲ್ಲಿಯಾಗಲಿ ಇಪ್ಪತ್ತು ವರ್ಷ ಕ್ಲಪ್ತಕಾಲ ಉಪಾಧ್ಯಾಯರಾಗಿರತಕ್ಕದ್ದು. ಅವರಿಗೆ ತಿಂಗಳಿಗೆ 75ರೂ. ಸಂಬಳಕೊಟ್ಟು, ಅವರ ಜೀವಿತವನ್ನು 3000ರೂ. ಗಳಿಗೆ ಮರಣಾನಿಧಿಯಲ್ಲಿ ಭೀಮಾಮಾಡಿಸಿ ಪ್ರೀಮಿಯಂಗಳನ್ನು (ಮೊದಲು ಸಲ್ಲಿಸಲ್ಪಡುವ ವಾಯಿದೆ ಮೊತ್ತ) ಸಲ್ಲಿಸುತ್ತಿದ್ದರು.

ಇಪ್ಪತ್ತು ವರ್ಷ ನೌಕರಿಮಾಡಿದ ತರುವಾಯ ತಿಂಗಳಿಗೆ 30ರೂ. ಉಪಕಾರ ವೇತನವನ್ನು ಹೊಂದಿ, ಪ್ರತಿ ಉಪಾಧ್ಯಾಯನೂ ವಿಶ್ರಾಂತಿಯನ್ನು ಹೊಂದಬಹುದು. ಪಂಡಿತೋಪಾಧ್ಯಾಯರು(professor) ಕಳಾಶಾಲಾ ನಿವೇಶದಲ್ಲಿ ಮನೆಗಳನ್ನು ಕಟ್ಟಿಕೊಳ್ಳಬಹುದು. ಅವರ ನೌಕರಿಕಾಲವು ಮುಗಿದತರುವಾಯ ಸಂಘದವರೇ ಆ ಮನೆಗಳನ್ನು ವಿಕ್ರಯಕ್ಕೆ ತೆಗೆದುಕೊಳ್ಳುವರು. ಪ್ರಾರಂಭದಲ್ಲಿ ಬಿ. ಎ. ಪರೀಕ್ಷೆಯಲ್ಲಿ ತೇರ್ಗಡೆಯಾದವರನ್ನು ಯಾವಜ್ಜೀವಸಭ್ಯರಾಗಿ ಸೇರಿಸಿಕೊಳ್ಳುತ್ತಿದ್ದರು. ಆದರೆ, ಕೊಂಚ ಕಾಲದ ತರುವಾಯ, ಎಂ. ಎ. ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಆರು ತಿಂಗಳು ಅಭ್ಯಾಸಕರಾಗಿದ್ದವರನ್ನೇ (Probationary) ಸಭ್ಯರಾಗಿ ಅಂಗೀಕರಿಸಿದರು. ಈ ದಖ್ಖನ್ ವಿದ್ಯಾಸಂಘದವರಿಗೆ ನಾಲ್ಕು ಲಕ್ಷರೂಪಾಯಿನ ಆಸ್ತಿ ಇವೆ. ಸರಕಾರದವರೂ ಧಾರಾಳವಾಗಿ ದ್ರವ್ಯಸಹಾಯವನ್ನು ಮಾಡುತ್ತಿರುವರು. ಈ ಫರ್ಗ್ಯೂಸನ್ ಕಳಾಶಾಲೆಯು ನಮ್ಮ ದೇಶೀಯರಿಂದ ಸ್ಥಾಪಿಸಲ್ಪಟ್ಟು, ನಮ್ಮವರ ಕೈಯಿಂದಲೇ ನಿರ್ವಹಿಸಲ್ಪಡುತ್ತಿರುವ ಕಳಾಶಾಲೆಗಳಲ್ಲಿ ಒಂದಾಗಿದೆ. ಇದಕ್ಕೆ ಸೇರಿದ ಪುಸ್ತಕ ಭಾಂಡಾಗಾರಕ್ಕೆ ರಾವ್ ಸಾಹೇಬ್ ವಿಶ್ವನಾಥ ನಾರಾಯಣ ಮಂಡಲೀಕರೆಂಬ ದೇಶಭಕ್ತರು 60ಸಾವಿರ ರೂಪಾಯಿನ ಗ್ರಂಥಗಳನ್ನು ಉಚಿತನಾಗಿತ್ತರು. ಈ ವಿಧವಾಗಿ ದಖ್ಖನ್ ವಿದ್ಯಾಸಂಘದವರು ನಿಯಮಗಳನ್ನು ಏರ್ಪಡಿಸಿ, ಧನವನ್ನಾರ್ಜಿಸಿ, ಸ್ವಾರ್ಥತ್ಯಾಗರಾದ ಉಪಾಧ್ಯಾಯರ ಸಹಾಯ ಸಾನುಭೂತಿಗಳನ್ನು ಸಂಪಾದಿಸಿ, ಫರ್ಗ್ಯೂಸನ್ ಕಳಾಶಾಲೆಯನ್ನು ಅಭಿವೃದ್ಧಿಗೆ ತರಬೇಕೆಂದು ಕೃತನಿಶ್ಚಯರಾದರು. ಈ ವಿದ್ಯಾಸಂಘದ ಸಭಿಕರ ಹೆಸರನ್ನು ಕೇಳಿದಾಗಲೆಲ್ಲಾ ತರುಣ ವಯಸ್ಕರಾದ ಗೋಖಲೆಯವರಿಗೆ ಎಷ್ಟೋ ಉತ್ಸಾಹವಾಗಿದ್ದಿತು. ನಿನ್ನೆ ಮೊನ್ನೆಯ ವರೆಗೆ ಬಾಲಕರು ಗೋಖಲೆಯವರನ್ನು ದರ್ಶಿಸಿದಾಗಲೂ, ಅವರ ಉಪನ್ಯಾಸಗಳನ್ನು ಕೇಳಿದಾಗಲೂ ಹೇಗೆ ಸಂತೋಷಪಡುತ್ತಿದ್ದರೊ, ಅದರಂತೆಯೆ, ಗೋಖಲೆಯವರೂ ಇವರ ಬಾಲ್ಯದಲ್ಲಿ ಆಪ್ಟೆ, ಅಗರಕರ್, ರಾನಡೆ ಮೊದಲಾದ ದೇಶಭಕ್ತರ ಹೆಸರನ್ನು ಕೇಳಿದಾಗಲೂ, ಅವರನ್ನು ದರ್ಶಿಸಿದಾಗಲೂ'

ಭಕ್ತಿಗೌರವವುಳ್ಳವರಾಗಿದ್ದರು. ಅಂತಹ ಮಹನೀಯರ ಸ್ನೇಹವನ್ನೂ, ವಾತ್ಸಲ್ಯವನ್ನೂ ಸಂಪಾದಿಸಿ
ಶ್ರೀ ಗೋಖಲೆಯವರು ದಖ್ಖನ್ ವಿದ್ಯಾಸಂಘಕ್ಕೆ ಸೇರಬೇಕೆಂದು ಯತ್ನಿಸಿ, ಕೃತಾರ್ಥರಾದರು. ಆ ಕಾ
ದಲ್ಲಿ ಬಿ. ಎ. ಪರೀಕ್ಷೆವಿತ್ತವರು (Graduates) ವಿಶೇಷವಾಗಿರಲಿಲ್ಲ. ಆದುದರಿಂದ, ಬಿ. ಎ
ಪರೀಕ್ಷೆಯನ್ನು ಕೊಟ್ಟವರಿಗೆ ಸರಕಾರದಲ್ಲಿಯಾಗಲಿ, ಇತರ ಸ್ಥಳದಲ್ಲಿಯಾಗಲಿ ವಿಶೇಷ ವರಮಾನವು
ನೌಕರಿಗಳು ಸಿಕ್ಕುತ್ತಿದ್ದುವು. ಆದರೂ ನಮ್ಮ ಗೋಖಲೆಯವರು ಧನವನ್ನಾರ್ಜಿಸಿ ಭೋಗಾನುಭವಗಳಲ್ಲಿ
ತುಂಬಿ ತುಳುಕುತ್ತಾ ಗೌರವಾರ್ಥವಾಗಿ ದೇಶಭಕ್ತರೆಂದೆನಿಸಿಕೊಳ್ಳುವಿಕೆಯೂ. ಆಗಾಗ್ಗೆ ಕಪಟವೇಷಗಳನ್ನು
ಧರಿಸಿ, ಡಾಂಭಿಕ ಜೀವನರಾಗಿರಲು ಅವತರಿಸಿದವರಲ್ಲ. ಅವರು ಹೆಚ್ಚು ಸಂಬಳವನ್ನು ಅಪೇಕ್ಷಿಸಲಿಲ್ಲ
ಹತ್ತು ಜನ ನೌಕರರ ಮೇಲೆ ಅಧಿಕಾರಮಾಡಲು ತಕ್ಕ ಉದ್ಯೋಗಗಳಲ್ಲಿ ಭ್ರಮೆಪಟ್ಟು ದೇಶಹಿತವನ್ನು
ಮರೆತು ಆ ಉದ್ಯೋಗಗಳಿಗೆ ಆಶೆಪಡಲಿಲ್ಲ. ತನ್ನ ಸ್ವತಂತ್ರಾಭಿಪ್ರಾಯಗಳಿಗೆ ವಿರುದ್ಧಗಳಾಗಿ ಮಾ
ದೇಶಸೇವೆಗೆ ಭಂಗವಾಗಿರುವ ವೃತ್ತಿಗಳನ್ನು ಅಂಗೀಕರಿಸಲು ಅವರಿಗೆ ಮನಸ್ಸು ಬರಲಿಲ್ಲ. ಬಿ.
ಪರೀಕ್ಷೆಯಾದಮೇಲೆ ಗೋಖಲೆಯವರು ಹೊರಹೊರಡದೆ, ಯಾವ ಉದ್ಯೋಗವನ್ನು ಅಂಗೀಕರಿಸಿ
ಮನಶ್ಶಾಂತಿಯುಂಟಾಗಿ ದೇಶಸೇವೆಮಾಡಲು ಸಹಕಾರಿಯಾಗುವುದೋ ಅಂತಹ ಉದ್ಯೋಗಕ್ಕಾಗಿ ಪ್ರಯ
ಸಿದರು. ಈ ಆಲೋಚನೆಯಲ್ಲಿ ಅವರಿಗೆ ಒಳ್ಳೆಯವರ ಸಾಂಗತ್ಯವು ದೊರೆಯಲು ಕಾರ್ಯನಿರ್ಣಯದ
ಲೋಪವಿಲ್ಲದಂತೆ ಉಪಾಧ್ಯಾಯ ಪದವಿಯನ್ನು ಅಂಗೀಕರಿಸುವಂತೆ ತೀರ್ಮಾನಿಸಿಕೊಂಡರು. ಉ
ಧ್ಯಾಯರಾಗಿದ್ದು, ಅನಂತರ ಪ್ರಸಿದ್ಧಿಯನ್ನು ಪಡೆದ ದೇಶಬಾಂಧವರು ಅನೇಕರಿದ್ದಾರೆ. ದಾದಾಬಾ
ನೌರೋಜಿ, ಈಶ್ವರಚಂದ್ರ ವಿದ್ಯಾಸಾಗರ, ಸುರೇಂದ್ರನಾಥ ಬಾನರ್ಜಿ, ಬಾಲಗಂಗಾಧರ ತಿಲಕ, ರಾ
ಕೃಷ್ಣ ಗೋಪಾಲ ಭಂಡಾರ್ಕರ್, ಲಾಲಾ ಹಂಸರಾಜ್, ಅಶ್ವಿನೀಕುಮಾರ ದತ್ತ ಮೊದಲಾದವ
ಉಪಾಧ್ಯಾಯರಾಗಿದ್ದು ವಿದ್ಯಾವಿಷಯಗಳಲ್ಲಿಯೂ ಮತ್ತು ರಾಜಕೀಯಾದಿ ವಿಷಯಗಳಲ್ಲಿಯೂ ಪರಿಶ್ರ
ಮಾಡಿ, ಸ್ವದೇಶಾಭಿವೃದ್ಧಿಗಾಗಿ ಕೃಷಿ ಮಾಡಿದ ಮಹನೀಯರು. ಮಹದೇವ ಗೋವಿಂದ ರಾನಡೆ, ಕ
ನಾಥ ತ್ರ್ಯಂಬಕ ತೆಲಂಗ, ಸರ್ ಗುರುದಾಸ ಬ್ಯಾನರ್ಜಿ, ಆನಂದ ಮೋಹನ ಬೋಸ್, ಆರ್. ಯ
ಮುಧೋಳ್ಕರ್, ಪಂಡಿತ ಮದನಮೋಹನ ಮಾಲವೀಯ, ಈ ಮಹನೀಯರು ಪ್ರಥಮದಲ್ಲಿ ಕೊಂಚಕಾ
ಉಪಾಧ್ಯಾಯರಾಗಿದ್ದು, ಧನಾರ್ಜನಾದಿ ವಿಷಯಗಳಲ್ಲಿ ವಿಶೇಷ ಲಾಭಕಾರಿಯಾಗಿರದೆ ಇದ್ದುದರಿಂದ
ಅಥವಾ ಮತ್ತಾವ ಕಾರಣದಿಂದಲಿಲೊ ಆ ವೃತ್ತಿಯನ್ನು ತ್ಯಜಿಸಿದ ದೇಶಾಭಿಮಾನಿಗಳು. ಉಪಾಧ್ಯಾ
ರಾಗಿಯೇ ಯಾವಜ್ಜೀವವೂ ಕೃಷಿಮಾಡಿ, ವಿದ್ಯಾವಿಷಯ ಸಂಸ್ಕರಣಗಳನ್ನುಂಟುಮಾಡಿದ ದೇಶಭಕ್ತ
ಹೆಚ್ಚು ಮಂದಿ ಇರುವರು. ಆದುದರಿಂದ, ಉಪಾಧ್ಯಾಯ ಪದವಿಯು ಕೆಲವರು ಅವಿವೇಕಿಗಳು ದೂಷಿಸು
ವಂತಹ ಅನಾದರಣೀಯವಾದ ಉದ್ಯೋಗವಲ್ಲ. ಎಲ್ಲಕ್ಕೂ ಶ್ರೇಷ್ಠವಾದ ಪದವಿಯೇ ಇದು. ಇದರಲ್ಲಿ
ಲಂಚವನ್ನು ತೆಗೆದುಕೊಳ್ಳುವುದಕ್ಕೂ, ಸುಳ್ಳು ಕುತಂತ್ರಗಳು ಬೋಧಿಸುವುದಕ್ಕೂ ದುರ್ಮಾರ್ಗರೆಂ
ತೀದು ಅವರ ಪಕ್ಷವನ್ನವಲಂಬಿಸಿ ಮತ್ತಷ್ಟು ದುಷ್ಕೃತ್ಯಗಳನ್ನು ಮಾಡಲು ಸಹಕಾರಿಯಾಗುವುದಕ್ಕೂ
ತಕ್ಕ ಅವಕಾಶಗಳು ಇಲ್ಲ. ಇಂತಹ ಉಪಾಧ್ಯಾಯ ಪದವಿಯನ್ನು ಗೋಖಲೆಯವರು ಅವಲಂಬಿ
ಬಾಲಕರಿಗೆ ಹಿತಬೋಧೆಯನ್ನು ಮಾಡುತ್ತಿದ್ದರು. ಪ್ರತಿ ಬಾಲಕನೂ ಇವರಲ್ಲಿ ಹೆಚ್ಚು ಅಭಿಮಾನವನ್ನು
ಆದರಣೆಯನ್ನೂ ಉಳ್ಳವನಾಗಿ, ಇವರನ್ನು ತಂದೆಗಿಂತ ಹೆಚ್ಚಾಗಿ ಪ್ರೀತಿಸುತ್ತಿದ್ದನು. ಅಂತಹ ಪ್ರೇಮ

ಇವರ ಸದ್ವರ್ತನೆಯೇ ಕಾರಣವೆಂದು ಹೇಳಬಹುದು. ಉಪಾಧ್ಯಾಯನೇ ದುಷ್ಟವರ್ತಕನಾಗಿ, ಪಾಠಶಾಲೆಯಲ್ಲಿ ಹಿತವನ್ನು ಬೋಧಿಸಿ, ಪಾಠಶಾಲೆಯನ್ನು ಬಿಟ್ಟಕೂಡಲೆ ತಾನೇ ಬಾಲಕರ ಎದುರಿಗೆ ದುಷ್ಪ್ರವರ್ತಕನಾಗಿರುವ ಆ ಉಪಾಧ್ಯಾಯನಲ್ಲಿ ಬಾಲಕರಿಗೆ ನಿಜವಾದ ಮರ್ಯಾದೆಯೂ, ಪ್ರೇಮವೂ ಹುಟ್ಟುವುದು ಅಸಂಭವವಲ್ಲವೆ? ಅದೂ ಅಲ್ಲದೆ, ಬಾಲಕರೂ ತಮ್ಮ ಉಪಾಧ್ಯಾಯನ ದುಷ್ಪ್ರವರ್ತನೆಗಳನ್ನೇ ಅವಲಂಬಿಸಲು ಯತ್ನಿಸುವರು. ಆದುದರಿಂದ, ಉಪಾಧ್ಯಾಯರನ್ನು ನಿಯಮಿಸುವ ಅಧಿಕಾರಿಗಳು ಈ ವಿಷಯಗಳನ್ನು ಗಮನಿಸಿ, ಸತ್ಪ್ರವರ್ತನೆಯುಳ್ಳವರನ್ನೇ ಈ ಕೆಲಸಕ್ಕೆ ನಿಯಮಿಸಬೇಕು. ಪ್ರತಿ ಮಾನವನಿಗೂ ಸತ್ಪ್ರವರ್ತನೆಯೇ ಪ್ರಧಾನವು.

ದೇಶಾಭಿವೃದ್ಧಿಗಾಗಿ ಪ್ರಯತ್ನಪಡುತ್ತಿರುವ ಪ್ರತಿ ದೇಶಾಭಿಮಾನಿಯಲ್ಲಿಯೂ, ಪ್ರಜೆಗಳ ಸಂಗಡ ನೆರೆತು, ಅವರಂತೆ ಆಚರಿಸುವ ಪ್ರತಿ ದೇಶಾಭಿಮಾನಿಯಲ್ಲಿಯೂ ಸತ್ಪ್ರವರ್ತನೆಯು ಮುಖ್ಯವಾಗಿ ಗಮನಿಸಬೇಕಾದ ವಿಷಯವು. ಗೋಖಲೆಯವರ ಜೀವಿತಕ್ಕೆ ಬಣ್ಣವಿಟ್ಟದ್ದು ಈ ಪ್ರಧಾನ ವಿಷಯವೇ ಅಲ್ಲವೆ? ಬಾಲಕರ ಭಾಗ್ಯವಶದಿಂದ ನಿರ್ಮಲಹೃದಯ ಶಿಖಾಮಣಿಯಾದ ಗುರುವು ಅವರಿಗೆ ಲಭಿಸಿದುದರಿಂದ ಗೋಖಲೆಯವರ ಶಿಷ್ಯರೂ ದೇಶಾಭಿಮಾನಪೂರಿತಹೃದಯರಾಗಿ ತಮ್ಮ ವಿಧಾಯಕ ಕೃತ್ಯಗಳನ್ನು ಚೆನ್ನಾಗಿ ನಿರ್ವೇರಿಸುತ್ತಿದ್ದರು. ವಿದ್ಯಾರ್ಥಿಗಳ ಅಭಿವೃದ್ಧಿಗಾಗಿ ಗೋಖಲೆಯವರು ಅನೇಕ ಸಮಾಜಗಳನ್ನು ಏರ್ಪಡಿಸಿ, ತಾವೇ ಅವುಗಳನ್ನು ಚೆನ್ನಾಗಿ ಮೇಲ್ವಿಚಾರಣೆ ಮಾಡುತ್ತಿದ್ದರು. ಮೊಟ್ಟಮೊದಲು ಅವರು ವಿದ್ಯಾರ್ಥಿಗಳಿಗೆ ಆಂಗ್ಲಸಾಹಿತ್ಯವನ್ನು ಕಲಿಸುವ ಪಂಡಿತರಾಗಿದ್ದರು. ಆಗಾಗ್ಗೆ ಗಣಿತವನ್ನು ಕಲಿಸುತ್ತಿದ್ದರು. ಮತ್ತೆ, ಇವರು ವಿಶೇಷಕಾಲ ಚರಿತ್ರೆಪಂಡಿತರಾಗಿದ್ದರು. ಅರ್ಥಶಾಸ್ತ್ರದಲ್ಲಿಯೂ, ದೇಶಚರಿತ್ರೆಯಲ್ಲಿಯೂ ಗೋಖಲೆಯವರು ನಿರುಪಮಾನ ಸಾಮರ್ಥ್ಯವುಳ್ಳವರಾಗಿ ಪ್ರಸಿದ್ಧಿಪಡೆದರು. ಮತ್ತು ಈ ಸಂಬಂಧ ವಿಷಯಗಳಲ್ಲಿ ಎಲ್ಲರ ಸಂಶಯಗಳನ್ನು ನಿವಾರಿಸಿ, ಅಭಿಪ್ರಾಯ ನಿರ್ಧಾರಣೆ ಮಾಡುವುದಕ್ಕೆ ಅತ್ಯಂತ ಸಮರ್ಥರಾದು ಕರೆಯಲ್ಪಟ್ಟರು. ಈ ಕಳಾಶಾಲೆಯಲ್ಲಿ ಇವರು ಕೊಟ್ಟ ಉಪನ್ಯಾಸಗಳು ಶ್ರೇಷ್ಠತಮವೆಂದೆನಿಸಿಕೊಂಡಿವೆ. ಫರ್ಗೂಸನ್ ಕಳಾಶಾಲೆಯನ್ನು ಅತ್ಯುತ್ತಮ ಸ್ಥಿತಿಗೆ ತರಬೇಕೆಂದು ನಿರಂತರವೂ ಪರಿಶ್ರಮಪಡಿದವರಲ್ಲಿ ಗೋಖಲೆಯವರು ಮುಖ್ಯರು. ಗೋಖಲೆಯವರು ವಿರಾಮವಾದಾಗಲೆಲ್ಲಾ ಊರೂರು ತಿರುಗಿ ಸಂಚರಿಸಿ, ಆ ಕಳಾಶಾಲೆಗಾಗಿ ದ್ರವ್ಯವನ್ನು ಸಂಪಾದಿಸುತ್ತಿದ್ದರು. ರಜಾ ದಿನಸಗಳಲ್ಲಿ ತಮ್ಮ ಜೀವನವನ್ನು ಪಾಠಶಾಲೆಯ ಕ್ಷೇಮಕ್ಕಾಗಿ ವಿನಿಯೋಗಿಸಿದರು. ಧರ್ಮ ಕಾರ್ಯಗಳಿಗೆ ಪ್ರಯಾಜ್ಞೆ ಮಾಡುವವರು ಎಷ್ಟು ಕಷ್ಟಗಳನ್ನು ಅನುಭವಿಸಬೇಕೋ ಅವುಗಳೆಲ್ಲವನ್ನೂ ಹೆಚ್ಚು ಸಹನೆಯಿಂದ ಸಹಿಸಿ ಕರ್ಮಕರ ಅಗ್ರಹಾನುಗ್ರಹಕ್ಕೆ ಪಾತ್ರರಾಗಿ ನಿರಂತರ ಪ್ರಯಾಣಗಳಿಂದುಂಟಾಗುವ ಸಂಕಟಗಳನ್ನು ಸಂತೋಷದಿಂದ ಸಹಿಸಿ ಕಾಲಕ್ರಮದಲ್ಲಿ ಈ ಕಳಾಶಾಲೆಗೆ ಎರಡು ಲಕ್ಷ ರೂಪಾಯಿಗಳ ಮೂಲಧನವನ್ನು ಸಂಪಾದಿಸಿದರು. ಈ ಕಳಾಶಾಲೆಯಲ್ಲಿ ಎಲ್ಲಾ ಪಂಡಿತರಂತೆ ಗೋಖಲೆಯವರೂ ಒಬ್ಬ ಪಂಡಿತರಾದರೂ, ಪ್ರಧಾನ ಉಪಾಧ್ಯಾಯ ಪದವಿಯನ್ನು (Principal) ಹೊಂದದ್ದಿದ್ದರೂ, ಇವರ ಧರ್ಮನಿರತೆಯೂ, ಸ್ವಾರ್ಥತ್ಯಾಗವೂ ಪ್ರಶಂಸನೀಯಗಳಾಗಿದ್ದುವು. ಈ ಪೂಜ್ಯರಾದ ಗುರುವರ್ಯರನ್ನು ಹೊಂದಿರುವ ಸಮಯವು ತಟಸ್ಥವಾಗಲು, ಬಾಲಕರೂ, ಕಳಾಶಾಲಾಧಿಕಾರಿಗಳೂ ಗೋಖಲೆಯವರನ್ನು ಅನೇಕ ವಿಧವಾಗಿ ಗೌರವಿಸಿ, ಸಭೆಗಳನ್ನುಮಾಡಿ, ತಮ್ಮ ಅನುರಾಗವನ್ನೂ, ದುಃಖವನ್ನೂ ತೋರ್ಪಡಿಸಿದರು. 1902ನೆಯ

ಸೆಪ್ಟೆಂಬರು 19ನೆಯ ತಾರೀಖಿನಲ್ಲಿ ನಡೆದ ಸಭೆಯಲ್ಲಿ ಸಭಿಕರು ಮಾಡಿದ ಗೌರವಕ್ಕಾಗಿ ಗೋಖಲೆಯವ
ಹೀಗೆಂದು ಪ್ರತ್ಯುತ್ತರವಿತ್ತರು—'ಇಂದಿಗೆ ಹದಿನೆಂಟು ವರ್ಷಗಳಿಂದ ನನ್ನ ಶಕ್ತಿ ಇದ್ದಷ್ಟು ವ
ಬೇಕಾದುದನ್ನೆಲ್ಲಾ ಮಾಡಿದೆನು. ಈ ಸಂಘಾಭಿವೃದ್ಧಿಗಾಗಿ ಪ್ರಯತ್ನಿಸಿದೆನು. ಕಾಲಾನುಕೂಲ, ಸ
ಕೂಲಗಳನ್ನು ಲೆಕ್ಕಿಸದೆ ಕಳಾಶಾಲಾಭಿವೃದ್ಧಿಗಾಗಿ ಏಕಾಗ್ರಚಿತ್ತದಿಂದ ಕೆಲಸ ಮಾಡಿದೆನು. ಕೆಲ
ಕಳಾಶಾಲೆಯನ್ನು ಬಿಡಬೇಕೆಂದರೆ ದುಸ್ಸಾಧ್ಯವಾಗಿದೆ. ಆದರೂ, ನಾನು ಬಾಲ್ಯೋತ್ಸಾಹ ಪ್ರೇರಣೆಯಿ
ಮಾಡಿದ ಪ್ರತಿಜ್ಞೆಯ ಪ್ರಕಾರ ಈ ಕಳಾಶಾಲೆಯಲ್ಲಿ ನಿಯಮಿತ ಕಾಲವನ್ನು ಪೂರೈಸಲು ಭಾಗ್ಯವ
ಕೊಟ್ಟ ಭಗವಂತನಿಗೆ ಅನೇಕ ವಂದನೆಗಳು. ನನ್ನ ಪ್ರತಿಜ್ಞೆಯನ್ನು ನಿರವೇರಿಸಿದುದಕ್ಕಾಗಿ ನಾನು ಸಂತೋ
ಹೊಂದಿದರೂ, ಬಹಳ ವರ್ಷಗಳಿಂದ ಸ್ನೇಹಸೋದರಭಾವಗಳಿಂದ ಕಾಣುತ್ತಿದ್ದ ನಿಮ್ಮೆಲ್ಲರನ್ನು ಬಿಟ್ಟಿ
ವುದಕ್ಕೂ, ನನ್ನ ವಿದ್ಯಾಬಲಗಳೆಲ್ಲವನ್ನೂ ವಿನಿಯೋಗಿಸಿದ ಈ ಕಳಾಶಾಲೆಯನ್ನು ಬಿಡುವುದಕ್ಕೂ ಹೆ
ದುಃಖಪರವಶನಾಗಿದ್ದೇನೆ. ಆದರೂ 'ನಮ್ಮನ್ನು ಏಕೆ ಬಿಡುತ್ತೀರಿ; ಇಲ್ಲಿಯೇ ಮತ್ತಷ್ಟು ಕಾಲ
ಬಾರದೆ?' ಎಂದು ನೀವು ಕೇಳಬಹುದು. ಈ ವಿಷಯದಲ್ಲಿ ನಾನು ಸಂಪೂರ್ಣವಾಗಿ ಆಲೋಚನೆ
ಈ ತೀರ್ಮಾನಕ್ಕೆ ಬಂದೆನು. ಮೊದಲನೆಯ ಕಾರಣ:—ನನ್ನ ದೇಹಾರೋಗ್ಯವು ಈಗ ಕೆಟ್ಟಿದೆ.
ವರ್ಷ ನಾನು ನನ್ನ ವಿಧಾಯಕ ಕೃತ್ಯಗಳನ್ನು ನನ್ನ ಸಹೋಪಾಧ್ಯಾಯರಂತೆ ಕ್ರಮವಾಗಿ ನೆರವೇ
ಹೋದೆನು. ನನ್ನಲ್ಲಿ ಅಭಿಮಾನವುಳ್ಳ ಮಿತ್ರರು ಸಹಾಯ ಮಾಡುತ್ತಿದ್ದರೂ ಅವರಿಗೆ ಸದಾ
ಯನ್ನು ಕೊಡಲು ನ್ಯಾಯವಲ್ಲವಲ್ಲವೆ? ಇದೊಂದು ಮುಖ್ಯ ಕಾರಣವು. ಲೋಕೋಪಕಾರ ವಿ
ಗಳಿಗಾಗಿ ಸರ್ವ ಕಾಲವನ್ನು ವಿನಿಯೋಗಿಸಿ ಕೃಷಿ ಮಾಡಬೇಕೆಂಬ ಆಭಿಲಾಷೆಯೂ, ಮತ್ತೂ ಆ
ಜೀವಿತಕ್ಕಾಗಿ ನನ್ನ ಹೃದಯವು ಪರಿತಪಿಸುತ್ತಾ ಇದೆ. ದೇಶಸೇವಾ ವಿಷಯವಾಗಿ ನನ್ನಂತೆ
ಪಡುವವರು ಸ್ವಾರ್ಥವನ್ನು ತ್ಯಜಿಸಿ, ಉತ್ಸಾಹ, ನಂಬಿಕೆಯುಳ್ಳವರಾಗಿ, ಮನಸ್ಫೂರ್ತಿಯಾಗಿ
ವನ್ನು ನೆರವೇರಿಸದೆ ಕೃತಾರ್ಥರಾಗರು. ನೀವೆಲ್ಲರೂ ನನಗೆ ಮಾಡಿದ ಬಹುಮಾನೋತ್ಸವದಿಂದ
ಸಂತೋಷವನ್ನು, ಕೃತಜ್ಞತೆಯನ್ನೂ ಹೇಳಲು ನನಗೆ ಶಕ್ತಿ ಸಾಲದು. ನಿಮಗೆಲ್ಲರಿಗೂ ಶುಭವುಂಟು
ಈ ಕಳಾಶಾಲೆಯು ಹೆಚ್ಚಿನ ಅಭಿವೃದ್ಧಿಹೊಂದಲಿ!

ಈ ಮಹದ್ವಾಕ್ಯಗಳನ್ನು ನುಡಿದು, ತಿಂಗಳಿಗೆ 30ರೂ. ಉಪಕಾರವೇತನವನ್ನು ಹೊಂದಿ ಗೋ
ಯವರು ಉಪಾಧ್ಯಾಯ ಪದವಿಯನ್ನು ಬಿಟ್ಟರು. ಇವರು 18 ವರ್ಷ ಕೆಲಸಮಾಡಿದ್ದರಿಂದ ಎರಡು
ರಜಾ ಅವರಿಗೆ ಬರಬೇಕಾಗಿತ್ತು. ಅದೂ ಕೂಡ ಸೇರಿದರೆ 20 ವರ್ಷ ನಿಯಮಿತ ಕಾಲವನ್ನು ಕಳೆ

ಮೂರನೆಯ ತರಂಗ

ಉಪಾಧ್ಯಾಯಪದವಿಯಲ್ಲಿ ಮಾಡಿದ ದೇಶೋಪಯೋಗ ಕಾರ್ಯಗಳ

ಶ್ರೀ ಗೋಖಲೆಯವರು 1884 ನೆಯ ಇಸವಿಯಿಂದ 1902ರ ವರೆಗೆ ಉಪಾಧ್ಯಾಯರಾಗಿದ
ಈ 18 ವರ್ಷಗಳಲ್ಲಿ ದೇಶಸೇವೆಯನ್ನು ಮರೆಯದೆ ರಾಜಕೀಯ ವಿಷಯಗಳಲ್ಲಿ ತಕ್ಕಷ್ಟು ಶ್ರದ್ಧೆ
ತೋರಿಸುತ್ತಿದ್ದರು. ಆ ಕಾಲದಲ್ಲಿ ಹಿಂದೂದೇಶ ಭಕ್ತಾಗ್ರಗಣ್ಯರಲ್ಲಿ ಒಬ್ಬರಾದ ಶ್ರೀ ಮಹ
ಗೋವಿಂದ ರಾನಡೆಯವರು ಪ್ರಜಾನಾಯಕರಾಗಿದ್ದು, ಚಿಕ್ಕ ವಯಸ್ಕರಾದ ದೇಶಾಭಿಮಾನಿಗಳಿಗೆಲ್ಲ

ಪ್ರಭಾಕರ ಬುಕ್ ಡಿಪ್ಪೊ, ಉಡುಪಿ.

ಮೂರಾಟಕ್ಕೆ ತಯಾರು ಸಿಗತಕ್ಕ ಪುಸ್ತಕಗಳು

೧. **ಪದ್ಯರತ್ನಾಕರ**— ಇದರಲ್ಲಿ ಶ್ರೀಗಣಪತಿಪರ, ಶ್ರೀಕೃಷ್ಣಪರ ಮತ್ತು ಶ್ರೀ ರಾಮಪರ---ಹಿಂದುಸ್ಥಾನಿ, ಮರಾಠಿ ಮತ್ತು ಕನ್ನಡ ಭಾಷೆಯಿಂದ ಕನ್ನಡದಿಂದ ಉತ್ತಮಕಾಗದದಲ್ಲಿ ಮುದ್ರಿಸಿದ 212ಪುಟಗಳ ಫುಲ್‌ಕೆಲಿಕೊ ಬೈಂಡ್, ಬೆಲೆ **1-0-0**

೨. **ನಾಗಪಂಚಮಿವ್ರತಕಥೆ**—ಇದರಲ್ಲಿ ನಾಗಪಂಚಮಿಯಕಥೆ ಮತ್ತು ಸಾರ್ಥ ಪೂಜಾವಿಧಿಕೂಡಾ ಇರುತ್ತೆ **0-0-6**

೩. **ಸಾರ್ಥ ಶ್ರೀಕೃಷ್ಣ ಜನ್ಮಾಷ್ಟಮಿವ್ರತಕಥೆ**— ಇದರಲ್ಲಿ ಶ್ರೀಕೃಷ್ಣ ಜನ್ಮ ಚರಿತ್ರೆ, ಸಾರ್ಥ ಪೂಜಾವಿಧಿ, ಶ್ರೀ ವಿಷ್ಣುಸಹಸ್ರನಾಮಾವಳಿ, ಶ್ರೀಕೃಷ್ಣಾಷ್ಟೋತ್ತರ, ಅರ್ಘ್ಯ ಮಂತ್ರ ಕೂಡಾಇದ್ದು 96 ಪುಟಗಳ ದಪ್ಪ ನಯವಾದ ಕಾಗದದ ಅಂದವಾದ ಮುದ್ರಣದ ತಿದ್ದಲ್ಪಟ್ಟ ಪುನರ್ಮುದ್ರಣ **0-3-0**

೪. **ಸಾರ್ಥ ಶ್ರೀ ಗೌರೀ ಮತ್ತು ಗಣೇಶ ಪೂಜಾ**—ಇದರಲ್ಲಿ ಗೌರೀವ್ರತಕಥೆ ಸಾರ್ಥ ಗೌರೀ ಪೂಜೆ, ಗೌರೀ ಅಷ್ಟೋತ್ತರ; ಗಣಪತಿ ವ್ರತಕಥೆ, ಸಾರ್ಥ ಪೂಜೆ, ಗಣಪತಿ ಅಷ್ಟೋತ್ತರ, ಮೋದಕದಾನಮಂತ್ರ ವಗೈರೆ ಪೂರ್ಣ ಮಾಹಿತಿ ಇದ್ದು ಯಾರ ಸಹಾಯವೂ ಇಲ್ಲದೆ ಪೂಜೆ ನಡಿಸುವಷ್ಟು ಯೋಗ್ಯವಾದ 96 ಪುಟಗಳ ದಪ್ಪ ಗ್ಲೇಜ್‌ಕಾಗದದ ಸುಂದರವಾದ ಮುದ್ರಣದ ತಿದ್ದಲ್ಪಟ್ಟ ಆವೃತ್ತಿ **0-3-0**

೫. **ಸ್ತ್ರೀಜಪವಿಧಿ**—ಇದರಲ್ಲಿ ಹೆಂಗುಸರು ಆಹರಿಸತಕ್ಕ ನಿತ್ಯಾನ್ನಿಕಗಳು, ತುಲಸೀ ಪೂಜೆವಗೈರೆ ಕನ್ನಡ ಟಪ್ಪಣಿ ಸಹಿತ ಗರ್ಭಿತವಾಗಿದೆ, ಇದರಲ್ಲಿ ಕನ್ನಡ ಪುಸ್ತಕ ಗಳೂ,-ಕೊಂಕಣಿ ಭಾಷೆಯ ಪುಸ್ತುಕಗಳೂ ಇರುತ್ತವೆ ... **0-1-0**

೬. **ಸ್ವರ್ಣಗೌರೀ ಹಾಡು**— ಇದು ಪದ್ಯರೂಪವಾಗಿ ಗೌರೀ ವ್ರತವನ್ನು ಸ್ಪಷ್ಟ ವಾಗಿ ತಿಳಿಯುವಂತೆ ಕೊಂಕಣಿ ಭಾಷೆಯಿಂದ ರಚಿಸಿದ ಪುಸ್ತಕ **0-0-9**

೭. **ಶ್ರೀ ವಿಷ್ಣುಸಹಸ್ರನಾಮಾವಳೀ**— ಇದರಲ್ಲಿ ಶ್ರೀ ವಿಷ್ಣುಸಹಸ್ರನಾಮಾ ವಳಿಯೂ, ಶ್ರೀ ಕೃಷ್ಣಾಷ್ಟೋತ್ತರ ಶತನಾಮಾವಳಿಯೂ ಅಡಗಿರುವ ಸಣ್ಣ ಪುಸ್ತಕ **0-2-6**

೮. **ಶ್ರೀ ವಿಷ್ಣುಸಹಸ್ರನಾಮಸ್ತೋತ್ರ**— ಇದರಲ್ಲಿ ಶ್ಲೋಕರೂಪವಾದ ದೊಡ್ಡ ಅಂದವಾದ ಅಕ್ಷರದಿಂದ ಶ್ರೀವಿಷ್ಣುಸಹಸ್ರನಾಮಸ್ತೋತ್ರವೂ, ಶ್ರೀಕೃಷ್ಣಾಷ್ಟೋತ್ತರಸ್ತೋತ್ರವೂ ಶ್ರೀ ವೆಂಕಟೇಶ ಸ್ತೋತ್ರವೂ ಕೂಡಿರುವ ದಪ್ಪ ಕಾಗದದಲ್ಲಿ ಮುದ್ರಿಸಿದ ಸೊಗಸಾದ ಪುಸ್ತಕ **0-3-0**

೯. **ರಾಮರಕ್ಷಾ ಸ್ತೋತ್ರಂ**— (ಸರ್ವ ರಕ್ಷಾರ್ಥವಾಗಿ ಪಾರಾಯಣಕ್ಕೆ ಯೋಗ್ಯ ವಾಗುದು) **0-0-6**

ಸೆಪ್ಟೆಂಬರು 19ನೆಯ ತಾರೀಖಿನಲ್ಲಿ ನಡೆದ ಸಭೆಯಲ್ಲಿ ಸಭಿಕರು ಮಾಡಿದ ಗೌರವಕ್ಕಾಗಿ ಗೋಖಲೆಯು ಹೀಗೆಂದು ಪ್ರತ್ಯುತ್ತರವಿತ್ತರು—'ಇಂದಿಗೆ ಹದಿನೆಂಟು ವರ್ಷಗಳಿಂದ ನನ್ನ ಶಕ್ತಿ ಇದ್ದಷ್ಟು ವ ಬೇಕಾದುದನ್ನೆಲ್ಲಾ ಮಾಡಿದೆನು. ಈ ಸಂಘಾಭಿವೃದ್ಧಿಗಾಗಿ ಪ್ರಯತ್ನಿಸಿದೆನು. ಕಾಲಾನುಕೂಲ, ಕೂಲಗಳನ್ನು ಲೆಕ್ಕಿಸದೆ ಕಳಾಶಾಲಾಭಿವೃದ್ಧಿಗಾಗಿ ಏಕಾಗ್ರಚಿತ್ತದಿಂದ ಕೆಲಸ ಮಾಡಿದೆನು. ಕೊ ಕಳಾಶಾಲೆಯನ್ನು ಬಿಡಬೇಕೆಂದರೆ ಸಾಸ್ಯವಾಗಿದೆ. ಆದರೂ, ನಾನು ಬಾಲ್ಯೋತ್ಸಾಹ ಪ್ರೇರಣೆಯಿ ಮಾಡಿದ ಪ್ರತಿಜ್ಞೆಯ ಪ್ರಕಾರ ಈ ಕಳಾಶಾಲೆಯಲ್ಲಿ ನಿಯಮಿತ ಕಾಲವನ್ನು ಪೂರೈಸಲು ಭಾಗ್ಯವ ಕೊಟ್ಟ ಭಗವಂತನಿಗೆ ಅನೇಕ ವಂದನೆಗಳು. ನನ್ನ ಪ್ರತಿಜ್ಞೆಯನ್ನು ನೆರವೇರಿಸಿದುದಕ್ಕಾಗಿ ನಾನು ಸಂತೃ ಹೊಂದಿದರೂ, ಬಹಳ ವರ್ಷಗಳಿಂದ ಸ್ನೇಹಸೋದರಭಾವಗಳಿಂದ ಕಾಣುತ್ತಿದ್ದ ನಿಮ್ಮೆಲ್ಲರನ್ನು ಬಿ ವುದಕ್ಕೂ, ನನ್ನ ವಿದ್ಯಾಬಲಗಳೆಲ್ಲವನ್ನೂ ವಿನಿಯೋಗಿಸಿದ ಈ ಕಳಾಶಾಲೆಯನ್ನು ಬಿಡುವುದಕ್ಕೂ ದುಃಖಪರವಶನಾಗಿದ್ದೇನೆ. ಆದರೂ 'ನಮ್ಮನ್ನು ಏಕೆ ಬಿಡುತ್ತೀರಿ; ಇಲ್ಲಿಯೇ ಮತ್ತಷ್ಟುಕಾಲ ಬಾರದೆ?' ಎಂದು ನೀವು ಕೇಳಬಹುದು. ಈ ವಿಷಯದಲ್ಲಿ ನಾನು ಸಂಪೂರ್ಣವಾಗಿ ಆಲೋಚನೆ ಈ ತೀರ್ಮಾನಕ್ಕೆ ಬಂದೆನು. ಮೊದಲನೆಯ ಕಾರಣ:—ನನ್ನ ದೇಹಾರೋಗ್ಯವು ಈಗ ಕೆಟ್ಟಿದೆ. ವರ್ಷ ನಾನು ನನ್ನ ವಿಧಾಯಕ ಕೃತ್ಯಗಳನ್ನು ನನ್ನ ಸಹೋಪಾಧ್ಯಾಯರಂತೆ ಕ್ರಮವಾಗಿ ನೆರವೆ ಹೋದೆನು. ನನ್ನಲ್ಲಿ ಅಭಿಮಾನವುಳ್ಳ ಮಿತ್ರರು ಸಹಾಯ ಮಾಡುತ್ತಿದ್ದರೂ ಅವರಿಗೆ ಸದಾ ಯನ್ನು ಕೊಡಲು ನ್ಯಾಯವಲ್ಲವಲ್ಲವೆ? ಇದೊಂದು ಮುಖ್ಯ ಕಾರಣವು. ಲೋಕೋಪಕಾರ ಗಳಿಗಾಗಿ ಸರ್ವ ಕಾಲವನ್ನು ವಿನಿಯೋಗಿಸಿ ಕೃಷಿ ಮಾಡಬೇಕೆಂಬ ಅಭಿಲಾಷೆಯೂ, ಮತ್ತೂ ಆ ಜೀವಿತಕ್ಕಾಗಿ ನನ್ನ ಹೃದಯವು ಪರಿತಪಿಸುತ್ತಾ ಇದೆ. ದೇಶಸೇವಾ ವಿಷಯವಾಗಿ ನನ್ನಂತೆ ಪಡುವವರು ಸ್ವಾರ್ಥವನ್ನು ತ್ಯಜಿಸಿ, ಉತ್ಸಾಹ, ನಂಬಿಕೆಯುಳ್ಳವರಾಗಿ, ಮನಸ್ಪೂರ್ತಿಯಾಗಿ ವನ್ನು ನೆರವೇರಿಸದೆ ಕೃತಾರ್ಥರಾಗರು. ನೀವೆಲ್ಲರೂ ನನಗೆ ಮಾಡಿದ ಬಹುಮಾನೋತ್ಸವದಿಂದ ಸಂತೋಷವನ್ನೂ, ಕೃತಜ್ಞತೆಯನ್ನೂ ಹೇಳಲು ನನಗೆ ಶಕ್ತಿ ಸಾಲದು. ನಿಮಗೆಲ್ಲರಿಗೂ ಶುಭವುಂಟು ಈ ಕಳಾಶಾಲೆಯು ಹೆಚ್ಚು ಅಭಿವೃದ್ಧಿಹೊಂದಲಿ!'

ಈ ಮಹದ್ಭಾಕ್ಯಗಳನ್ನು ನುಡಿದು, ತಿಂಗಳಿಗೆ 30ರೂ. ಉಪಕಾರವೇತನವನ್ನು ಹೊಂದಿ ಗೋ ಯವರು ಉಪಾಧ್ಯಾಯ ಪದವಿಯನ್ನು ಬಿಟ್ಟರು. ಇವರು 18 ವರ್ಷ ಕೆಲಸಮಾಡಿದ್ದರಿಂದ ಎರಡು ರಜಾ ಅವರಿಗೆ ಬರಬೇಕಾಗಿತ್ತು. ಅದೂ ಕೂಡ ಸೇರಿದರೆ 20 ವರ್ಷ ನಿಯಮಿತ ಕಾಲವನ್ನು ಕಳೆ

ಮೂರನೆಯ ತರಂಗ

ಉಪಾಧ್ಯಾಯಪದವಿಯಲ್ಲಿ ಮಾಡಿದ ದೇಶೋಪಯೋಗ ಕಾರ್ಯಗಳು

ಶ್ರೀ ಗೋಖಲೆಯವರು 1884 ನೆಯ ಇಸವಿಯಿಂದ 1902ರ ವರೆಗೆ ಉಪಾಧ್ಯಾಯರಾಗಿದ್ದ ಈ 18 ವರ್ಷಗಳಲ್ಲಿ ದೇಶಸೇವೆಯನ್ನು ಮರೆಯದೆ ರಾಜಕೀಯ ವಿಷಯಗಳಲ್ಲಿ ತಕ್ಕಷ್ಟು ಶ್ರದ್ಧೆಯ ತೋರಿಸುತ್ತಿದ್ದರು. ಆ ಕಾಲದಲ್ಲಿ ಹಿಂದೂದೇಶ ಭಕ್ತಾಗ್ರಗಣ್ಯರಲ್ಲಿ ಒಬ್ಬರಾದ ಶ್ರೀ ಮಹ ಗೋವಿಂದ ರಾನಡೆಯವರು ಸ್ರಜಾನಾಯಕರಾಗಿದ್ದು, ಚಿಕ್ಕ ವಯಸ್ಕರಾದ ದೇಶಾಭಿಮಾನಿಗಳಿಗೆಲ್ಲ

ಪ್ರಭಾಕರ ಬುಕ್ ಡಿಪ್ಪೊ, ಉಡುಪಿ.

ಮಾರಾಟಕ್ಕೆ ತಯಾರು ಸಿಗತಕ್ಕ ಪುಸ್ತಕಗಳು

೧. **ಪದ್ಯರತ್ನಾಕರ**— ಇದರಲ್ಲಿ ಶ್ರೀಗಣಪತಿಪರ, ಶ್ರೀಕೃಷ್ಣಪರ ಮತ್ತು ಶ್ರೀ ರಾಮಪರ---ಹಿಂದುಸ್ಥಾನಿ, ಮರಾಠಿ ಮತ್ತು ಕನ್ನಡ ಭಾಷೆಯಿಂದ ಕನ್ನಡದಿಂದ ಉತ್ತಮಕಾಗದದಲ್ಲಿ ಮುದ್ರಿಸಿದ 212ಪುಟಗಳ ಫುಲ್‌ಕೆಲಿಕೊ ಬೈಂಡ್, ಬೆಲೆ **1–0–0**

೨. **ನಾಗಪಂಚಮೀವ್ರತಕಥೆ**—ಇದರಲ್ಲಿ ನಾಗಪಂಚಮಿಯಕಥೆ ಮತ್ತು ಸಾರ್ಥ ಪೂಜಾವಿಧಿಕೂಡಾ ಇರುತ್ತೆ **0–0–6**

೩. **ಸಾರ್ಥ ಶ್ರೀಕೃಷ್ಣ ಜನ್ಮಾಷ್ಟಮೀ ವ್ರತಕಥೆ**— ಇದರಲ್ಲಿ ಶ್ರೀಕೃಷ್ಣ ಜನ್ಮ ಚರಿತ್ರೆ, ಸಾರ್ಥ ಪೂಜಾವಿಧಿ, ಶ್ರೀ ವಿಷ್ಣುಸಹಸ್ರನಾಮಾವಳಿ, ಶ್ರೀಕೃಷ್ಣಾಷ್ಟೋತ್ತರ, ಅರ್ಘ್ಯ ಮಂತ್ರ ಕೂಡಾಇದ್ದು 96 ಪುಟಗಳ ದಪ್ಪ ನಯವಾದ ಕಾಗದದ ಅಂದವಾದ ಮುದ್ರಣದ ತಿದ್ದಲ್ಪಟ್ಟ ಪುನರ್ಮುದ್ರಣ **0–3–0**

೪. **ಸಾರ್ಥ ಶ್ರೀ ಗೌರೀ ಮತ್ತು ಗಣೇಶ ಪೂಜಾ**—ಇದರಲ್ಲಿ ಗೌರೀವ್ರತಕಥೆ ಸಾರ್ಥ ಗೌರೀ ಪೂಜೆ, ಗೌರೀ ಅಷ್ಟೋತ್ತರ; ಗಣಪತಿ ವ್ರತಕಥೆ, ಸಾರ್ಥ ಪೂಜೆ, ಗಣಪತಿ ಅಷ್ಟೋತ್ತರ, ನೈವೇದಕದಾನಮಂತ್ರ ವಗೈರೆ ಪೂರ್ಣ ಮಾಹಿತಿ ಇದ್ದು ಯಾರ ಸಹಾಯವೂ ಇಲ್ಲದೆ ಪೂಜೆ ನಡಿಸುವಷ್ಟು ಯೋಗ್ಯವಾದ 96 ಪುಟಗಳ ದಪ್ಪ ಗ್ಲೇಜ್‌ಕಾಗದದ ಸುಂದರವಾದ ಮುದ್ರಣದ ತಿದ್ದಲ್ಪಟ್ಟ ಆವೃತ್ತಿ **0–3–0**

೫. **ಸ್ತ್ರೀಜಪವಿಧಿ**—ಇದರಲ್ಲಿ ಹೆಂಗುಸರು ಆಚರಿಸತಕ್ಕ ನಿತ್ಯಾನ್ನಿಕಗಳು, ತುಲಸೀ ಪೂಜೆವಗೈರೆ ಕನ್ನಡ ಟಪ್ಪಣಿ ಸಹಿತ ಗರ್ಭಿತವಾಗಿದೆ, ಇದರಲ್ಲಿ ಕನ್ನಡ ಪುಸ್ತಕ ಗಳೂ, ಕೊಂಕಣಿ ಭಾಷೆಯ ಪುಸ್ತುಕಗಳೂ ಇರುತ್ತವೆ ... **0–1–0**

೬. **ಸ್ವರ್ಣಗೌರೀ ಹಾಡು**— ಇದು ಪದ್ಯರೂಪವಾಗಿ ಗೌರೀ ವ್ರತವನ್ನು ಸ್ಪಷ್ಟ ವಾಗಿ ತಿಳಿಯುವಂತೆ ಕೊಂಕಣಿ ಭಾಷೆಯಿಂದ ರಚಿಸಿದ ಪುಸ್ತಕ **0–0–9**

೭. **ಶ್ರೀ ವಿಷ್ಣುಸಹಸ್ರನಾಮಾವಳೀ**— ಇದರಲ್ಲಿ ಶ್ರೀ ವಿಷ್ಣುಸಹಸ್ರನಾಮಾ ವಳಿಯೂ, ಶ್ರೀ ಕೃಷ್ಣಾಷ್ಟೋತ್ತರ ಶತನಾಮಾವಳಿಯೂ ಅಡಗಿರುವ ಸಣ್ಣ ಪುಸ್ತಕ **0–2–6**

೮. **ಶ್ರೀ ವಿಷ್ಣುಸಹಸ್ರನಾಮಸ್ತೋತ್ರ**— ಇದರಲ್ಲಿ ಶ್ಲೋಕರೂಪವಾದ ದೊಡ್ಡ ಅಂದವಾದ ಅಕ್ಷರದಿಂದ ಶ್ರೀವಿಷ್ಣುಸಹಸ್ರನಾಮಸ್ತೋತ್ರವೂ, ಶ್ರೀಕೃಷ್ಣಾಷ್ಟೋತ್ತರಸ್ತೋತ್ರವೂ ಶ್ರೀ ವೆಂಕಟೇಶ ಸ್ತೋತ್ರವೂ ಕೂಡಿರುವ ದಪ್ಪ ಕಾಗದದಲ್ಲಿ ಮುದ್ರಿಸಿದ ಸೊಗಸಾದ ಪುಸ್ತಕ **0–3–0**

೯. **ರಾಮರಕ್ಷಾ ಸ್ತೋತ್ರಂ**— ಸರ್ವ ರಕ್ಷಾರ್ಥವಾಗಿ ಪಾರಾಯಣಕ್ಕೆ ಯೋಗ್ಯ ವಾಸುದು **0–0–6**

೧೦. ಗಜೇಂದ್ರಮೋಕ್ಷಣ— **0-1-6**

೧೧. ಮಾಯಾ ಸ್ತುತಿ— **0-2-0**

೧೨. ಕುಲಶೇಖರಾಳ್ವಾರ್ ಮುಕುಂದಮಾಲಾ ಸ್ತೋತ್ರಂ— **0-0-6**

೧೩. ಭಕ್ತಿ ರತ್ನಾಕರ— (ಕೃಷ್ಣಪರ ಪದಗಳು) . **0-2-0**

೧೪. ಕನ್ನಡ ಮೃಚ್ಛಕಟಿಕ ನಾಟಕವು-- **0-5-0**

೧೫. ಶ್ರೀ ಸತ್ಯನಾರಾಯಣ ಕಥೆ— ಶ್ರೀ ಸತ್ಯನಾರಾಯಣ ಕಥೆಯನ್ನು ಕನ್ನಡ ಭಾಷೆಯಿಂದ ಸರಳವಾಗಿ ಹಾಡುರೂಪವಾಗಿ ರಚಿಸಿದ ಸೊಗಸಾದ ಪುಸ್ತಕ; ಸ್ತ್ರೀಯರಿಗೆ ಅತ್ಯಂತ ಉಪಯುಕ್ತವಾದುದು **0-1-9**

೧೬. ಶ್ರೀಕೃಷ್ಣ ಸಂಧಾನ— ಇದು ಸರಳಭಾಷೆಯಿಂದ ಮ. ರಾ. ಕೆ. ಬಿ. ರಾಮಕೃಷ್ಣಯ್ಯನವರು ಸುರಸವಾಗಿ ರಚಿಸಿ "ಬೋಧಿನಿ"ಯಲ್ಲಿ ಪ್ರಕಟವಾದ, ದೊಡ್ಡ ಅಕ್ಷರಗಳಿಂದ ಅಂದವಾಗಿ ಮುದ್ರಿಸಿದ ಅತ್ಯುತ್ತಮ ಪುಸ್ತಕ ... **0-4-0**

೧೭. ಜೀವನ್ಮುಕ್ತಲೀಲಾ ವೈಕುಂಠಪಠವು—ಇದು ಶ್ರೀಮದ್ವ್ಯಾಧಿರಾಜ ಸ್ವಾಮಿಗಳವರಿಂದ ಶಾಸ್ತ್ರೀತ್ಯಾ ವಿರಚಿತವಾದ ಕವಡಿಯಿಂದ ಆಡುವ (ತಮ್ಮ ಮುಂದಿನ ಜನ್ಮದ ಫಲಗಳನ್ನು ತಿಳಿದುಕೊಳ್ಳುವ) ಕನ್ನಡ ಲಿಪಿಯ ಪಠವು ಬಹು ಸುಂದರವಾಗಿ ದಪ್ಪ ಕಾಗದದ ಮೇಲೆ ಬ್ಲಲ್ ಕಲರಿನಿಂದ ಮುದ್ರಿಸಿದುದು. ಬೆಲೆ ಪರ ಲರ **0-1-0**

೧೮. ಲವಕುಶರ ಕಾಳಗದ ಪಠದಸಂಧಿ— ಇದರಲ್ಲಿ ಸಭಾಲಕ್ಷಣ, ಕೋಡಂಗಿಯರ ಹಾಸ್ಯ, ಅರ್ಥಸಹಿತ ಪಠದಸಂಧಿಸಹಾ ಕೂಡಿರುವ ದಪ್ಪವಾದ ಬೈಂಡುಳ್ಳ ಉತ್ತಮ ಕಾಗದದ ಸಂಗ್ರಹಕ್ಕೆ ಯೋಗ್ಯವಾದ ಪುಸ್ತಕ . **0-10-0**

೧೯. ಶ್ರೀ ಕಾಳಿಕಾಂಬಾ— ಇದು ಪಂಚಬ್ರಾಹ್ಮಣರ ಆನೆಗುಂದಿ ಸಂಸ್ಥಾನದ ಗುರುಗಳಿಂದ ಕೊಟ್ಟಪಟ್ಟ ಅವರ ನಡವಳಿಕೆ ಕುರಿತು ಹುಕುಂ ... **0-2-0**

೨೦. ದ್ರೋಣಪರ್ವ— ಯಕ್ಷಗಾನ ಹೊಸದಾಗಿ ತಯಾರಿಸಿದ್ದು ... **0-4-0**

೨೧. ಕೊಂಕಣಿ ಭಾಷೆಯ ಜೆಂದ್ರಹಾಸ ನಾಟಕ— ... **0-4-0**

೨೨. ವಿವೇಕ ರತ್ನಾಕರ— (ನುರಾರಿ ಲಿಪಿಯ ಕೊಂಕಣಿಭಾಷೆಯ ಅಭಂಗಗಳು) **0-4-0**

೨೩. ಭಜನೆ ರಾಮಾಯಣ— (ಕನ್ನಡ ಮತ್ತು ಮೋಡಿ ಲಿಪಿ) . **0-1-0**

೨೪. ಕಮಲ ಕುಮಾರಿ— (ನೊವೆಲ್) **0-9-0**

೨೫. ವಿಶಾಲಾಕ್ಷಿ— **0-12-0**

೨೬. ಕಾಮೇಶ್ವರೀಚರಿತ— **0-6-0**

ಪ್ರಭಾಕರ ಮುದ್ರಾಯಂತ್ರ,

ಉಪಯೋಗಕ್ಕೆ ಕನ್ನಡಾಭಿಲಾಷಿಗಳಿಗೆ

NEWS PAPER EXHIBITION
GARAVALLI 577524,
Dist. Karnataka State, INDIA

ಕರ್ನಾಟಕ ಸರ್ಕಾರಿ ಪತ್ರಿಕೆ

ಕನ್ನಡ ಸಂಶೋಧನ ವಿಭಾಗ
ಕನ್ನಡ ಸಾಹಿತ್ಯ ಪರಿಷತ್ತು
ಚಾಮರಾಜಪೇಟೆ, ಬೆಂಗಳೂರು-೧೮

ಪ್ರತಿಕದಕ್ಷಿಗುರುತು ಹಾಕತಕ್ಕದ್ದಲ್ಲ

ಮಂಗಳವಾರ 1916

ಸಂಪುಟ 15 | ಸೆಪ್ಟಂಬರ್, 1916 | ಸಂಚಿಕೆ 12.

ಪ್ರತಿಕವನ್ನು ಈ ವಿಭಾಗದಿಂದ ಹೊರಗೆ ಒಯ್ಯತಕ್ಕದ್ದಲ್ಲ

ಪಾಠಶಾಲೆಯಲ್ಲಿಗೆ

ಇಂಡಿಯಾ ದೇಶದ ನಮ್ಮ ಪ್ರಭುಗಳ ಮನಸ್ಸಿನಲ್ಲಿ ತಿಳುವಳಿಕೆಯು ಪರಮಪುಷ್ಟಿ ವೃದ್ಧಿಯಾಗಲೆಂದು ಹಾರೈಸುತ್ತೇವೆ - ಜಿದನೇ ಬುಜ್ಜಿ ಸಂಪಾದಕರು

ಕಳದ ಸಂಚಿಕೆಯಲ್ಲಿ ಪ್ರಸ್ತಾಪಿಸಿದಂತೆ ಬೆಂಗಳೂರಿನಲ್ಲಿ ಸ್ತ್ರೀಯರಿಗಾಗಿ ಒಂದು ಕಲಾಶಾಲೆಯನ್ನು ಸ್ಥಾಪಿಸಬೇಕೆಂಬ ಪ್ರಯತ್ನವು ಕೆಲವು ಸಜ್ಜನರಿಂದ ಆರಂಭವಾಗಿದೆ. ಸುಮಾರು ಎರಡು ಸಾವಿರ ರೂಪಾಯಿಗಳಷ್ಟು ಹಣವನ್ನು ಸಹ ಕೆಲವರು ಈಗಾಗಲೇ ಕೊಟ್ಟಿದ್ದಾರೆ. ಸುಮಾರಾಗಿ ಇಷ್ಟು ಹಣವಿದ್ದರೆ ಒಂದು ಸಣ್ಣ ಪ್ರಮಾಣದ ಕಲಾಶಾಲೆಯನ್ನು ಆರಂಭಿಸಬಹುದು. ಮುಂದಾಗಿ ಇಷ್ಟಕ್ಕಿಂತ ಹೆಚ್ಚಿನ ಹಣವು ಒಂದು, ಕ್ರಿಯಾ ಯೋಜನೆಯೊಂದು, ಮೂರು ವರ್ಷ ಕಲಾಶಾಲೆಗಳು ಸ್ಥಾಪನೆಯಾಗಿ ಒಂದು ಸೈದ್ಧ ಕಲಾಶಾಲೆ ಸ್ಥಾಪನೆಯ ಯೋಜನೆಯು ಮದ್ರಾಸು ಸರ್ಕಾರದವರಲ್ಲಿದೆ. ದಕ್ಷಿಣ ಸೆಗರದಲ್ಲಿ ಪ್ರೇಟ್ ಪಾರ್ಟಿಂಬ್ ಸುಷಿತರ (ಸೈದ್ಧದ) ಕಾಲೇಜು ಸ್ತ್ರೀಯರಿಗಾಗಿ ಬರುವ ಹಕ್ಕೊ ಒರ ಅಂಗಳಲ್ಲಿ ಸ್ಥಾಪಿಸಲ್ಪಡುವುದು ಮೊಂಬಾಯಿ ಯಲ್ಲಿ ಸ್ತ್ರೀಯರಿಗಾಗಿ ಒಂದು ಕ್ರೈಸ್ತ ಕಾಲೇಜು ಸ್ಥಾಪಿಸಲ್ಪಡಬೇಕೆಂಬ ಏರ್ಪಾಡುಗಳು ನಡೆಯುತ್ತಾ ಇವೆ ಸ್ತ್ರೀ ವಿದ್ಯಾಭ್ಯಾಸಕ್ಕಾಗಿ ಅಸದೃಶವಾದ ಪ್ರಯಾಸವನ್ನು ತೆಗೆದು ಕೊಳ್ಳುತ್ತಿರುವ ಪ್ರೊಫೆಸರ್ ಕಾರ್ವೆಯವರು ಪೂನಾಪಟ್ಟಣದಲ್ಲಿ ಸ್ತ್ರೀಯರ ಯೂನಿವರ್ಸಿಟಿ (ಸಕಲ ವಿದ್ಯಾಶಿಲಯ) ಯನ್ನು ಸ್ಥಾಪಿಸಬೇಕೆಂಬ ಹುಮ್ಮಸ್ಸಿನವರಾಗಿದ್ದಾರೆ. ಪಂಜಾಬ್ ಪ್ರಾಂತ್ಯದಲ್ಲಿ ಬಾಲಕಿಯರ ವಿದ್ಯಾಭ್ಯಾಸಕ್ಕೋಸ್ಕರ ಸಕಾ ಪಟ್ಟ ಉತ್ಸಾಹವುಳ್ಳವರು ಅಸಾಧಾರಣವಾದ ಪ್ರಯತ್ನಗಳನ್ನು ಮಾಡುತ್ತಿರುವುದು ಸ್ತೋತ್ರಾರ್ಹವಾಗಿದೆ. ದಕ್ಷಿಣ ಇಂಡಿಯಾದಲ್ಲಿ ಹೆಂಗಸರಿಗಾಗಿ ವೈದ್ಯಶಾಸ್ತ್ರವನ್ನು ಬೋಧಿಸುವ ಒಂದು ಪಾಠಶಾಲೆಯು ಆಗಲ್ಪಡುವ ಏರ್ಪಾಡುಗಳು ನಡೆಯುತ್ತಿರುವುದಾಗಿ ನಮಗೆ ತಿಳಿಯಬರುತ್ತದೆ. ಬಾಲಕಿಯರಿಗಾಗಿ ಪ್ರೌಢಪಾಠಶಾಲೆಯು ನಡೆಯಬೇಕೆಂಬ ಅವಶ್ಯಕತೆಯು ಸ್ಫುಟವಾಗಿ ಪ್ರಕಟವಾಗುತ್ತಲೇ ಇದೆ ಅನ್ನು

ಅಲ್ಲಾ ಏರ್ಪಾಡಿನಿಂದ ತುಂಬಿಹೋಗುತ್ತವೆ ಎಂಬುದಾಗಿ ಕೆಲವರು ಅಭಿಪ್ರಾಯಪಡುತ್ತಾರೆ ಅಂತಹ ಸಮಾಧಾನದ ಹಿರುವರಕ್ಕೆ ನಾವು ಇತ್ತಾ ಪೂರ್ಣಕವಾಗಿ ಸ್ಪಷ್ಟೀಕರಣವನ್ನು ಮಾಡುತ್ತೇವೆ.

ಈ ದೇಶದ ಹೆಂಗಸರ ಬಾಳ್ಕೆಯು ಸುಧಾರಣೆಗೊಳ್ಳುವುದರಲ್ಲಿ ಸಂಬಂಧ ಪಟ್ಟಿರುವ ಮುಖಂಡರನ್ನು ಮಿಸುಕುವುದು ಮೇಲೆ ಹೇಳಿದ ಕಾಲೇಜುಗಳ ವಿದ್ಯಾರ್ಥಿನಿಯರ ಸಂಖ್ಯೆಯ ಜೊತೆಗೆ ಮುಂದಾಗಿ ಅವಶ್ಯಕವಿದ್ದಾಗ ಹೆಂಗಸರನ್ನು ಉಪಚರಿಸುವುದಕ್ಕೆ ಸ್ತ್ರೀ ವೈದ್ಯರು ಬೇಕಾಗಿದೆ. ಒಟ್ಟು ಸಂಸ್ಥಾನಕ್ಕೆಲ್ಲಾ ಕೆಲವರು ಮಾತ್ರ ಇರುವುದಕ್ಕೆ ಬದಲಾಗಿ, ಈ ದೇಶದಲ್ಲಿ ಚಿಕ್ಕದು ದೊಡ್ಡದು ಪ್ರತಿಯೊಂದು ಊರುಗೂ ಒಬ್ಬೊಬ್ಬ ಸ್ತ್ರೀ ವೈದ್ಯರಿರಬೇಕು. ಹೆಂಗಸರು ಸ್ಯಾನಿಟರಿ ಇನ್‌ಸ್ಪೆಕ್ಟರಾಗಿರುವುದು ಇಂಡಿಯಾದಲ್ಲಿ ಅತ್ಯಗತ್ಯವಾಗಿದೆ ಆರೋಗ್ಯವಿಚಾರದ ಅವಶ್ಯಕತೆಯನ್ನು ಪೂರೈಸಲು ನಮ್ಮ ಊರುಗಳ ಪಳ್ಳಿಗಳ ಹೆಂಗಸರಿಗೆ ಈಗಿನ ಸ್ಥಿತಿಯಲ್ಲಿ ತಿಳಿಸುವುದಕ್ಕಿಂತ, ಈ ಕೆಲಸಕ್ಕೆ ಬರುವ ಹೆಂಗಸರಿಂದ ಒಳಗೆ ಸುಲಭವಾಗಿ ಸಾಧ್ಯವಾಗುತ್ತದೆ. ಬಾಲಿಕಾ ಪಾಠಶಾಲೆಗಳಲ್ಲಿ ಹೆಂಗಸರೇ ಉಪಾಧ್ಯಾಯಿನಿಯರಾಗಿರಬೇಕೆಂಬ ಅಗತ್ಯವು ಯಾವಾಗಲೂ ಇದ್ದೇ ಇದೆ. ಈ ವಿಷಯದಲ್ಲಿ ನಾವು ಅನೇಕ ಸಲ ಬರೆದಿರುತ್ತೇವೆ ಬಾಲವಿಧವೆತುಗಳಿಗೆ ಆಶ್ರಮಗಳನ್ನು ಕಲ್ಪಿಸಿ, ಅವರ ಊಟ ಉಪಚಾರಾದಿಗಳಿಗೂ ಉಪಯೋಗಕರವಾದ ರೀತಿಯಲ್ಲಿ ಅವರ ಬಾಳ್ಕೆಯು ಪರಿಣಮಿಸುವಂತೆ ಅವರಿಗೆ ಕೊಡಬೇಕಾದ ಶಿಕ್ಷಣಕ್ಕೂ ಮೇಲುಸಂಚಾರಣೆಯನ್ನು ವಹಿಸುವುದಕ್ಕೆ ಒಳ್ಳೇ ವಿದ್ಯಾವತಿಯರಾದ ನಿಪುಣೆಯರು ಬೇಕಾಗಿದೆ. ಹೆಂಗಸರ

ಪ್ರತಿ ಪ್ರಾತಃಕಾಲವೂ ಪ್ರಕಟಿಸಲ್ಪಡುವುದು.

ಚಂದಾ ತಿಂಗಳಿಗೆ ೧೧ ಆಣೆ.

ಕ್ರಯ ಜಿದಿ ಸಂಖ್ಯೆ ೧ ಕ್ಕೆ ೬ ಪೈ
ಟಪಾಲು ಖಾಸಲು ಬೇರೆ.

ಕೀರ್ತಿ ಮುತ್ತೋರ ಚಾರಾಧೀನ ರಾದ ಮೈಸೂರಿನ
"ಸ್ವಾಮಿಗೆ ಜ್ಞಾನೋದಯಕ್ಕೆ" ಸಚಿವ ಸ್ಥಿತಿಯಿರದ

ಸೂರ್ಯೋದಯ

THE WEALTH OF MYSORE!

ಉದ್ಯೋಗಿನಂ ಪುರುಷಸಿಂಹಮುಪೈತಿಲಕ್ಷ್ಮೀಃ ದೈವೇನದೇಯಮಿತಿಕಾಪುರುಷಾವದನ್ತಿ |
ದೈವಂ ನಿಹತ್ಯ ಕುರುಪೌರುಷಮಾತ್ಮಶಕ್ತ್ಯಾ ಯತ್ನೇ ಕೃತೇ ಯದಿನ ಸಿಧ್ಯತಿ ಕೋತ್ರ ದೋಷಃ ||

ಸಂಪುಟ ೨.] ಮೈಸೂರು, ೧೯ ನೇ ಫೆಬ್ರವರಿ, ೧೯೦೬. (ಸಂಚಿಕೆ ೧೦೪)

ಸಂಪದಭ್ಯುದಯ.

ಶನಿವಾರ, ೧೯ ನೇ ಫೆಬ್ರವರಿ, ೧೯೦೬.

ಬಾವಿಗಳು.

ನಮ್ಮ ಮೈಸೂರು ಸಂಸ್ಥಾನದಲ್ಲಿ ಪ್ರಾಯಕಸಾ ತರೀ ಸಾಗುವಳಿ ಯು ಕೆರೆಯ ಕಾಲುವೆಗಳಿಂದ, ಯ ಕಾಲುವೆಗಳಿಂದಲೂ ನಡೆಯುತ್ತವೆ. ಬ ವಿ ಂದ ನೀರನ್ನು ಮೇಲಕ್ಕೆತ್ತಿ ಸಾಗುವಳಿ ಮಾ ಡು ತ್ತವು ವಿಶೇಷವಾಗಿರುವುದಿಲ್ಲ. ನಮ್ಮ ಮೈಸೂ ಸುಪ್ರಸಿದ್ಧವಲ್ಲದೆ ಈ ಪ್ರಯತ್ನವು ವಿಶೇಷವಾಗಿದ್ದು ದವರೂ ಕೂಡ ತುಂಬಾ ಪ್ರೋತ್ಸಾಹವನ್ನು ಕೊಡಬಹುದು. ನಮ್ಮ ಗವರ್ನಮೆಂಟಿನವರು ಈ ಪಂಪುಗಳು ಉಪಯೋಗಕ್ಕೆ ಬರಲೆಂದು ಈ ಪಂಪುಗಳನ್ನು ವಿಸ್ತರಿಸುವುದರಲ್ಲಿ ಸಮರ್ಥರಾದ ಮೆಸ್ಸಿ ಅರ್ಥೆಫ್ರೆಡ್ ಚಾಟರ್ಟರವರನ್ನು ಕರೆಸಿ ಅವರಿಗೆ ಈ ಕೆಲಸವನ್ನು ಒಪ್ಪಿಸಿರುತ್ತಾರೆ. ಅವರ ಇಲಾಖೆಯುಲ್ಲಿ ಈ ಬಾಬುಗಳಲ್ಲಿ ತಯಾರಾದ ದೊಡ್ಡ ಮನುಷ್ಯರೂ ಅನೇಕರಿರುತ್ತಾರೆ. ಇವರೆಲ್ಲರೂ ಈ ಭಾಗದಲ್ಲಿ ಸಹಾಯಮಾಡುವುದಕ್ಕೆ ಸಿದ್ಧರಾಗಿರುವರು. ಇದಲ್ಲದೆ ನಮ್ಮ ವ್ಯವಸಾಯದ ಇಲಾಖೆಯ ಮೊಖ್ತೇಸರರಾದ ಡಾಕ್ಟರ್ ಕೋಲ್ಮ್ಯಾನ್‌ರವರೂ ಮತ್ತು ಇವರ ಅಸಿಸ್ಟೆಂಟರುಗಳೂ ಒಹಳ ಒಳ್ಳೆಕಾಲಿಗಳು. ಬೇಕಾದ ಸಹಾಯವನ್ನು ಮಾಡುವುದಕ್ಕೆ ಇವರೂ ಸಿದ್ಧರಾಗಿರುವರು. ನಮ್ಮ ಪರಸ್ಪರ ಸಹಾಯ ಸಂಘದ ಭೆಯು ಉಪಕ್ರಮವಾದಕೂಡಲೆ ಸ್ಟೇಟ್ಸ್ ಸಂಬಂಧವಾದ ಕೆಲವು ಎಕ್ಸಪೆರಿಮೆಂಟುಗಳು ಮಾಡಲ್ಪಟ್ಟವು. ತರುವಾಯ ಷೇಕ್ಸ್‌ಪಿಯರ್ ಮಹಾಕವಿಯು ಹ್ಯಾಮ್ ಲೆಟ್ ಎಂಬ ನಾಟಕದಲ್ಲಿ ಬಂದು ಭಾಗವು ಅಭಿನಯಿಸಲ್ಪಟ್ಟಿತು ಅನಂತರ ಶಾಕುಂತಲಾ ನಾಟಕದಲ್ಲಿ ಒಬ್ಬ ಬೆಸ್ತನು ಒಂದು ಮೀನಿನ ಹೊಟ್ಟೆಯಲ್ಲಿ ಸಿಕ್ಕಿದ ಬಂದು ಉಂಗುರದ ವಿಷಯವೂ ಅವನನ್ನು ದಸ್ತಗಿರಿ ಮಾಡುವುದಕ್ಕೆ ಪ್ರಯತ್ನಮಾಡಿದ ಪೊಲೀಸ್‌ನವರ ವಿಷಯವೂ ಅಭಿನಯಿಸಲ್ಪಟ್ಟವು. ತರುವಾಯ ಹೆಡ್ಮಾಸ್ಟರ್‌ರವರು ಕಾಲೇಜಿನ ರಿಪೋರ್ಟನ್ನು ಓದಿದರು. ಈ ರಿಪೋರ್ಟಿನಿಂದ ಹೈಸ್ಕೂಲ್ ಎಸ್ಟು ಅಭಿವೃದ್ಧಿಗೆ ಬಂದಿರುವುದೊ ಆದು ಗೊತ್ತಾಯಿತು. ತರುವಾಯ ಇನಾಮುಗಳನ್ನು ಕೊ

ವೈಜ್ಞಾನಿಕವಾದ ನೀರೆತ್ತುವ ಯಂತ್ರ [illegible] ಕೃಷಿಕರಿಗೆ ಅತ್ಯಂತ ಉಪಯೋಗಕ್ಕೆ ಬರುವಂಥದಾಗಿರುವದು. ಬಾವಿ ಬಾವಿಯಿಂದ 100 ಎಕರೆ ಪೈರುಪಚ್ಚೆಗಳಿಗೂ 640 ಎಕರೆಗಳ ಪಶುಗಳಿಗೂ ನೀರುಣಿಸುವದಕ್ಕೆ ತಕ್ಕಷ್ಟು ನೀರು ದೊರೆಯುವದೆ. ಪ್ರಾಣಿಬಲವನ್ನೂ, ದಾರಿದ್ರ್ಯವನ್ನೂ ಹೊಗಲಾಡಿಸುವುದಕ್ಕೆ ಇಂಥಾ ಯಾವಿಗಳನ್ನು ತೆಗೆಸಿ ತರೀ ಸಾಗುವಳಿ ಮಾಡುವ ಪ್ರಯತ್ನಕ್ಕಿಂತಲೂ ಶ್ರೇಷ್ಠವಾದ ಪ್ರಯತ್ನವು ನಮಗೆ ತೋರುವುದಿಲ್ಲ. ಕೆರೆಗಳ ಸವಿಾಪದಲ್ಲಿಯೂ, ನದಿಗಳ ಸವಿಾಪದಲ್ಲಿಯೂ, ಪಂಪುಗಳನ್ನಿಟ್ಟು ನೀರುಸರಬರಾಜು ಮಾಡಿಕೊಂಡರೆ ತಿಪ್ಪಟ್ಟಲ್ಲಿರತಕ್ಕ ಕುಷ್ಕಿಜಮೀನುಗಳಲ್ಲಿ ಬಹುಭಾಗವು ತರೀ ಸಾಗುವಳಿಗೆ ತರಲ್ಪಡುವುದು. ಅನೇಕ ಲಕ್ಷ ಎಕರೆ ಜಮೀನುಗಳು ತರೀ ಸಾಗುವಳಿಗೆ ತರಲ್ಪಡಬಹುದು. ನೀರನ್ನು ಎತ್ತುವುದಕ್ಕೆ ಮೂರುವರೆ ಕುದರೆ ಬಲವುಳ್ಳ ಒಂದು ಆಯಿಲ್ ಎಂಜಿನ್‌ನನ್ನು ಇಟ್ಟುಕೊಂಡರೆ ಎಂಟು ಜೋಡಿ ಎತ್ತುಗಳು ಎಷ್ಟು ಕೆಲಸ ಮಾಡಬಹುದೊ ಅಷ್ಟು ಕೆಲಸವನ್ನು ಮಾಡುವುವು. 8 ಜೋಡಿ ಎತ್ತುಗಳಿಗೆ ತಿಂಡಿಯ ಖರ್ಚು ಎಷ್ಟಾಗುವುದೊ ಅದನ್ನು ನೋಡಿದರೆ ಈ ಆಯಿಲ್ ಎಂಜಿನ್‌ನಿನಖರ್ಚು ವಿಶೇಷವಾಗುವುದಿಲ್ಲ. ಎಂಜಿನ್‌ಕ್ಕೆ ಬಹಳ ಖರ್ಚಾದಾಗ್ಯೂ ಈ ಎಂಜಿನ್ ಖರ್ಚು ೫೦ ರೂ. ಗಿಂತ ಜೆಚ್ಚಾಗಿ ಆಗುವುದಿಲ್ಲ. ಈ ಎಂಜಿನ್‌ಗೆ ಬೇರೆ ಖರ್ಚುಗಳೇನೂ ಇರುವುದಿಲ್ಲ. ವರ್ಷಕ್ಕೆ ಎಂಟು ತಿಂಗಳು ವ್ಯವಸಾಯಕ್ಕೆ ನೀರನ್ನು ಒದಗಿಸುವದಾಡಿಕೊಳ್ಳಬಹುದು. ಉಳಿದ ನಾಲ್ಕು ತಿಂಗಳುಗಳಲ್ಲಿ ಯಾವುದಾದರೂ ಬಂದು ಕೈಗಾರಿಕೆಗೆ ಈ ಯಂತ್ರವನ್ನು ಉಪಯೋಗಿಸಬಹುದು. ಬಂದು ಯಂತ್ರವು ೨ ಸಾವಿರ ರೂಪಾಯಿಗೆ ದೊರೆಯುವುದು. ಇದಕ್ಕೆ ಅವಿಚ್ಛಿನ್ನವಾಗಿ ಕೆಲಸವನ್ನು ಕೊಟ್ಟರೆ ತಿಂಗಳಿಗೆ ೧೦೦ ರೂ. ಬರ್ತಾಗುವುದು. ಇದಕ್ಕೆ ಬೇಕಾದ ಬಂಡವಾಳವನ್ನು ಬೇರೆ ಒದಗಿಸಬೇಕಾಗಿಲ್ಲ. ಸವಿಾಪದಲ್ಲಿರತಕ್ಕ ಹತ್ತು ಥವಾ ಇಪ್ಪತ್ತು ಜನ ರೈತರು ಪರಸ್ಪರ ಸಹಾಯದ ಏರ್ಪಾಡುಗಳಿಂದ ಇದನ್ನು ತೆಗೆದುಕೊಂಡು ಉಪಯೋಗಿಸಬಹುದು. ಇಂಥಾ ಕೆಲಸಗಳಿಗೆ ಪರಸ್ಪರಸಹಾಯ ಸಂಘ

[illegible] ಒದಗಿಸುವುದಕ್ಕೋಸ್ಕರ ಪರಸ್ಪರ ಸಹಾಯ ಸಂಘಗಳ ಜತೆಗೆ ಪ್ರೊವಿನಿಷಿಯಲ್ ಬ್ಯಾಂಕುಗಳನ್ನು ಏರ್ಪಡಿಸಿರುವರು. ಇವೆಲ್ಲಿರಿಗಿಂತಲೂ ಹೆಚ್ಚಾಗಿ ನನ್ನ ಖಾವಂದರವರು ಸ್ಟೇಟ್ ಬ್ಯಾಂಕುಗಳ ಮೂಲಕ ದ್ರವ್ಯವು ಒದಗುವಂತೆ ತಕ್ಕ ಏರ್ಪಾಡನ್ನು ಮಾಡಿರುವರು. ನನ್ನ ರೈತರು ಇವುಗಳ ಪ್ರಯೋಜನಗಳನ್ನು ಹೊಂದುವುದರಲ್ಲಿ ಉದಾಸೀನರಾದರೆ ಅದು ನನ್ನ ತಪ್ಪೆ ಹೊರತು ಮತ್ತೆ ಬೇರೆ ಇಲ್ಲ. ಸರಕಾರದವರು ನನ್ನ ಕ್ಷೇಮಕ್ಕಾಗಿ ಮಾಡಿರುವ ಏರ್ಪಾಡುಗಳ ಪ್ರಯೋಜನವನ್ನು ಹೊಂದುವುದರಲ್ಲಿ ನನ್ನ ಜನಗಳು ಆಲಸ್ಯಮಾಡದೆ ಅದರ ಪ್ರಯೋಜನವನ್ನು ಹೊಂದುವರೆಂದು ನಾವು ನಂಬಿದ್ದೇನೆ.

ಶ್ರೀವರ್ಧಮಾನರಾಜರ ಕಾಲೇಜ್ ಹೈ ಸ್ಕೂಲಿನ ಇನಾಮುಗಳ ಸಭೆ

—೦—

ಈ ಹೈ ಸ್ಕೂಲಿನಲ್ಲಿ ಇದುವರೆಗೂ, ಸಭೆಯನ್ನು ಮಾಡದೆ ಪ್ರತಿವರ್ಷವೂ ಇನಾಮುಗಳು ಪ್ರೈವೆಟ್ಟಾಗಿ ವಿದ್ಯಾರ್ಥಿಗಳಿಗೆ ಕೊಡಲ್ಪಡುತ್ತಿದ್ದವು. ಈಗ ಹೆಡ್ಮಾಸ್ಟರಾಗಿರತಕ್ಕ ವ॥ ಶಿ. ವೆಂಕಟರಾಮಯ್ಯನವರು ಇಂಥಾ ಸಭೆಗಳಲ್ಲಿ ಬಹುಮಾನವನ್ನು ಕೊಡುವುದರಿಂದ ವಿದ್ಯಾರ್ಥಿಗಳಿಗೆ ವಿಶೇಷ ಪ್ರೋತ್ಸಾಹವಾಗುವುದೆಂದು ಭಾವಿಸಿ ಈ ಬಹುಮಾನದ ಸಭೆಯಲ್ಲಿ ಇನಾಮುಗಳನ್ನು ಕೊಡಬೇಕೆಂದು ನಿಶ್ಚಯಿಸಿದರು. ಈ ಸಭೆಗೆ ಈ ರಾಜಧಾನಿಯ ನಿವಾಸಿಗಳಲ್ಲಿ ವೃದ್ಧರಾಗಿಯೂ, ಅನುಭವಶಾಲಿಗಳಾಗಿಯೂ, ವಿದ್ಯಾವಂತರಾಗಿಯೂ, ವಿದ್ಯಾಭಿಮಾನಿಗಳಾಗಿಯೂ ವಿದ್ಯಾರ್ಥಿಗಳಿಗೆ ಸಹಾಯ ಮಾಡುವುದರಲ್ಲಿ ಮುಂದಾಳುಗಳಾಗಿಯೂ ಇರುವ ಮಾ॥ ವಿ. ಎನ್. ನರಸಿಂಹ್ಯಯ್ಯಂಗಾರ್ಯರವರು ಸಭಾಧ್ಯಕ್ಷರಾಗಿ ಪ್ರಾರ್ಥಿಸಲ್ಪಟ್ಟಿದ್ದರು. ಅವರು ಸದರಿ ಸಭೆಯು ಅಗತ್ಯಾಸನವನ್ನು ವಹಿಸಿ ಕಾರ್ಯನಿರ್ವಾಹವನ್ನು ಮಾಡಿದರು. ಸ

ನ್ನು ಮಾಡಿದರು. ಸದರಿ ಉಪನ್ಯಾಸದಲ್ಲಿ ಮಾಡಿದ [illegible] ತೋಪದೇಶಗಳಲ್ಲಿ ಬಾದೆರಡು ವಿಷಯಗಳಿಗೆ ವಿದ್ಯಾರ್ಥಿಗಳು ಯಾವಾಗ್ಯೂ ಗಮನವನ್ನು ಕೊಡಬೇಕು. ಅವುಗಳಾವುವೆಂದರೆ, ಚನ್ನಾಗಿ ಬದುಕಬೇಕಾದರೆ ವಿದ್ಯಾವಂತರಾಗುವುದು ಮಾತ್ರವೇಸಾಲದು. ವಿನಯವೇ ಮೊದಲಾದ ಗುಣಾತಿಶಯಗಳು ಅತ್ಯಂತ ಆವಶ್ಯಕವೆಂಬದಾಗಿ ಹೇಳಿದರು. ಅನೇಕ ವಿದ್ಯಾರ್ಥಿಗಳು ವಿಶೇಷವಿದ್ಯಾವಂತರಲ್ಲದೇ ಇದ್ದಾಗ್ಯೂ, ಹೇಗೆ ಅಹಂಕಾರಿಗಳಾಗಿರುವರೊ, ಈ ಅಹಂಕಾರದಿಂದ ಅವರಿಗೆ ಹೇಗೆ ನಷ್ಟವುಂಟಾಗುವುದೊ ವಿದ್ಯಾವಂತರಿಗೆ ವಿನಯಾದಿ ಸದ್ಗುಣಗಳು ಹೇಗೆ ಅಲಂಕಾರವಾಗಿ ಪರಿಣಮಿಸುವುವೊ ಅದನ್ನೂ ಶ್ರುತಪಡಿಸಿದರು. ಬರೀ ವಿದ್ಯಾವಂತರು ವಿನಯಾದಿ ಸದ್ಗುಣಗಳಿಲ್ಲದೇ ಇದ್ದರೆ ಎಂದಿಗೂ ವೃದ್ಧಿಗೆ ಬರುವುದಿಲ್ಲ. ವಿದ್ಯಾ ವಿಹೀನರಾಗಿದ್ದಾಗ್ಯೂ ವಿನಯಾದಿ ಸದ್ಗುಣಗಳಿಂದ ಜನಗಳು ವೃದ್ಧಿಗೆ ಬರುವರು. ಈ ವಿಷಯಗಳನ್ನು ನಿರೂಪಿಸುವುದರಲ್ಲಿ ಮಾ॥ ವಿ. ಎನ್. ನರಸಿಂಹ್ಯಯ್ಯಂಗಾರ್‌ರವರು ನಮ್ಮ ವಿದ್ಯಾರ್ಥಿಗಳಲ್ಲಿ ಬಡವರಾದ ಅನೇಕರಿಗೆ ದೊಡ್ಡ ಮನುಷ್ಯರಿಂದ ಸಹಾಯವನ್ನು ಅಪೇಕ್ಷಿಸುವಾಗ ಹೇಗೆ ನಡೆದುಕೊಳ್ಳಬೇಕೂ ಅದು ಕೂಡ ತಿಳಿಯದೆಂದು ಅಪ್ಪಣೆ ಕೊಡಿಸಿದರು. ಇದಲ್ಲದೆ ವಿದ್ಯಾರ್ಥಿಗಳು ವಿದ್ಯಾಭ್ಯಾಸಕಾಲದಲ್ಲಿ ಬ್ರಹ್ಮಚರ್ಯವೂ, ಹೇಗೆ ಆವಶ್ಯಕವೂ ಅದನ್ನೂ, ಭೋಗ್ಯವಸ್ತುಗಳಲ್ಲಿ ಔದಾಸೀನ್ಯವು ಹೇಗೆ ಆವಶ್ಯಕವೂ ಅದನ್ನೂ ದೃಂದುಗಾರಿಕೆಯು ಹೇಗಿರಬಾರದೂ ಅದನ್ನೂ, ಮನಸ್ಸು ಯಾವ ವಿಷಯಗಳಲ್ಲಿಯೂ ಪ್ರವರ್ತಿಸದೆ ಗ್ರಂಥಾವಲೋಕನದಲ್ಲಿ ಮಾತ್ರ ಇರುವಂತೆ ಮಾಡುವುದಕ್ಕೆ ಯಾವ ಯಾವ ಉಪಾಯಗಳು ಆವಶ್ಯಕವೂ, ಅದನ್ನೂ ಬಹಳ ಚೆನ್ನಾಗಿ ನಿರೂಪಿಸಿದರು. ಇವರ ಉಪನ್ಯಾಸವು ಪೂರೈಸಿದ ಕೂಡಲೆ ನಮ್ಮ ಚಕ್ರವರ್ತಿ ಸಾರ್ವಭೌಮರಿಗೂ ನಮ್ಮ ಮಹಾ ಪ್ರಭುಗಳಿಗೂ ಸಭಾಧ್ಯಕ್ಷರಿಗೂ ಮಂಗಳವಾಗಲೆಂದು ಜಯಘೋಷವು ಮಾಡಲ್ಪಟ್ಟು ಸಭೆಯು ಉಸಸಂಹರಿಸಲ್ಪಟ್ಟಿತು.

NEWS PAPER EXCHANGE
SAGARVALLY - 577 524.
Shimoga Dist. Karnataka State, India.
Regd. No. M. 1298.

॥ ಶ್ರೀ ॥

MALNAD SAMACHARA.

ಮಲೆನಾಡು ಸಮಾಚಾರ.

ಎಂಬ

ವಾರಪತ್ರಿಕೆಯು.

ಸಂಪುಟ ೧. ಸಂಚಿಕೆ ೧.

WORLD NEWS

ವರ್ಷಕ್ಕೆ ಸ್ವಲ್ಪ ಕಡಿಮೆ ಇದ್ದವರಿಗೆ. ವರ್ಷಕ್ಕೆ ಸ್ವಲ್ಪ ಹೆಚ್ಚು ಇದ್ದವರಿಗೆ.

ವರುಷಕ್ಕೆ ೧—೦—೦. ಅಂಚೆಯಿಲ್ಲದೆ ಬಂದಾಗ ೧—೦—೦.

ಅಂಚೆಯಿಲ್ಲದೆ ಬಂದಾಗ ೧—೦—೦. ಅಂಚೆಯಿಲ್ಲದೆ ಬಂದಾಗ ೧—೪—೦.

ಸಂಪಾದಕರು ಮತ್ತು ಪ್ರಕಾಶಕರು, ಸುಂಕದ

Proprietor ವೆಂಕಪ್ಪಯ್ಯನವರಿಗೆ ಅರ್ಪಿಸಿದ್ದು Venkappiah,

ಸಾಮಾನ್ಯ ಪ್ರತಿಗಳ ಬೆಲೆ ಒಂದು Shimoga.

ಪೈಸೆ.

ಎಂಬಿಸಾ ೧೮೮೭.

ಜ್ಯೋತಿನಿ:— ವಿದ್ಯಾ, ಪರಸ್ಪರಸಹಾಯ, ಗ್ರಾಮೋನ್ನತಿ, ಸ್ತ್ರೀ ಧರ್ಮ, ಸಾಹಿತ್ಯ ಇತ್ಯಾದಿ ವಿಷಯಗಳನ್ನೊಳಕೊಂಡ ಸಚಿತ್ರ ತಿಳಿಗನ್ನಡ ಮಾಸಪತ್ರಿಕೆಯು, ವಾರ್ಷಿಕ ಚಂದಾ ಅಂಚೆವೆಚ್ಚ ಸೇರಿ ರೂ॥ ೩ ಮಾತ್ರ.

ವ್ಯವಸ್ಥಾಪಕರು, ಜ್ಯೋತಿನಿ,
ಪ್ರಭಾಕರ ಮುದ್ರಾಯಂತ್ರ, ಉಡುಪಿ.
(ದಕ್ಷಿಣಕನ್ನಡ)

ವಿಜ್ಞಾನ:— ಈ ಪತ್ರಿಕೆಯ ಚಂದಾ ಮೊಬಲಗು, ಮೊದಲು ಹನ್ನೆರಡು ಸಂಚಿಕೆಗಳಿಗೆ ಅಂಚೆವೆಚ್ಚ ಸೇರಿ ಮೂರು ರೂಪಾಯಿಗಳು.

ಜಿ. ವೆಂಕಟನಾರಣಪ್ಪ, ಎಂ. ಎ.,
ಮ್ಯಾನೇಜರ್, "ವಿಜ್ಞಾನ"
ಬನಶಂಕರಿ, ಬೆಂಗಳೂರು ಸಿಟಿ.

ಶಿವಮೊಗ್ಗ ವೃತ್ತಾಂತ:— ಈ ಪತ್ರಿಕೆಯು ಚಂದಾ ಮೊಬಲಗು ಸ್ವಳದವರಿಗೆ ೧-೪-೦ ಪರಸ್ಥಳದವರಿಗೆ ೧-೮-೦ ಪತ್ರಿಕೆ ೦-೦-೪ ಅಂಚೆ ವೆಚ್ಚ ಸೇರಿ ರೂ. ೨ ಮಾತ್ರ.

ಎಡಿಟರ್,
ಶಿವಮೊಗ್ಗ ವೃತ್ತಾಂತ
ಶಿವಮೊಗ್ಗ

ಹಂದಾನಿರ್ಣಯಃ — ಜನಸ್ಯ ಚಿತ್ತಾನುರಂಜನಂ ।

ಕರ್ಣಾಟಕ ಪತ್ರಿಕೆ

1917

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ಚಂದಾ ಹಣ ಸಲು ಸೇರಿ ರೂಪಾಯಿ 2 — ಕ್ಕೆ ೦.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ ನ ಭೇಜಿರೇ ಭೀಮವಿಷೇಣ ಭೀತಿಮ್ ।
ಸುಧಾಂ ವಿನಾ ನ ಪ್ರಯಯುರ್ವಿರಾಮಂ ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥

ದೇವತೆಗಳು ಬೆಲೆಯುಳ್ಳ ರತ್ನಗಳಿಂದಲೂ ಸಂತೋಷಪಡಲಿಲ್ಲ; ಭಯಂಕರವಾದ ವಿಷಕ್ಕೂ ಅಂಜಲಿಲ್ಲ; ಅಮೃತವನ್ನು ಹೊಂದುವ ವರೆಗೆ ಅವರ ಯತ್ನವು ನಡೆಯುತ್ತಲೆ ಇತ್ತು. ಧ್ಯೇಯವನ್ನು ಹೊಂದುವ ತನಕ ತಮ್ಮ ಪ್ರಯತ್ನವನ್ನು ತ್ಯಜಿಸದಿರುವುದು ಧೀರರ ಲಕ್ಷಣವೇ ಸರಿ.

ಮಂಗಳೂರು, ತಾರೀಕು ೭ನೇ ಸಪ್ಟಂಬರ ಶುಕ್ರವಾರ ೧೯೧೭. ಸಂಚಿಕೆ ೩೬.

ನೋಟೀಸು.

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

ಸ್ಮಾಲನಂಬ್ರ $\frac{444}{17}$

೩ರೆಹೊಳೆ ಮೈದಿನ್‌ಸಾಹೇಬ ಮಹಮ್ಮದ್ ಹಬೀಬ್ ೨ಬ್ದುಲ್ಲರಹಿಮಾನ್ ಸಾಹೇಬರ ಮಗ ಗಂಗವಳ್ಳಿ ಗ್ರಾಮ. } ವಾದಿ.

೩ಸೆನ್ ಕಾಶಿವ್ ಜಿ ಮಗ ಹೊನ್ನಾವರ ತಾಲೂಕು ಗುರ್ಡೇಶ್ವರ ಮಾವಳಿಕೇರಿಯಲ್ಲಿರುವವ . . } ಪ್ರತಿವಾದಿ.

ಪ್ರತಿವಾದಿಯು ವಾದಿಗೆ ತಾರೀಕು ೫—೪—೧೯೧೫ರಲ್ಲು ರೂಪಾಯಿ ೦೦೦ಕ್ಕೆ ಬರಕೊಟ್ಟ ನೌಕರಿ ಕರಾರು ಪ್ರಕಾರ ಯಾವ ಕೆಲಸವನ್ನು ಎಷ್ಟನ್ನಾದರೂ ಹಣವನ್ನು ವಾದಿಗೆ ಸಲೂಲು ಕೊಡ ವದರಿಂದ ವಾದಿಯು ಸದರಿ ಕರಾರಿನ ಆನೆಲುಬಡ್ಡಿ ೬—೦—೦ ಪ್ರಕಾರ ತಿಳಿ ಸಲು ಮುಡಿದ್ದ ನದರಿ

WORD M...
Shimoga Dist.

ಅಮೃತಾಂಜನ.

ಜಗತ್ಪ್ರಸಿದ್ಧವಾದ ಬೇನೆಹಾರಿ ಮುಲಾಮು.

ಇದರ ಉಪಯೋಗದಿಂದ:—ವಾತ, ಸಂಧಿವಾತ, ತಲೆನೋವು, ಶಿರೋಭಾರ, ಅರ್ಧಾಂಗವಾಯು, ಉಳುಕು, ಎದೆನೋವು, ಸೊಂಟದನೋವು, ಶೀತ, ಕೆಮ್ಮು, ದಂತಶೂಲೆ, ಮೂಲವ್ಯಾಧಿ, ಚೇಳು ಕಡಿತ, ಆನೆಗಾಲು, ಸುಟ್ಟ ಘಾಯ ಮೊದಲಾದ ಎಲ್ಲಾ ತರದ ನೋವುಗಳ ಮೇಲೆ ದಿವ್ಯ ಔಷಧವಾಗಿರುತ್ತದೆ. ಸಾವಿರಾರು ಡಾಕ್ಟರರೂ ಇದಕ್ಕೆ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ. ಪ್ರತಿ ತಿಂಗಳಲ್ಲೂ 25,000 ಬಾಟ್ಲಿಗಳು ಮಾರಲ್ಪಡುತ್ತವೆ. ಬಾಟ್ಲಿ ಒಂದರ ಕಿಮ್ಮತು

ೀಲ್ಕುಂಡ ಕೂಲಿ ನಕ್ಕ ದಾಖಲುಮಾಡಬೇಕಾಗಿ ಈ
ಳಿಸೋಣಾಗಿಯಿದೆ

[illegible] Rao
Pleader for Plaintiff.

[illegible]

'ನೈಟ್ರೇಟ್ ಒಫ್ ಸೋಡಾ'

ಹೊಗೆಸೊಪ್ಪು, ಕಬ್ಬು, ತೆಂಗು, ಅಡಕೆ, ವೀಳ್ಯದೆಲೆ, ಬತ್ತ, ತರಕಾರಿ ಮೊದಲಾದ ಪೈರುಗಳಿಗೆ ಬಹಳ ಸಾರವತ್ತಾದ ಗೊಬ್ಬರ.

ಈ ಗೊಬ್ಬರವು ಒಂದು ಬಗೆಯ ಉಪ್ಪು, ಹಲವು ಪ್ರಾಂತ್ಯಗಳಲ್ಲಿ ಇದರ ಉಪಯೋಗದಿಂದ ಹುಲುಸಾದ ಬೆಳೆಯನ್ನು ಪಡೆದಿರುತ್ತಾರೆ.

ಈ ಗೊಬ್ಬರವು ಹಟ್ಟಿಯ ಗೊಬ್ಬರದಂತೆ ಅಸಹ್ಯವಲ್ಲ; ವಿೂನು ಗೊಬ್ಬರದಂತೆ ನಾತ ಬಡೆಯುವುದಿಲ್ಲ.

ಈ ಗೊಬ್ಬರ ಒಂದು ಹಿಡಿ ಸಾಕಾದ್ದಲ್ಲಿ ಹಟ್ಟಿಗೊಬ್ಬರ ಒಂದು ಮುಡಿ ಬೇಕು. ಊರು ಗೊಬ್ಬರಗಳ ಬೆಂಬಲಕ್ಕೆ ಬಹಳ ಗುಣಕಾರಿ.

ಪರಸ್ಪರ ಸಹಾಯಕ ಸಂಘಗಳು ಇದನ್ನು ಹಳ್ಳಿಯವರಿಗೆ ಒದಗಿಸಿ ಕೊಡುವುದಕ್ಕೆ ಅನುಕೂಲವಾಗುವ ಹಾಗೆ ಏರ್ಪಾಡುಗಳನ್ನು ಮಾಡ ಬಹುದು.

"ಕೃಷಿ ಸುಧಾರಣೆ" ಎಂಬ ಸಚಿತ್ರ ವಹಿಯನ್ನು ಕನ್ನಡ ಭಾಷೆಯಲ್ಲಿ ನಮ್ಮಿಂದ ಧರ್ಮಾರ್ಥವಾಗಿ ಪಡಯಬಹುದು.

ದಿ ಚಿಲಿಯನ್ ನೈಟ್ರೇಟ್ ಪ್ರೊಪಗಾಂಡಾ,
1 ರೋಯಲ್ ಎಕ್ಸ್‌ಚೆಂಜ್ ಪ್ಲೇಸ್, ಕಲ್ಕತ್ತಾ.

The Chilean Nitrate Propaganda,
1, Royal Exchange Place, Calcutta.

ನೋಟೀನು.

ನಮ್ಮ ವೈದ್ಯಾಲಯದಲ್ಲಿ ಬೆಳಿಗ್ಯೆ 8 ಗಂಟೆಯಿಂದ ಸಾಯಂಕಾಲ 4 ಗಂಟೆವರೆಗೆ ಎಲ್ಲಾ ತರದ ರೋಗಿಗಳನ್ನು ಪರೀಕ್ಷಿಸಿ ತಕ್ಕದ್ದಾದ ಹೊಮಿಯೊಪತಿ, ಟಿಸ್ಯು, ಸ್ಪೆಸಿಫಿಕ್, ಇಲೆಕ್ಟ್ರೊ ಹೊಮಿಯೊಪೆತಿ, ಆಯುರ್ವೇದಿಕ್ ಔಷಧಗಳನ್ನು ಬಡಬಗ್ಗರಿಗೆ ಧರ್ಮಾರ್ಥವಾಗಿ ಕೊಡುತ್ತೇನೆ.

ನಮ್ಮ ವಿಳಾಸ:— ಕೆ. ಕುಮಾರಯ್ಯ,
ಹೊಮಿಯೊಪೆತಿಕ್ ಮತ್ತು ಆಯುರ್ವೇದಿಕ್ ಔಷಧಾಲಯ, ಧರ್ಮಸ್ಥಳ.

ಮುಲಾಮು.

ಮೂರು ನರ್ತಿ ತಾಗಿಸುವಷ್ಟರೊಳಗೆ ಗಜಕರ್ಣ ನಾಶವಾಗಿ ಹೋಗುವದು. ಇದರಿಂದ ಉರಿಯು ಬರುವದಿಲ್ಲ. ಚರ್ಮವು ಕಪ್ಪಾಗುವದಿಲ್ಲ. ಇದುವರೆಗೆ ಒಂದು ಮಿಲಿಯ ಡಬ್ಬಿಗಳು ಮಾರಲ್ಪಟ್ಟವು. ರಾಜಾರಾಣಿ ಟ್ರೇಡ್ ಮಾರ್ಕ್ 0—6—0. 12 ಡಬ್ಬಿಗಳಿಗೆ 3—8—0. ವಿ. ಪಿ. ಪ್ರತ್ಯೇಕ.

ದಂತಮಂಜನ.

(ರಾಜಾರಾಣಿ ಟ್ರೇಡ್ ಮಾರ್ಕ್).

ಈ ಮಂಜನದಿಂದ ಹಲ್ಲುಗಳನ್ನು ದಿನಾಗಲೂ ತಿಕ್ಕುವದರಿಂದ ಹಲ್ಲುನೋವು, ಹಲ್ಲುಗಳಿಂದ ಬರುವ ರಕ್ತ, ಹಲ್ಲುಗಳ ವಾಸನೆ ಮುಂತಾದವುಗಳೆಲ್ಲಾ ನಿಲ್ಲುತ್ತವೆ. ಇದರಲ್ಲಿ ಹಲವು ನಮೂನೆಯ ಔಷಧಗಳಿವೆ. ಬರೀ ಚೋಕಿನ ಹುಡಿ ಅಲ್ಲ. ಡಬ್ಬಿ ಒಂದಕ್ಕೆ 0—2—0. ವಿ. ಪಿ. ಪ್ರತ್ಯೇಕ.

ಅಮೃತಾಂಜನ ಡಿಪೊ,

6, 7, ತೆಂಬುಚೆಟ್ಟಿ ಸ್ಟೀಟ,
ಜೋರ್ಜ ಟೌನ್, ಮದ್ರಾಸು.

109, ಫ್ರೇಯರ್ ರೋಡ್,
ಮುಂಬಯಿ.

ಮಂಗಳೂರಲ್ಲಿ—ಊನ್ ಮಾರ್ಟ್, ಹಂಪನಕಟ್ಟೆ ಇವರಲ್ಲಿಯೂ ದೊರಕುವುದು.

ಬಿಕರಿಗೆ ಸಿದ್ಧವಾಗಿರುವವು! ಈಗಲೇ ಅಚ್ಚಾಗಿರುವವು!

ಯಕ್ಷಗಾನ.

ತುಳು ಪಂಚವಟಿ ರಾಮಾಯಣ ..	ಕ್ರಯ ರೂ.	0—3—0
ಕನ್ನಡ ದುಂದುಭಿ ಆಖ್ಯಾನ ...	,, ,,	0—4—0
ಕನ್ನಡ ಚಂದ್ರಮೌಳಿ ಕಾಳಗ ...	,, ,,	0—4—0

ಈ ಪುಸ್ತಕಗಳು ಬಿಕರಿಗೆ ಸಿದ್ಧವಾಗಿರುತ್ತವೆ. ಮೂರು ಪುಸ್ತಕಗಳನ್ನು ಒಟ್ಟು ತರಿಸಿಕೊಳ್ಳುವವರಿಗೆ ಕ್ರಯ ರೂ. 0—9—0. ವಿ. ಪಿ. ಹಾಸಲು ಪ್ರತ್ಯೇಕ. ಕೆಟಲಾಗುಗಳಿಗೆ ಕಳುಹಿಸಲಾಗುವುದು.

ವಿಳಾಸ — ಕೆ. ಸುಬ್ರಾಯ ನಾಕ ಎಂಡ್ ಸನ್ಸ್,
ಜಿ. ಪಿ ಏಜನ್ಸಿ, ವಿಟ್ಲ, ದ. ಕ.

ದಂತ ವೈದ್ಯರಾದ

ಡಾಕ್ಟರ್ ಪಿ. ಡಿ. ಲಿಮಾರವರು

ಈ ಮೂಲಕ ತಿಳಿಯಪಡಿಸುವದೇನಂದರೆ:—ಅಮೇರಿಕಾ ದೇಶದ ಅತ್ಯುತ್ತಮವಾದ ಕೃತಕ ದಂತಗಳು ಈಗಲೇ ಬಂದಿರುತ್ತವೆ. ಬಡವರಿಗೂ ಅನುಕೂಲವಾಗುವಂತೆ ದರಗಳನ್ನು ಕಡಿಮೆ ಮಾಡಿದೆ.

ಒಂದು ತಿಂಗಳು ತನಕ ಮಾತ್ರವೇ ಮಂಗಳೂರಲ್ಲಿ ಇರುವರು. ಈ ಸಂದರ್ಭವನ್ನು ಕಳಕೊಳ್ಳಬೇಡಿರಿ.

ವಿಳಾಸ:— ಪಿ. ಡಿ. ಲೀಮಾ,
ಡೆಂಟಲ್ ಸರ್ಜನ್,
ಒಡೆಯರರ ಬೋಪಿನ ಬ
ಮಂಗಳೂರು

ಸೀಲ್ಕುಂಡ ಕೋರ್ಟಿನಲ್ಲಿ ದಾವಲುಮಾಡಬೇಕಾಗಿ ಈ ಲಿಸೋಪಾಗಿಯದೆ

P Venkobala Rao
17) *Pleader for Plaintiff*

'ನೈಟ್ರೇಟ್ ಒಫ್ ಸೋಡಾ'

ಹೊಗೆಸೊಪ್ಪು, ಕಬ್ಬು, ತೆಂಗು, ಅಡಕೆ, ವೀಳ್ಯದೆಲೆ, ಬತ್ತ, ತರಕಾರಿ ಮೊದಲಾದ ಪೈರುಗಳಿಗೆ ಬಹಳ ಸಾರವತ್ತಾದ ಗೊಬ್ಬರ.

ಈ ಗೊಬ್ಬರವು ಒಂದು ಬಗೆಯ ಉಪ್ಪು, ಹಲವು ಪ್ರಾಂತ್ಯಗಳಲ್ಲಿ ಇದರ ಉಪಯೋಗದಿಂದ ಹುಲುಸಾದ ಬೆಳೆಯನ್ನು ಪಡೆದಿರುತ್ತಾರೆ.

ಈ ಗೊಬ್ಬರವು ಹಟ್ಟಿಯ ಗೊಬ್ಬರದಂತೆ ಅಸಹ್ಯವಲ್ಲ; ಮೊನು ಗೊಬ್ಬರದಂತೆ ನಾತ ಬಡೆಯುವುದಿಲ್ಲ.

ಈ ಗೊಬ್ಬರ ಒಂದು ಹಿಡಿ ಸಾಕಾದ್ದಲ್ಲಿ ಹಟ್ಟಿಗೊಬ್ಬರ ಒಂದು ಮುಡಿ ಬೇಕು. ಊರು ಗೊಬ್ಬರಗಳ ಬೆಂಬಲಕ್ಕೆ ಬಹಳ ಗುಣಕಾರಿ.

ಪರಸ್ಪರ ಸಹಾಯಕ ಸಂಘಗಳು ಇದನ್ನು ಹಳ್ಳಿಯವರಿಗೆ ಒದಗಿಸಿ ಕೊಡುವುದಕ್ಕೆ ಅನುಕೂಲವಾಗುವ ಹಾಗೆ ಏರ್ಪಾಡುಗಳನ್ನು ಮಾಡ ಬಹುದು.

"ಕೃಷಿ ಸುಧಾರಣೆ" ಎಂಬ ಸಚಿತ್ರ ವಹಿಯನ್ನು ಕನ್ನಡ ಭಾಷೆಯಲ್ಲಿ ನಮ್ಮಿಂದ ಧರ್ಮಾರ್ಥವಾಗಿ ಪಡೆಯಬಹುದು.

ದಿ ಚಿಲಿಯನ್ ನೈಟ್ರೇಟ್ ಪ್ರೊಪಗಾಂಡಾ,
1 ರೋಯಲ್ ಎಕ್ಸ್‌ಚೆಂಜ್ ಪ್ಲೇಸ್, ಕಲ್ಕತ್ತಾ.

The Chilean Nitrate Propaganda,
1, Royal Exchange Place, Calcutta.

ನೋಟೀಸು.

ನಮ್ಮ ವೈದ್ಯಾಲಯದಲ್ಲಿ ಬೆಳಿಗ್ಗೆ 8 ಗಂಟೆಯಿಂದ ಸಾಯಂಕಾಲ 4 ಗಂಟೆವರೆಗೆ ಎಲ್ಲಾ ತರದ ರೋಗಿಗಳನ್ನು ಪರೀಕ್ಷಿಸಿ ತಕ್ಕುದಾದ ಹೊಮಿಯೊಪತಿ ಟಿಸ್ಯು, ಸೈಸಿಪಿಕ್, ಇಲಕ್ಟ್ರೊ ಹೊಮಿಯೊಪೆತಿ, ಆಯುರ್ವೇದಿಕ್ ಔಷಧಗಳನ್ನು ಬಡಬಗ್ಗರಿಗೆ ಧರ್ಮಾರ್ಥವಾಗಿ ಕೊಡುತ್ತೇವೆ.

ನಮ್ಮ ವಿಳಾಸ:— ಕೆ. ಕುಮಾರಯ್ಯ.

ಹೊಮಿಯೊಪೆತಿಕ್ ಮತ್ತು ಆಯುರ್ವೇದಿಕ್ ಔಷಧಾಲಯ, ಧರ್ಮಸ್ಥಳ.

ಮುಲಾಮು.

ಮೂರು ಸತಿ ತಾಗಿಸುವಷ್ಟರಲ್ಲಿ ಗಜಕರ್ಣ ನಾಶವಾಗಿ ಹೋಗುವದು. ಇದರಿಂದ ಉರಿಯು ಬರುವದಿಲ್ಲ. ಚರ್ಮವು ಕಪ್ಪಾಗುವದಿಲ್ಲ. ಇದುವರೆಗೆ ಒಂದು ಮಿಲಿಯ ಡಬ್ಬಿಗಳು ಮಾರಲ್ಪಟ್ಟವು. ರಾಜಾರಾಣಿ ಟ್ರೇಡ್ ಮಾರ್ಕ್ 0—6—0. 12 ಡಬ್ಬಿಗಳಿಗೆ 3—8—0. ವಿ. ಪಿ. ಪ್ರತ್ಯೇಕ.

ದಂತಮಂಜನ.

(ರಾಜಾರಾಣಿ ಟ್ರೇಡ್ ಮಾರ್ಕ್).

ಈ ಮಂಜನದಿಂದ ಹಲ್ಲುಗಳನ್ನು ದಿನಾಗಲೂ ತಿಕ್ಕುವದರಿಂದ ಹಲ್ಲುನೋವು, ಹಲ್ಲುಗಳಿಂದ ಬರುವ ರಕ್ತ, ಹಲ್ಲುಗಳ ವಾಸನೆ ಮುಂತಾದವುಗಳೆಲ್ಲಾ ನಿಲ್ಲುತ್ತವೆ. ಇದರಲ್ಲಿ ಹಲವು ನಮೂನೆಯ ಔಷಧಗಳಿವೆ. ಬರೀ ಚೋಕಿನ ಹುಡಿ ಅಲ್ಲ. ಡಬ್ಬಿ ಒಂದಕ್ಕೆ 0—2—0. ವಿ. ಪಿ. ಪ್ರತ್ಯೇಕ.

ಅಮೃತಾಂಜನ ಡಿಪೊ,

6, 7, ತೆಂಬುಚೆಟ್ಟಿ ಸ್ಟೀಟ್,
ಜೋರ್ಜ್ ಟೌನ್, ಮದ್ರಾಸು.

109 ಫ್ರೇಯರ್ ರೋಡ್,
ಮುಂಬಯಿ.

ಮಂಗಳೂರಲ್ಲಿ—ಯೂನ್ ಮಾರ್ಟ್, ಹಂಪನಕಟ್ಟೆ ಇವರಲ್ಲಿಯೂ ದೊರಕುವುದು.

ಬಿಕರಿಗೆ ಸಿದ್ಧವಾಗಿರುವವು! ಈಗಲೇ ಅಚ್ಚಾಗಿರುವವು!

ಯಕ್ಷಗಾನ.

ತುಳು ಪಂಚವಟಿ ರಾಮಾಯಣ	...	ಕ್ರಯ ರೂ.	0—3—0
ಕನ್ನಡ ದುಂದುಭಿ ಆಖ್ಯಾನ	..	,, ,,	0—4—0
ಕನ್ನಡ ಚಂದ್ರಮೌಳಿ ಕಾಳಗ	...	,, ,,	0—4—0

ಈ ಪುಸ್ತಕಗಳು ಬಿಕರಿಗೆ ಸಿದ್ಧವಾಗಿರುತ್ತವೆ. ಮೂರು ಪುಸ್ತಕಗಳನ್ನು ಒಟ್ಟು ತರಿಸಿಕೊಳ್ಳುವವರಿಗೆ ಸು ರೂ. 0—9—0. ವಿ. ಪಿ. ಹಾಸಲು ಪ್ರತ್ಯೇಕ. ಕೆಟಲಾಗುಪತ್ತು.

ವಿಳಾಸ:— ಕೆ. ಸುಬ್ರಾಯ ನಾಕ ಎಂಡ್ ಸನ್ಸ್,
ಜಿ. ಪಿ ಏಜನ್ಸಿ, ವಿಟ್ಲ, ದ. ಕ.

ದಂತ ವೈದ್ಯರಾದ

ಡಾಕ್ಟರ್ ಪಿ. ಡಿ. ಲಿಮಾರವರು

ಈ ಮೂಲಕ ತಿಳಿಯಪಡಿಸುವದೇನೆಂದರೆ:—ಅಮೇರಿಕಾ ದೇಶದ ಅತ್ಯುತ್ತಮವಾದ ಕೃತಕ ದಂತಗಳು ಈಗಲೇ ಬಂದಿರುತ್ತವೆ. ಬಡವರಿಗೂ ಅನುಕೂಲವಾಗುವಂತೆ ದರಗಳನ್ನು ಕಡಿಮೆ ಮಾಡಿದೆ.

ಒಂದು ತಿಂಗಳು ತನಕ ಮಾತ್ರವೇ ಮಂಗಳೂರಲ್ಲಿ ಇರುವರು. ಈ ಸಂದರ್ಭವನ್ನು ಕಳಕೊಳ್ಳಬೇಡಿರಿ.

ವಿಳಾಸ:— ಪಿ. ಡಿ. ಲೀಮಾ,
ಡೆಂಟಲ್ ಸರ್ಜನ್,
ಒಡೆಯರರ ಲೋಪಿನ ಬ
ಮಂಗಳೂ

ALL INDIA NEWSPAPERS EXHIBITION

ಸಚಿತ್ರ
ತಿಳಿಗನ್ನಡ

ಬೋಧಿನಿ

ಉತ್ತಮ
ಮಾಸ ಪತ್ರಿಕೆ

ಸಂಪುಟ ೩ | ಜುಲಾಯಿ ೧೯೧೪ | ಭಾಗ ೧೦

೬೪. ಒಂದೇ, ಒಂದು ಪದ್ಯ

ಜಿಜ್ಞಾಸು:—"ಗಂಗಾಧರ"

(ಕರ್ಣೋಪಕರ್ಣವಾಗಿ ಬಂದು, ನನ್ನ ಕರ್ಣವನ್ನು ಪ್ರವೇಶಿಸಿದ ಈ ಪದ್ಯವು, ಕವಿಯ ಹೃದ್ಗತವನ್ನು (ಈ ಪದ್ಯದಲ್ಲಿಯ) ತಿಳಿದುಕೊಳ್ಳುವ ಉತ್ಕಂಟೇಚ್ಛೆಯಿಂದ ವಿಚಕ್ಷಣರಾದ "ಬೋಧಿನಿ"ಯ ವಾಚಕ ಮಹಾಶಯರ ಮುಂದೆ ಇರಿಸಲ್ಪಟ್ಟಿದೆ. ತಜ್ಞರಾದ ವಾಚಕರು ಇದೇ ಪತ್ರದ್ವಾರವಾಗಿಯೆ ನನ್ನ ಜಿಜ್ಞಾಸೆಯನ್ನು ಪೂರ್ಣ ಮಾಡುವರೆಂದು ನಂಬಿದ್ದೇನೆ)

॥ ಮತ್ತೇಭವಿಕ್ರೀಡಿತ ವೃತ್ತ ॥

ಹರಜಾತಂ ಭರದಿಂದೆ ಕ್ರೌಂಚ ಗಿರಿಯುಂಕಳ್ತೆತ್ತಿ ತಳ್ಪೊಯ್ಯಲಾ।
ತುರದಿಂ ಬಂದು ಹಿರಣ್ಯಗರ್ಭನವನಂ ತಳ್ಕೈಸಿ ಮುಂಡಾಡಲು॥
ಸುರನಾಥಂ ಖತಿಗೊಂಡು ಬಂದನಾಗಳ್ ವಜ್ರಾಸ್ತ್ರಮುಂ ತಾಳ್ದು
ಮೇಣ್।
ಅರರೇ ರಾಘವ ರಾಮನೆಬ್ದು ಧನುವಂ ಕೈಕೊಂಡಮೇಂ—
ಚಿತ್ರವೋ॥ ೧॥

೬೫. ಸಂಸ್ಕೃತ ನಾಟಕಗಳು ಶೋಕಪರ್ಯವಸಾಯಿಗಳಲ್ಲ; ಏಕೆ?

(ಲೇಖಕ:—ಭೀಮಾಜಿ ಜೀವಾಜಿ ಹುಲಿಕವಿ, ಮೈಸೂರು)

ಸಂಸ್ಕೃತ ಭಾಷೆಯಲ್ಲಿ ಅನೇಕ ನಾಟಕಗಳು ರಚಿತವಾಗಿದ್ದರೂ, ಅವುಗಳಲ್ಲಿ ಶೋಕಾಂತವಾದುದು ಒಂದೂ ಇಲ್ಲ. ಏಕೆಂದರೆ, ನಾಟಕಗಳು ಶೋಕಾಂತವಾಗಿರಕೂಡದೆಂದು ನಮ್ಮ ನಾಟ್ಯ ಶಾಸ್ತ್ರದ ನಿಯಮವಿದೆ. ಇಷ್ಟೇ ಅಲ್ಲ, ನಮ್ಮವರು ನಾಟಕಗಳ ಮಧ್ಯದಲ್ಲಿಯೂ ಕೂಡ ಗ್ಲಾನಿ ಅಥವಾ ಭೇದವನ್ನುಂಟುಮಾಡುವ ಪ್ರಸಂಗಗಳು ಇರಕೂಡದೆಂದು ನಿಷೇಧಿಸಿದ್ದಾರೆ ಮತ್ತು ಭಾರತವಾಸಿಗಳಾದ ನಾವು ಜೀವನದ ಆದರ್ಶನದ ಮೇಲೆಯೇ ದೃಷ್ಟಿಯನ್ನಿಡುತ್ತ ಬಂದಿದ್ದೇವೆ. ನಾವು ಜೀವನವು ಯಾವ ಪ್ರಕಾರದ್ದಾಗಬೇಕೆಂಬುದನ್ನು ಧ್ಯಾನಿಸುವೆವೇ ಹೊರತು, ಜೀವನವು ಹೇಗಿದೆಯೋ ಹಾಗೆಯೇ ಇರಬೇಕೆಂಬುದನ್ನು ಕುರಿತು ಲಕ್ಷಿಸುವುದಿಲ್ಲ. ಇದೇ ಕಾರಣಕ್ಕಾಗಿಯೇ ನಮ್ಮವರು ಇತಿಹಾಸದ ಕಡೆಗೆ ಲಕ್ಷ್ಯ ಕೊಡಲಿಲ್ಲ. ಕೇವಲ ಅಧ್ಯಾತ್ಮಧ್ಯಾನ ವಿಚಾರದಲ್ಲಿಯೇ ಮಗ್ನರಾಗಿರುತ್ತಿದ್ದರು. ಆದುದರಿಂದ ಸಾಧಾರಣವಾದ ಮನಸ್ಸುಳ್ಳ ಜನರಿಗೆ ಗ್ರಾಹ್ಯವಾಗಿದ್ದರೂ ಸುಸಂಸ್ಕೃತ ಮನಸ್ಕರಿಗೆ ರುಚಿಸದಿರುವಂಥ ಪ್ರಸಂಗಗಳನ್ನು ಕೂಡ ನಾಟಕಗಳಲ್ಲಿ ತೋಪಡಿಸಲಾಗದೆಂದು ನಮ್ಮವರು ನಿಯಮ ಮಾಡಿದ್ದಾರೆ

ಪಾಶ್ಚಿಮಾತ್ಯರು ಜೀವನದ ವರ್ತಮಾನ ದೃಶ್ಯದಮೇಲೆಯೇ ವಿಶೇಷವಾದ ದೃಷ್ಟಿಯನ್ನಿಡುವರು. ಆದುದರಿಂದ ಅವರ ನಾಟಕಗಳು ಶೋಕಪರ್ಯವಸಾಯಿಗಳಾಗಿರುವುದು ಸ್ವಾಭಾವಿಕವಾಗಿದೆ.

ನಮ್ಮಲ್ಲಿ ಮಂಗಲಾಚರಣ ಅಥವಾ ದೇವತಾಸ್ತುತಿಯನ್ನು ಮಾಡದೆ ಪ್ರಾಯಿಕವಾಗಿ ಯಾವ ಪುಸ್ತಕವನ್ನೂ ಬರೆಯಲು ಆರಂಭಮಾಡುತ್ತಿರಲಿಲ್ಲ. ನಾಟಕಗಳಲ್ಲಿ ವಿಶೇಷವಾಗಿ ಆಶೀರ್ನಮಸ್ಕ್ರಿಯಾವಸ್ತು ನಿರ್ದೇಶೋ ವಾऽपि तन्मुखम्" ಎಂಬಂತೆ ಇವುಗಳಲ್ಲಿ ಯಾವುದೊಂದು ಬಗೆಯಿಂದ ದೇವತಾಸ್ತುತಿಯು ಇದ್ದೇ ಇರುತ್ತಿತ್ತು. ಇದರಂತೆಯೇ ಪ್ರೇಕ್ಷಕರ ಪ್ರಶಂಸನಾಪರವಾದ ಪ್ರಾರ್ಥನೆಯೂ ಮಾಡಲ್ಪಡುತ್ತಿತ್ತು. ಅವರನ್ನು ಸಂತೋಷಗೊಳಿಸುವುದಕ್ಕಾಗಿಯೇ ನಾಟಕವು ಆಡಲ್ಪಡುತ್ತಿದ್ದ ಮೂಲಕ ಹಾಗೆ ಮಾಡುವುದು ಸಹಜವೇ ಸರಿ. ಆದುದರಿಂದ ಇಂತಹ ನಾಟಕದಲ್ಲಿ ಕಟ್ಟಕಡೆಗೆ, ಮೃತ್ಯು ಅಥವ ವಿಯೋಗ ಮೊದಲಾದ ದುಃಖಕಾರಕ ದೃಶ್ಯವನ್ನು ತೋರಿಸಿದರೆ ಪ್ರಾರಂಭದಲ್ಲಿ ಮಾಡಿದ ಮಂಗಲಾಚರಣವು ವ್ಯರ್ಥವಾದಂತಾಗುವುದಿಲ್ಲವೇ?

ನಾಯಕನ ಹೆಸರನ್ನು ಕೇಳಿದ ಮಾತ್ರದಿಂದಲೇ ಪವಿತ್ರತೆ, ಮಾಹಾತ್ಮ್ಯ ಮೊದಲಾದುವುಗಳ ಚಿತ್ರವು ತಟ್ಟಲದ ಮೇಲೆ ಬಿಂಬಿಸುವಂಥ ಲೋಕೋತ್ತರ ವ್ಯಕ್ತಿಯನ್ನೇ ಸಾಧಾರಣವಾಗಿ ನಮ್ಮವರು ನಾಯಕನಾಗಿ ಆರಿಸುತ್ತಿದ್ದರು. ಇಂತಹ ಅಲೌಕಿಕ ಪುರುಷನ ಚರಿತ್ರವು ಶೋಕಾತ್ಮಕ

ಸಾಗುವುದೆಂದರೆ, ಅಸಮಂಜಸವೇ. ಆದುದರಿಂದಲೇ ನಮ್ಮವರು ಅದನ್ನು ನಿಷೇಧಿಸಿದ್ದಾರೆ. ಆದಕ್ಕೆ ವಿರುದ್ಧವಾಗಿ ಅಂತ್ಯದಲ್ಲಿ ಆನಂದದಾಯಕವಾದ ದೃಶ್ಯವನ್ನು ನೋಡಿದರೆ ಪ್ರೇಕ್ಷಕರಿಗೂ ಅತ್ಯಂತ ಆನಂದವಾಗುವುದು.

ಯಾವಕಾಲದಲ್ಲಿ ನಮ್ಮವರು ನಾಟಕಗಳನ್ನು ಮಾಡಲು ಪ್ರವೃತ್ತರಾದರೋ, ಆಗ ಅವರ ಅಧ್ಯಾತ್ಮವಿದ್ಯೆಯು ಕಡಮೆಯಾಗುತ್ತ ಬಂದಿತ್ತು. ಅರ್ಥಾತ್ ಸಂಸಾರವು ಅಸಾರವೆಂದು ತಿಳಿಯುವ ಪ್ರವೃತ್ತಿಯು ಕಡಮೆಯಾಗುತ್ತಾ ನಡೆದಿತ್ತು. ಸಂಸಾರದ ಉಜ್ಜ್ವಲವಾದ ಹಾಗು ಆನಂದಮಯವಾದ ದೃಶ್ಯಕ್ಕೆ ಅವರು ಮೋಹಿಸುತ್ತಾ ನಡೆದಿದ್ದರು. ಆದರೆ, ಈ ಸಂಸಾರದಲ್ಲಿ ಪಾಪ, ದುಃಖ, ಭಯಗಳು ತುಂಬಿಕೊಂಡಿನೆಬ್ಬಿಂಬುದನ್ನು ಮಾತ್ರ ಅವರು ಮರೆತಿರಲಿಲ್ಲ ಸಂಸಾರವು ಅಸಾರವಾಗಿಲ್ಲ; ಅದು ಅವರವರ ಕಾರ್ಯ ಮತ್ತು ವಾಸನೆಗಳನ್ನನುಸರಿಸಿ ಯುದ್ಧರಂಗವಾಗ ಬಹುದು; ರಮ್ಯವಾದ ಪುಷ್ಪ ವಾಟಿಕೆಯಾಗ ಬಹುದು; ಇತ್ಯಾದಿಯಾಗಿ ಅವರು ತಿಳಿಯ ಹತ್ತಿದ್ದರು. ಆದರೆ ನಾಟಕಗಳ ಪ್ರಾದುರ್ಭಾವವಾದ ಈ ಕಾಲದಲ್ಲಿ ಜನಗಳಲ್ಲಿದ್ದ ಈ ಭಾವನೆಯ ಉದ್ದೇಶವೂ, ವೇದಾಂತಾದಿಗಳ ಉದ್ದೇಶವೂ ಒಂದೇ ಆಗಿತ್ತೆಂಬುದನ್ನು ಮಾತ್ರ ಲಕ್ಷ್ಯದಲ್ಲಿಡತಕ್ಕುದು. ವೇದಾಂತಾದಿಗಳಲ್ಲಿದ್ದ ಪಾಪರೋಗದ ಔಷಧವು ಕಹಿಯಾಗಿತ್ತು; ಅದು ಈ ಕಾಲದಲ್ಲಿ ಮಧುಮಿಶ್ರಿತವಾಗಿ ಮಾಡಲ್ಪಟ್ಟಿತು. ಪಾಪವಿಚಾರಗಳಿಂದಲೂ, ಪಾಪಿಗಳ ದರ್ಶನದಿಂದಲೂ, ಅವರಿಗುಂಟಾದ ಫಲಗಳ ವಿಚಾರದಿಂದಲೂ ಕೂಡ ನಮ್ಮ ಮನಸ್ಸಿಗೆ ಪಾಪದ ಸಂಸರ್ಗವುಂಟಾಗುವುದು ಉಚಿತವಲ್ಲವೆಂದು ಭಾವಿಸಿ, ತತ್ಕಾಲೀನ ನಾಟಕಕಾರರು ಪಾಪಿಗಳ ಪಾಪದೃಶ್ಯಗಳನ್ನು ತೋರಿಸುವ ಮೂಲಕ ಜನರಿಗೆ ಸನ್ಮಾರ್ಗೋಪದೇಶಮಾಡುವುದು ಉತ್ತಮವಲ್ಲವೆಂದು ನಿರ್ಣಯಿಸಿದರು. ಈ ಕಾರಣಗಳ ಮೂಲಕನಾಗಿ ನಮ್ಮವರ ನಾಟಕಗಳೆಲ್ಲವೂ ಆನಂದ ಪರ್ಯವಸಾಯಿಗಳಾಗಿಯೇ ಇವೆ.

ಆದರೆ, ನಮ್ಮ ನಾಟಕಕಾರರು ದುಃಖಪ್ರಸಂಗಗಳ ವರ್ಣನೆಯನ್ನು ಸ್ವಲ್ಪಾದರೂ ಮಾಡುವುದಿಲ್ಲವೆಂದು ಮಾತ್ರ ತಿಳಿಯಬಾರದು. ಕೆಲಕೆಲವು ಪ್ರಸಂಗಳಲ್ಲಿ ಅಂತಹ ಪ್ರಸಂಗಗಳು ಬಂದರೂ ಅವು ಕೇವಲ ಅಂತ್ಯದಲ್ಲಿ ಉಂಟುಮಾಡತಕ್ಕ ಆನಂದವನ್ನು ಹೆಚ್ಚುಗೊಳಿಸುವುದಕ್ಕಾಗಿಯೇ ಇರುತ್ತವೆಂದು ಹೇಳಬಹುದು

ಪ್ರಸ್ತುತ ಲೇಖದಲ್ಲಿ ಪ್ರಾಚೀನ ಸಂಸ್ಕೃತ ನಾಟಕಗಳು ಶೋಕಪರ್ಯವಸಾಯಿಗಳಾಗಿಲ್ಲವೆಂಬುದಕ್ಕೆ ಪ್ರಾಚೀನ ಕಾರಣಗಳನ್ನು ತೋರ್ಪಡಿಸುವುದೇ ಉದ್ದೇಶವಾಗಿದ್ದು ಮೂಲಕ ಪಾಶ್ಚಾತ್ಯ ನಾಟಕಗಳು ಶೋಕಪರ್ಯವಸಾಯಿಗಳೇಕೆ? ನಾಟಕಗಳು ಹೀಗೆಯೇ ಇರಬೇಕೆಂಬ ನಿಯಮವು ಅವಶ್ಯಕವೋ ಹೇಗೆ? ಇವೇ ಮೊದಲಾದ ವಾದಗ್ರಸ್ತ ಪ್ರಶ್ನೆಗಳನ್ನು ಇಲ್ಲಿ ವಿಚಾರಿಸಿಲ್ಲ.

೬೭. ತಾಯಿಯ ವಿಷಯದಲ್ಲಿ ನಮ್ಮಳ ಕರ್ತವ್ಯ

ನನ್ನ ಬಾಲಮಿತ್ರರೇ,

ನಾನು ಈಗ ನಿಮಗೆ "ತಾಯಿಯ ವಿಷಯದಲ್ಲಿ ನಮ್ಮ ಕರ್ತವ್ಯ" ಎಂಬುದರ ಮೇಲೆ ನಾಲ್ಕು ಮಾತುಗಳನ್ನು ಹೇಳುತ್ತೇನೆ. ತಾಯಿಯ ಉಪಕಾರಗಳು ನಮ್ಮ ಮೇಲೆ ಅನೇಕವಿರುತ್ತವೆ. ನೋಡಿರಿ, ನಾವು ಗರ್ಭಾವಸ್ಥೆಯಲ್ಲಿರಲು ತಾಯಿಯು ಹೆಚ್ಚಿನ ಜಾಗ್ರತೆಯಿಂದ ಸಂರಕ್ಷಿಸುವಳು ಅದರಂತೆ ನಾವು ಜನ್ಮಕ್ಕೆ ಬಂದ ಮೇಲೂ ನಮಗೆ ಪೊಲಿಹಾಲು ಕೊಟ್ಟು ನಮ್ಮನ್ನು ಪೋಷಿಸುತ್ತಾಳೆ. ನಾವು ಚಿಕ್ಕಂದಿನಲ್ಲಿರುತ್ತಿದ್ದಾಗ್ಗೆ ನಮಗೆ ಮಾತನಾಡಲೂ ನಡಿಯಲೂ ಬಾರದು; ಅವೆಲ್ಲವನ್ನು ನಮಗೆ ನಮ್ಮ ತಾಯಿಯೇ ಕಲಿಸುತ್ತಾಳೆ. ನಾವು ಕಾಯಿಲೆ ಬಿದ್ದೆವೆಂದರೆ, ನಮಗೆ ಕೆಮ್ಮು, ಜ್ವರ, ನೆಗಡಿ, ವಗ್ಗೆನೆ ಯಾದಲ್ಲಿ ತಾಯಿಯು ನಮ್ಮನ್ನು ಅತ್ಯಂತ ಮಮತೆಯಿಂದ ಸುಸ್ರೂಷೆಯನ್ನು ಮಾಡುವಳು. ಹಾಗು, ತನ್ನ ಮಗನು—ಬುದ್ಧಿಶಾಲಿಯೂ, ನಿಪುಣನೂ, ಸದ್ಗುಣಿಯೂ, ಸದಾಚರಣಿಯೂ ಆಗಬೇಕೆಂದು ನಮ್ಮ ತಾಯಿಗೆ ಹೆಚ್ಚಿನ ಇಚ್ಛೆ ಇರುತ್ತದೆ. ಮತ್ತು ಈ ಸದಿಚ್ಛೆಯು ಪೂರ್ಣಪಡಿಸುವುದಕ್ಕಾಗಿ ನೀವು—ನಿತ್ಯವೂ ಶಾಲೆಗೆ ಹೋಗಬೇಕು; ಬಿಡದೆ ಅಭ್ಯಾಸ ಮಾಡಬೇಕು; ವ ಪರೀಕ್ಷೆಯಲ್ಲಿ ಉತ್ತೀರ್ಣನಾಗಿ ಕೀರ್ತಿ ಸಂಪಾದಿಸಬೇಕು.—ಎಂಬುದಾಗಿ ಹೇಳಿ ನಮ್ಮನ್ನು ಅದರಂತೆಯೇ ವರ್ತಿಸುವಳು. ಇದರಿಂದ ನಮಗೆ ಶ್ರೇಯಸ್ಸುಂಟಾಗುವುದೂ ಅಲ್ಲದೆ ತಾಯಿಗೂ ಆನಂದವಾಗುವುದು. ಇದೇ ಪ್ರಕಾರ ತಾಯಿ ಸಂಬಂಧವಾದ ನಮ್ಮ ಕರ್ತವ್ಯದ ಆರ್ತಿಕ ದೃಷ್ಟಿಯ ವಿಚಾರವಾಯಿತು. ಈಗ ನಾವು ತಾಯಿಯ ಸಲುವಾಗಿ ನಮ್ಮ ಕರ್ತವ್ಯದ ಪಾರಮಾರ್ಥಿಕ ಎಂದರೆ ಧಾರ್ಮಿಕ ದೃಷ್ಟಿಯ ವಿಚಾರ ಮಾಡುವ. ನಮ್ಮ ಶಾಸ್ತ್ರಜ್ಞರು—"ಮಾತೃ ದೇವೋಭವ" "ಪಿತೃದೇವೋಭವ" "ಆಚಾರ್ಯ ದೇವೋಭವ" ಹೀಗೆ ಹೇಳಿರುವರು. ಎಂದರೆ ತಾಯಿ, ತಂದೆ ವ ಗುರು ಇವರನ್ನು ಪೂಜ್ಯರಾಗಿ ಮನ್ನಿಸಿ ಅವರ ಆದರ ಸತ್ಕಾರ ಗಳನ್ನು ಮಾಡಬೇಕು. ಇದರಲ್ಲಿ "ಮಾತೃದೇವೋಭವ" ಈ ಶಬ್ದಕ್ಕೆ ಅಗ್ರಸ್ಥಾನವನ್ನು ಕೊಟ್ಟಿರುವರು ಇದರಿಂದ ಪೂರ್ವಕರ ದೃಷ್ಟಿಯಿಂದ ಮಾತೃಭಕ್ತಿಯ ಮಹತ್ವಿಕೆಯು ಎಷ್ಟೆಂದು ನಾವು ತಿಳಿದುಕೊಳ್ಳ ಬಹುದು. "ಶ್ರೀತುಕಾರಾಮ" ಇವರು ಹೇಳುತ್ತಾರೆ:—

मायबापें केवळ काशी । तेथे न जावें तीर्थासी ॥

ಕಾಶಿಯಂತೆ ಪವಿತ್ರವಾದ ತೀರ್ಥ ಮಾತೆಯು ಮನೆಯಲಿರಲು ಇತರ ತೀರ್ಥಗಳನ್ನು ತಿರುಗು ವುದರಿಂದ ಏನು ಅರ್ಥವಿರುವುದು?

ನಮ್ಮ ಭರತಖಂಡದಲ್ಲಿ ಅನೇಕ ಮಾತೃಭಕ್ತರು ಜನ್ಮವೆತ್ತಿದರು. ಅವರ ಅನೇಕ ಉದಾಹರಣೆ ಗಳನ್ನು ಕೊಡಬಹುದು. ಪರಂತು, ಅವೆಲ್ಲ ಈಗ ಕೊಡಲಸಾಧ್ಯವಾದ ಪ್ರಯುಕ್ತ ಒಂದೆರಡು ಉದಾಹರಣೆಗಳನ್ನು ಮಾತ್ರ ಇಲ್ಲಿ ಕೊಡುತ್ತೇನೆ. 'ಪುಂಡಲಿಕ' ಎಂಬ ಹೆಸರು ಜಗತ್ಪ್ರಖ್ಯಾತನಾದುದು. ನು ಪರಮ ಮಾತೃಭಕ್ತನಾಗಿದ್ದನು. ತನ್ನ ಮಾತಾಪಿತರಗಳ ಮೇಲಿನ ಅವನ ಅಢಳ ಶ್ರದ್ಧೆಯನ್ನು

ನೋಡಿ ಭಗವಾನ್ ಶ್ರೀ ವಿಷ್ಣುವು ಆತನ ಭೇಟಿಗಾಗಿ ಘಂಡರಾಪುರಕ್ಕೆ ಬಂದನು. ಅದರಿಂದಲೇ ಶ್ರೀ ಪಂಢರೀ ಕ್ಷೇತ್ರದ ಮಹಿಮೆಯು ಈಗಲೂ ಎಲ್ಲೆಲ್ಲಿಯೂ ಹಬ್ಬಿಕೊಂಡಿರುವುದು. ರಾವಣನು ತನ್ನ ತಾಯಿತಂದೆಗಳಿಗೋಸ್ಕರ ಪ್ರಾಣವನ್ನೇ ಕಳೆದುಕೊಂಡಿರುವನು. ಆದರಂತೆ ಶ್ರೀ ರಾಮಚಂದ್ರನು ತನ್ನ ತಾಯಿ ಕೈಕೆಯ ಆಜ್ಞೆಯನ್ನು ಪಾಲಿಸುವಗೋಸುಗ ವನವಾಸದಂತಹ ಭಯಂಕರ ದುಃಖವನ್ನು ಆನಂದದಿಂದ ಕೈಕೊಂಡಿರುವನು. ಇವುಗಳು ಪೌರಾಣಿಕ ಕಾಲದ ಉದಾಹರಣೆಗಳು. ಈಗ ಅರ್ವಾಚೀನ ಕಾಲದಲ್ಲಿ ಅನೇಕ ಮಾತೃಭಕ್ತರು ಸತ್ತುಹೋದರು. ಅವರಲ್ಲಿ ಶ್ರೀ ಶಿವಾಜಿಯು ಪ್ರಾಮುಖ್ಯನು. ಆವನು ಯುದ್ಧಕ್ಕೆ ಹೊರಡುವಾಗಲೂ, ಅಥವ ಬೇರೆ ಎಲ್ಲಿಯೂ ಹೋಗುವಾಗಲೂ—ತನ್ನ ತಾಯಿ ಜಿಜಾಬಾಯಿಯ ಆಜ್ಞೆ ವ ಆಶೀರ್ವಾದವನ್ನು ಪಡೆದು ನಂತರ ಎಲ್ಲಿ ಹೋಗುವದೋ ಅಲ್ಲಿಗೆ ಹೋಗುವನು. ಇರಲಿ, ಮಿತ್ರರೇ! ನಾನು ನಿಮ್ಮಗಳಿಗೆ ಈ ದೊಡ್ಡ ವಿಭೂತಿಯನ್ನು ಹೇಳಿರುವೆನು. ಅದರಂತೆ ನಿಮ್ಮಗಳ ತಾಯಿಯ ಆಜ್ಞೆಯನ್ನು ಶಿರಸಾವಹಿಸಿ ಪಾಲಿಸುವಿರಾಗಿಯೂ ತಾಯಿಯನ್ನು ಸರ್ವ ಪ್ರಕಾರದಿಂದಲೂ ಸಂತೋಷಿಸುವಿರಾಗಿಯೂ ನಂಬಿ, ನನ್ನ ಈ ಭಾಷಣವನ್ನು ಇಲ್ಲಿಗೆ ಮುಗಿಸುತ್ತೇನೆ.

—ಬಾಲಕ.

೬೮. ಹೇಗೆ ಮಾತಾಡಬೇಕು?

ದೇವರು ಮನುಷ್ಯನಿಗೆ ಮಾತಾಡುವ ದಿವ್ಯವಾದ ಸಾಮರ್ಥ್ಯವನ್ನು ದಯಪಾಲಿಸಿದ್ದಾನೆ. ಉಳಿದ ಯಾವ ಪ್ರಾಣಿಗಳೂ ಮನುಷ್ಯನಂತೆ ಮಾತಾಡಲಾರವು. ಈ ಮಾತಾಡುವ ಶಕ್ತಿಯ ಸದ್ವ್ಯಯ ಇಲ್ಲವೆ ಅಪವ್ಯಯವನ್ನು ಮಾಡಿಕೊಳ್ಳುವುದು ಮನುಷ್ಯನ ಕೈಯೊಳಗೇ ಇರುತ್ತದೆ. ಅದರ ಸದ್ವ್ಯಯ ಮಾಡಿಕೊಂಡರೆ ಸನ್ಮಿತ್ರನಂತೆ ಸುಖದಾಯಕವಾಗಿಯೂ, ಅಪವ್ಯಯಮಾಡಿಕೊಂಡರೆ ಶತ್ರುವಿನಂತೆ ದುಃಖದಾಯಕವಾಗಿಯೂ ಪರಿಣಮಿಸುತ್ತದೆ ಅವಿಚಾರದಿಂದ ನಾಲಗೆಯನ್ನು ಸಿಕ್ಕ ಹಾಗೆ ಹರಿಬಿಟ್ಟರೆ ದೊಡ್ಡ ದೊಡ್ಡ ಅನರ್ಥಗಳೊದಗುವ ಸಂಭವವುಂಟು. ಆದುದರಿಂದ ವಾಣಿಯು ಉಪಯೋಗವು ಸುಖದಾಯಕವಾಗಿಯೂ ಮತ್ತು ಹಿತಕಾರಕವಾಗಿಯೂ ಪರಿಣಮಿಸಬೇಕಾದರೆ ನಮ್ಮ ವರ್ತನವನ್ನು ಹೇಗೆ ಇಡಬೇಕೆಂಬುದನ್ನು ವಿಚಾರಿಸುವಾ.

ವಚನದೊಳಿಹ ಪರಸುಖಮುಂ | ವಚನದೊಳಂ ದೈವಗತಿಯು ದುರ್ಗತಿಯಕ್ಕಲಿಂ ||
ವಚನದೊಳರಿಮಿತ್ರತೆಯುಂ | ವಚನಾಮೃತದಿಂದೆ ತುಷ್ಟನೀಶ್ವರನರಿಯಾ || ೧ ||

ಮೇಲಿನ ಪದ್ಯದಲ್ಲಿ ಕವಿಯು ಮಾತಿನ ಸಂಬಂಧವಾಗಿ ಜನರಿಗೆ ಹೇಳಿದ ಉಪದೇಶವು ಅತ್ಯಂತ ಉಪಯುಕ್ತವಾಗಿರುವುದೆಂದು ಬೇರೆ ಹೇಳಬೇಕಾಗಿಲ್ಲ.

ಸವಿಯಾದ ಮಾತುಗಳನ್ನಾಡುವುದರಿಂದ ಪ್ರಸಂಗ ವಿಶೇಷದಲ್ಲಿ ಅಸಾಧ್ಯವಾದ ಕಾರ್ಯಗಳೂ ಸಾಧ್ಯವಾಗುವುವು. ನಿರರ್ಥಕವಾದ ಮಾತುಗಳನ್ನು ಬೆಳೆಸುವುದರಲ್ಲಿ ಏನೂ ಪ್ರಯೋಜನವಿಲ್ಲ. ಬಹ

ಮಾತಾಡುವುದರಿಂದ ಶಬ್ದಗಳ ಮಹತ್ವವು ಉಳಿಯುವುದಿಲ್ಲ. ಮತ್ತು ಒಂದೊಂದು ಸಾರಿ ಮಾತಾಡುವ ಭರದಲ್ಲಿ ತಪ್ಪುಗಳಾಗುವ ಸಂಭವವೂ ಉಂಟು. ಚೇಷ್ಟೆಯಿಂದೊಡಗೂಡಿದ ಮಾತುಗಳಿಂದ ಒಂದೊಂದು ವೇಳೆ ದೊಡ್ಡ ದೊಡ್ಡ ಅನರ್ಥಗಳು ಒದಗುವುವು. ಚೇಷ್ಟೆ ಮಾಡುವುದೆಂದರೆ ಎರಡನೇಯನರ ಮುಖಭಂಗ ಮಾಡುವುದೇ ಸರಿ. ಕೆಲಕೆಲವು ಜನರಂತೂ ಕೂಡಿದ ನಾಲ್ಕು ಜನರ ಮನರಂಜನಾರ್ಥವಾಗಿ ಯಾವುದೇ ಒಂದು ಅಪ್ರಯೋಜಕ ವಿಷಯದ ಮೇಲೆಯೇ ಆಗಲಿ, ಊರೊಳಗಿನ ಯಾವ ನೊಬ್ಬನ ಮೇಲೆಯೇ ಆಗಲಿ, ತನ್ನ ವಾಣೀಶಕ್ತಿಯ ಸಾಮರ್ಥ್ಯವನ್ನು ತೋರಿಸುವರು. ಇದರಿಂದ ಅವರಿಗೆ ಏನೂ ಪ್ರಯೋಜನವಿಲ್ಲವೆಂಬುದು ಸಹಜವೇ ಆದೆ. ಇದಂತೂ ಇರಲಿ. ಆಲ್ಲಿ ಕೇಳ ಬೇಕೆಂದು ಕೂಡಿದ ನಾಲ್ಕು ಜನರೂ ಸಹ ಇವನ ಎದುರಿಗೆ ಕೆಲಹೊತ್ತು ನಕ್ಕರೂ ಹಿಂದೆ ಇವನ ಮೂರ್ಖತನಕ್ಕೆ ನಗದೆ ಇರಲಾರರು. ಮೇಲಾಗಿ ಎರಡನೇಯವರನ್ನು ನಿಂದಿಸುವುದರಿಂದ ಅವರು ಇವನನ್ನು ದ್ವೇಷಿಸದೆ ಇರಲಾರರು. ಆದ್ದರಿಂದ ಪರರ ಮನಸ್ಸನ್ನು ನೋಯಿಸುವಂಥ ಯಾವ ತರದ ಚೇಷ್ಟೆ ಮಾತುಗಳನ್ನೂ ಆಡಬಾರದು.

ಮಾತಾಡುತ್ತಿರುವಾಗ್ಗೆ ಅನೇಕ ಜನರು ಮೇಲಿಂದಮೇಲೆ ಶಪಥವನ್ನು ಮಾಡುವರು ಇದು ಒಳ್ಳೆಯದಲ್ಲ. ಅದರಂತೆ ದೇವರಾಣೆಯನ್ನು ಮಾಡುವುದದರಿಂದಲೂ ಪರಮಾತ್ಮನಿಗೆ ಅಪಮಾನಮಾಡಿ ವಂತಾಗುವುದೆಂದು ಬೇರೆ ಹೇಳುವ ಕಾರಣವಿಲ್ಲ. ಅಂದಬಳಿಕ ಯಾವ ಕೆಲಸಗಳನ್ನು ಮಾಡಿರುವುದನ್ನು ತನ್ನ ಕಣ್ಣುಗಳು ಪ್ರತ್ಯಕ್ಷವಾಗಿ ನೋಡಿರುವುದಿಲ್ಲವೋ ಹಾಗೂ ಕವಿಗಳು ಕೇಳಿರುವುದಿಲ್ಲವೋ ಅಂಥ ಕೆಲಸಗಳನ್ನು ನಾನೇ ಮಾಡಿರುವೆನೆಂದು ಸುಳ್ಳುಸುಳ್ಳೆ ಶಪಥಮಾಡುವ ನೀಚ ಜನರಿಗೆ ಯಾವ ಗತಿ ಆಗುವುದೆಂಬುವುದನ್ನು ನೀವೇ ವಿಚಾರಿಸಿರಿ!!! ಸುಳ್ಳು ಮಾತುಗಳನ್ನು ಎಂದೂ ಆಡಲಾಗದು. ಸುಳ್ಳ ನ್ನಾಡುವುದರಿಂದ ಮನುಷ್ಯನ ಬೆಲೆಯೇ ಇಲ್ಲದಂತಾಗುವುದು. ಸುಳ್ಳಿನ ಪರಿಣಾಮವು ಕಡೆಗೆ ಸುಳ್ಳೆ ಆಗುವುದು. ಸತ್ಯ ಮಾತಾಡುವುದೇ ಭೂಷಣವು. "ಬೆಲ್ಲವಿಲ್ಲದಿದ್ದರೂ ಬೆಲ್ಲದಂಥ ನಾಲ್ಕು ಮಾತು ಗಳಿರ ಬೇಕೆಂದು" ಹಿರಿಯರು ಹೇಳುವರು. ಹೀಗೆಂದು ತಿಳಿದು ಆ ಬೆಲ್ಲದಂಥ ಮಾತುಗಳಿಂದ ಮನುಷ್ಯರನ್ನು ನಾಶಗೊಳಿಸುವ ಉದ್ದೇಶಕ್ಕೆ ಯಾರೂ ಬೀಳಲಾಗದು. ಹೀಗೆ ಮಾಡಿದರೆ ಅದು ಬೆಲ್ಲದಂಥ ಮಾತುಗಳೆಂದು ಎಂದೂ ಕರೆಯಲ್ಪಡಲಾರವು ಸವಿಮಾತುಗಳನ್ನಾಡುವುದರಿಂದ ಮನುಷ್ಯನಿಗೆ ಸುಖವೂ ಬೇಕಾದಷ್ಟು ಜನರ ಸಹಾಯವೂ ದೊರಕುವುದು. ಅಧಿಕಾರ ಯುಕ್ತ ಭಾಷಣಕ್ಕಿಂತ ಪ್ರೇಮ ಮಾತುಗಳಿಂದ ದೊಡ್ಡ ದೊಡ್ಡ ಕೆಲಸಗಳಾಗುವುವು ಬಡ ಜನರು ಮೃಷ್ಟಾನ್ನಕ್ಕಿಂತಲೂ ಮಿಷ್ಟ ಭಾಷಣದಿಂದ ಹೆಚ್ಚು ತೃಪ್ತಿಯನ್ನು ಹೊಂದುವರು. ಯಾವಾಗಲೂ ಸಜ್ಜನರ ಸಹವಾಸವನ್ನು ಮಾಡು ವುದರಿಂದ ಮತ್ತು ಉತ್ತಮ ಪುಸ್ತಕಗಳನ್ನೋದುವುದರಿಂದ ಮಾತುಗಳಾದರೂ ಶುದ್ಧವಾಗಿಯೂ ಮಧುರ ವಾಗಿಯೂ ಹೊರಡುತ್ತವೆ. ಚೈತನ್ಯಯುಕ್ತವಾದ ವಾಣಿಯಲ್ಲಿ ದೇಶದ ಪ್ರಾಣವಿರುತ್ತದೆ. ಒಳ್ಳೆ ಭಾಷಣದಿಂದ ಸಂಪತ್ತಾದರೂ ಬೆಳೆಯುವುದು. ಮನುಷ್ಯ ಪ್ರಾಣಿಗೆ ಸುಖವನ್ನು ಹೆಚ್ಚಿಸುವುದರ ಲ್ಲಿನಾಗಿ ವಾಣಿಯು ವ್ಯಯವನ್ನು ಎಷ್ಟು ಮಾಡಿದರೂ ಅಡ್ಡಿ ಇಲ್ಲ. ಸವಿಯಾದ ಸತ್ಯಭಾಷಣವೇ ಮನುಷ್ಯನ ಸೌಂದರ್ಯವು. ಮತ್ತು ಆನೇ ಭಾಷಣವಿಂದಲೆ ಜೀವಿತವು ಸುಖಕರವಾಗಿ ಸಾಗುವುದು.

—N. [illegible]ADAKI
TUDENT, HOMBAL

೬೮. ಚಂಡೀದಾಸ ಚರಿತ್ರೆ

जय जय देवकवि नृपति शिरोमणि, विद्यापति रसधाम ।
जय जय चंडीदास रसशेखर अखिल भुवने अनुपम ।।

ಸಾಂಪ್ರತಕ್ಕೆ ಪ್ರವೃತ್ತರಾದ ಯೂರೋಪಖಂಡದೊಳಗಿನ ಮಹಾ ಯುದ್ಧವನ್ನು ಕುರಿತು ವಿಚಾರಿಸಿದರೆ, ಸುಧಾರಣೆಯ ಪ್ರಗತಿಯ ಸಂಗಡಲೇ ರಾಷ್ಟ್ರ-ರಾಷ್ಟ್ರಗಳೊಳಗಿನ ಹಿತಾಹಿತಗಳ ಸಂಬಂಧವು ಹೇಗೆ ಬೆಳೆಯುತ್ತಾ ಹೋಗುತ್ತದೆಂಬುದೂ, ರಾಷ್ಟ್ರದ ಪ್ರಬಲ ಮನೋವಿಕಾರಗಳ ಪರಿಣಾಮವು ಇತರ ರಾಷ್ಟ್ರಗಳ ಮೇಲಷ್ಟೇ ಅಲ್ಲದೆ ಇಡೀ ಜಗತ್ತಿನ ಮೇಲೆ ಯಾವ ಪ್ರಕಾರದ್ದಾಗುವುದೆಂಬುದೂ ಚೆನ್ನಾಗಿ ನಿದರ್ಶನಕ್ಕೆ ಬರುತ್ತದೆ. ಪ್ರಾಚೀನ ಕಾಲದಂತೆ ರಾಜಕಾರಣದ ಕ್ಷೇತ್ರವು ಮರ್ಯಾದಿತವಾಗಿರದೆ, ರಾಷ್ಟ್ರದೊಳಗಣ ಕರ್ತೃತ್ವಶೀಲ ಪುರುಷರು ಸರ್ವ ಜಗತ್ತಿನ ವಿಚಾರವನ್ನೂ ಮಾಡಬೇಕಾಗುತ್ತದೆಂಬುದು ಸಾಮಾನ್ಯ ಜನಗಳಿಗೂ ಕೂಡ ತಿಳಿಯಹತ್ತಿರುತ್ತದೆ. ಇಷ್ಟೇ ಅಲ್ಲ; ಪ್ರತಿಯೊಂದು ದೇಶದೊಳಗಣ ರಾಜ್ಯವ್ಯವಸ್ಥೆ, ಸಮಾಜಸ್ಥಿತಿ, ಆಯಾತ ನಿರ್ಗತ ಮೊದಲಾದ ವ್ಯಾಪಾರದ ಪದಾರ್ಥಗಳು ಇವೇ ಮೊದಲಾದುವುಗಳ ಜ್ಞಾನವು ಸರ್ವರಿಗೂ ಎಷ್ಟು ಆವಶ್ಯಕವಾಗಿದೆಯೆಂಬುದು ಸಾಂಪ್ರತದ ಯುದ್ಧ ನಿಮಿತ್ತಕ ಪರಿಸ್ಥಿತಿಯಿಂದ ಚೆನ್ನಾಗಿ ಲಕ್ಷ್ಯದಲ್ಲಿ ಬರುವಂತಿದೆ. ಇಂತಹ ಸಮಯದಲ್ಲಿ ಹಿಂದುಸ್ಥಾನದ ಜನತೆಯ ವಿಚಾರವನ್ನು ಮಾಡಿದರೆ ಅದರಿಂದ ಉದ್ವೇಗವು ಉತ್ಪನ್ನವಾಗದೆ ಇರಲಾರದು. ಪಾಶ್ಚಾತ್ಯ ರಾಷ್ಟ್ರಗಳೊಳಗಣ ವೃತ್ತಪತ್ರ ಹಾಗು ಮಾಸಿಕ ಪುಸ್ತಕಗಳಲ್ಲಿ ನಡೆದಿರುವ ವಿಷಯಗಳ ಊಹಾಪೋಹವನ್ನು ನೋಡಲು, ಸಪ್ತ ಸಮುದ್ರಗಳ ಆಚಿಗಿರುವ ದೇಶಗಳೂ ಕೂಡ ತಮ್ಮ ಸಾನಿಧ್ಯದಲ್ಲಿಯೇ ಇರಬೇಕೆಂದು ಅವುಗಳಿಗೆ ಭಾಸವಾಗುತ್ತಿದ್ದಂತೆ ಕಂಡುಬರುವುದು. ಈ ಮಾತು ರಾಜಕಾರಣದ ವಿಷಯಕ್ಕೆ ಮಾತ್ರ ಸಂಬಂಧಿಸುತ್ತದೆಂತಲ್ಲ, ಶಾಸ್ತ್ರೀಯ ಶೋಧ ಹಾಗು ವಾಙ್ಮಯಗಳಿಗಾದರೂ ಸಂಬಂಧಿಸುತ್ತದೆ. ನಮಗಾದರೋ, ಯಾವತ್ತು ರಾಷ್ಟ್ರಗಳಜ್ಞಾನವು ಬತ್ತಟ್ಟಿಗಿರಲಿ; ಹಿಂದುಸ್ಥಾನದ ಬೇರೆ ಬೇರೆ ಭಾಗಗಳ ಸಮಾಜಸ್ಥಿತಿ ಹಾಗು ವಾಙ್ಮಯ ವಿಷಯಕ ಜ್ಞಾನವೂ ಕೂಡ ಸಾಕಷ್ಟಿಲ್ಲ. ಈಸ್ಥಿತಿಯು ಅತ್ಯಂತ ಅನಿಷ್ಟಕಾರಕವು. ಆದುದರಿಂದ, ಈ ಸ್ಥಿತಿಯನ್ನು ದೂರಮಾಡುವುದಕ್ಕಾಗಿ ನಮ್ಮ ತರುಣ ಜನರು ತಮ್ಮ ಮಾತೃಭೂಮಿಯನ್ನು ಒಮ್ಮೆಯಾದರೂ ಸ್ವನೇತ್ರಗಳಿಂದ ಅವಲೋಕನ ಮಾಡುವ ಉತ್ಕಟೇಚ್ಛೆಯನ್ನು ಧಾರಣಮಾಡುವುದು ಸರಿಯಾದುದ್ದಲ್ಲೆಂದು ಯಾರು ಹೇಳುವರು? ಆದರೂ ಇಂತಹ ಇಚ್ಛೆಯನ್ನು ಪೂರ್ಣ ಮಾಡಿಕೊಳ್ಳುವ ಸಾಮರ್ಥ್ಯವು ಯಾರಲ್ಲಿರುವುದಿಲ್ಲವೋ ಅವರಿಗೋಸ್ಕರ ಪ್ರವಾಸಮಾಡಿ ಬಂದಂಥ ಜನರು ಪ್ರವಾಸ ವೃತ್ತಗಳನ್ನು ಬರೆಯುವುದೂ, ಭಿನ್ನಾಭಿನ್ನ ಭಾಷಾಭಿಜ್ಞರು ಆಯಾ ವಾಙ್ಮಯಗಳ ಮೇಲೆ ಲೇಖನಗಳನ್ನು ಬರೆಯುವ ಉಪಯೋಗಕಾರಕ ಉಪಾಯಗಳಾಗಿವೆ. ಉತ್ತರೋತ್ತರಾಗಾರ್ಜವಲಂಬನೆ ಮಾಡಿ ಕರ್ಣಾಟಕದೋ[illegible] ವಿದ್ವಾಂಸರಾದ ಲೇಖಕರು ಜಿಜ್ಞಾಸುಗಳ ಇಚ್ಛೆಯನ್ನೂ ತೃಪ್ತಿಗೊಳಿಸಿದರೆ ಆ [illegible]ದಿಂದ ಜನರ ಮೇಲೆ ಎಷ್ಟೋ ಉಪಕಾರವಾಗುವಂತಿದೆ. ಇಂತಹ ಶ್ರೇಷ್ಠ ಪ್ರತಿಯ ಲೇಖಕರಲ್ಲಿಯೊಂದೆ ಬಂ[illegible]ನವರೆಗೆ ಪ್ರಥಮತ [illegible]ಖದೊಳಗಿನ ಕವಿಗಳ ಹಾಗು ಲೇಖಕರ ಚರಿತ್ರೆಯನ್ನೂ ಪಂಡಿತಪ್ರ

ಪಡಿಸಬೇಕೆಂದು ಪ್ರಸ್ತುತ ಲೇಖಕನು ಆಲೋಚಿಸಿರುತ್ತಾನೆ. ಪ್ರಕೃತಕ್ಕೆ ಸಂಸ್ಕೃತ ಭಾಷೆಯೊಳಗಿನ "ಗೀತಗೋವಿಂದ" ಕಾವ್ಯ ಕರ್ತೃವಾದ ಜಯದೇವ ಕವಿ, ಹಾಗು "ರಸಧಾಮು" ಬಿರುದಾಂಕಿತ ಬಂಗಾಲೀ ಕವಿಯಾದ ವಿದ್ಯಾಪತಿ ಇವರ ಪಂಙ್ತಿಯಲ್ಲಿ ಕೂಡ್ರಲು ಅರ್ಹನಾದ ಚಂಡೀದಾಸನ ಚರಿತ್ರೆಯನ್ನು ಬರೆಯಲುಪಕ್ರಮಿಸುತ್ತೇನೆ.

ವಂಗವಾಗ್ವಧುವನ್ನು ಪದ್ಯಾಲಂಕಾರಗಳಿಂದ ವಿಭೂಷಿಸುವ ಈ ಚಂಡಿದಾಸನು ಹದಿನಾಲ್ಕನೆಯ ಶತಮಾನದ ಉತ್ತರಾರ್ಧದಲ್ಲಿಯೂ ಹದಿನೈದನೆಯ ಶತಮಾನದ ಪ್ರಾರಂಭದಲ್ಲಿಯೂ ಆಗಿಹೋದನು. ಆತನ ಇಡೀ ವೃತ್ತವನ್ನು ವಿವರಿಸುವ ಮೊದಲು ತತ್ಕಾಲೀನ ಸಮಾಜಸ್ಥಿತಿಯನ್ನು ಸ್ವಲ್ಪ ಅವಲೋಕಿಸುವುದು ಯೋಗ್ಯವೆಂದು ತೋರುತ್ತದೆ.

ಚಂಡೀದಾಸನು ಜನ್ಮಕ್ಕೆ ಬಂದ ಕಾಲಕ್ಕೆ ಭಗವಾನ್ ಬುದ್ಧದೇವನು ಅವತರಿಸಿ ಎಷ್ಟೋ ಶತಕಗಳಾಗಿದ್ದುವು.

ಈ ಕಾಲಕ್ಕೆ ಬೌದ್ಧಧರ್ಮದ ಯಾವತ್ತು ಉಚ್ಚತತ್ವಗಳು ಸಮಾಜದಲ್ಲಿ ಸಂಪೂರ್ಣವಾಗಿ ಪ್ರಚಾರದಲ್ಲಿರುವುದು ಶಕ್ಯವಿದ್ದಿಲ್ಲ. "ಜ್ಞಾನ ಸಂಪಾದನೆಯನ್ನು ಮಾಡಿರಿ; ಅದರ ಯೋಗದಿಂದ ಚಿತ್ತಶುದ್ಧಿಯಾಗುವುದು; ಶುದ್ಧಾಂತಃಕರಣದಿಂದ ವಿಶ್ವದಮೇಲೆ ಪ್ರೇಮಮಾಡುವುದನ್ನು ಕಲಿಯಿರಿ; ನಿರ್ಹೇತುಕವಾಗಿ ಜಗತ್ಕಲ್ಯಾಣಕ್ಕೋಸುಗ ಪ್ರಯತ್ನ ಮಾಡಿರಿ." ಈ ಪ್ರಕಾರದ ಗೌತಮ ಬುದ್ಧನ ಉಚ್ಚತತ್ವಗಳು ಈ ಕಾಲಕ್ಕೆ ಬಹುಶಃ ಲುಪ್ತಪ್ರಾಯವಾಗಿದ್ದುವು. ಗೌತಮ ಬುದ್ಧನು ಉಪದೇಶಿಸಿದಂಥ ನಿರ್ವಾಣ ತತ್ವವು ಪೂರ್ಣವಾಗಿ ಮುಳುಗಿಹೋಗಿತ್ತು. ಸಾಸಿರಾರು ವರುಷಗಳು ಕಳೆದುಹೋದಮೇಲೆ ಎಂತಹ ಶುದ್ಧ ಧಾತುವಿಗಾದರೂ ಜಂಗುಹತ್ತದೆ ಇರುವುದೇ? ಸಾರಾಂಶವೇನೆಂದರೆ—ಬೌದ್ಧ ಧರ್ಮದ ಮೂಲ ಸ್ವರೂಪವನ್ನೂ, ಸಾದಾತನವನ್ನೂ, ಸಾವಿತ್ರ್ಯವನ್ನೂ ಕೆಂಬಹುನಾ ಅದರೊಳಗಿನ ಉತ್ಕೃಷ್ಟ ಭಾಗವನ್ನು ಜನರು ಮರೆತುಬಿಟ್ಟಿದ್ದರು; ಮತ್ತು ವಿರುದ್ಧದಿಶೆಯಿಂದಲೇ ಪ್ರಾಯಶಃ ಎಲ್ಲರೂ ಆಚರಿಸುತ್ತಿದ್ದರು. ಯಾವ ಮಾತಾದರೂ ಮಿತಿಮೀರಿದರೆ ಅದರಲ್ಲಿ ಬೇಸರವೂ ಅನಾದರವೂ ಉತ್ಪನ್ನವಾಗುತ್ತದೆಂಬಂತೆಯೇ ಈ ಕಾಲದ ಸ್ಥಿತಿಯಾಗಿತ್ತು. ಬುದ್ಧದೇವನ ಸಾತ್ವಿಕ ಆಚಾರಗಳಿಗೂ ಬಂಧನಗಳಿಗೂ ಬೇಸತ್ತಂಥ ಜನರು "ವಾಮಾಚಾರ"ವೆಂಬ ಬೌದ್ಧ ಧರ್ಮಾಂಗ ಪಂಥಾನುಯಾಯಿಗಳ ಭಕ್ತವನ್ನು ಆಶ್ರಯಿಸಲಾರಂಭಿಸಿದ್ದರು. ಈ ವಾಮಾಚಾರದ ಆಚಾರಗಳು ವಿಚಿತ್ರವಾಗಿಯೂ ಅಸಹ್ಯವಾಗಿಯೂ ಇದ್ದುವು. ಚಂಡೀದಾಸನ ಕಾಲದಲ್ಲಿ ಈ ಆಚಾರಗಳು ಒಳ್ಳೇ ಪ್ರಬಲಕ್ಕೆ ಬಂದಿದ್ದುವು. "ಸಹಜ" ಪಂಥವಾದರೂ ಇವುಗಳಲ್ಲಿಯೇ ಒಂದು.

ತಂತ್ರಶಾಸ್ತ್ರದಲ್ಲಿ ಮೋಕ್ಷಸಾಧನಕ್ಕೆ "ಸಹಜ"ವೆಂಬ ಉಪಾಯವು ಹೇಳಲ್ಪಟ್ಟಿದೆ. ಈ ಉಪಾಯವು—ವಿಧಿಯು—ಅತ್ಯಂತ ವಿಲಕ್ಷಣವಾಗಿದೆ. ಈ ವಿಧಿಯನ್ನನುಸರಿಸಿ ನಡೆಯುವ ಮನುಷ್ಯನು ಸ್ತ್ರೀಸ್ವರೂಪಿಣಿಯಾದ ಪರಕೀಯಸ್ತ್ರೀಯ ಮೇಲೆ ನಿರ್ವ್ಯಾಜವಾದ—ನಿಷ್ಕಲಂಕವಾದ—ವಿಷಯವಾಸನಾವಿಹೀನವಾದ—ಪ್ರೇಮವನ್ನು ಮಾಡತಕ್ಕದ್ದು; ಆಕೆಯು ಕೇವಲ ತನ್ನ ಆರಾಧ್ಯ ದೇವಿಸತಕ್ಕದ್ದು; ಮತ್ತು ಆಕೆಯ ಸಲುವಾಗಿ ಯಾವ

ರಾಜಹಂಸ

THE RAJA-HANSA DHARWAR.

1913

ದಿನಾಲು ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು

Vol 4 No 3
ಪುಟ 8 ಸಂಖ್ಯೆ 83

ಧಾರವಾಡ, ಶುಕ್ರವಾರ ತಾರೀಖು ೩೦ ನವ್ಹೆಂಬರ ೧೯೧೩ನೇ ಇಸ್ವಿ

PRICE 3 PIES
ಬೆಲೆ ೩ ಪೈಸೆ

ರಾಜಹಂಸ

ಧಾರವಾಡ, ತಾರೀಖು ೩೦ ನವೆಂಬರ ೧೯೧೩

ಶಿಕ್ಷಣಾಲಯ ಕೆರಲೆ, ಕಾಳ್ಳೆ, ಸುಲಿಗೆ ಮತ್ತು ಬಿಭೀಷ್ಣ.

ದಿಂಡಿಗೆ ಮೂರೇ ದಿವಸದ ಅನ್ನವಿದೆ.

ಕೆರನ್ಸಕಿ ಮತ್ತು ಬೊಲ್ಶೆವ್ಯಾಕ್ಸವಿಲಿಸ್ಟ ಪಕ್ಷದ ನಡುವೆ ದೇಶದ ತುಂಬ ರಕ್ತದ ಪ್ರವಾಹ ಹರಿಯುವಂಥ ಜಗಳಗಳು ನಡೆದವು. ಕೆರನ್ಸಕಿಯು ರಾಜಧಾನಿಯಲ್ಲಿ ಸೋತು, ಪಲಾಯನ ಹೇಳಿಸಿದ್ದರಿಂದ, ಅವನನ್ನು ಚತುರ್ಭುಜ ಮಾಡಬೇಕೆಂದು ಬೊಲ್ಶೆವಿಲಿಸ್ಟರು ತಾರುಗಳನ್ನು ಕಳಿಸಿದ್ದಾರೆ. ಆದರೂ ಕೆರನ್ಸಕಿಯ ಪಕ್ಷದವನಾದ ಜನರಲ ಕೇಲಡಾಯಿನನಿಂದ ಅನೇಕ ಸೈನಿಕರು ಡಾನೆಜದ ಕಲ್ಲಿದ್ದಲಿನ ಖಣಿಗಳನ್ನು ಆಶ್ರಯಿಸಿ ರಂಜಧಾನಿಯಲ್ಲಿ ನೀರು ಹೆಪ್ಪಗಟ್ಟಿ, ಆಹಾರಗಳಿಲ್ಲದೆ ಜನರು ಉಪವಾಸದಿಂದ ಬಳಲುವಂತೆ ಮಾಡಲು ಕಕ್ಕಸನಾಗಿದ್ದಾನೆ. ಜನರಲ ಕೆಲಡಾಯಿನನಂತೂ ರಾಜಧಾನಿಗೆ ಹೋಗತಕ್ಕಂಥ ಅನ್ನದ ಎರಡು ನೂರು ವ್ಯಾಗನುಗಳನ್ನು ಲಪ್ಪರೀ ಹುಕುಮಿನಿಂದ ನಿಲ್ಲಿಸಿದ್ದಾನೆ.

ಪಟ್ಟಣಗಳಲ್ಲಿರುವ ಅನಾಯಕತನವ [illegible] ಯಬೇಕೆಂದು ವ್ಯಾಕ್ಸವಿಲಿಸ್ಟರಲ್ಲಿ ಪ್ರಮುಖರು ಪ್ರತಿಯೊಂದು ವ್ಯಾಕ್ಸವಿಲಿಟಿಗೆ ದಂಡಿನ ಅಧಿಕಾರಿ ಕೊಡಬೇಕೆಂದಿದ್ದಾರೆ. ಆದರೆ ಜನರಲ ಕೆಲಡಾಯಿನ, ಜನರಲ ಕಾರ್ನಿಲಾಫ ಇವರು ಜೋರೂಂದು ಹುಕುಮನ್ನು ತೆಗೆಯತಕ್ಕವರಿದ್ದರಿಂದ ಈಗ ದಂಡು ಯಾರ ಆಜ್ಞೆ ಪಾಲಿಸುವದೆಂದು ಯಾರು ಹೇಳುವರು ಪೆಸ್ರೋಗ್ರಾದಲ್ಲಿ ಆವ ರಣಖತ್ಕರವಲ್ಲಿ ಮೂರು ಸಾವಿರ ಹೆಣಗಳು ಬಿದ್ದವು. ಕೆಲವು ದಿವಸಗಳವರೆಗೆ ಓಣಿ ಸಾತ್ರವಲ್ಲದೆ ಬಾಗಿಲದಲ್ಲಿ ಬಿದ್ದ ಹೆಣಗಳನ್ನು ತೆಗೆಯುತಕ್ಕವರು ಸಹ ಇರಲಿಲ್ಲ. ಕೊಳ್ಳಿಗಾರರು ದೊಡ್ಡ ದೊಡ್ಡ ದೇವಾಲಯಗಳನ್ನು ಸುಟ್ಟು ಬಿಟ್ಟಗು. ಈ ಪ್ರಕಾರ ಪಟ್ಟಣ ಮತ್ತು ದಂಡಾಳಿ ಅವ್ಯವಸ್ಥೆಯ [illegible] ರಣಮಂಡಲದಲ್ಲಿ ಮೂರೇ ದಿವಸ ಸಾಲು ಪಟ್ಟು ಲಸ್ಸವಿರುತ್ತದೆ. ಅನ್ನದ ಪುರನಿಯಾಗಾದಿದ್ದರೆ ಸೈನಿಕರು ಸಮರಾಂಗಣಕ್ಕೆ ಶರಣು ಹೂಡದೆ, ಮನಬಂದಲ್ಲಿ ಹೊಗುವರೆಂದು ಖಂಡು ತಾರು ಹೇಳುತ್ತದೆ.

ಅಗಡಿಯ ಅಗ್ರಹಾರದ ವಿರುದ್ಧ.

ರಾ. ಗಳಗನಾಥ ವಾಸ್ತರರು.

ಬ್ರಹ್ಮೀಭೂತರಾದ ಶ್ರೀ ಕೇಶವಾಚಲ ಸದ್ಗುರುಗಳ ಪ್ರಸಾದದಿಂದ ಅಗಡಿಯಲ್ಲಿ ಆನಂದವನ ಮಂಟಪವು ಸ್ಥಾಪಿಸಲ್ಪಟ್ಟಿತು. ನಾ. ವೆಂಕಟೇಶ ತಿರಕೋ ಕುಲಕರ್ಣಿ ಗಳಗನಾಥ ಇವರು ಗುರು ಕಾರ್ಯಕ್ಕಾಗಿ ಕಾಲಾವಧಿಯ ಕೆಲಸವನ್ನು ಬಿಟ್ಟು ಗುರುಸೇವೆಯಲ್ಲಿ ಕೇವಲಾಂಯವೃತ್ತಿಯನ್ನು ಕಳೆಯಲೆಣಿಸಿದರು. ಗುರುವಿನ ಛತ್ರದಲ್ಲಿರುವ ತನಕ ಇವರು ತಾವು ಮಾಡುತ್ತೇವೆಂದು ಹೇಳುವ ಪ್ರತಿಯೊಂದು ಕೆಲಸವು ಹೆಚ್ಚಳವನ್ನು ಹೊಂದಿತು. ಗುರುವಿನ ವಿಷಯೋಗವಾದ ಕೂಡಲೆ, ಗುರುಸ್ಥಾನವಿಲ್ಲದಿದ್ದರೂ ಗುರುಸ್ಥಾನದಂಥ ಅಧಿಕಾರವು ತಮಗೆ ಬಂಕೆಂದು ಮಿ. ಗಳಗನಾಥರು ತಿಳಿಕೊಂಡು ಹುಲಿಯು ಬಣ್ಣಕ್ಕೆ ಪ್ರವೃತ್ತರಾದರು. ಶ್ರೀ ಕೃಷ್ಣಪರಮಾತ್ಮನು ಪರಂಧಾಮಕ್ಕೆ ಹೋದನಂತರ ಧರ್ಮನಂಜಯನಿಗಾದ ಪರಿಣಾಮದ ಕಷ್ಟವನ್ನು ಇವರಿಗೆ ಹೇಳತಕ್ಕದ್ದಾಗಿಲ್ಲ. ತಾವು ಸರ್ವಸ್ವವನ್ನು ಗುರುಕಾರ್ಯದಲ್ಲಿ ಅರ್ಪಿಸಿದ್ದರಿಂದ, ಗುರುವಿನ ಅಗ್ರ ಶಿಷ್ಯನೆಂದು ಹೇಳಿಕೊಂಡು, ಪ್ರತಿಯೊಂದು ಕಾರ್ಯದಲ್ಲಿ ಅಗ್ರಸ್ಥಾನವು ಅಗ, ತಾಂಬೂಲವು ದೊರೆಯಬೇಕೆಂದೂ, ತಾವು ಆಡಿದ್ದೆ ಆಟವಾಗಿ ಪಿಸಿದಂತೆ ಆನಂದವನದಲ್ಲಿ ಗಾಳಿ ಬೀಸಬೇಕೆಂದೂ ದುರಾಗ್ರಹಪಡುತ್ತಿರುವರು. ಹೀಗೆ ಗುರುವಿಲ್ಲದ ಪಾತಶಾಲೆ ಆಡಾಪಡಿತ್ತು. ಶ್ರೀ ಸದ್ಗುರುವಿನ ಕೂಡ ಅಲ್ಲಿಯ ಎಲ್ಲ ಸಂಸ್ಥೆಗಳು ನಾಪ ಕೇವಲವಾಗುವಂಥ ದುಃಖದಾಯಕ ಪ್ರಸಂಗ ಬಂದಿದೆ. ಮಿ. ಗಳಗನಾಥರು ಸ್ವಪಹಸ್ತದಿಂದ ಚಾರಿತ್ರಿಕೆಯಲ್ಲಿ ತಮ್ಮ ಕರ್ಮಕಥೆಯನ್ನು ತಲೆಬೇಸರಿಸಿಡುವಷ್ಟು ಬರೆದಿರುತ್ತಾರೆ. ಇವರಲ್ಲಿ ಇವರ ಅಹಂಕಾರದ ಹೊರತು ಇನ್ನೇನೂ ಇರುವದಿಲ್ಲ. ಪರಿಸ್ಥಿತಿಯು ದಾನ ಕೊಟ್ಟ ಎತ್ತಿನ ಹಲ್ಲು ನೋಡಿದಂತಾಗಿದೆ. ಮಾಮಲೇದಾರರು, ರಾವಸಾಹೇಬ ಜೋಗಳೇಕರ ವಿಶ್ವನಾಥರಾಯರು, ಅಗಡಿಯ ಶ್ರೀವಂತರು ಇನ್ನು ಅನೇಕ ಮಹನೀಯರು ಶ್ರೀ ಸ್ವಾಮಿ ಸದ್ಗುರುಗಳ ಜಯಂತ್ಯುತ್ಸವದಲ್ಲಿ ಕೂಡಿದಾಗ "ನಾನು ಬಿಳೀ ಬಟ್ಟೆಯನ್ನು ಹೊತ್ತಂಥ ಸನ್ಯಾಸಿ; ನನಗೆ ಹೊರಗೆ ಹೋಗಲಿಕ್ಕೆ ಜೀಳದರೆ-ನಾನು ಉಟ್ಟ ವಸ್ತ್ರದಿಂದ ಈ ಸಂಸ್ಥೆಗೆ ಕೊಟ್ಟದ್ದನ್ನೆಲ್ಲ ಬಿಟ್ಟು ಅತ್ಯಂತ ಸಂತೋಷದಿಂದ ಹೊರಬೀಳುವೆನು" ಎಂಬದಾಗಿ ಪಿಪಕ್ಷ ಮಾಡಿದರು. ಈ ಕಪಥವು ನಿಷ್ಫಾಮವಾಗಲಿಲ್ಲೆಂದು ಈಗ ಅನಿವಾರ್ಯದಿಂದ ಹೇಳುವ ಹೊತ್ತು ಬಂತು. ಮಿ. ಗಳಗನಾಥರು ತಮ್ಮ ಅಳದಕ್ಕಿಯನ್ನು ಚಾರಿತ್ರಿಕೆಯಲ್ಲಿ ಹೇಳದೆ, ಶ್ರೀ ಸದ್ಗುರುವಿನ ಪ್ರಮುಖ ಶಿಷ್ಯರನ್ನೂ ಸುತ್ತಮುತ್ತಲಿನ ಪ್ರಮುಖ ಗೃಹಸ್ಥರನ್ನು ಕರಿಸಿ, ಅವರ ಮುಂದೆ ವಿಶ್ವಾಸವನ್ನು ನಿವೇದಿಸಿ ಅವರ ಮುಂದೆ ಜೇರ್ಣ ಧೋತರ ಸಹಿತ ಬಟ್ಟೆ ಹೊರಟಿದ್ದರೆ-ನಿಜವಾದ ಸ್ವಾಥ ತ್ಯಾಗವಾಗುತ್ತಿತ್ತು. ತಾವು ಬಿಟ್ಟ ನಂತರ ಸಂಸ್ಥೆಯು ಹೇಗೆ ನಡೆಯುವದೆಂದು ಅಕ್ಕರ್ತೃಕ ಮಾಡತಕ್ಕ ಕಾರಣವಿಲ್ಲ. ತಾವೇನೂ ಅನಿವರಲ್ಲ. ತಾನು ಪವಿತ್ರ ಕವಾಸಿಯಾದರೆ-ಹೊಸರು ಪಡೆದ [illegible] ಗೆ ಕಾಲಕ್ಷೇಪ ಮಾಡುವಂಥ ಜೀವನವನ್ನು ಪ್ರತ್ಯೇಕವೇ ಸೃಷ್ಟಿಸಿಕೊಳ್ಳುವ ಕಾರವೇ ಸೃಷ್ಟಿ. ತಾನು ವಾಸವಾಗಿದ್ದ ಬೆಳಗಣಿಗೆಗೆ ತಂದ ಸಂಸ್ಥೆಯಾಗಲು ಬಿಳ್ಳಿಯನ್ನು ಹೊಂದಿರುವುದು ನಿಃಸಂಶಯವಾಗಿ ಅನುಭವಿಸಿದ್ದನು. ಗುರುವಿನ ಕೃಪೆಯಿಂದ ಗಳಗನಾಥರಿಗೆ ಮಹತ್ವ ಬಂದಿರುವಿ. ಗಳಗನಾಥರಿಂದ ಆನಂದವನ ಮಹತ್ವ ಬಂದಿರುವದಿಲ್ಲ. ಗುರುಕೃಪೆಯು ತನಕ ಪಾಮರನು ಕೂಡ ಮಹತ್ಕಾರ್ಯಗಳನ್ನು ಮಾಡುವನು. ಆನಂದವನದ ಆಡಳಿತಕ್ಕೆ, ಜಂಟ್ರಿಗೆ ಮುಖ್ಯ ಕಾರಣವು ವ್ಯವಸ್ಥೆಯು ತಮ್ಮಿಂದಲೇ ಆಗಿದೆ. ತಾವಾಗೇ ಗುರು ಕೃಪೆಯು ತೆಗೆದು ಕೊಳ್ಳಬೇಕು. ಮಹಾ ಕೂಡಲೆ ಗುರು ಕೃಪೆಯು ತೆಗೆದು ಗುರು ಕೃಪೆಯು ಉಳಿದು ಗಳಿಂದಲೇ ಇಹಪರದಲ್ಲಿ ಮಾಗಬೇಕೆಂದು ನಿ[illegible] ದರೆ- ಆಪೇಕ್ಷಾ[illegible] ಕೋವಿ. ಆತ್ಮಪಾಪ ನಖಂಡನ, ಯೋಗ್ಯ ಜೊಂಡ ಸ್ವತಂತ್ರ ಡೊಕ್ಕ

ಹಾನಿಗೆ ಕಾರಣವಾದ ಸ್ವಭಾವ ಜನ್ಯ ದೋಷಗಳನ್ನು ತ್ಯಜಿಸಿಬೇಕು. ಈ ತ್ಯಾಗವು ಸ್ವಾಮಿಕಾರ್ಯಕ್ಕಾಗಿ ಅ ಪಿಸಿದ ಮನೆಮಾರು, ಧನ ಧಾನ್ಯಗಳಿಗಿಂತ ಅಸಂಖ್ಯ ಪಾಲು ಹೆಚ್ಚಾಗುವದು. ತ್ರೀ ಟೆಂಬೆ ಸ್ವಾಮಿಗಳಂತೆ ಹುಲಿಯ ಗ ವಿರುಲ್ಲಿ ಮಲಗಿದರೂ, ಹುಲಿಯು ತಿಡಿಯು ದು. ಮತ್ತು ಈಗಿನಂತೆ ಕಾಟಯನ್ನು ಆವ್ಹಳಿಸುವ ಪ್ರಸಂಗ ಬಗದು. ಗುರುವು ಇವನ ತನಕ ಪ್ರತಿಯೊಂದು ಕಾರ್ಯ ವು ನಿರ್ವಿಘ್ನ ಮತ್ತು ನಿಶ್ಚಿಂತೆಯಿಂದ ಸಾಗಿ ಕ ಗೇಪಾಕೆನುಶ್ಚಿತ್ಯರ್ಗಳಾಗುತ್ತಿರು ವಂಥ ಒಂದನ್ನು ಮಿ.ಗಳ ನಂಧರ್ದಿ ಆಶ್ಚ ಸಾಕ್ಷಿಯಾಗಿ ನೋತತಕ್ಕದ್ದು.

ಯಾವ ಪದಾರ್ಥ ತಿಂಟ್ಟಿನೊದರೂ ಯುದ್ಧದ ನವ ಹೇಳುತ್ತಾರೆ?

(ಒಬ್ಬ ಸಂಸಾಹಾರಿಯಿಂದ)

ಬಾರವ ಡು ಮುಟಿಸ ಮಾರ್ಕೆಟಿನಲ್ಲಿ ಮೊದಲು ಳಿ ಆಣೆಗೆ ಬುದು ಸೇರು ಮುಟಿನ ಸಿಗುತ್ತಿತ್ತು. ಕಟಕರು ಒಕ್ಕ ಟ್ಟು ಮಾಡಿಕೊಂ ಐದು-ಆರು ಆಣೆಗೆ ಬುದು ಸೇರಿನಂತೆ ಮಾಗಲಾರಂಭಿಸಿದರು. ಈ ಧಾರಣೆಯು ರೂಢಿಯುಲ್ಲಿ ಬಿದ್ದ ಒಳ ಳ್ಳ ಏಳು-ಎಂಟು ಆಣೆಗೆ ಸೇರಿನಂತೆ ಮಾ ಗತೊಡಗಿದರು. ಈಗ ಎರಡು ವಾರಗ ಳ ಹತ್ತು ಆಣೆಗೆ ಸೇರ ಮಾರುವುದಕ್ಕೆ ರಂಭಿಸಿದ್ದಾರೆ.

ಇಷ್ಟೇಕೆ ತುಟ್ಟಿಯೆಂದು ಕೇಳಿದರೆ ನ್ನೆಂದು ನಿನ ಕ ಳ್ತಾರೆ. ಕೆ ಯುಲ್ಲಿ ತಕ್ಕಷ್ಟು ಕಟಕರಿಗೆ ಬ ಬಿಳಿ ಲಾಭ ಬೆ ರೆ ಇರುತ್ತದೆ. ಈ ಲಕ ಮಾಂಸಾಹಾರಿಗಳಿಂದ ಒಡ ಬ ನ್ಯಪಂಜ ಮಾಡುವದು ಕಠಿಣವಾ ಿ.

ಪ್ರಾರಂಭವಾದ ಕೂಡಲೆ ಇಲ್ಲಿ ನ್ಯೋಟ ಕೂಡಿ, ಧಾರಣೆಯನ್ನು ಸುವಂತೆ ಗೊತ್ತಾಯಿತು. ಆ ನ್ನು ನಲ್ಲುಂಟು? ಅದರ ಹತ್ತರ ೋಗಬೇಕೆ? ಎಂಬದು ತಿಳಿಯು ಲಕ ಈ ವಿನ್ನಪ ಮಾಡಿಕೊಂಡಿ ಜೆಲ್ಲೆಯ ಮುಖ್ಯ ಅಧಿಕಾರಿ ಮೆ. ಕಲೆಕ್ಟರ ಸಾಹೇಬರು ಇ ಸ ಕ್ಷ ಕೊಟ್ಟು, ಕಟಕರು ಇಷ್ಟು ಇಡುವಂತೆ ಮಾಡ ಸ್ತು ಮುಳ್ಳಿನ ಕಾಟವಿಂ ಹೊ ಡು ಮಂ ತೆ ನಸ್ಥೆ ಮಾಡಿ, ಬಡವರ ಹಿತ ಮಾಡಬೇಕೆಂದು ಬೇಡಿಕೊಳ್ಳುತ್ತೇನೆ.

ದಳವಾಯಿಯ ಮೃತ್ಯು—

ಕುಟವನ್ನು ಗೆದ್ದು ಬಗಡಾದವನ್ನು ಜ ಯಿಸಿದ ಪ್ರಸಿದ್ಧ ಬ್ರಿಟಿಷ ದಳವಾಯಿಯಾ ದ ಮಾಡ ಸಾಹೇಬರು ತುಸು ಜಡ್ಡಿನಿಂದ ಮಲಗಿದವರು ಸ್ವರ್ಗವಾಸಿಗಳಾದರೆಂಬ ವರ್ತಮಾನವನ್ನು ಒರಿಯುವದಕ್ಕೆ ವಿಷಾ ದಿಸುತ್ತೇವೆ.

ಖರ್ಚಿಂ ತೋಪ್ಪುಗಳ ಹಾನಿಯು-

ಇಟಲಿಯವರು ಜರ್ಮನರ ದಾಳಿಯು ಲ್ಲಿ ಖರ್ಚಿಂ ತೋಪ್ಪುಗಳನ್ನು ಕಳಕೊಂಡ ರೆಂದು ನಾವಾದಾರ ಲಾಯಿಕ ಜಾರ್ಜ ಸಾಹೇಬರವರು ಹೇಳುತ್ತಾರೆ.

ಪಾರ್ಸಲಿನ ಹಡಗಮುಣುಗಿತು.

ಸಪ್ಟೆಂಬರ ತಿಂಗಳ ೨೩ನೇ ತಾರೀಖಿ ನ ದಿನದ ಆಕಿಯಾ ಖಂಡದ ಪಾರ್ಸಲು ಳನ್ನು ತೆಗದುಕೊಂಡು ವಿಲಂಯತಿಗ ಹೋಗುತ್ತಿದ್ದ ಹಡಗವು ಮುಗಿಸಲ್ಪ ಟ್ಟಿತು.

ನೋಟೀಸು.

ಶಿದ್ರಾಮಪ್ಪ ತಂದಿ ವೀರಭದ್ರಪ್ಪ ಅಂಗಡಿ ಸಾ. ಕಜವಿ ತಾ. ಕೋಡ ಇ ವರಿಗೆ

ಮಲ್ಲವ್ವಾ ಕೋಮ ಶಿದ್ರಾಮಪ್ಪ ಅಂ ಡಿ ಸಾ. ಕಜವಿ ತಾ. ಕೋಡ ನಾ ನು ಈ ನೋಟೀಸಿನ ದ್ವಾರಾ ತಿಳಿಸೋದೆ ನಂದರೆ

ನೀನು ನನ್ನ ಲಗ್ನೆದ ಗಂಡನಿದ್ದು ಲಗ್ನ ಆದಂದಿನ ದಾ ಒಂ ವರ್ಷ ಚಲೋರೀತಿ ಯಿಂದ ನನ್ನ ಕೂಡಾ ಬಾಳ್ವೆಮಾಡಿದಿ ಈಗ ಅಜಮಾತು ತಿಂಗಳ ವರ್ಷದಲಾಗಾ ಯಿತು ನಿಮ್ಮ ಚಿಕವ್ವಾ ವಗ್ಗೇರೆ ಜನರ ಮಾತು ಕೇಳಿ ಹೊಡೆಯ ಬಡದು ನನ್ನ ಮೇಲಿನ ಮಂಗಳಸೂತ್ರ ಮೊದಲುಮಾಡ ಕೊಂಡು ಯಾವತ್ತು ದಾಗಿನೆ ಕಸಕೊಂ ಡು ನ ನಿಬಿಟ್ಟು ಹೊರಗೆ ಹಾಕರುತ್ತೀನಿ ಈ ರೀತಿ ಆದ್ದರಿಂದ ನಾನು ಬೇರೆಕಡಿಗೆ ಯದ್ದು ವುದಜೀವನವನಾದ್ದರಿಂದಾ ಹೊ ಟ್ಟಿ ವಚ್ಚಕ್ಕಾಗಿ ಎರಡನೇದವರ ಕಡಿಗೆ ಗಂಡರು ಸಾಲಾ ಮಾಡಿದ್ದೇನೆ ಸಾಲ ಗಾರರ ವರ್ತಾತ್ಮ ಬಹಳವಾದ್ದರಿಂದಮತ್ತು ಮುಂದೆ ಸಾಲಹುಟ್ಟಿದ್ದರಿಂದಾ ಮುಂದೆ ನಾನು ಉಪಜೀವನ ಸಾಗುವಂತಿಲ್ಲಾ- ನೀ ನು ಈ ನೋಟೀಸು ಮುಟ್ಟಿದ ಒಳ ದಿವ ಸಗಳಲ್ಲಿ ಕರಕೊಂಡು ಹೋಗಿ ಚಲೋ ರೀತಿಯಿಂದಾ ಬಾಳ್ವೆ ಮಾಡತ್ತೇನೆ ಅಂ ತಾ ಪಂಚಾ ಸಮಕ್ಷದಾ ಕಬೂಲುಮಾಡಿ ನ ನ್ನನ್ನು ಕರಕೊಂಡು ಹೋಗಬೇಕಾ ಜರ ನೀವು ಕರಕೊಂಡು ಹೋಗದೆ ಯಿದ್ದರೆ ನಾನು ಪುನಃ ವ್ಯಡಕೆ ಮಾಡಿಕೊಂಡು ಹೋದೇನು ಆನಂತರಾ ನನ್ನ ಮೇಲೆ ಮ ತ್ತು ನನ್ನ ವ್ಯಡಕೆ ಗಂಡನ ಮೇಲೆ ಯಾ ವರೀತಿಯಿಂದ ಹಕ್ಕು ಬಾದ್ಯತೆ ಬರಲಿ ಕ್ಕಿಲ್ಲ. ಹಿಂದೆ ಮಾಡಿದ ಸಾಲಾ ನ ಈ ನೋಟೀಸಿನ ಖರ್ಚ ನಿನ್ನ ಮೇಲೆ ಬೋಜ್ಯಾ ಆವೆ. ತಿಳಿಯುಂದು. ತಾ. ೧೯-೧೦-೧೯೧೦ನೇ ಇಸ್ಸ.

ಈ ಬಲಗೈ ಹೆಬ್ಬಟ್ಟಿನ ಚಿತ ವಲ್ಲ ನ್ಯಾ ಕೋಮ ಶಿದ್ರಾಮಪ್ಪ ಅಂ ಡಿ ಸಂತಿನ ಕಚವಿ ತಂಲೂಕ ಕೋಡ ಇವರ ಸಮಕ್ಷ ಮಂಡಿ ಸಿದ ಅದೆ.

ಶಿವಾರಿ ಮತ್ತು ಸಂಪನ ಉತ್ಪನ್ನ

ಶರೆ ಮಂಡಿ ಪುಣೆ ಳು

೧೪ ಆಣಿ ೧೦ ಪುಡಿ ತಕ್ಕಷ್ಟಿನ ಬರಿ ಜುಂದ ಡಿಯ್ಯುವ್ಯ ಯಾರ್ಚ್ ಮಾಸೀ ಸಪೇಷಿಯಲ್ ಮಾಯೆಸ್ಲ್ ೧೦೦ ಪುಸಿ ಸಾಮಟಪಾಲ ಖರ್ಚ ಪ್ರಂಬೀಸಿವದು.

ಪತ್ತಾ— ಹನುಮಪ್ಪನ ಪುಸಾಡ ಅ ವಾರಿ ಮತ್ತು ಕಂಪನಿ ಲಿ

ಪೋಷ್ಟ-ಧಾರವಾಡ

ಎರಗುಂಟ್ಲಿ ಪಂಚಿಕಲ್ಲು ಬೇಕಾದವ ರು ನಮಗ ಭೆಟ್ಟಿ ಆಗಬೇಕು. ಪತ್ತೆ- ಗಂಗಾಧ ಪ್ಪ ಮಿಣಜಿಗಿ ಧಾರವಾಡ ವ ಸದ ಅಂ ಡಿಯಲ್ಲಿ

ಬೆಳ್ಳಿ ಬಂಗಾರದ ದಾಗಿನೆಗಳು

ಬೆಳ್ಳಿ ಒಂಗಾರ ವ ನೇಗಳು ವ ಬೆ ಳ್ಳಿ ಭಾಂಡಿಗಳು ನಾವಲಕ್ಕೆ ತು ವಾರವಿ ರುತ್ತವೆ. ಖಾತ್ರಿ ಒಗ್ಗೆ ಗ್ಯಾರಂಟಿ. ಮಾ ಲು ಕಳಸಜ್ಜೇಕಾದರೆ ರೂಪಾ ಯಿಂದ ಅಥವಾ ವ್ಹಿ ಪಿ. ಯಿಂದ ಕಳಿ ಸ್ತೇವೆ. ಟೀಕೆಗಳು, ಗುಲಾಬಿ ಹೂವುಗ ಳು, ಶೃಂಗಾರ ಸರವು, ಎಲೆಕ್ಟ್ರಿಕ ಟೀ ಕೆಗಳು, ಇಷ್ಟು ತರದ ಮಾಲುಗಳು ಸ ಪ್ಲೋತ್ಕೃಷ್ಟವಾಗಿತ್ತೆಲ್ಲಾ-ಅದರ ಸ ಲವಾಗಿ ಬಂಗಾರದ ಪದಕಗಳೂ ಲಂಡನ

ಪ್ರದಕ
ಗ ಸಿಕ್ಕಿಗುತ್ತವೆ. ಬೇಕಾದರ ಇ ಟೀ ಬೇಡಿರಿ.

ಮುಸರ್ಸ ರಾಮಚಂದ್ರ ರಘು ಜೈನಾರಾವ ಪಿರಂಳೆ ಬಳಗಾವ



ವಾದ ಪತ್ರವ

ಅಂಬತ್ತೇ ವಚ್ಚ ಸೇರಿ ವರ್ಷಕ್ಕೆ ಎ ಎಗೂಗಾಯಿ ಣಿ ಅಣೆ ವಂಡಿಯ ನೇರ್ಟಿಂದಲ್ಲಿ ಸ್ಟಾಟಿವಾಗುವ ಬಾರಿ ಕ್ಕೆ ವಿಶೇಷವಾದ ಪತ್ರಿಕ್ಕೆ ಯೆಟ್ಟಿಗಿ ಬರ ಮಾಗಂಟ ವಿಂತ್ತಿವ ಣಾದಿ ಸಂಚಿಕೆಯನ್ನು ಆಪೇಕ್ಷಿಸಿವವ ರು ಒಂದಾಣೆಯನು ಪಿಕಿ ಒಗ್ಗ ಕಳಸಿ ರಿಸಿ ಕೊಳ್ಳಿತಕ್ಕದ್ದು.

ವರ್ಗಣಿಯು ದರ್ಪ

(ದಿನದ ಪತ್ರಿಕ್ಕ)

ಪರದ್ದೇಶದವರಿಗೆ—

ವರ್ಷಕ್ಕೆ ೯ ರೂ.
ಆರು ತಿಂಗಳಿಗೆ ೪ ,,
ಮೂರು ತಿಂಗಳಿಗೆ ೨ ,,
ತಿಂಗಳಿಗೆ ೦ ,,

ಸ್ಥಳದವರಿಗೆ—

ತಿಂಗಳಿಗೆ ಮಾರದ ಪತ್ರ,
ಆರಿಸುವಂಗಿ— ಆಣೆ
ವಾರದ ಪತ್ರಿಕ್ಕ ವರ್ಷಕ್ಕೆ ಅಂಚೇವೆಚ್ಚ ಸೇರಿ ___ರೂ. ೩-೯

ಈ ಪತ್ರವನ್ನು ಮಾಜುನಂಧ ನಾರಾ ಯಣ ಟಿಂಬೆ ಇವರು ತಮ್ಮ ಬಂಗಳಿ ವಾರ ಪೇಟೆಯಲ್ಲಿರುವ ಸನಕಾದಿಶ್ವಿ ಚಾ ಪಖಾನೆಯಲ್ಲಿ ಛಾಪಿಸಿ ಪ್ರಸಿದ್ಧ ಮ ದರು.

ಕರ್ನಾಟಕ ಚಂದ್ರಿಕೆ

NEWS PAPER ENDOWMENT
Shimoga Dist. Karnataka State

ಗೃಹಿಣೀ ಧರ್ಮದೀಪಿಕೆ

Cover Printed at the W. M. Press, Mysore.

NEWS PAPER EXHIBITION
GOVT. OF KARNATAKA

Regd. No. M.—741.

ಕರ್ಣಾಟಕ ಚಂದ್ರಿಕೆ

ಪ್ರತಿಪೂರ್ಣಿಮೆಯೂ ಪ್ರಕಟವಾಗುವ ಮಾಸಪತ್ರಿಕೆ! ನವರಾತ್ರಿಯಲ್ಲಿ ವರ್ಷಾರಂಭ. ಇದುವರೆಗೆ ಒಂಭತ್ತು ಸಂಪುಟಗಳು ಪೂರ್ತಿಯಾಗಿವೆ. ಕಾವ್ಯ, ನಾಟಕ, ಪ್ರಹಸನ, ಕಾದಂಬರಿಗಳು ಪ್ರತ್ಯೇಕ ಪುಟಸಂಖ್ಯೆಯೊಡನೆ ಮುದ್ರಿತವಾಗುವವು. ಸ್ತ್ರೀಯರಿಗೆ ಅತ್ಯಾವಶ್ಯಕವಾದುದು. ವಿದ್ಯಾರ್ಥಿಗಳಿಗೆ ವಿಶೇಷವನ್ನು ಕಲಿಸುವುದಿದೊಂದೇ ಮಾಸಪತ್ರಿಕೆ. ಕರ್ಣಾಟಕ ಭಾಷಾಭಿಮಾನಿಗಳು ಪ್ರೋತ್ಸಾಹಿಸಲರ್ಹವಾಗಿದೆ. ವಾರ್ಷಿಕ ಚಂದಾ ರೂ. ೧—೪—೦

ನಿಳಾಸ :—

ಕರ್ಣಾಟಕ ಚಂದ್ರಿಕೆ,

ಕೃಷ್ಣರಾಜ ಮೊಹಲ್ಲಾ,

ಮೈಸೂರು.

N. B.—ಪ್ರಕಟಣೆಗಳು ಒಂದು ತಿಂಗಳಿಗೆ ಪುಟವೊಂದಕ್ಕೆ ಎರಡು ರೂಪಾಯಿ. ನೋಟೀಸುಗಳನ್ನು ಹಂಚಬೇಕಾದರೆ ಮೂರು ರೂಪಾಯಿ. ಹಣವನ್ನು ಮುಂಗಡವಾಗಿ ಕಳುಹಿಸಬೇಕು.

Manager.

WORLD NEWS PAPER EXIBITION
MEGARAVALLI 577524,
... Karnataka State, INDIA

SATYAVADI—A High Class National Weekly—MYSORE.

Regd. No. M-1299

ರಾಜಕೀಯ . .
ಸಾಮಾಜಿಕ . .
ಮತವಿಚಾರ
ಭಾಷಾಭಿವೃದ್ಧಿ

"ಸತ್ಯವಾದಿ"

ಸಾರ್ವಜನಿಕ ಸೇವಾಂಗಿಯೂ ಸಾಧ್ವಲಂಕೃತಳೂ
ಮಹಾತಾ ಗಾಂಧಿಯವರ
ಈ ಪತ್ರಿಕೆಯ ಅಂಶವನ್ನು ...
ಪ್ರಕಟಿಸಲ್ಪಡುತ್ತಿದೆ

ವಾರ್ಷಿಕ ಚಂದಾ 0—10—0] ಪ್ರತಿ ಮಂಗಳವಾರ ಪ್ರಕಟಿಸಲ್ಪಡುವುದು. [ಅಂಚೆಖರ್ಚು ಸೇರಿ 1—8—0

ಸಂಪುಟ I ಮಂಗಳವಾರ 13 ನೇ ಆಗಸ್ಟ್, 1918 ಸಂಚಿಕೆ 47

ಮಂತ್ರಿಣಾಂ ಬಿನ್ನಸಂಧಾನೆ ಬಿಷಜಾಂ ಸನ್ನಿಪಾತಿಕ |
ಕರ್ಮಣಿ ವೈಜ್ಯತೇ ಪ್ರಜ್ಞಾ ಸ್ವಸ್ಥೇಕೋವಾನ ಪಂಡಿತಃ ||

ಬ್ರಾಹ್ಮಣ ಮಹಾಜನಗಳ ಸನ್ನಿಧಿಯಲ್ಲಿ —

ಮಹನೀಯರೇ!—

ಲೇಶವೂ ಲೋಪವಿಲ್ಲದೆ ನಾನು ಸಂಕ್ಷೇಪವಾಗಿ ಈ ಕೆಳಗೆ ಅರಿಕೆ ವಿಷಯಕ್ಕೆ ವಿಷಯಗಳನ್ನು ಲಾಲಿಸಬೇಕು ವರ್ತಮಾನಪತ್ರಿಕೆಗಳ ವಿಚಾರವಾಗಿ ಸ್ವಲ್ಪ ಅರಿಕೆಮಾಡುತ್ತೇನೆ.

ಸಮಸ್ತ ಪ್ರಜೆಗಳೂ ಸ್ವದೇಶ ಪರದೇಶಗಳಲ್ಲಿ ದೂರೆಯಬಹುದಾದ ಅನೇಕತರಹಾ ವರ್ತಮಾನಪತ್ರಿಕೆಗಳನ್ನು ತರಿಸಿಕೊಂಡು, ಅವುಗಳಲ್ಲಿನ ವಿಷಯಗಳನ್ನು ಗ್ರಾಹ್ಯಮಾಡುತ್ತಿರೋಣಾಗಿದೆ ಪತ್ರಿಕೆಗಳನ್ನೋದೋಣದರ ಮುಖ್ಯ ಉದ್ದೇಶವೇನಂದರೆ, ಮನುಷ್ಯನು ಪ್ರಪಂಚವನ್ನೆಲ್ಲಾ ನೋಡಲಾರನ ಪ್ರಪಂಚ ನಡವಳಿಕೆಗಳನ್ನೊಳಕೆಂಡ (ರಾಜಕೀಯ, ಕೃಷಿ, ವಾಣಿಜ್ಯ, ಧಾರ್ಮಿಕ ಐತಿಹಾಸಿಕ, ಆರೋಗ್ಯ ವಗೈರೆ—ಪತ್ರಿಕೆಗಳನ್ನು ಓದಿ ಗ್ರಾಹ್ಯನುಮಾಡಿಕೊಂಡಲ್ಲಿ ಅನೇಕ ವಿಷಯಗಳನ್ನು ಗ್ರಹಿಸಲು, ಮೆದುಳಿಗೆ (ಬುದ್ಧಿಗೆ) ತಕ್ಕಮಟ್ಟಿನ ಕೆಲಸ ಕೊಡೋಣದರಿಂದ ಮೆದುಳನ್ನು ತಕ್ಕಮಟ್ಟಿಗೆ ಚನ ತ್ಕಾರವಾಗಿರುವಂತೆ ಮಾಡಿಕ್ಕೊಂಡು, ಸ್ವ ಅನೇಕ ಸೌಕರ್ಯಗಳನ್ನು ವಿವೇಕವಾದ ದಾರಿಯಲ್ಲಿ ಕೆಲ್ಪಿಸಿಕೊಳ್ಳಲು, ಯತ್ನಿಸಬಹುದು ಆದರೆ ಈಗ್ಗೆ 10—15 ವರುಷಗಳ ಹಿಂದಿನ ಪತ್ರಿಕಾ ಕ್ರಮಕ್ಕೂ ಈಗಿನ ಪತ್ರಿಕಾ ಕ್ರಮಕ್ಕೂ ಕೆಲವು ವ್ಯತ್ಯಾಸವಿರಬಹುದು.

ಪತ್ರಿಕೆಗಸನ್ನೋದೋಣದರಿಂದ ಕೆಲವು ಸಂದರ್ಭಗಳಲ್ಲಿ ದುರಾಲೋಚನೆಗಳು ಹುಟ್ಟಲು ಅವಕಾಶವಾಗಬಹುದು ಇದರಿಂದ ಜನಗಳಲ್ಲಿ ಪರಸ್ಪರ ದ್ವೇಷ ಹುಟ್ಟಬಹುದ . ಇತ್ಯಾದಿ.

ಇವಕ್ಕೆ ಕಾರಣಗಳು ಯಾವುವು? ಪತ್ರಿಕೆಗಳಲ್ಲಿ ಪ್ರಚುರಪಡಿಸಲ್ಪಡುವ ವಿಷಯಗಳೂ ಅಥವಾ ಇವುಗಳನ್ನು ಗ್ರಾಹ್ಯ ಮಾಡಿಕೊಳ್ಳುವರೋ? ವಾಚಕರುಗಳಿಂದಲೇ ವಿಷಯಗಳ ಅಭಿಪ್ರಾಯಗಳು ಭಿನ್ನಿಸಿ ಈರೀತಿ ಸಂಭವಿಸಬಹುದೇ? ಅಥವ ಜನಗಳ ಬುದ್ಧಿ ಸ್ವಭಾವೆ? ಅಥವಾ ಲೋಕಾನುಭವದಲ್ಲಿ ತೋರುವ ಅಸಮಾಧಾನಗಳೇ? ಇದು ಹಾಗಿರಲಿ,

ಈ ನವನಾಗರೀಕ ಕಾಲದಲ್ಲಿ, ಪ್ರಜೆಗಳಿಗೋಸ್ಕರ ಸರ್ಕಾರದವರಿಂದ ನಿರ್ಮಿತವಾಗಿರುವ ಅನೇಕ ಸೌಕರ್ಯಗಳನ್ನು, ಅನುಭವಿಸುತ್ತಿರುವಾಗ್ಗೆ ಚಾಡಿ ಮಾತ್ಸರ್ಯಗಳು ಉಂಟಾಗಿ ಬ್ರಾಹ್ಮಣ, ಬ್ರಾಹ್ಮಣೇತರರ ದ್ವೇಷಕ್ಕೆ ಅವಕಾಶವಾಗಿ, ಸದರಿ ವಿಷಯಗಳು, ವರ್ತಮಾನ ಪತ್ರಿಕೆಗಳಲ್ಲಿ ಪ್ರಚುರಪಡಿಸಲ್ಪಟ್ಟು ಇವುಗಳಿಂದ ಅನೇಕ ಜವಾಬು ಪರಂಪರೆಗಳು ಹುಟ್ಟಿ, ಪರಸ್ಪರ ಅಸಮಾಧಾನಕ್ಕೆ ಆಕರವಾದ ವಿಷಯಗಳನ್ನು, ಪತ್ರಿಕೆಗಳ ಮೂಲಕ, ನಾನು ತಿಳಿದುಕೊಂಡು ಈ ಬಗ್ಗೆ ಖಾತರಿಯನ್ನು ಯೋಚಿಸುತ್ತಿರುವಲ್ಲಿ—("Do not seek for praise at the expense of others — "ಬೇರೊಬ್ಬರನ್ನು ಹಿಂಸಿಸಿ ಸ್ತುತಿಯನ್ನು ಹುಡುಕಬಾರದು" ಎಂಬ ನ್ಯಾಯವು ಜ್ಞಾಪಕಕ್ಕೆ ಬಂತು) ನಮ್ಮಲ್ಲಿ ಹೀಲಿ ಇರುವ ಆಚಾರ ಅನಾಗರೀಕತೆಯೇ ಇದಕ್ಕೆ ಕಾರಣವೆಂದೂ, ಇದರಿಂದಲೇ ನಾವು (ಬ್ರಾಹ್ಮಣರು) ಇತರ ಸಹವಾಸಕ್ಕೆ ಅತಿಯಾಗಿ ಒಳಗಾಗಿ, ಸ್ವಾರ್ಥತೆಗೋಸ್ಕರ ಪರಸ್ಪರ ಅಸೂಯೆಯನ್ನು ಉಂಟುಮಾಡಿಕ್ಕೊಂಡು ನಮ್ಮ ನಮ್ಮಲ್ಲಿನ ಐಕಮತ್ಯವನ್ನು ಹಾಳುಮಾಡಿಕೊಂಡು ಬಂದೆವೆಂಬ ವರ್ತಮಾನಪತ್ರಿಕೆಗಳಲ್ಲಿ ಪ್ರಕಟವಾಗಲ್ಪಡುವು, ಅಂಥಾದ್ದು ಮಾಡಿಕೊಂಡಿರುವುದಾಗಿ ಬಹುತೆಂದು ನನ್ನ ಮನಸ್ಸಿಗೆ ತೋರಿದ್ದರಮೇಲೆ, ನಾನೂ ಕೆಲವು ಇಂಗ್ಲೀಷ್ ವರ್ತಮಾನಪತ್ರಿಕೆಗಳಲ್ಲಿ ಪ್ರಕಟಿಸಿ ವಿವರಿಸಿ ಕರುನಾಡಿನವರಿಗೆ ತಿಳಿಸಿಕೆಂದು ಇರುತ್ತೇನೆ.

(ನಾನು ಸ್ವಾರ್ಥ ಬ್ರಾಹ್ಮಣನಾಗುವುದಿಲ್ಲ, "ಆಚಾರ ಪ್ರಥಮೋ ಧರ್ಮಃ" ಎಂಬಂತೆ ಸ್ವಾನುಭವದ ಒಕ್ಷಣಾ ಯಂಗಿಸಿದ ಧರ್ಮಾನುಸರ ಕೆಲವು ವಿಷಯಗಳನ್ನು ಒತ್ತಿ ಅರಿಕೆ ಮಾಡಿರುವುದು ಅಂಥ ಶಂದರ್ಭಗಳಲ್ಲಿ ಸ್ವಾಕಾರಾಂತರ ಭಾವವಿಬರದು ಬ್ರಾಹ್ಮಣ ಪ್ರಜೆಗಳಲ್ಲಿರುವ ತ್ರಿಪುರ್ಷರ್ಷರೂ, ನಿಜಗುರುಬ್ರಹ್ಮಯನ್ನು ವೃದ್ಧಿಪಡಿಸಿಕೊಂಡು, ಅನಂತರ ಪೂರ್ವಾಚಾರವನ್ನನುಸರಿಸಿ, ಬ್ರಾಹ್ಮಣ ಮರ್ಯಾದೆಯನ್ನು ಉಳಿಸಿಕೊಳ್ಳಬೇಕಾದ ಭಾಗವೇ ಪರಂತು ಅನ್ಯಥಾ ಇಲ್ಲ ಈ ಭಾಗ್ಯ ಮುಂದೆ ತಪಶ್ಶಿಲ್ ಪಡಿಸಿ ಇರುತ್ತೆ.)

ಪೂರ್ವದಲ್ಲಿ ವ ಹರ್ಷಿಗಳು, ವರ್ಣಾಶ್ರಮಧರ್ಮಗಳ ವಿಚಾರವಾಗಿ ಅನೇಕಋಷಿ ಆಧಾರಗಳನ್ನು ಕೆಲ್ಪಿಸಿ, ಈ ಕಾಲದಲ್ಲಿ ನಮ್ಮಗಳ ಶ್ರೇಯೋಭಿವೃದ್ಧಿಗಾಗಿ ದಯಪಾಲಿಸಿರುವ ವಿಷಯಗಳು ಸಮಸ್ತರಿಗೂ ತಿಳಿದ ಬಾಗವೇ ಆಗಿವೆ ಅವನ್ನು ಪುನಃ ವಿವರಿಸುವುದು ಅವಶ್ಯಕವಿಲ್ಲ ಯುಗ ಮಹಿಮೆಯಿಂದ ಅದೆಲ್ಲಾ ಶಿಥಿಲವಾಗುತ್ತಿ ಇವಕ್ಕೆ ಯಾರ ಯತ್ನವೂ ಇಲ್ಲ ಇವಲ್ಲಾ ದೈವಕಟ್ಟಳೆ ಎಂದು ಅನೇಕರು ಹೇಳುತ್ತಾರೆ ಆದರೆ ಋತು ಮಹಿಮೆಯಿಂದ ಆಗುವ ಭಿಳಿವನ್ನು (ಸ್ವಲ್ಪ ಅನುಭವಿಸಿದ ನಂತರ ಅವನ್ನು) ನಿವಾರಣೆ ಮಾಡಿಕೊಳ್ಳಲು ಯತ್ನಿಸಿ, ಕೊನೆಗೆ ನಿವಾರಣೆ ಮಾಡಿಕೊಳ್ಳುವುದಿಲ್ಲವೆ? ಅದರಂತೆಯೇ ಯುಗ ಮಹಿಮೆಯಿಂದ ಏಳಿಲಾಗುತ್ತಾ ಇರುವ ನ್ಯೂನ್ಯತೆಗಳನ್ನು ಜೀರ್ಣೋದ್ಧಾರ ಮಾಡಲುಯತ್ನಿಸದಲ್ಲಿ ಬ್ರಾಹ್ಮಣ ಗಂಭೀರವು ಉಳಿಯುವುದಿಲ್ಲವ? (ಆರೋಗ್ಯವಾಗಿದ್ದ ಒಂದು ದೇಹಕ್ಕೆ ಕಾಲಾನುಸಾರವಾದ ನಡವಳಿಕೆಗಳಿಂದ ಅನಾರೋಗ್ಯವು ಸಂಭವಿಸಿದು, ಅದನ್ನು ನಿವಾರಣೆ ಮಾಡಿಕೊಂಡು, ಮೊದಲಿನ ಆರೋಗ್ಯವನ್ನು ಹೊಂದಲು ಯತ್ನಿಸಿದಲ್ಲಿ ಪ್ರಯತ್ನಿಸಿದ ರೀತಿಯನ್ನು ಅನುಸರಿಸಿ ಕಾರ್ಯಸಿದ್ಧಿಯನ್ನು ಪಡೆಯಬಹುದು, ಅರೀತಿ ಮಾಡದೇ ಇದ್ದಲ್ಲಿ, ಅನಾರೋಗ್ಯವು ಕ್ರಮೇಣ ಕ್ರಮಣ ಪ್ರಬಲವಾಗತ್ತಾ ಪರಿಣಾಮವು ಯಾವರೀತಿ ಸಂಭವಿಸಬಹುದು? ಒಂದುವೇಳೆ ಅನಾರೋಗ್ಯಸ್ಥಿತಿಯು ಆ ದೇಹಕ್ಕೆ ಎಲ್ಲಿಯವರೆಗೆ ಭೂಷಣವಾಗಿದ್ದೀತು? ಋತುಧರ್ಮವನ್ನು ಅನುಸರಿಸಿ ಭಿಳಿಯು ಪ್ರಪಂಚಕ್ಕೆಲ್ಲಾ ಉಂಟಾಗಿದೆ ಅನುಕೂಲತೆವುಳ್ಳ ಒಬ್ಬಿಬ್ಬರು ಅದರ ನಿವಾರಣೆ ಮಾಡಿಕೊಂಡಲ್ಲಿ ಪ್ರಪಂಚದಲ್ಲಿ ಭಿಳಿ ಎನ್ನುವುದೇ ನಾಶವಾಯಿತೆ? ವಗೈರೆ ಈ ತರಹಾ ಯೋಚಿಸಬಾರದು,

ಸಮಸ್ತರೂ ನಾನು ಈ ಕೆಳಗೆ ಅರಿಕೆ ಮಾಡಿರುವಂತೆ ಲಾಲಿಸಿ, ಪ್ರಯತ್ನಿಸಿದಲ್ಲಿ ಪರಿಣಾಮದಲ್ಲಿ ಅನುಕೂಲ ತೋರಬಹುದು.

ಪೂಜನೀಯರೇ, ಯಾವ ಪ್ರತಿಸ್ಪೈರಿಗೂ ಸ್ವರಲೂ ನಾನು ಈ ರೀತಿ ಅರಿಕೆ ಮಾಡುತ್ತಾ ಇಲ್ಲ ಯಾರಿಗೂ ಇಲ್ಲದ ಈ ಪ್ರಸಕ್ತಿ ನನಗೇಕೆ ಎಂದು ನಾನೇ ಪ್ರಶ್ನೆ ಮಾಡಿಕೊಂಡಲ್ಲಿ ಪ್ರಪಂಚದಲ್ಲಿ ಆನೆ ಕಲು ತನುಗೆ ತೋರಿದ ಕಾರ್ಯಾಲೋಚನೆಗಳನ್ನು ಅರಮನೆ (ಸರ್ಕಾರ) ಗುರುಮನೆ, ಮಹಾಜನ ಇವರುಗಳ ಪರಾಮರಿಕೆಗೆ ತಂದು, ಒಂದುವೇಳೆ ಆಂಥಾ ಆಲೋಚನೆಗಳು ಅಂಗೀಕಾರವಾಗಲ್ಪಟ್ಟು ತತ್ಸಂಬಂಧವಾದ ಕಾರ್ಯಾಚರಣೆಗಳು ಅನೇಕವಾಗಿ ನಡೆಯುತ್ತಿದೆಯೆಲ್ಲಾ, ಅದರಂತೆಯೇ ನಾನು ಈ ಕೆಳಗೆ ಅರಿಕೆ ಮಾಡುವ ವಿಷಯಗಳು

ಶ್ರೀ ಬಸವನಗಡ ಶ್ರೀ ಬಾಳಗಿ ಚರ್ಕಾಸ್ಥ
WORLD NEWS PAPER ASSOCIATION
MEGARAVALLI
Shimoga Dist. Kyan
1911

॥ ಶ್ರೀ ಶಿವಯೋಗಿವ್ಯಂದುವಂದೆ ॥

ಧರ್ಮೋತ್ತೇಜಕ ಸಭೆಯವತಿಯ ವೀರಶೈವ

ಧರ್ಮತರಂಗಿಣಿ

ಮಾಸಪತ್ರಿಕೆ

ವರ್ಷ ೮.] ಜೇಷ್ಠ—ಜೂವ ೧೯೧೯. [ಸಂಚಿಕೆ ೭.

ವಿಷಯಾನುಕ್ರಮಣಿಕೆಯು.

ವಿಷಯ.	ಲೇಖಕರು.	ಪುಟ.
೧ ಈಶ್ವರಸ್ತವನ	ಮೆ. ರಾ. ದೆ. ಚ. ಸಾಂವಶಿ	೧
೨ ಕೊರಗದ ಸೌಂದರ್ಯವು	ಮ. ರಾ ಎಮ್. ಎಸ್. ಅಂಕಲಕೋಟಿ	೧
೩ ಬ್ರಹ್ಮಚರ್ಯವು	ವೇ. ರಾ. ಚಂದ್ರಶೇಖರಶಾಸ್ತ್ರಿ ಹೊಳಲ ಹಿರೇಮಠ	೨–೭
೪ ದೇವರ ದಯೆಯು	ಶ್ರೀ ಗುತ್ತಲ ಪ್ರಸಾದಿ ಮಠದ ಪಟ್ಟಾಧ್ಯಕ್ಷರು	೮–೧೦
೫ ಹಣವೂ ಅದರ ವಿನಿಯೋಗವೂ	ಮ. ರಾ. ರುದ್ರಪ್ಪ ಬಶೆಟ್ಟಿಪ್ಪ ಕಾಡಪ್ಪನವರ	೧೧–೧೩
೬ ವೇಳೆಯ ಉಪಯೋಗವು	ಮ. ರಾ. ಎಮ್. ಎಸ್. ಅಂಕಲಕೋಟಿ	೧೪
೭ ಪಾತಿವ್ರತ್ಯಪ್ರಕಾಶಿಕೆ	ಮ. ರಾ. ರುದ್ರಪ್ಪ ಸಿ. ಕೊಟಗಿ ಶಾಲಾ ಮಾಸ್ತರ ಗಜೇಂದ್ರಗಡ	೧೫–೧೯
೮ ಶುಭೋದಯ ಸಮಾಚಾರ	ಸಂಪಾದಕ	ಕವ್ವಲಪುಟ.

ವಿಜ್ಞಾಪ್ತಿ :— ಈ ಮೊದಲು ಪ್ರೆಸ್ಸಿನಲ್ಲಿ ತೊಂದರೆಯಾದ ಮೂಲಕ ತರಂಗಿಣಿಯು ಹಿಂದಾಗಿರುವದು ನಮ್ಮ ಪೋಷಕರಿಗೆ ವಿದಿತವಾಗಿರುವದಷ್ಟೆ! ಈಗ ೭ ನೇ ಸಂಚಿಕೆಯು ಪ್ರಕಟವಾದಂತಾಯಿತು. ಇನ್ನು ೧೫ ದಿನಗಳೊಳಗಾಗಿ ಅಂದರೆ ಸಪ್ಟೆಂಬರ ಕೊನೆಯ ಒಳಗಾಗಿ ೮ ನೇ ಸಂಚಿಕೆಯು ಪ್ರಕಟವಾಗುವದು. ಇದರಂತೆ ೧೫ ದಿನಗಳಂತೆ ಪತ್ರಿಕೆಗಳನ್ನು ಹೊರಡಿಸಿ ಕಾಲವನ್ನು ಸರಿಪಡಿಸಿಕೊಳ್ಳುವೆವೆ.

ಸಂಪಾದಕ:—ಎಚ್. ಎಸ್. ಶಿವಲಿಂಗಶಾಸ್ತ್ರಿ ಇವರು ತಮ್ಮ ಧಾರವಾಡ ಧರ್ಮತರಂಗಿಣಿ ಮುದ್ರಾಲಯದಲ್ಲಿ ಮುದ್ರಿಸಿ, ಪ್ರಸಿದ್ಧ ಮಾಡಿದರು.

ವಾರ್ಷಿಕ ಚಂದಾ ಅಂಚೆಯೊಡನೆ ಸಹಿತ ರೂ. ೧-೮-೦. ೧ ಕ್ಕೆ ೨॥ ಆಣೆ.

ತಾರೀಕು ೧೯
Registered No. M. 19[illegible]



ಕಂಠೀ

ಪ್ರತಿ ಮಂಗಳವಾರ ಪ್ರಕಟೀಕ್ರ
ಶ್ರೇಷ್ಠವರ್ಗದ ಕನ್ನಡನಿ
ವಾರ್ತಾಪತ್ರಿಕೆ

ಸಂಪುಟ ೧] ಮಂಗಳೂರು ಸನ್ ೧೯೧೯ನೇ ಇಸವಿ ಸಪ್ತಂಬ್ರ

ಅಮೃತಾಂಜನ— ಇದರ ಉಪಯೋಗದಿಂದ ಮಾತ, ಸಂಧಿವಾತ, ತಲೆನೋವು, ಶಿರೋಭಾ, ಅರ್ಧಾಂಗ ವಾಯು, ಉಳುಕು, ಎದೆನೋವು, ಶೀತ, ಕೆಮ್ಮು, ಗಾಯ, ತುರಿಕಜ್ಜಿ, ದಂತವ್ಯಾಧಿ ಮುಂತಾದ ಅನೇಕ ತರದ ಬೇನೆ ವೇದನೆಗಳು ಚಮತ್ಕಾರವಾಗಿ ಗುಣಹೊಂದುವವು.

ಬಾಟ್ಲಿ 1ಕ 0—8—0. ವಿ. ಪಿ. ಖರ್ಚು ಪ್ರತ್ಯೇಕ.

ಎಲ್ಲಾ ಔಷಧಾಲಯಗಳಲ್ಲಿ ಮಾರಾಟಕ್ಕೆ ದೊರಕು

ಅಮೃತ

ಸಂಜೀವಿನಿ



ಸನಾತನ ಸಾಮಾನ್ಯ ಕ
ಯಾಸ್ಥವಾದ ಸಾಲಂಮಿ,
ಸಹಕರ್ತನ್ನು ನೋಡಿ ಈ. ಔ
ನು
ವಸಯಿ ದ ವಿರ್ಯವು ಸೀರಿಸಂತೆ
ಗೆ ಹೋಗುತ್ತಿದ್ದರೂ, ದೋಷರಹಿತ
ಲಬದ್ಧತೆ, ಮೆದುಳಿನ ಬಲಹೀನತೆ,
ಬೂಲ್ ಕಂದಾಹಾರ ಪ್ರಾಂತ್ಯಗಳಲ್ಲಿ
ಧದಿಂದ ಗುಣಹೊಂದಿರುವ ಅನೇಕ
ರುವರು. ಇವುಗಳ ನಕಲನ್ನು ಯ
ಒಪ್ಪುಮಾನವು ಕೊಡಲ್ಪಡು

ನರರ ಕುಲಗಳೊಳಾರ್ಯವಂಶವು, ಧ
ಆರಸುತ್ತನಗಲ್ಲೊಳ್ಳಾಂಗ್ಲರೊಡೆತ

ಯದೇಶಗಳೊಳಗೆ ಭಾರತ
ನುಡಿಗಳೊಳುಮೇ

ತ್ರ ಇರುವ ಶೀಶೆ ೧ಕ್ಕೆ ಆಣೆ ೪,
ತ್ರೆಗಳುಳ್ಳ ಡಬ್ಬಿಗೆ 1-0-0. ವಿ. ಪಿ.
ಟಿಗೆ ವಿ. ಪಿ. ಮಾಡುವುದಿಲ್ಲ.

epot. ಕನ್ನಡ ನಾಡುಗಳ ಏಜಂಟರು:— ದಿ ಊಲನ್ ಮಾರ್ಟ್,
lbadevi Road, Bombay. ಮಂಗಳೂರು.

ಸ್ತ್ರೀಯರಿಗೆ ಕೇಶ ಭೂಷಣವೇ ಭೂಷಣ.

ಕಾಮಿನಿಯಾ ತೈಲ. (ರಿಜಿಸ್ಟರ್ಡ್.)

ಮೃದುವಾದ, ಗುಂಗುರು ಗುಂಗುರಾಗಿರುವ, ನೀಲಿಮೆಯಿಂದ ನಿಬಿಡವಾದ ಕೇಶದಾಮವನ್ನು ಯಾವ ನಾರಿಯು ತಾನೇ ಪಾಂಛಿಸಲೊಲ್ಲಳು? ಇಂತಹಕ್ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡಲಾಪ ಉಪಕರಣವಾದರೋ

ಕಾಮಿನಿಯಾ ಆಯಿಲ್. (ರಿಜಿಸ್ಟರ್ಡ್.)

ಅವರ ಸಾಹಿತ್ಯಾಲಂಕಾರವನ್ನು ಹೇಗೆ ಕೊಡುತ್ತಿರುವೆಯೋ, ಹಾಗೆಯೇ ಮಾನಸಿಕ ಪ
ಗಳಿಗೂ ಆಪ್ತೇ ಅಗತ್ಯ ಸಹಕಾರ

Regd.No. .M 1331.

Dist., Public Library State, Mysore

THE CIVIC AND SOCIAL REVIEW MYSORE

ಪೌರಸಾಮಾಜಿಕ ಪತ್ರಿಕೆ

(A Kannada Monthly Journal)

ಸಂಪುಟ 2. | 31ನೇ ಆಗಸ್ಟ್, 1919. | ಸಂಚಿಕೆ

ಇದರಲ್ಲಿ ರಾಜಧಾನಿಗಳಲ್ಲಿಯೂ, ಪಟ್ಟಣಗಳಲ್ಲಿಯೂ, ಗ್ರಾಮಗಳಲ್ಲಿಯೂ ಮಮಾ ಜನಗಳ ಆಯುರಾರೋಗ್ಯೈಶ್ವರ್ಯಾದಿಗಳಿಗೆ ಸಾಧಕವಾದ ವಿಷಯಗಳು ಬರೆಯಲ್ಪಡುವವು. ಇದಲ್ಲದೆ ಸಾಮಾಜಿಕ ವಿಷಯಗಳಲ್ಲಿ ಸಮ್ಮತವಾದ ತಿದ್ದುಪಾಟುಗಳು ಚರ್ಚೆಗೆ ತರಲ್ಪಡುವವು.

MYSORE.

PRINTED AT THE KRISHNARAJ VILAS PRESS.

ಪೌರಸಾಮಾಜಿಕ ಪತ್ರಿಕೆ

—0—

ಚಂದಾ ವಿವರ:—

ವಾರ್ಷಿಕ ಚಂದಾ ೭–೦–೦ ರೂ. ಟಪಾಲು ಹಾಸಲು ೦–೪–೦

ಬಿಡಿ ಪತ್ರಿಕೆ ಒಂದಕ್ಕೆ ೦–೪–೦

ಸಂಪದಭ್ಯುದಯ.

ದಿನಪತ್ರಿಕೆ ! ದಿನಪತ್ರಿಕೆ

ಚಂದಾ ವಿವರ :—

	ಸ್ಥಳದವರಿಗೆ.	ಪರಸ್ಥಳದವರಿಗೆ. (ಟಪ್ಪಾಲ್ ಹಾಸಲು ಸೇರಿ)
ವರ್ಷಕ್ಕೆ	7—8—0	12—8—0
೬ ತಿಂಗಳಿಗೆ	4—2—0	6—12—0
೩ ತಿಂಗಳಿಗೆ	2—2—0	3—6—0
೧ ತಿಂಗಳಿಗೆ	0—12—0	1—2—0
ಬಿಡಿಪತ್ರಿಕೆ ೧ ಕ್ಕೆ	0—0—6	0—0—9

ಮ್ಯಾನೇಜರ್, ಸಂಪದಭ್ಯುದಯ, ಮೈಸೂರು.

ಮಹಾಶಯರುಗಳು ಸಂಗ್ರಹದಲ್ಲಿಡುವುದಕ್ಕೆ ಯೋಗ್ಯವಾದ

ಮಹಾಸಂಜೀವಿನೀ ಮಾತ್ರೆ.

ಜ್ವರ, ಅಜೀರ್ಣ, ಅಶಕ್ತಿ, ಪ್ಲೇಗ್, ಶ್ವಾಸ, ಖಾಸಕ್ಷಯ ಮತ್ತು ಹೊಟ್ಟೆಶೂಲೆ, ಹೃದಯದ ರೋಗ (ಪಾರ್ಪಿಡಿಸೀಜ್) ಅಪಸ್ಮಾರ, ಮೂಲವ್ಯಾಧಿ, ಯಕೃತ್, (ಲೀವರ್) ಪ್ರಮೇಹ, ಸಂಧಿವಾಯು ಇತ್ಯಾದಿ ಅಸಾಧ್ಯವೆಂದು ಕೈ ಬಿಟ್ಟ ತ್ರಿದೋಷಜನ್ಯನಾದ ರೋಗಂಗಳ ಮೇಲೆ ಮತ್ತು ಧಾತುಪುಷ್ಟಿ ಮೇಲೆ ಜಟಿಲ ಶ್ವೇತ ತಾಮ್ರಭಸ್ಮ, ಸುವರ್ಣಭಸ್ಮ, ಮುತ್ತಿನಭಸ್ಮ, ಅಭ್ರಕಭಸ್ಮ ಮತ್ತು ಕಸ್ತೂರಿ, ಅಂಬರ್, ಕೇಸರಿ ಮುಂತಾದ ಪದಾರ್ಥಗಳಿಂದ ತಯಾರ್ಮಾಡಿದ್ದು. ಕ್ರಯ ತೊಲ ೧ ಕ್ಕೆ ೪೭ ರೂಪಾಯಿ. ೫ ದಿವಸದ ಹತ್ತು ಮಾತ್ರೆಯ ಕ್ರಯ ೭ ರೂಪಾಯಿ. ಟಪಾಲ್ ಖರ್ಚು ಜ್ಞೇಕೆ.

B. S. POWAR,

RAJVAIDYA,

Gopipura Singadiawad, *SURAT.*

WORLD NEWS PAPER EXHIBITION
MEHRAVALLI - 5[illegible]
Dist. Karnataka State [illegible]

ವಿದ್ಯಾರ್ಥಿ

ಎಂಬ

(ಮಾಸಪತ್ರಿಕೆ.)

ಸಂಪುಟ ೧. } ಫೇಬ್ರುವರಿ ೧೯೧೯ { ಸಂಚಿಕೆ ೭

ವಿಷಯಾನುಕ್ರಮಣಿಕೆ.

೧.	ಅಂಬೇಡವೆಂದರೆ ಆನೆಯಷ್ಟು ಕಸುವು.	೧– ೩
೨.	ಬ್ರಿಟಿಶ್ ನಿಶಾನೆಯ ಮಹಿಮೆ.	೩– ೪
೩.	ಈಶ ಸಂಕಲ್ಪ!	೪–೩೬
೪.	ಸದ್ಬೋಧಾಮೃತ.	೪೧–೪೪
೫.	ಆತ್ಮೋದ್ಧಾರ.	೪೩–೪೬
೬.	ಬಂಧು ಪ್ರೇಮ.	೪೫– ೨
೭.	ನಾವು ಮರೆತೇ ಬಿಟ್ಟಿರುವೆವು.	೨– ೯
೮.	ಝಾರನ ಭಾವಚಿತ್ರವನ್ನುದ್ದೇಶಿಸಿ.	೧೦–೧೨
೯.	ಕಾರ್ಯಮಾಡುವ ಬಗೆ.	೧೨–೧೪
೧೦.	ನಮಗೆ ತೊಂದರೆಕೊಡುವ ಪ್ರಾಣಿಗಳಿಂದಾಗುವ ಸಹಾಯ	೧೪–೧೬
೧೧.	ಕೂಟ ಪ್ರಶ್ನೆ.	೧೬

ಸಂಪಾದಕರು.

ಶ್ರೀಯುತ ನಾರಾಯಣ ಸದಾಶಿವ ದೇಶಪಾ

ತ್ವರೆಮಾಡಿರಿ! ಉಪಯೋಗಿಸಿರಿ.!! ಸುಖಪಡಿರಿ.!!

ತ್ವಚರೋಗಗಳಿಗೆ ಒಂದೇ-ಉಪಾಯ.

——:[೦]:——

ಎಲ್ಲ ತರದ ತ್ವಚರೊಗಗಳಿಗೆ ನಮ್ಮ ಗುಣಕಾರಕ (ರಾಜಾ ಆಯಿಂಟ ಮೆಂಟ) ಮಲಮನ್ನು ಹಚ್ಚುವದರಿಂದ ಹುರುಕು ಖಜ್ಜಿ, ಗಜಕರ್ಣ, ಇಸಬು, ಊಸ್ಣಹುಣ್ಣು, ಶಸ್ತ್ರಗಾಯ ಮುಂತಾದವುಗಳುತೀವ್ರವಾಗಿ ಕಲೆ ಬೀಳದೆ ನೆಟ್ಟಗಾಗುವವು. ಒಂದುಸಾರೆ ಪರೀಕ್ಷಿಸಿ ನೋಡಿರಿ. ದರಬಂದು ಡಬ್ಬಿಗೆ ೦-೪ ೦ ವಾಪಾರಸ್ಥರಿಗೆ ಶೇ ಕಡಾ ೧೨॥ ಕಮಿಶನ್ ದೊರೆಯುವದು. ಕೆಳಗಿನ ವಿಳಾಸಕ್ಕೆ ಬರೆದಲ್ಲಿ ವ್ಹಿ. ಪಿ. ಯಿಂದ ಕಳಿಸುವೆವು. ಅಂಚೆ ವೆಚ್ಚ ಬೇರೆ.



ಅನುಪಾನ ಪತ್ರಿಕೆ ಸಂಗಡ ಇರುವದು. ೧೦ರುಪ್ಪಿನ ಕೆಳಗ್ಟೆ ಆರ್ಡರ ಕೊಟ್ಟವರಿಗೆ ಕಮಿಶನ್ ಸಿಗಲಾರದು,

ವಿಳಾಸ— ಎಸ್. ಕೇ. ಸಕ್ರಿ

ಸ್ಟೇಶನರಿ ಮರ್ಚಂಟ್ಸ, ಧಾರವಾಡ.

ಜಾಹೀರಾತಿಗೆ ಮರುಳಾಗಬೇಡಿರಿ!

ನಿಮ್ಮ ಚಿಕ್ಕ ಮಕ್ಕಳು ಸದೃಢವಾಗಿರಬೇಕೆಂದು ನೀವು ಇಚ್ಛಿಸುತ್ತಿದ್ದರೆ ಈ ಕ್ಷಣಕ್ಕೆ ನಮಗೆ ಪತ್ರವನ್ನು ಬರೆದು **ಶಾಮರಾವ, ಕೇಶವರಾವ ಕೊಟಬಾಗಿ.** ಇವರು ಬಾಲಾಮೃತವನ್ನು ತರಿಸಿ ಕೊಳ್ಳಿರಿ. ಜಾಹೀರಾತಿನಿಂದ ಗುಣವನ್ನು ತಿಳಿದುಕೊಳ್ಳುವದಕ್ಕಿಂತ ಅನುಭವದಿಂದ ತಿಳಿದುಕೊಂಡರೆ ಒಳಿತಲ್ಲವೆ?

ಡಿ ಕೊಟಬಾಗಿ ಜನರಲ್ ಮರ್ಚಂಟ

ವಿಜಾಪೂರ

ವಿದ್ಯಾರ್ಥಿ.

ಸಂಪುಟ ೧ | ಫೆಬ್ರುವರಿ ೧೯೧೯. | ಸಂಚಿಕೆ ೭.

'ಅಂಜಬೇಡವೆಂದರೆ ಆನೆಯುಪ್ಪು ಕಸುವು.'

ಸುಹೃದಯರೇ,

'ವಿದ್ಯಾರ್ಥಿ' ಮಾಸಪತ್ರಿಕೆಯು ಹೊರಡಹತ್ತಿ ಈಗ ಏಳು ತಿಂಗಳುಗಳಾ ವಸ್ತು. ದಿನೇ ದಿನೇ ಚಂದಾದಾರರ ಸಂಖ್ಯೆಯು ಅಭಿವೃದ್ಧಿಯಾಗುತ್ತ ನಡೆದಿರು ವದು. ಕೈಲಾದ ಮಟ್ಟಿಗೆ ಬಡ ವಿದ್ಯಾರ್ಥಿಗಳ ಪೋಷಣೆಯಾದರೂ ಸಾಗಿರುವದು. ಆದರೆ ಇಂಥ ಕ್ಷಾಮ ಕಾಲದಲ್ಲಿ ಕಾಗದ, ಹಾಗೂ ಅಚ್ಚಿನ ದರವು ಮಿತಿಮೀರಿ ಏರಿ ಹೋಗಿರುವದರಿಂದ ಎಲ್ಲರಿಗೂ ನಮ್ಮ ಕಾರ್ಯವು ಅಸಾಧ್ಯವಾದದ್ದೆಂದೂ, ಕೈಗೂಡುವದು ದುಸ್ತರವೆಂದೂ ತೋರುವದು ಏನಾಶ್ಚರ್ಯ? ನಾವು ಇಂಥ ಕಠಿ ಣಕಾಲವಲ್ಲಿ ಎದೆಗುಂದದೆ, ಮುಂದೆ ಮುಂದೆ ವಿದ್ಯಾರ್ಥಿಯು ಅಭಿವೃದ್ಧಿಯ ಕಡೆಗೆ ಹೆಜ್ಜೆಯನ್ನಿಡುತ್ತಿರುವೆವು. ಆಗಲೆ ತಾವು ಮಾತ್ರ ನಮ್ಮನ್ನು ಹಿಂಜರಿಯದೆ ಕೈಲಾದ ಮಟ್ಟಿಗೆ ಪ್ರೋತ್ಸಾಹಿಸಿದರೆ ನಾವು ನಿಶ್ಚಯವಾಗಿ 'ವಿದ್ಯಾರ್ಥಿ'ಯನ್ನು ಊರ್ಜಿತಾವಸ್ಥೆಗೆ ತರದೆ ಇರಲಾರೆವು. ಒಂದು ಬೇಳೆ ಸದ್ಯಕ್ಕೆ ನಿಮಗೆ ಸಹಾಯ ಮಾಡುವದಕ್ಕೆ ಅನಾನುಕೂಲವಿದ್ದರೆ ನೀವು ಅಂಜಬೇಡವೆಂದು ಹೇಳಿದರೆ ನಮಗೆ ಆನೆಯುಪ್ಪು ಕಸುವು ಬರುವದು.

ಕೆಲವರು "ವಿದ್ಯಾರ್ಥಿಯಲ್ಲಿ ಚಿತ್ರಗಳಿರುವದಿಲ್ಲ. ಅವರ ಆಕಾರವು ದೊಡ್ಡ ದಾಗಿರುವದಿಲ್ಲ, ತೀವ್ರವಾಗಿ ಅವರ ಚಾಲಕರು ಹಾಗೆ ಮಾಡಿರೆವ ಒಳ್ಳೇದಾಗುವದು"

ಎಂದು ಸೂಚಿಸಿರುವರು. ಆದರೆ ಸುರ್ವೆಯದಿಂದ ಸೂಚನೆಗಾರರೇ ಚಂದಾದಾರರಾಗಿರುವದಿಲ್ಲ. ಅಂದಮೇಲೆ ನಾವು ಯಾವತರದ ಸುಧಾರಣೆಯನ್ನು ಮಾಡತಕ್ಕದ್ದು?. ಉಪದೇಶಕರು ಬಹಳ ಜನರು. ಆದರೆ ಸಹಾಯ ಮಾಡುವವರು ತೀರ ವಿರಲ. ಚಿತ್ರಗಳನ್ನು ಹಾಕಬೇಕೆಂಬ ನಮ್ಮ ಆಕಾಂಕ್ಷೆಯು ಬಹಳ. ಆದರೆ ಮಾಡುವದೇನು? ಕನ್ನಡಿಗರು ಈ ಹೊತ್ತು ಜೊಂಕಕಟ್ಟಿದರೆ ನಾವು ಕನ್ನಡಿಗರ ಚಿತ್ರಗಳನ್ನೇ ಸೇರಿಸುವದರಲ್ಲಿ ಸಂಕೋಚವೇನು? ಇಲ್ಲದ್ದೊಂದು ಮೂಷಣೆಯನ್ನಿಡುವದಕ್ಕಿಂತ ತಾನು ಪ್ರೋತ್ಸಾಹಿಸದೆ ನಮಗೆ ಅಂಜಬೇಡವೆಂದರೆ ಆನೆಯಷ್ಟು ಕಸುವು ಬರುವದು.

ಈ ಹೊತ್ತಿನವರೆಗೆ ಇದ್ದ ಮಾಸಿಕ ಪತ್ರಿಕೆ, ವರ್ತಮಾನಪತ್ರಗಳಲ್ಲಿ ಇಷ್ಟು ಅಲ್ಪಕಾಲದಲ್ಲಿಯೇ ನಮ್ಮ ವಿದ್ಯಾರ್ಥಿಯು ವಿಶೇಷವಾಗಿ ಹರಡಿಕೊಂಡಿರುವದೆಂದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ. ಅದಕ್ಕೆ ಮುಖ್ಯಕಾರಣವು ಒಂದೇ. ಅದಾವದೆಂದರೆ ನಿಸ್ವಾರ್ಥತತೆ. ಬರುವ ಎಪ್ರಿಲ ತಿಂಗಳೊಳಗಾಗಿ ಯಾವತ್ತೂ ಜಾತಿಯ ವಿದ್ಯಾರ್ಥಿಗಳಿಗೆ ಎಲ್ಲತರದ ಶಿಕ್ಷಣೆಯ ಸಕಲಕರಣೆಗಳನ್ನು ಒದಗಿಸಿಕೊಡುವ ಏರ್ಪಾಡು ಮಾಡುವೆವು. ತೀರ ಬಡ ವಿದ್ಯಾರ್ಥಿಗಳಿಗೆ ಊಟ ಉಡಿಗೆಗಳನ್ನು ಸಹ ಒದಗಿಸಿಕೊಡುವೆವು. ಇದೇನೂ ಒಣಬಾಯಿವಾತಲ್ಲ. ನೀವು ನಿಮ್ಮ ಕರ್ತವ್ಯವೆಂದು ಸಹಾಯಮಾಡಿರಿ, ಇಲ್ಲವೇ ಜನ್ಮಾಗ ಮನವಿಕೆಯನ್ನಾದರೂ ಮಾಡಿಕೊಳ್ಳಿರಿ. ನಾವು ಮಾತ್ರ ಮಾಡುವೆವೋ ಇಲ್ಲವೋ ಎಂಬುದನ್ನು ನೋಡುವ ಕೆಲಸವು ನಿಮ್ಮದನ್ನು ಕೂಡಿರುವದು. "ಒಹೊ! ಇವರೇನು ಮಾಡುವರು? ಈ ಜಗತ್ತಿನಲ್ಲಿ ಹೀಗೆ ಎಷ್ಟೋ ಆಗಿ ಹೋಗಿವೆ" ಎಂದು ನೀವು ಆಡಿಕೊಂಡರೂ ನಾವೇನೂ ಬಿಡುವವರಲ್ಲ. ಕರ್ನಾಟಕದಲ್ಲಿ ಇಂಥ ಅನಾಥ ವಿದ್ಯಾರ್ಥಿಗೃಹವು, ಅತ್ಯಾವಶ್ಯಕವಾದ ಕೊರತೆಯಾಗಿದೆ. ಹುತ್ತು ಅದನ್ನು ಪೂರೈಸುವದು ನಮ್ಮದನ್ನು ಕೂಡಿರುವದು. ನೀವು ಮುಕ್ತಮನಸ್ಸಿಂದ ಸಹಾಯ ಮಾಡುವವರಿದ್ದರೆ ಮಾಡಿರಿ. ಇಲ್ಲದಿದರೆ ನಮಗೆ ಅಂಜಬೇಡವೆಂದರೆ ಆನೆಯಷ್ಟು ಕಸುವು ಬರುವದು.

ಅಂಜಬೇಡವೆಂದರೆ ಆನೆಯಷ್ಟು ಕಸುವು

ಕಳೆದ ಅಗಸ್ಟ್ ತಿಂಗಳಲ್ಲಿ 'ಕರ್ನಾಟಕ ನಾಟ್ಯಕಲೋದ್ಧಾರಕ ಸಂಸ್ಥೆಯ ಬಗ್ಗೆ ಜಾಹೀರಾತನ್ನು "ಪ್ರಸಿದ್ಧ"ಮಾಡಿದೆವು. ಅವರ ಉದ್ದೇಶವು ಬಹುತರ ನಮ್ಮ ವಾಚಕರಿಗೆ ತಿಳಿದಿರಬಹುದು. ನಾವು ಕೈಬಾವ ಮಟ್ಟಿಗೆ ನಮ್ಮ ಕರ್ನಾಟಕಕ್ಕೆ ಸಂಬಂಧಿಸಿರುವ ಐತಿಹಾಸಿಕ, ಪೌರಾಣಿಕ ಸಾಮಾಜಿಕ ಮುಂತಾದ ಅನೇಕ ನಾಟಕಗಳನ್ನು ಮಾಡಿ ತೋರಿಸುವೆವು. ಹೆಚ್ಚಿಗೇನು? ನಮ್ಮ ಸಂಸ್ಥೆಯ ಹೆಸರಿಗೆ ಯಥಾರ್ಥವಾಗಿ ಮಹಾದಾಶ್ಯವಂತೆ ನಾಟ್ಯಕಲೆಯನ್ನು ಮುಂದಿಗೆ ತರದೆ ಇರಲಾರೆವು. ಭೂಮಿಕೆಗಳನ್ನು ತೆಗೆದುಕೊಳ್ಳುವವರನ್ನು ಸೇರಿಸಿಕೊಳ್ಳುತ್ತಲಿದೇವೆ. ನಾಟಕವು ತಯಾರಾಗಹತ್ತಿ ಒಂದು ತಿಂಗಳಾಯಿತು. ನೀವ್ರುವೇ ಹೊರಗೆಬಿದು ಯಾವತ್ತು ಕರ್ನಾಟಕ ಸ್ಫುರನ್ನು ತನ್ನ ಕಡೆಗೆ ಎಳೆದು ಕೊಳ್ಳದೆ ಎಂದೂ ಬಿಡಲಿಕ್ಕಿಲ್ಲೆಂದು ನನ್ನ ಮನೋದೇವತೆಯು ಈಗ ನಡೆದಿರುವ ಕಾರ್ಯಗಳ ಮೇಲಿಂದ ಹೇಳುತ್ತಿರುವಳು. ಹೆಚ್ಚಿಗೇನು? ತಾವು ಅಂಜಬೇಡವೆಂದು ಹೇಳಿದರೆ ನನಗೆ ಆನೆಯಷ್ಟು ಕಸುವು ಬಂದಂತೆ ಆದೀತು.

ಇಂತಾತ್ರಿಸುವ

ತಮ್ಮ ನಮ್ರಸೇವಕ.

ಬ್ರಿಟಿಶ ನಿಶಾನೆಯ ಮಹಿಮೆ. (British Flag)

I ಬ್ರಿಟಿಶ ನಿಶಾನೆಯಿಮ್ಮ ಜಗದಿ । ಪಟುಸೆನಪ್ಪುದು ।
ಎಟಿಪ ಪೇಳ್ವೆವೂ । ಕೇಳ್ವುನೆಲ್ಲರೂ ॥ ೧ ॥
ಸಾಧು ಪ್ಯಾಟಿಕ್ ಸಾಧು ಅಂಡ್ರ್ಯೂ । ಸಾಧು ಜಾರ್ಜರ ।
ಸಿಲುಪೆಯಿಂದಲಿ । ಬೆಳಗುತಿರುವುದು ॥ ೨ ॥
ಹೈರಿ—ರಾಜರಿವರು ನೋಡಿ । ಮೋದೆ ತಗ್ಗಿಸಿ ।
ವೂಪ ಪೊಪರೂ । ಜೋರನಂದದಿ ॥ ೩ ॥
ಪ್ರಜೆಗಳಿವರ ನಿಜವುಹಿಮೆಯು । ತಿಳಿದು ಮನದೊಳು ।
ತ್ರಜಿಸಿ ಭಯವನು । ಮುನವ ತಾಳ್ವರು ॥ ೪ ॥

ಶಾಂತಿ ಸೌಖ್ಯ ಮೇಣು ನಿ । ಶ್ಚಿಂತೆ ಸಂತಸಂ ॥
ಆಂತು ಕೊಟ್ಟವೂ । ಸಕಲ ಪ್ರಜೆಯೊಳು ॥ ೫ ॥
ಶೂರ ವಿಸಾಯಿಗಳು ನೋಡಿ । ವೀರರಸವನೂ ।
ಹೊರಿ ಮನದಲೀ । ಧರಿಸುತಿರುವರು ॥ ೬ ॥
ಜೀವದಾಕಲ್ಪಿಲ್ಲದಿವನು । ಕಾವುತಿರುವರು ।
ಸಾವನೆಣಿಸರು । ಕೀರ್ತಿ ತಳೆವರು ॥ ೭ ॥
ಅರಸನಲ್ಲಿ ಸರಸಭಕಿ । ಮಿಸುವ ಜನವಿದಂ ॥
ಪ್ರೀತಿಯು ಲೋಸುಗಂ । ಹರಣ ವೀವರು ॥ ೮ ॥
ಮಣಿವ ಜನವ ಬನವ ನೆಳಲು । ತಣಿಪುಗೊಳಿಪವೋಲ್ ॥
ಮನವ ಮಣುವನು । ಕಳೆಯು ತಿರುವದು ॥ ೯ ॥
ಭರತಭೂಮಿಯಿರಲಿದರಾ । ಸರವಿ ಚಿರದೊಳು ।
ಪರವು ಶಾಂತಿಯುಂ । ಧರಿಸಿ ಮೆರೆಯಲಿ ॥ ೧೦ ॥

II ನಾನು ಹೇಳುವೆನೂ । ಬ್ರಿಟಿಶ ನಿ । ಶಾನೆಯ ಮಹಿಮೆಯನು ॥
ಮಾನ್ಯರೆ ಕೇಳುವದೂ । ಕಡುತರ । ಸಾನಂದದಿ ನೀವು ॥ ೧ ॥
ಉನ್ನತವಾಗಿಹುದೂ । ಪ್ರಜೆಗಳ। ನುನ್ನತಿಗೊಳಿಸುವದು ॥
ಮನ್ನನ ಕಳೆಯುಸವೂ । ಇದುತಾಂ । ನ್ಯಾಯ ಮಾತಿಹುದು ॥ ೨ ॥
ಪರುಷದೊಳಲ್ಲಾಡೀ । ಜನರೊಳು । ಹರುಷವ ನೆಲೆಗೊಳಿಸಿ ।
ಧರಣಿಯೊಳಿವು ತಾನೂ । ನಿರುತಂ । ಮೆರೆಯುತಲಿರುತಿಹುದು ॥ ೩ ॥
ನೆರಳಿಂದೆಲ್ಲರೊಳೂ । ಶಾಂತಿಯ । ನಿರಿಪ್ರದು ಸತತದೊಳು ॥
ಕರುಣವ ತೋರಿಪ್ರದೂ । ತನ್ನನು । ನೆರೆನಂಬಿವ ಜನದೋಳ್ ॥ ೪ ॥

ಶ್ರೀ ವಲ್ಲಭ ತಟ್ಟಿ.

ಆವರೆ ಒಂದು ಕ್ಷಣದಲ್ಲಿಯೆ! ಅವಳ ಏಕಾಂತವ ಭಂಗವಾಯಿತು. ಅವಳ ವಿಚಾರವು ತೀರಿತು. ಅವಳ ದೃಷ್ಟಿಯು ಕಿಡಕಿಯ ಕಡೆಗೆ ಹೋಯಿತು. ಕೂಡಲೇ ಅವಳ ಕೈಕಾಲೇ ಹೋದವು. ನಡುಗಲಾರಂಭಿಸಿದಳು. ವತ್ಸಲೆಗೆ ಇಷೊಂದು ಭಯವುಂಟಾಗಲಿಕ್ಕೆ ಆ ಕಿಡಕಿಯ ಹತ್ತರ ಏನಿರಬಹುದು! ಸರಿ. ಭಯವುಂಟಾ ವದು ಸಹಜವು. ಅದೋ ನೋಡಿರಿ. ಆ ನದಿಯ ಭಾಗದ ಕಿಡಕಿ[illegible]ದ ಶಿರದಿಂದ ಪಾದದ ವರೆಗೂ ಆಚ್ಛಾದಿಸಿ ಕೊಂಡಿದ್ದ ಒಬ್ಬ ವ್ಯಕ್ತಿಯು ಒಳಗೆ ಸರಿದನು. ಬರಬರುತ್ತ ಅವನು ವತ್ಸಲೆಯ ತೀರ ಸಮೀಪಕ್ಕೆ ಬಂದನು. ವತ್ಸಲೆಯು ಇನ್ನು ಗಟ್ಟಿಯಾಗಿ ಚೀರುವವಳು, ಅಷ್ಟರಲ್ಲಿ ಆ ವ್ಯಕ್ತಿಯು " ಹಂ ಮಾತಾಡಬೇಡ. ನಿನ್ನ ಹಿತದ ಸಲುವಾಗಿಯೇ ನಾನು ಇಷ್ಟ ಸಾಹಸಪಟ್ಟು ಇಲ್ಲಿಗೆ ಬಂದಿದೇನೆ. ಮಾತಾಡಿದರೆ ಅಥವಾ ಒದರಿದರೆ ಸರ್ವಸ್ವೀ ನಿನ್ನದೇ ಹಾನಿಯಾಗುವದು. ತಿಳಿಯಿತೇ! " ಇಷ್ಟು ಆ ವ್ಯಕ್ತಿಯು ಮಾತಾಡಿ ವತ್ಸಲೆಯ ಚೀರುವಿಕೆಯನ್ನು ನಿಲ್ಲಿಸಿ ಕೂಡಲೇ ತಾನು ಆಚ್ಛಾದಿಸಿಕೊಂಡಿದ್ದ ವಸ್ತ್ರವನ್ನು ಅಲ್ಲಿಯೇ ಇರುವ ಒಂದು ಕುರ್ಚಿಯ ಮೇಲೆ ತೆಗೆದಿಟ್ಟನು. ವತ್ಸಲೆಯು ವ್ಯಕ್ತಿಯನ್ನು ನೋಡಿ " ತಮ್ಮಪ್ಪಣೆಸರೀನು! ನಿಮ್ಮನ್ನು ನಾನು ಎಲ್ಲಿಯಾವರೂ ನೋಡಿರಬಹುದು!" ಎಂದು ಕೇಳಿದಳು.

" ಅದು ಹೇಗೆ! ಇದಕ್ಕೆ ಪ್ರಮಾಣವೇನು "! ಎಂದು ವ್ಯಕ್ತಿಯು ಪ್ರಶ್ನಿಸಿದನು.

" ಪ್ರಮಾಣವು! ನನಗೆ ಅದೇನೂ ತಿಳಿಯುವಂತಿಲ್ಲ. ಆವರೆ ನನಗೆ ಹಾಗೆ ಭಾಸವಾಗುವದು ನಿಶ್ಚಯವು. ನಿಮ್ಮ ಹಾಗೂ ನಮ್ಮ ತಾಯಿಯು ಮುಖಾವಲೋಕನವಲ್ಲಿ ವಿಶೇಷ ಸಾಮ್ಯವಿರುವದು "

" ನಿಶ್ಚಯ. ನೀನು ಚಾಣಾಕ್ಷಳಿರುವಿ. ಇದರಲ್ಲೇನೂ ಸಂದೇಹವಿಲ್ಲ. ಈ ಗೂಢಿನ ಸ್ಪಷ್ಟೀಕರಣವು ತನ್ನಿಂದ ತಾನೇ ಆಗುವದು. ಪ್ರಸ್ತುತ ಕಾಲವನ್ನು ವ್ಯರ್ಥವಾಗಿ ಹೋಗಗೊಡುವಹಾಗಿಲ್ಲ. ಇನ್ನೊಂದು ಗಳಿಗೆಯ ಅವಧಿ ನಿನಗೆ ಒಂದು ಭಯಂಕರ ಸಂಕಟವು ಬಂದೊದಗುವದು. ಆ ಸಂಕಟದೊಳಗಿಂದ ನಿನ್ನನ್ನು ಪಾರುಗಾಣಿಸಬೇಕೆಂತಲೇ ನಾನು ಇಲ್ಲಿಗೆ ಬಂದಿರುವೆನು. " ಎಂದು ಆ ವ್ಯಕ್ತಿಯು ಹೇಳಿದನು.

Re. No. B. 1355

ದುಡ್ಡಿಗೆ ದುಡ್ಡಾ ಲಾಭ !

ವ್ಯಾಧಿಗಳ ಸಮೂಲನಾಶವು!!

ನಮ್ಮಲ್ಲಿ ದೊರಕುವ ಶಾಸೆತ್ರೋಕ್ತ ಔಷಧಗಳನ್ನು ತರಿಸಿಕೊಂಡು
ಅಲಭ್ಯಲಾಭವನ್ನು ಮಾಡಿಕೊಳ್ಳುವಿರಾ?

ಸುವಾಸಿಕ ಹುರುಕಿನ ಔಷಧ	೧ ಚಿ. ೧ಕ್ಕೆ ಆಣೆ. ೨೫ ಕ್ಕೆ ೧-೪-೦
ಕಣ್ಣುಬೇನೆಯ ಔಷಧ	೧ಚಿ. ೩ಪೈ. ೧೦೦ಕ್ಕೆ ೧ ೪-೦
ಹೇನೂ ಶೀರೂ ನಾಶಕಚೂರ್ಣ	೧ಚಿ. ೩ಪೈ. ೧೦೦ಕ್ಕೆ ೧-೪-೦
ಪಶುಸ ಜೀವನ ಚೂರ್ಣ	೧೦ ತೊಲೆಗೆ ೧೫ ಆ.
ನೀಲೀ, ಕಪ್ಪು, ಕೆಂಪು, ಮುಸೀಗ ಳಿಗೆಗಳು	೧೦೦ಕ್ಕೆ ೧-೪-೦

ನಾವು ಇನ್‌ಫ್ಲುಯೆಂಝಾ ಬೇನೆಯ ಮೇಲೆ ಬಹಳೇ ಪ್ರಯಾಸ ಪಟ್ಟು ಅತ್ಯುತ್ತಮ ರಾಮಬಾಣ ಔಷಧವನ್ನು ತಯಾರಿಸಿದ್ದೇವೆ.

೩೨ ಗುಳಿಗೆಗಳಿರುವ ಒಂದು ಸೀಸೆಗೆ ೧ ರೂ. ೧೦೦ ಕ್ಕೆ ೩ ರೂ. ೨೦೦ ಕ್ಕೆ ೫ ರೂ. ೫೦೦ ಕೆ ೧೦ ರೂ.

ಇವುಗಳಲ್ಲದೆ ಶಾಸೆತ್ರೋಕ್ತವಾಗಿ ತಯಾರಿಸಿದ ಭಸ್ಮ, ಮಾತ್ರೆ, ಗುಗ್ಗಳ, ಗುಟಿಕಾ, ವಟಿಕಾ, ಇವು ಅತಿ ಸುಲಭ ಬೆಲೆಗೆ ದೊರಕುವವು.

ಕೇವಲ ನಿಮ್ಮ ವಿಳಾಸವನ್ನಾದರೂ ತಿಳಿಸಿರಿ
ಶಾಸ್ತ್ರೋಕ್ತ ಔಷಧಗಳು ದೊರಕುವ ಒಂದೇಸ್ಥಳ

ಶ್ರೀಭಾರತ ವನೌಷಧಿ ಸಂಗ್ರಹಾಲಯ ಪ್ರೋ ಕಿತ್ತೂರ

ಜಿ.ಬೆಳಗಾಂವ

Printed by V. M. Jathar B. A. LL. B.
at the Karnatak Printing Works, Dharwar
and Published by
Venkatesh Ramnrkandra Vaidya
at Vidyarthi Office Shukrawar Petha
DHARWAR

ಸಚಿತ್ರ
ಚತುರ

SRI.S-N-B.. WAMI. !
TIRUMAMUTTUGHE

ಹಾಸ್ಯ ರಸವುಳ್ಳವರಾಸಪತ್ರಿಕೆಯು.

ಎಡಿಟರ್—ಬಿ, ಜನಾರ್ದನರಾವ್,

ವಾರ್ಷಿಕ ಚಂದಾ ಸ್ಥಳೀಕರಿಗೆ—೧-೮ ಆಣೆ, ಪರಸ್ಥಳದವರಿಗೆ ಅಂಚೆ ವೆಚ್ಚ ಸೇರಿ ೧ ರೂಪಾಯಿ.

ವಿಳಾಸ—ಎಡಿಟರ್, ಚಾತುರ್ಯ ಪ್ರಾಮುರಾಜಪೇಟೆ ಬೆಂಗಳೂರು.

ನಂ೧೦

Printed and published at the Chaturya Press, 3-148, Chamarajpet Bangalore City.

ಒಕ್ಕಲಿಗರ ಪತ್ರಿಕೆ

ಕ್ರಮ ಪತ್ರಿಕೆ ಪ್ರತಿ ಬುಧವಾರ ಪ್ರಕಟವಾಗುವುದು.

ಸಂಪುಟ ೧೪] ಒಕ್ಕಲಿಗರ ಪತ್ರಿಕೆ ಸಂ. ೧೯೨೦ನೇ ಇಸವಿ ಸೆಪ್ಟಂಬರ್ ೪ ನೇ ತಾರೀಖು ಬುಧವಾರ

1920 ನೇ ಮಾರ್ಚಿನ

ಮೈಸೂರು ಸರ್ಕಾರದ ಸಾಲ

ಬಡ್ಡಿ ಕೇಕಡ (೬) ಆರೂ ಕಾಲು ರೂಪಾಯಿ

ವರಮಾನದ ತೆರಿಗೆ ಇಲ್ಲ.

ಸೆಪ್ಟೆಂಬರ್ ೫ರ ಮೇರೆಗೂ ಚಂದಾ ಕೊಡಬಹುದು

ಬಾಂಡು ಪೊಬಲಗನ್ನು ರೂ ೧೦೦ ೫೦೦ ೧೦೦೦

ಇಲ್ಲವೆ ಇರುತ್ತೆ.

ಪೊಬಲಗನ್ನು ಮೈಸೂರು ಸರ್ಕಾರದ ಖಜಾನೆಗಳಲ್ಲಿ ಪಾವತಿ ಮಾಡಬಹುದು.

ಬೆಂಗಳೂರಿನಲ್ಲಿರುವ ಮದ್ರಾಸ್ ಬ್ಯಾಂಕಿನವಲ್ಲಿಯೂ ಮತ್ತು ಮೈಸೂರು ಬ್ಯಾಂಕಿನಲ್ಲಿಯೂ ಕೂಡ ಪಾವತಿ

ಸಾಲದ ಷರತ್ತುಗಳು 1920 ನೇ ಜೂನ್ 29 ನೇ ತಾರೀಖಿ

Fl 8596-G F 289-19-2 ನೇ ನಂಬರಿನ

ಅಸ್ಥಿಯಾರಿನಲ್ಲಿ ಕಂಡಾಬರುವು

ಅಂಚೆ ಕಾರ್ಡು ಸಾಲ ಬರೆಯಿಸಿ ಕೊಳ್ಳಲಾಗಿದೆ

WORLD ಗಳಗನಾಥರಪಶ ಜೀವನಸರ್ವಸ್ವವು

ಶ್ರೀ

ಗದುಗಿನ!

ಎಂಬ ಶ್ರೀಮದ್ವರ್ಗದ ಕನ್ನಡ ಮಾಸಪತ್ರಿಕೆಯು.

1721

ಯಸ್ಯದೇವೇ ಪರಾಭಕ್ತಿರ್ಯಥಾದೇವೇ ತಥಾಗುರೌ ।
ತಸ್ಯೈತೇ ಕಥಿತಾಹ್ಯರ್ಥಾಃ ಪ್ರಕಾಶಂತೇಮಹಾತ್ಮನಃ ॥ ೧ ॥

ವರ್ಷ ೨. } ಮುರ್ಮತಿ. ೧೮೪೧ ಚೈತ್ರ—ವೈಶಾಖ { ಸಂಚಿಕೆ. ೭—೮
೧೯೨೧ ಏಪ್ರಿಲ್—ಮೇ. }

ವಿಷಯಾನುಕ್ರಮಣಿಕೆ.

೧	ಇದನ್ನು ಮೊದಲು ಓದಿರಿ:—	ವೇ. ಶಿ. ಗಳಗನಾಥ.	೧—೫
೨	ಹಾವೇರಿಯು ಸಾಕಶಾಲೆಯು ಮುಂದಿಯುಕೋ?	,,	೬—೭
೩	ಗಳಗನಾಥನ ವಿನಂತಿಗಳು.	,,	೭—೮
೪	ಮುಟ್ಟಿದವು.	[ಕವನವಿಲ್ಲ]	
೫	ಅಥಣಿಯ ಶ್ರೀ ಶಿವಯೋಗಿಗಳು:—	,,	೧—೮
೬	ಕಲಿಕಾಲ—ಮಹಿಮೆ.—	ಶ್ರೀ ಹಾನರಾಜಸಾಮಿಗಳು	೧—೧೪
೭	ಕಲಿತಾಂಡವ—ಅಥವಾ ಬ್ರಾಹ್ಮಣ—ಬ್ರಾಹ್ಮಣೇತರ ಕೋಟಗಳು.	ವೇ. ಶಿ. ಗಳಗನಾಥ.	೧—೧೪
೮	ಮಾಧವಕರುಣಾವಿಲಾಸ—(ಚಾಲುಕಾದಂಬರಿ)	,,	೧೪೩—೧೬೮

ಸಂಪಾದಕ—ವೇ. ಶಿ. ಕುಲಕರ್ಣಿ. [ಗಳಗನಾಥ.]

Edited, Printed & Published by V. T. Kulkarni,
at his Venkatesh press Haveri,
Dt. Dharwar.

ವಾರ್ಷಿಕಚಂದಾ ಅಂಚೇವೆಚ್ಚ ಸೇರಿ ಎರಡೇ ರೂಪಾಯಿ.